ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಜಲಾಶಯಗಳಲ್ಲಿಯ ಹೂಳಿನ ಪ್ರಮಾಣವನ್ನು ರಿಮೋಟ್ ಸೆನ್ಸಿಂಗ್‌ನಿಂದ ಕಂಡುಕೊಳ್ಳಬಹುದು



ಆಳ-ಅಗಲ
ಕಾವೇರಿ ಜಲ ವಿವಾದ
ಸಂಕಷ್ಟ ಸೂತ್ರ ಇಲ್ಲದಿರುವುದೇ ಸಂಕಟ

ಎನ್‌ಇಪಿ ರದ್ದತಿ: ಡಿಕೆಶಿಗೆ ಪ್ರಧಾನ್ 8 ಪ್ರಶ್ನೆ 7

ಪ್ರಯಾಣಿಕನ ಬ್ಯಾಗ್‌ನಲ್ಲಿ 234 ಪ್ರಾಣಿಗಳು! 11

ಸೆನ್ಸೆಕ್ಸ್	ನಿಫ್ಟಿ	₹/$
65,220 ▲	19,396 ▲	82.99 ▲

‘ವಿಕ್ರಮ’ನಿಗೆ ಎಲೆಕ್ಟ್ರಾನಿಕ್ ಮಿದುಳೇ ಆಸರೆ • ವಿಶ್ವದೆಲ್ಲೆಡೆ ಕುತೂಹಲ- ಯಶಸ್ಸಿಗೆ ಹಾರೈಕೆ

ಇಂದು ಚಂದ್ರ ಚುಂಬನ

• ಎಸ್.ರವಿಪ್ರಕಾಶ್

ಬೆಂಗಳೂರು: ವಿಕ್ರಮ್ (ಲ್ಯಾಂಡರ್) ಚಂದ್ರನ ಅಂಗಳಕ್ಕೆ ಕಾಲಿಡುವ ಅಂತಿಮ ಕ್ಷಣಗಳು ಹೇಗಿರುತ್ತವೆ. ಆತನ ‘ಎಲೆಕ್ಟ್ರಾನಿಕ್ ಮಿದುಳು’ ಶಾಂತ ಚಿತ್ತದಿಂದ ಅತೀವ ಒತ್ತಡ ನಿವಾರಿಸಿಕೊಂಡು ಮುಗ್ಗರಿಸದೇ ಮೆಲ್ಲಗೆ ದೃಢ ಹೆಜ್ಜೆ ಇಡುತ್ತಾನೆಯೇ...?

ದೇಶ-ವಿದೇಶದ ಕೋಟ್ಯಂತರ ಜನರು ಕುತೂಹಲದಿಂದ ಕೇಳಿಕೊಳ್ಳುತ್ತಿರುವ, ಕೌತುಕದ ಗಳಿಗೆಯನ್ನು ಎದುರು ನೋಡುತ್ತಿರುವ ಬಾಹ್ಯಾಕಾಶ ವಿಜ್ಞಾನಿಗಳ ಮುಂದಿರುವ ಪ್ರಶ್ನೆಗಳು ಭಾರತದ ಮುಂದೆ ಕನಸುಗಳ ಗೋಪುರವನ್ನೇ ಕಟ್ಟಿವೆ.

ಚಂದ್ರಯಾನ-3 ಯೋಜನೆಯಲ್ಲಿ ದಣಿಯವರಿಯದೇ ಅಹೋರಾತ್ರಿ ತಮ್ಮನ್ನು ತೊಡಗಿಸಿಕೊಂಡು, ಅವಿಸ್ಮರಣೀಯ ಕ್ಷಣಕ್ಕೆ ಕಾತರರಾಗಿರುವ ದೇಶದ ಹೆಮ್ಮೆಯ ಇಸ್ರೊ ವಿಜ್ಞಾನಿಗಳು ವಿಕ್ರಮನ ನಡಿಗೆಯ ಬಗ್ಗೆ ಅಪಾರ ವಿಶ್ವಾಸವನ್ನು ಹೊಂದಿದ್ದಾರೆ.

‘ವಿಕ್ರಮ್ ಖಂಡಿತಾ ಚಂದಿರನ ಮೇಲೆ ಅಡಿ ಇಡುತ್ತಾನೆ. ಎಲ್ಲವನ್ನೂ ಆತನಿಗೇ ಬಿಟ್ಟಿದ್ದೇವೆ. ಭೂಮಿಯಲ್ಲಿ ಕುಳಿತು ಆತನ ಚತುರತೆಯ ‘ಆಟ’ ನೋಡುವುದಷ್ಟೇ ನಮ್ಮ ಕೆಲಸ’ ಎಂದು ನಿರುಮ್ಮಳತೆಯಿಂದ ಹೇಳುತ್ತಾರೆ.

ಚಂದ್ರಯಾನ-2ರ ಲ್ಯಾಂಡರ್‌ನ ಅಪ್ಪಳಿಸುವಿಕೆಯ ಬಳಿಕ ಹಗಲು- ರಾತ್ರಿ ಎನ್ನದೇ ಶ್ರವಹಿಸಿ ರೂಪಿಸಿದ ಭಾರತೀಯ ವಿಜ್ಞಾನಿಗಳು ಮತ್ತು ತಂತ್ರಜ್ಞರ ಅನೂಹ್ಯ ಪ್ರತಿಭೆಯ ಅನಾವರಣ ವಿಕ್ರಮ್ ಲ್ಯಾಂಡಿಂಗ್ ವೇಳೆ ಆಗಲಿದೆ. ಲ್ಯಾಂಡಿಂಗ್‌ನ ಯಶಸ್ಸಿಗಾಗಿ ಹಾರೈಕೆಗಳ ಮಹಾಪೂರವೇ ದೇಶ- ವಿದೇಶಗಳಿಂದ ಹರಿದು ಬರುತ್ತಿದೆ.

ಚಂದ್ರಯಾನ-3ರ ಲ್ಯಾಂಡರ್‌ನ ಇಳಿಯುವಿಕೆಯ ಕೊನೆ ರೋಚಕ ಕ್ಷಣಗಳು ಹೇಗಿರುತ್ತವೆ ಎಂಬುದನ್ನು ವಿಜ್ಞಾನಿಯೊಬ್ಬರು ‘ಪ್ರಜಾವಾಣಿ’ಗೆ ವಿವರಿಸಿದ್ದು ಹೀಗೆ...

ಈಗಾಗಲೇ ಚಂದ್ರನಿಗೆ ಅತಿ ಸನಿಹದಲ್ಲಿರುವ ಕಕ್ಷೆಯಲ್ಲಿ ವಿಕ್ರಮ್ 26 ಕೆ.ಜಿ ತೂಗುವ ಆರು ಚಕ್ರಗಳನ್ನು ಹೊಂದಿರುವ ಪ್ರಗ್ಯಾನ್(ರೋವರ್) ಅನ್ನು ಒಡಲಲ್ಲಿ ಇಟ್ಟುಕೊಂಡು ಚಂದ್ರನಿಗೆ ಕೋಳಿ ಮೊಟ್ಟೆ ಆಕಾರದಲ್ಲಿ ಸುತ್ತು ಹಾಕುತ್ತಿದೆ. ಸುಮಾರು 25 ಕಿ.ಮೀ.ಗಳಷ್ಟು ಎತ್ತರದಲ್ಲಿ ಕಾದು ನಿಂತಿದೆ.

ವಿಕ್ರಮ್ ಮೊದಲಿಗೆ ತನ್ನ ವೇಗವನ್ನು ಇಳಿಸಿಕೊಳ್ಳಬೇಕು. ಈಗ ಗಂಟೆಗೆ ಸುಮಾರು 5,000 ಕಿ.ಮೀನಷ್ಟು ವೇಗದಲ್ಲಿ ಸಾಗುತ್ತಿದೆ. ಆ ವೇಗವನ್ನು ಶೂನ್ಯಕ್ಕೆ ತಂದುಕೊಳ್ಳುವುದು ದೊಡ್ಡ ಸವಾಲು. ಕಕ್ಷೆಯಲ್ಲಿ ವೇಗ ಕಡಿಮೆ ಮಾಡಿಕೊಳ್ಳುತ್ತಿರುವಂತೆಯೇ ಕೆಳಗೆ ಬೀಳಲಾರಂಭಿಸುತ್ತದೆ. ಆಗ ವೇಗ, ದಿಕ್ಕು ತಪ್ಪಲಾರಂಭಿಸುತ್ತದೆ. ಎಲ್ಲವನ್ನೂ ಲೆಕ್ಕಹಾಕಿ ನಿಗದಿಯಾದ ಪ್ರದೇಶದಲ್ಲೇ ಬಂದಿಳಿಯುವಂತೆ ಮಾಡಬೇಕು. ಈ ಸಂದರ್ಭದಲ್ಲಿ ವಿಕ್ರಮ್ ಜೋಲಿ ಹೊಡೆಯುವ ಅಥವಾ ದಿಕ್ಕು ತಪ್ಪುವ ಸಾಧ್ಯತೆ ಹೆಚ್ಚು. ಅದನ್ನು ತಿಳಿದುಕೊಂಡು ಸರಿಪಡಿಸಿಕೊಳ್ಳಲು ಬೀಳುವಾಗಿನ ವೇಗವನ್ನು ನಿಯಂತ್ರಿಸಿ ಸ್ವಸ್ಥಿತಿಗೆ ಬಂದು ನಿಲ್ಲಲು ರಾಕೆಟ್‌ಗಳನ್ನು ಉರಿಸಲಾಗುತ್ತದೆ. ಲ್ಯಾಂಡರ್ ಮತ್ತೆ ಕಕ್ಷೆಯತ್ತ ಸಾಗುತ್ತದೆ.

12ನೇ ಪುಟ ನೋಡಿ



ನಿಗದಿಯಾದಂತೆ ಚಂದ್ರಸ್ಪರ್ಶವಾಗಲಿದೆ. ಲ್ಯಾಂಡರ್ ಒಳಗಿನ ವ್ಯವಸ್ಥೆಯನ್ನು ನಿಯಮಿತವಾಗಿ ಪರೀಕ್ಷಿಸಲಾಗುತ್ತಿದೆ. ಎಲ್ಲವೂ ಸುಸೂತ್ರವಾಗಿ ಸಾಗುತ್ತಿದೆ
ಸೋಮನಾಥ್, ಅಧ್ಯಕ್ಷ, ಇಸ್ರೊ


- ಲ್ಯಾಂಡರ್ ಚಂದ್ರಸ್ಪರ್ಶ ಸಂಜೆ **6.04**
- ಚಂದ್ರಸ್ಪರ್ಶದ ನೇರ ಪ್ರಸಾರ ಸಂಜೆ **5.27** ರಿಂದ (ಭಾರತೀಯ ಕಾಲಮಾನದಂತೆ)

120 ತಾಲ್ಲೂಕಿಗೆ ಬರದ ಛಾಯೆ

ಮಳೆ ಕೊರತೆ: ಪ್ರತಿ ತಾಲ್ಲೂಕಿನ 10 ಹಳ್ಳಿಗಳಲ್ಲಿ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘120 ತಾಲ್ಲೂಕುಗಳಲ್ಲಿ ಮಳೆ ಕೊರತೆ ತೀವ್ರವಾಗಿದೆ. ಕೇಂದ್ರ ಸರ್ಕಾರದ ಮಾನದಂಡದಂತೆ ಬರ ಘೋಷಣೆಗೆ ಈ ತಾಲ್ಲೂಕುಗಳ ಪ್ರತಿ ಹತ್ತು ಹಳ್ಳಿಗಳಲ್ಲಿ ಐದು ಪ್ರಮುಖ ಬೆಳೆಗಳ ಪರಿಸ್ಥಿತಿ ಬಗ್ಗೆ ಜಂಟಿ ಸಮೀಕ್ಷೆ ನಡೆಸಿ ಹತ್ತು ದಿನಗಳ ಒಳಗೆ ವರದಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.



ಬರ, ಪ್ರವಾಹ ಮತ್ತು ಇತರ ನೈಸರ್ಗಿಕ ವಿಕೋಪಗಳಿಂದ ಉದ್ಭವಿಸಬಹುದಾದ ಪರಿಸ್ಥಿತಿ ಪರಾಮರ್ಶಿಸಿ, ಸರ್ಕಾರಕ್ಕೆ ಶಿಫಾರಸು ಮಾಡಲು ರಚಿಸಲಾದ ಸಚಿವ ಸಂಪುಟ ಉಪ ಸಮಿತಿಯ ಸಭೆ ಮಂಗಳವಾರ ನಡೆಯಿತು.

ಸಭೆ ಬಳಿಕ ಮಾತನಾಡಿದ ಕೃಷ್ಣ ಬೈರೇಗೌಡ, ‘ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯವೇ ಬರ ಘೋಷಿಸಬೇಕಾಗಿದೆ. ಮಳೆ ಕೊರತೆ, ಒಣ ಹವೆ, ಬಿತ್ತನೆ ಪ್ರದೇಶ, ತೇವಾಂಶ ಕೊರತೆ, ಬೆಳೆಗಳ ಸ್ಥಿತಿ, ಜಲಾಶಯಗಳ ನೀರಿನ ಸಂಗ್ರಹಣೆ ಹಾಗೂ ಅಂತರ್ಜಲ ಮಟ್ಟವನ್ನು ಅವಲೋಕಿಸಿ ಬರ ಘೋಷಿಸಲಾಗುತ್ತದೆ. ಬರಪೀಡಿತ ತಾಲ್ಲೂಕುಗಳೆಂದು ಗುರುತಿಸಿದ ನಂತರ ಬೆಳೆ ಹಾನಿ ಪ್ರಮಾಣದ ಆಧಾರದಲ್ಲಿ ಬರ ವರ್ಗೀಕರಣ ಮಾಡಲಾಗುವುದು. ಹಾನಿಯು ಶೇ 50ಕ್ಕೂ ಹೆಚ್ಚಿದ್ದರೆ ಬರಪೀಡಿತ ಪ್ರದೇಶ ಗುರುತಿಸಿ ಎಂದು ಕೇಂದ್ರಕ್ಕೆ ಪತ್ರ ಬರೆಯಲಾಗುವುದು’ ಎಂದರು.

7ನೇ ಪುಟ ನೋಡಿ

ಜಲವಿವಾದ: ಸರ್ವಪಕ್ಷ ಸಭೆ ಇಂದು

ಬೆಂಗಳೂರು: ಕಾವೇರಿ ಮತ್ತು ಮಹದಾಯಿ ಜಲವಿವಾದಗಳಿಗೆ ಸಂಬಂಧಿಸಿದಂತೆ ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ (ಆಗಸ್ಟ್ 23) ಸರ್ವಪಕ್ಷಗಳ ಸಭೆ ನಡೆಸಲಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಈ ಸಭೆಯಲ್ಲಿ ಭಾಗವಹಿಸುವಂತೆ ಎಲ್ಲ ಪಕ್ಷಗಳ ಮುಖಂಡರು, ಮಾಜಿ ಮುಖ್ಯಮಂತ್ರಿಗಳು, ಕೇಂದ್ರ ಸಚಿವರೂ ಸೇರಿದಂತೆ ಸಂಸತ್ ಸದಸ್ಯರಿಗೆ ಆಹ್ವಾನ ನೀಡಲಾಗಿದೆ.

ಮಲ ಸುರಿದುಕೊಂಡ ಪೌರಕಾರ್ಮಿಕರು

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): ಹದಿನಾಲ್ಕು ತಿಂಗಳ ಬಾಕಿ ವೇತನಕ್ಕೆ ಆಗ್ರಹಿಸಿ ಪೌರ ಕಾರ್ಮಿಕರಿಬ್ಬರು ಮಂಗಳವಾರ ಮೈಮೇಲೆ ಮಲ ಸುರಿದುಕೊಂಡು ಪ್ರತಿಭಟನೆ ನಡೆಸಿದ್ದಾರೆ. ಈ ಘಟನೆ ನಡೆದ ಒಂದೇ ತಾಸಿನಲ್ಲಿ ಇಬ್ಬರಿಗೂ ವೇತನ ಪಾವತಿಸಲಾಗಿದೆ. ತಾಲ್ಲೂಕಿನ ಕಸಬಾ ಹೋಬಳಿಯ ಕಲ್ಲಹಳ್ಳಿ ಗ್ರಾಮ ಪಂಚಾಯಿತಿ ಆವರಣದಲ್ಲಿ ಮಧ್ಯಾಹ್ನ ಈ ಘಟನೆ ನಡೆದಿದೆ.

2020 ರಿಂದ ಪಂಚಾಯಿತಿಯಲ್ಲಿ ಸ್ವಚ್ಛತೆ ಕೆಲಸ ಮಾಡುತ್ತಿದ್ದ ಎನ್. ಸುರೇಶ್ ಮತ್ತು ವಿ. ರಂಗಯ್ಯ ಅವರಿಗೆ ಒಂದೂವರೆ ವರ್ಷದ ಹಿಂದಿನ ತಲಾ ₹1.60 ಲಕ್ಷ ವೇತನ ಬಾಕಿ ಇತ್ತು.

ವೇತನಕ್ಕಾಗಿ ಪಂಚಾಯಿತಿ ಅಧಿಕಾರಿಗಳನ್ನು ಕೇಳಿ ಬೇಸತ್ತ ಅವರು ಮಧ್ಯಾಹ್ನ ಬಿಂದಿಗೆಯಲ್ಲಿ ಮಲ ತಂದು ಪಂಚಾಯಿತಿ ಎದುರು ಮೈಮೇಲೆ ಸುರಿದುಕೊಂಡರು. ತಕ್ಷಣ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಾಕಿ ವೇತನವನ್ನು ಪಾವತಿಸಿದರು.

7ನೇ ಪುಟ ನೋಡಿ

ವಿದ್ಯಾರ್ಥಿನಿ ಮೇಲೆ ಬಿದ್ದ ವಿದ್ಯುತ್ ತಂತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಸ್.ಜಿ.ಪಾಳ್ಯದಲ್ಲಿ ತುಂಡಾಗಿ ಬಿದ್ದ ವಿದ್ಯುತ್ ಕಂಬದ ತಂತಿಗಳು ತಗುಲಿ ವಿದ್ಯಾರ್ಥಿನಿಗೆ ಗಂಭೀರ ಸ್ವರೂಪದ ಸುಟ್ಟ ಗಾಯಗಳಾಗಿವೆ.

ಕ್ರೈಸ್ಟ್ ವಿಶ್ವವಿದ್ಯಾಲಯದಲ್ಲಿ ಬಿ.ಎ ವ್ಯಾಸಂಗ ಮಾಡುತ್ತಿರುವ ದೆಹಲಿಯ ಪ್ರಿಯಾ (21) ಗಾಯಗೊಂಡವರು.

ವಿದ್ಯಾರ್ಥಿನಿಗೆ ಶೇ 40ರಷ್ಟು ಪ್ರಮಾಣದ ಸುಟ್ಟ ಗಾಯವಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆಗೆ ಕಾರಣವಾದ ಸಿಮೆಂಟ್ ರೆಡಿ ಮಿಕ್ಸರ್ ಲಾರಿ ಹಾಗೂ ವಾಟರ್‌ಟ್ಯಾಂಕರ್ ಚಾಲಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ನಡೆದಿದ್ದು ಹೇಗೆ?: ‘ಎಸ್.ಜಿ.ಪಾಳ್ಯ ಮುಖ್ಯರಸ್ತೆಯಲ್ಲಿರುವ ವಿದ್ಯುತ್ ಕಂಬಕ್ಕೆ ಹಾಕಲಾಗಿದ್ದ ಓಎಫ್‌ಸಿ ಹಾಗೂ ನೆಟ್‌ವರ್ಕ್ ಕೇಬಲ್‌ಗಳು ಜೋತು ಬಿದ್ದಿದ್ದವು. ಅದೇ ಮಾರ್ಗದಲ್ಲಿ ಮಂಗಳವಾರ ಮಧ್ಯಾಹ್ನ ಸಿಮೆಂಟ್ ರೆಡಿ ಮಿಕ್ಸರ್ ಲಾರಿ ಬರುವಾಗ ಜೋತು ಬಿದ್ದಿದ್ದ ಕೇಬಲ್‌ಗಳಿಗೆ ತಾಗಿದೆ.

2ನೇ ಪುಟ ನೋಡಿ

ಸಚಿನ್ ತೆಂಡೂಲ್ಕರ್ ‘ರಾಷ್ಟ್ರೀಯ ಐಕಾನ್’

ನವದೆಹಲಿ (ಪಿಟಿಐ): ಚುನಾವಣಾ ಪ್ರಕ್ರಿಯೆಯಲ್ಲಿ ಮತದಾರರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಕ್ರಿಕೆಟರ್ ಸಚಿನ್ ತೆಂಡೂಲ್ಕರ್ ಅವರನ್ನು ‘ರಾಷ್ಟ್ರೀಯ ಐಕಾನ್’ ಎಂದು ಘೋಷಿಸಲು ಚುನಾವಣಾ ಆಯೋಗ ನಿರ್ಧರಿಸಿದೆ.



ಚುನಾವಣಾ ಆಯೋಗದ ಮುಖ್ಯಸ್ಥರು ಮತ್ತು ತೆಂಡೂಲ್ಕರ್ ಬುಧವಾರ ಈ ಕುರಿತ ಒಪ್ಪಂದಕ್ಕೆ ಸಹಿ ಹಾಕಲಿದ್ದಾರೆ. ಒಪ್ಪಂದವು ಮೂರು ವರ್ಷ ಚಾಲ್ತಿಯಲ್ಲಿ ಇರಲಿದೆ. ಈ ಕ್ರಿಕೆಟ್ ದಿಗ್ಗಜ ಮತದಾರರಲ್ಲಿ ಅರಿವು ಮೂಡಿಸಲಿದ್ದಾರೆ.

‘ಮುಂಬರುವ ಚುನಾವಣೆಯಲ್ಲಿ, ಅದರಲ್ಲೂ ವಿಶೇಷವಾಗಿ 2024ರ ಲೋಕಸಭಾ ಚುನಾವಣೆಯಲ್ಲಿ ಯುವ ಮತದಾರರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ತೆಂಡೂಲ್ಕರ್ ಅವರ ಸರಿಸಾಟಿಯಿಲ್ಲದ ಪ್ರಭಾವವನ್ನು ಬಳಸಿಕೊಳ್ಳುವ ಮಹತ್ವದ ಹೆಜ್ಜೆ ಇದಾಗಿದೆ’ ಎಂದು ಚುನಾವಣಾ ಆಯೋಗ ಹೇಳಿಕೆಯಲ್ಲಿ ತಿಳಿಸಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಹೃದಯಾಘಾತ: ಆಟೊ ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊ ಚಾಲನೆ ವೇಳೆ ಹೃದಯಾಘಾತ ಸಂಭವಿಸಿ ಚಾಲಕ ತಿಮ್ಮೇಶ್ (53) ಎಂಬುವವರು ಮಂಗಳವಾರ ಮಧ್ಯಾಹ್ನ ಮೃತಪಟ್ಟಿದ್ದಾರೆ.

ಮಂಡ್ಯದ ತಿಮ್ಮೇಶ್ ಅವರು ಬಿಳೇಕಹಳ್ಳಿಯ ಸೋಮೇಶ್ವರ ಬಡಾವಣೆಯಲ್ಲಿ ನೆಲೆಸಿದ್ದರು.

ಮಂಗಳವಾರ ಎಂದಿನಂತೆಯೇ ಮನೆಯಿಂದ ಆಟೊವನ್ನು ತೆಗೆದುಕೊಂಡು ಬಾಡಿಗೆಗೆ ತೆರಳಿದ್ದರು. ಸಂಪಂಗಿರಾಮನಗರ ಪೊಲೀಸ್ ಠಾಣಾ ವ್ಯಾಪ್ತಿಯ 8ನೇ ಮುಖ್ಯರಸ್ತೆಯಲ್ಲಿ ಆಟೊ ಚಾಲನೆ ಮಾಡಿಕೊಂಡು ತೆರಳುತ್ತಿದ್ದ ವೇಳೆ ಅವರಿಗೆ ತೀವ್ರ ಎದೆನೋವು ಕಾಣಿಸಿಕೊಂಡಿದೆ. ತಕ್ಷಣವೇ ಅವರು ಆಟೊವನ್ನು ರಸ್ತೆಯ ಬದಿಗೆ ನಿಲುಗಡೆ ಮಾಡಿ ಕುಸಿದು ಬಿದ್ದು ಮೃತಪಟ್ಟಿದ್ದಾರೆ. ಅಕ್ಕಪಕ್ಕದ ಮಳಿಗೆಗಳಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಚಾಲಕ ಎದೆನೋವಿನಿಂದ ನರಳಾಟ ನಡೆಸುವುದು ಹಾಗೂ ಕುಸಿದು ಬೀಳುವ ದೃಶ್ಯಾವಳಿ ಸೆರೆಯಾಗಿದೆ.

ನಗರದ ಹಲವು ಕಡೆ ನಡೆದ ಅವಘಡಗಳು • ಪ್ರಕರಣ ದಾಖಲು

ಪ್ರತ್ಯೇಕ 14 ಅಪಘಾತ: ಐದು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ತಡರಾತ್ರಿಯಿಂದ ಮಂಗಳವಾರ ಸಂಜೆವರೆಗೆ ಸಂಭವಿಸಿದ 14 ಪ್ರತ್ಯೇಕ ಅಪಘಾತಗಳಲ್ಲಿ 8 ವರ್ಷದ ಬಾಲಕಿ ಸೇರಿದಂತೆ 5 ಮಂದಿ ಮೃತಪಟ್ಟಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ, ಹೆಬ್ಬಾಳ, ತಲಘಟ್ಟಪುರ, ರಾಜಾಜಿನಗರ, ಹೆಣ್ಣೂರು, ಸದಾಶಿವನಗರ, ವೈಟ್‌ಫೀಲ್ಡ್, ಹುಳಿಮಾವು, ಮೈಕೋ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಪಘಾತಗಳು ಸಂಭವಿಸಿವೆ.

ಮಗು ಸಾವು: ತಲಘಟ್ಟಪುರ ಪೊಲೀಸ್ ಠಾಣೆ ವ್ಯಾಪ್ತಿಯ ಚಿಕ್ಕೇಗೌಡನ ಪಾಳ್ಯದ ಬಳಿಯ 100 ಅಡಿ ರಸ್ತೆಯಲ್ಲಿ ಟ್ರ್ಯಾಕ್ಟರ್ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ 8 ವರ್ಷದ ಗಾಯನಾ ಎಂಬ ಮಗು ಮೃತಪಟ್ಟಿದೆ.

ಲಾವಣ್ಯ ಅವರು ತಮ್ಮ ಆರು ವರ್ಷದ ಪುತ್ರಿ ನಿಶ್ಚಿತಾ ಹಾಗೂ ಸಂಬಂಧಿಕರ ಮಗು ಗಾಯನಾಳನ್ನು ಶಾಲೆಯಿಂದ ಮನೆಗೆ ಬೈಕ್‌ನಲ್ಲಿ ಕರೆತರುತ್ತಿದ್ದರು. ಬೈಕ್‌ಗೆ ಟ್ರ್ಯಾಕ್ಟರ್ ಡಿಕ್ಕಿ ಹೊಡೆದಿದ್ದರಿಂದ ಲಾವಣ್ಯ ಹಾಗೂ ನಿಶ್ಚಿತಾ ರಸ್ತೆಯ ಎಡಭಾಗಕ್ಕೆ ಬಿದ್ದರು. ಗಾಯನಾ ಬಲ ಬದಿಗೆ ಬಿದ್ದಿದ್ದರಿಂದ ಟ್ರ್ಯಾಕ್ಟರ್‌ನ ಚಕ್ರಗಳು ಆಕೆಯ ಮೇಲೆ ಹರಿದು ಮೃತಪಟ್ಟಳು ಎಂದು ಪೊಲೀಸರು ಹೇಳಿದರು.

ಬೊಲೆರೊ ವಾಹನದ ಚಾಲಕ ಸಾವು: ಎಲೆಕ್ಟ್ರಾನಿಕ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಮೇಲ್ಸೇತುವೆಯಲ್ಲಿ ಸೋಮವಾರ ತಡರಾತ್ರಿ ಕ್ಯಾಂಟರ್ ಹಾಗೂ ಬೊಲೆರೊ ವಾಹನದ ನಡುವೆ ಸಂಭವಿಸಿದ ಅಪಘಾತದಲ್ಲಿ ಬೊಲೆರೋ ಚಾಲಕ ತಮಿಳುನಾಡಿನ ಹರೀಶ್ (31) ಮೃತಪಟ್ಟಿದ್ದಾರೆ.

‘ಮೇಲ್ಸೇತುವೆಯಲ್ಲಿ ಕೆಟ್ಟು ನಿಂತಿದ್ದ ವಾಹನವನ್ನು ಹರೀಶ್ ಹಾಗೂ ಮನ್ಸೂರ್ ಪರಿಶೀಲಿಸುತ್ತಿದ್ದರು. ಸ್ಥಳದಲ್ಲಿ ಕತ್ತಲೂ ಆವರಿಸಿತ್ತು. ಹಿಂಬದಿಯಿಂದ ವೇಗವಾಗಿ ಬಂದ ಕ್ಯಾಂಟರ್ ಚಾಲಕನಿಗೆ ಡಿಕ್ಕಿ ಹೊಡೆದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮನ್ಸೂರ್ ಗಾಯಗೊಂಡಿದ್ದು ಅಪಾಯದಿಂದ ಪಾರಾಗಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಮಡಿವಾಳದಲ್ಲಿ ಸರಕುಗಳನ್ನು ಇಳಿಸಿ ತಮಿಳುನಾಡಿನತ್ತ ಬೊಲೆರೊ ತೆರಳುವಾಗ ಮೇಲ್ಸೇತುವೆ ಮೇಲೆ ಕೆಟ್ಟು ನಿಂತಿತ್ತು’ ಎಂದು ಪೊಲೀಸರು ಹೇಳಿದರು.

ಬೈಕ್ ಸವಾರ ಸಾವು: ರಿಂಗ್‌ರಸ್ತೆಯ ಚೌಡೇಶ್ವರಿ ಜಂಕ್ಷನ್ ಬಳಿ ನೀರಿನ ಟ್ಯಾಂಕರ್ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಪಶ್ಚಿಮ ಬಂಗಾಳದ ರಾಹುಲ್ (19) ಮೃತಪಟ್ಟಿದ್ದಾರೆ.

ಟೈಲ್ಸ್ ಕೆಲಸ ಮಾಡುತ್ತಿದ್ದ ರಾಹುಲ್ ಹೆಬ್ಬಾಳದಲ್ಲಿ ನೆಲೆಸಿದ್ದರು. ಸ್ನೇಹಿತನ ಜತೆಗೆ ಬೈಕ್‌ನಲ್ಲಿ ತೆರಳುವಾಗ ಈ ಅಪಘಾತ ಸಂಭವಿಸಿದೆ ಎಂದು ಪೊಲೀಸರು ಹೇಳಿದರು.

ರಾಜಾಜಿನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೂಡ್ಲುಗೇಟ್ ಬಳಿ ನೀರಿನ ಟ್ಯಾಂಕರ್‌ಗೆ ಬೈಕ್ ಡಿಕ್ಕಿಯಾಗಿ ಬೈಕ್‌ನ ಹಿಂಬದಿ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಾರ್ಮೆಂಟ್ಸ್ ಉದ್ಯೋಗಿ ಮೋಹನ್ ಮೃತಪಟ್ಟವರು. ಹುಳಿಮಾವು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾರುಕಟ್ಟೆ ಪ್ರತಿನಿಧಿ ಸಾವು: ಹೆಣ್ಣೂರು ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಹೆಣ್ಣೂರು–ಬಾಗಲೂರು ರಸ್ತೆ ದಾಟುವ ವೇಳೆ ಮಾರುಕಟ್ಟೆ ಪ್ರತಿನಿಧಿ ಸಂತೋಷ್‌ಗೆ ಬೈಕ್ ಡಿಕ್ಕಿಯಾಗಿ ಅವರು ಮೃತಪಟ್ಟಿದ್ದಾರೆ.

ಕಾವಲ್‌ಬೈರಸಂದ್ರದಲ್ಲಿ ಸಂತೋಷ್ ನೆಲೆಸಿದ್ದರು. ಕೆಲಸ ಮುಗಿಸಿಕೊಂಡು ಮನೆಗೆ ತೆರಳುವಾಗ ವೇಗವಾಗಿ ಬಂದ್ ಬೈಕ್ ಡಿಕ್ಕಿಯಾಗಿದೆ. ಬೈಕ್ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಕಮ್ಮನಹಳ್ಳಿ ಚರ್ಚ್ ಪಾದ್ರಿ ವಿರುದ್ಧ ಎಫ್‌ಐಆರ್



ಜಯಕರನ್

ಬೆಂಗಳೂರು: ಮಹಿಳೆಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇರೆಗೆ ಕಮ್ಮನಹಳ್ಳಿಯ ಚರ್ಚ್‌ನ ಪಾದ್ರಿ ಜಯಕರನ್ ಸೇರಿದಂತೆ ಐವರ ವಿರುದ್ಧ ಬಾಣಸವಾಡಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಹಣ್ಣಿನ ವ್ಯಾಪಾರ ನಡೆಸುತ್ತಿದ್ದ ಮಹಿಳೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿರುವ ಹಾಗೂ ಬೆದರಿಕೆ ಹಾಕಿರುವ ಆರೋಪದ ಮೇರೆಗೆ ಜಯಕರನ್, ನಿರ್ಮಲ್, ಲೂಯಿಸ್, ಜ್ಞಾನಪು ಸೇರಿದಂತೆ ಐವರ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ.

ಪಾದ್ರಿ ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ನನ್ನ ಮನೆಗೆ ಬಂದು ಅಸಭ್ಯವಾಗಿ ವರ್ತಿಸುತ್ತಿದ್ದ. ಮೈ–ಕೈ ಮುಟ್ಟುವುದು ಮಾಡುತ್ತಿದ್ದ. ಕೆಟ್ಟ ಪದ ಬಳಸಿ ನಿಂದನೆ ಮಾಡುತ್ತಿದ್ದ. ಈ ವಿಚಾರದಲ್ಲಿ ಕ್ಷಮೆ ಕೇಳುವುದಾಗಿ ಚರ್ಚ್‌ಗೆ ಕರೆಸಿಕೊಂಡು ಅಲ್ಲಿಯೂ ಲೈಂಗಿಕ ಕಿರುಕುಳ ನೀಡಿದ್ದ. ಅಲ್ಲದೇ ನನ್ನ ಸಂಗಾತಿ ಮೇಲೂ ಹಲ್ಲೆ ನಡೆಸಿದ್ದ’ ಎಂದು ಮಹಿಳೆ ದೂರು ನೀಡಿದ್ದಾರೆ.

‘ವಿಚಾರವನ್ನು ಯಾರಿಗೂ ತಿಳಿಸಬಾರದೆಂದು ಜಯಕರನ್ ತಮ್ಮ ಬೆಂಬಲಿಗರಾದ ನಿರ್ಮಲ್, ಲೂಯಿಸ್, ಜ್ಞಾನಪು ಅವರಿಂದ ಬೆದರಿಕೆ ಹಾಕಿಸಿದ್ದ. ನಮ್ಮ ಮೇಲೆಯೇ ದೂರು ನೀಡುವುದಾಗಿ ಬೆದರಿಕೆ ಒಡ್ಡಲಾಗಿತ್ತು. ಬೆಂಗಳೂರಿನ ಆರ್ಚ್ ಬಿಷಪ್ ಅವರಿಗೆ ದೂರು ನೀಡಿದ್ದರೂ ಅವರು ಕ್ರಮ ಕೈಗೊಂಡಿರಲಿಲ್ಲ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಅಪರಾಧ ಸುದ್ದಿ

ಸುದ್ದಿ 2 ನಿಮಿಷ

₹15 ಕೋಟಿ ಮೌಲ್ಯದ ಕೊಕೇನ್ ಜಪ್ತಿ

ಬೆಂಗಳೂರು: ಮಕ್ಕಳ ಸ್ಟೋರಿ ಬುಕ್‌ನಲ್ಲಿ ಮರೆಮಾಚಿ ವಿದೇಶದಿಂದ ಅಕ್ರಮವಾಗಿ ಕೊಕೇನ್ ಕಳ್ಳ ಸಾಗಣೆ ಮಾಡುತ್ತಿದ್ದ ವ್ಯಕ್ತಿಯನ್ನು ಬಂಧಿಸಲಾಗಿದೆ.

ಆರೋಪಿಯಿಂದ ₹ 15 ಕೋಟಿ ಮೌಲ್ಯದ 1 ಕೆ.ಜಿ ಕೊಕೇನ್ ವಶಕ್ಕೆ ಪಡೆಯಲಾಗಿದೆ.

40 ವರ್ಷದ ವ್ಯಕ್ತಿ ಜಿಂಬಾಬ್ವೆ ವ್ಯಕ್ತಿಯು ಇಂಡಿಯನ್ ಟೂರಿಸ್ಟ್ ವಿಸಾದಲ್ಲಿ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದ. ಖಚಿತ ಮಾಹಿತಿ ಮೇರೆಗೆ ತಪಾಸಣೆ ನಡೆಸಿದಾಗ ಆರೋಪಿ ಸಿಕ್ಕಿಬಿದ್ದಿದ್ದಾನೆ.

ಲಗೇಜ್ ತಪಾಸಣೆ ನಡೆಸಿದಾಗ ಕೊಕೇನ್ ಕಳ್ಳ ಸಾಗಣೆ ಮಾಡುತ್ತಿರುವುದು ಪತ್ತೆಯಾಗಿತ್ತು. ಪುಸ್ತಕದಲ್ಲಿ ಸಿಕ್ಕ ಪುಡಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಿದಾಗ ಬಂದ ವರದಿಯಲ್ಲಿ ಕೊಕೇನ್ ಇರುವುದು ದೃಢಪಟ್ಟಿದ್ದು, ಆರೋಪಿಯನ್ನು ನ್ಯಾಯಾಂಗ ವಶಕ್ಕೆ ತೆಗೆದುಕೊಳ್ಳಲಾಗಿದೆ.



ಬಿಬಿಎಂಪಿ ಬೆಂಕಿ ಅವಘಡ: ಇಬ್ಬರ ಸ್ಥಿತಿ ಗಂಭೀರ

ಬೆಂಗಳೂರು: ಬಿಬಿಎಂಪಿ ಗುಣಮಟ್ಟ ನಿಯಂತ್ರಣ (ಗುಣಮಟ್ಟ ಖಾತರಿ) ಪ್ರಯೋಗಾಲಯದಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ಗಾಯಗೊಂಡವರಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ. ಮುಖ್ಯ ಎಂಜಿನಿಯರ್ ಶಿವಕುಮಾರ್ ಅವರ ಸ್ಥಿತಿ ಹೆಚ್ಚು ಗಂಭೀರವಾಗಿದ್ದು, ಕೃತಕ ಉಸಿರಾಟದ ಜೊತೆಗೆ ಶೇಷಾದ್ರಿಪುರದಲ್ಲಿರುವ ಅಪೊಲೊ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ದಾಖಲಿಸಲಾಗಿದೆ.

ಅಲ್ಪ ಸುಧಾರಿಸಿಕೊಂಡಿದ್ದ ಆಪರೇಟರ್ ಜ್ಯೋತಿ ಅವರ ಸ್ಥಿತಿ ಮತ್ತೆ ಗಂಭೀರವಾಗಿದ್ದು, ಉಸಿರಾಟದ ಸಮಸ್ಯೆ ಹೆಚ್ಚಾಗಿದೆ. ಅವರಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಮುಂದುವರಿಸಲಾಗಿದೆ. ವಿಜಯಮಾಲ ಹಾಗೂ ಶ್ರೀನಿವಾಸ್ ಅವರ ಸ್ಥಿತಿ ಉತ್ತಮವಾಗಿದ್ದು, ತೀವ್ರ ನಿಗಾ ಘಟಕದಲ್ಲಿದ್ದಾರೆ. ಮನೋಜ್, ಸಿರಾಜ್, ಶ್ರೀಧರ್, ಸಂತೋಷ್ ಕುಮಾರ್ ಆರೋಗ್ಯ ಸುಧಾರಿಸಿದ್ದು, ಅವರನ್ನು ವಾರ್ಡ್‌ಗೆ ವರ್ಗಾಯಿಸಲಾಗಿದೆ ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿನಿ ಮೇಲೆ ಬಿದ್ದ ವಿದ್ಯುತ್ ತಂತಿ

ಒಂದನೇ ಪುಟದಿಂದ...

ಇದರಿಂದ, ವೈರ್‌ಗಳು ಇನ್ನಷ್ಟು ಕೆಳಕ್ಕೆ ಬಂದಿದ್ದವು. ಅದರ ಹಿಂದೆಯೇ ಬಂದಿದ್ದ ವಾಟರ್ ಟ್ಯಾಂಕರ್ ವಾಹನವು ಜೋತು ಬಿದ್ದ ಕೇಬಲ್‌ಗೆ ಸಿಲುಕಿಕೊಂಡಿದೆ. ವೇಗವಾಗಿ ಮುಂದಕ್ಕೆ ತೆರಳುವಾಗ ಕೇಬಲ್‌ಗಳು ವಾಹನಕ್ಕೆ ಸಿಲುಕಿಕೊಂಡು ಎಳೆದ ಪರಿಣಾಮ ವಿದ್ಯುತ್ ಕಂಬವು ನೆಲಕ್ಕೆ ಉರುಳಿದೆ. ಮಧ್ಯಾಹ್ನ 1.45ರ ಸುಮಾರಿಗೆ ಅದೇ ಮಾರ್ಗದ ರಸ್ತೆಯ ಬಲಬದಿಯಲ್ಲಿ ತೆರಳುತ್ತಿದ್ದ ವಿದ್ಯಾರ್ಥಿನಿ ಮೇಲೆ ತಂತಿ ಬಿದ್ದು ವಿದ್ಯುತ್ ಪ್ರವಹಿಸಿ ಸುಟ್ಟ ಗಾಯವಾಗಿದೆ’ ಎಂದು ಪೊಲೀಸರು ತಿಳಿಸಿದರು

ಸ್ಥಳೀಯ ಅಂಗಡಿ ಸಿಬ್ಬಂದಿ ನೆರವು: ‘ಘಟನೆ ನಡೆದ ತಕ್ಷಣ ಅದೇ ಮಾರ್ಗದಲ್ಲಿದ್ದ ಎಲೆಕ್ಟ್ರಿಕ್ ಅಂಗಡಿ ಸಿಬ್ಬಂದಿ ಪೈಪ್ ಸಹಾಯದಿಂದ ವಿದ್ಯುತ್ ತಂತಿಯನ್ನು ಪಕ್ಕಕ್ಕೆ ತಳ್ಳಿದರು. ಇದರಿಂದ, ಹೆಚ್ಚಿನ ಅಪಾಯ ತಪ್ಪಿತು. ಬೆಸ್ಕಾಂ ಸಿಬ್ಬಂದಿಗೆ ಮಾಹಿತಿ ನೀಡಿದ್ದರಿಂದ ವಿದ್ಯುತ್ ಸಂಪರ್ಕ ಸ್ಥಗಿತಗೊಳಿಸಿದರು. ಬಳಿಕ, ಸ್ಥಳೀಯರು ವಿದ್ಯಾರ್ಥಿನಿಯನ್ನು ಆಸ್ಪತ್ರೆಗೆ ಕರೆದೊಯ್ದರು’ ಎಂದು ಪ್ರತ್ಯಕ್ಷದರ್ಶಿ ತಿಳಿಸಿದರು.

ವಿದ್ಯಾರ್ಥಿನಿ ಪ್ರಾಣಾಪಾಯದಿಂದ ಪಾರಾಗಿದ್ದು, ಚಿಕಿತ್ಸೆ ಮುಂದುವರಿಸಲಾಗಿದೆ ಎಂದು ವೈದ್ಯರು ಹೇಳಿದರು.

ಅಸಮರ್ಪಕ ಕೇಬಲ್ ಅಳವಡಿಸಿರುವ ಕೇಬಲ್ ಮಾಲೀಕರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು. ವಿದ್ಯಾರ್ಥಿನಿ ತಾನು ವಾಸಿಸುತ್ತಿದ್ದ ‘ಪೇಯಿಂಗ್ ಗೆಸ್ಟ್’ಗೆ ತೆರಳುವಾಗ ಈ ಘಟನೆ ನಡೆದಿದೆ ಎಂದು ಪೊಲೀಸರು ಹೇಳಿದರು.





ವಿದ್ಯುತ್ ಕಂಬ ಬಿದ್ದಿರುವುದು (ಎಡಚಿತ್ರ) ಎಸ್‌.ಜಿ.ಪಾಳ್ಯ ಮುಖ್ಯರಸ್ತೆಯಲ್ಲಿ ವಿದ್ಯುತ್‌ಕಂಬ ಉರುಳಿದ ಸ್ಥಳ

ಸಮಯ ಪ್ರಜ್ಞೆ ಮೆರೆದ ಅಂಗಡಿ ಸಿಬ್ಬಂದಿ

‘ಅಂಗಡಿಯ ಒಳಗಿದ್ದ ವೇಳೆ ಜೋರು ಶಬ್ದ ಕೇಳಿಬಂತು. ತಕ್ಷಣವೇ ಹೊರಗೆ ಬಂದು ನೋಡಿದಾಗ ವಿದ್ಯುತ್ ತಂತಿ ನಡುವೆ ವಿದ್ಯಾರ್ಥಿನಿ ಸಿಲುಕಿದ್ದಳು. ಆಕೆ ಪ್ರಜ್ಞೆ ತಪ್ಪಿದ್ದಳು. ಜತೆಗೆ ಹೊಗೆ ಆವರಿಸಿತ್ತು. ಅಂಗಡಿಯಲ್ಲಿದ್ದ ಪೈಪ್‌ವೊಂದನ್ನು ಕೊಂಡೊಯ್ದು ತಂತಿಯನ್ನು ಬದಿಗೆ ಸರಿಸಿದೆ’ ಎಂದು ಸಮಯಪ್ರಜ್ಞೆ ತೋರಿದ ಪ್ರಕಾಶ್ ಹೇಳಿದರು.

‘ಸಾಮಾನ್ಯವಾಗಿ ಈ ರಸ್ತೆಯಲ್ಲಿ ಮಧ್ಯಾಹ್ನ 1ರಿಂದ 2 ಗಂಟೆಯ ನಡುವೆ ಜನಸಂದಣಿ ಇರುತ್ತದೆ. ಮಂಗಳವಾರ ಮಧ್ಯಾಹ್ನ ದಟ್ಟಣೆ ಕಡಿಮೆಯಿತ್ತು. ಹೆಚ್ಚಿನ ಜನರು ಓಡಾಟ ನಡೆಸಿದ್ದರೆ ದೊಡ್ಡ ಅನಾಹುತವೇ ಘಟಿಸುವ ಸಾಧ್ಯತೆಯಿತ್ತು’ ಎಂದು ರೆಸ್ಟೋರೆಂಟ್ ಮಾಲೀಕ ಜಮೀಲ್ ಹೇಳಿದರು. ‘ಪ್ರಿಯಾ ವಿದ್ಯಾಭ್ಯಾಸದಲ್ಲೂ ಮುಂದಿದ್ದಳು. ಹೆಚ್ಚಿನ ವಿದ್ಯಾಭ್ಯಾಸ ಮಾಡಲು ದೆಹಲಿಯಿಂದ ನಗರಕ್ಕೆ ಬಂದಿದ್ದಳು. ಎಲ್ಲರ ಜತೆಗೆ ಸೌಹಾರ್ದವಾಗಿ ಮಾತನಾಡುತ್ತಿದ್ದಳು’ ಎಂದು ಆಕೆಯ ಸ್ನೇಹಿತರು ಹೇಳಿದರು.

ಬೆಸ್ಕಾಂ ನಿರ್ಲಕ್ಷ್ಯ: ಸ್ಥಳೀಯರ ದೂರು

ವಿದ್ಯುತ್ ಕಂಬಗಳ ಮೇಲೆ ಕಾನೂನುಬಾಹಿರವಾಗಿ ಅಳವಡಿಸಿರುವ ಕೇಬಲ್‌ಗಳನ್ನು ತೆರವುಗೊಳಿಸಲು ಬೆಸ್ಕಾಂ ನಿರ್ಲಕ್ಷ್ಯವಹಿಸಿದೆ ಎಂದು ನಾಗರಿಕರು ದೂರಿದ್ದಾರೆ.

ನಗರದಲ್ಲಿ ಎಲ್ಲೆಂದರಲ್ಲಿ ಕೇಬಲ್‌ಗಳು ಜೋತು ಬಿದ್ದಿದ್ದು ಇದರಿಂದ ಅಪಾಯ ಸಂಭವಿಸುತ್ತಿದೆ. ಬಹುತೇಕ ಬಡಾವಣೆಗಳಲ್ಲಿ ವಿದ್ಯುತ್ ಕಂಬಕ್ಕೆ ಕೇಬಲ್ ಕಟ್ಟಲಾಗುತ್ತಿದೆ. ಕೇಬಲ್‌ಗಳು ಕೆಳಗೆ ಬಿದ್ದಿದ್ದರೂ ಅವುಗಳನ್ನು ತೆಗೆಯುತ್ತಿಲ್ಲ. ಇದರಿಂದ ಅಮಾಯಕರು ಪ್ರಾಣ ಕಳೆದುಕೊಳ್ಳುವ ಸ್ಥಿತಿಯಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

‘ಎಸ್‌.ಜಿ. ಪಾಳ್ಯದಲ್ಲಿ ಹಳೆಯ ಕಂಬಗಳು ವಾಲುತ್ತಿರುವ ಬಗ್ಗೆ ಮತ್ತು ಕೇಬಲ್‌ಗಳ ಬಗ್ಗೆ ಬೆಸ್ಕಾಂಗೆ ಮಾಹಿತಿ ನೀಡಲಾಗಿತ್ತು. ಆದರೆ, ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ಸ್ಥಳೀಯ ನಿವಾಸಿ ಪ್ರಕಾಶ್ ದೂರಿದರು.

ಆದರೆ, ಬೆಸ್ಕಾಂ ಅಧಿಕಾರಿಗಳು ಸ್ಥಳೀಯರ ಆರೋಪಗಳನ್ನು ತಳ್ಳಿ ಹಾಕಿದ್ದಾರೆ. ‘ಸಹಜವಾಗಿ ಅಥವಾ ನಿರ್ಲಕ್ಷ್ಯದಿಂದ ಕಂಬ ಉರುಳಿ ಬಿದ್ದಿಲ್ಲ. ನಾವು ನಿರಂತರವಾಗಿ ಕಂಬಗಳನ್ನು ಪರಿಶೀಲಿಸುತ್ತಿದ್ದು, ಹಳೆಯ ಕಂಬಗಳನ್ನು ಬದಲಾಯಿಸುತ್ತಿದ್ದೇವೆ’ ಎಂದು ಸಮರ್ಥಿಸಿಕೊಂಡಿದ್ದಾರೆ.

‘ಶೀಘ್ರ ನೋಟಿಸ್ ಜಾರಿ’: ವಿದ್ಯುತ್ ಕಂಬಗಳಿಗೆ ಸಂಬಂಧಿಸಿದಂತೆ ಅವಘಡಗಳು ಸಂಭವಿಸುತ್ತಿರುವುದರಿಂದ ಕಾನೂನುಬಾಹಿರವಾಗಿ ಕೇಬಲ್ ಅಳವಡಿಸಿರುವ ಇಂಟರ್‌ನೆಟ್ ಸೇವೆ ಒದಗಿಸುವ ಕಂಪನಿಗಳಿಗೆ ನೋಟಿಸ್ ನೀಡಲು ಬೆಸ್ಕಾಂ ಮುಂದಾಗಿದೆ.

ಏಳು ದಿನಗಳ ಒಳಗೆ ಕೇಬಲ್‌ಗಳನ್ನು ತೆಗೆದುಹಾಕದಿದ್ದರೆ ವಿದ್ಯುತ್ ಕಂಬಗಳಿಗೆ ಹಾಕಿರುವ ಎಲ್ಲ ಕೇಬಲ್‌ಗಳನ್ನು ತೆಗೆದುಹಾಕಲಾಗುವುದು ಎಂದು ಬೆಸ್ಕಾಂ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪದೇ ಪದೇ ಘಟನೆ: ದೇವರಬೀಸನಹಳ್ಳಿ ಬಳಿಯ ಕರಿಯಮ್ಮನ ಅಗ್ರಹಾರ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ಆಗಸ್ಟ್ 19ರಂದು ಸಂಭವಿಸಿದ್ದ ವಿದ್ಯುತ್ ಅವಘಡದಲ್ಲಿ ಕೇವಿನ್ ಎಂಬುವವರು ತೀವ್ರ ಗಾಯಗೊಂಡಿದ್ದರು. ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ. ನಗರದಲ್ಲಿ ಪದೇ ಪದೇ ವಿದ್ಯುತ್ ಅವಘಡಗಳು ಸಂಭವಿಸುತ್ತಿವೆ. ಅವೈಜ್ಞಾನಿಕವಾಗಿ ಕೇಬಲ್ ಅಳವಡಿಕೆ ಮಾಡುತ್ತಿರುವುದು ಅನಾಹುತಕ್ಕೆ ಕಾರಣವಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಮತ್ತೆ ಡಿವೈಎಸ್‌ಪಿ, ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 21 ಮಂದಿ ಡಿವೈಎಸ್ಪಿ ಹಾಗೂ 66 ಮಂದಿ ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆಗೊಳಿಸಿ ಮಂಗಳವಾರ ರಾಜ್ಯ ಸರ್ಕಾರ ಆದೇಶಿಸಿದೆ. ಕಳೆದ ವಾರವೂ ಎರಡು ಬಾರಿ ಪೊಲೀಸ್ ಇಲಾಖೆಯಲ್ಲಿ ವರ್ಗಾವಣೆ ನಡೆದಿತ್ತು.

ನಗರಕ್ಕೆ ವರ್ಗಾವಣೆಯಾದ ಡಿವೈಎಸ್ಪಿಗಳ ಪಟ್ಟಿ: ಎಲ್‌.ನವೀನ್ ಕುಮಾರ್ (ದೇವನಹಳ್ಳಿ ಉಪ ವಿಭಾಗ), ಪ್ರಕಾಶ್ ರಾಥೋಡ್ (ಕೆ.ಜಿ.ಹಳ್ಳಿ ಉಪ ವಿಭಾಗ), ಎ.ವಿ.ಲಕ್ಷ್ಮೀ ನಾರಾಯಣ (ಆಡುಗೋಡಿ ಸಂಚಾರ), ಬಿ.ಶಿವಶಂಕರ ರೆಡ್ಡಿ (ಮೈಕೋ ಲೇಔಟ್ ಉಪ ವಿಭಾಗ) ವರ್ಗಾವಣೆ ಮಾಡಲಾಗಿದೆ.

ನಗರಕ್ಕೆ ವರ್ಗಾವಣೆಯಾದ ಇನ್‌ಸ್ಪೆಕ್ಟರ್‌ಗಳ ಪಟ್ಟಿ: ಎ.ಕೆ.ಗಿರೀಶ್ (ಕಬ್ಬನ್ ಪಾರ್ಕ್ ಠಾಣೆ), ಜಿ.ಎಸ್. ರಾಘವೇಂದ್ರ(ದೇವನಹಳ್ಳಿ ವಿಮಾನ ನಿಲ್ದಾಣದ ಸಂಚಾರ ಠಾಣೆ), ಎಂ. ಶ್ಯಾಮ್ (ಎಲೆಕ್ಟ್ರಾನಿಕ್ ಸಿಟಿ ಸಂಚಾರ), ಎಂ.ಚಂದ್ರಶೇಖರ್(ಸಂಪಿಗೆಹಳ್ಳಿ), ಬಿ.ಪಿ.ಗಿರೀಶ್(ಸದಾಶಿವನಗರ), ಎಂ.ಎನ್.ರವಿಶಂಕರ್(ಕಂಟೋನ್‌ಮೆಂಟ್ ರೈಲ್ವೆ ಪೊಲೀಸ್ ವೃತ್ತ), ಸಿ.ಬಿ.ಶಿವಸ್ವಾಮಿ (ವಿದ್ಯಾರಣ್ಯಪುರ), ಎಚ್.ಉಮಾಶಂಕರ್(ಬಸವನಗುಡಿ ಸಂಚಾರ), ಟಿ.ಬಿ.ಚಿದಾನಂದಮೂರ್ತಿ (ಟಿಟಿಬಿ), ಟಿ.ಎಂ.ಧರ್ಮೇಂದ್ರ (ಹೈಕೋರ್ಟ್ ಭದ್ರತೆ), ಎಸ್.ಆರ್. ಗೋವಿಂದರಾಜ್ ಟಿ.ದಾಸರಿ (ಸಿಟಿ ಎಸ್‌ಬಿ), ಎಂ.ಆರ್.ಸತೀಶ್(ಸಿಟಿ ಎಸ್‌ಬಿ), ಎಂ.ಶಿವಕುಮಾರ್ (ಎಟಿಸಿ ಬೆಂಗಳೂರು).

262 ಪೂರ್ವ ಪ್ರಾಥಮಿಕ ಶಾಲೆಗಳಿಗೆ ಅನುಮತಿ

ಬೆಂಗಳೂರು: ರಾಜ್ಯದ 262 ಸರ್ಕಾರಿ ಶಾಲೆಗಳಲ್ಲಿ ಸೆಪ್ಟೆಂಬರ್‌ನಿಂದಲೇ ಪೂರ್ವ ಪ್ರಾಥಮಿಕ ಶಾಲೆಗಳನ್ನು ಆರಂಭಿಸಲು ಶಾಲಾ ಶಿಕ್ಷಣ ಇಲಾಖೆಯ ಸಮಗ್ರ ಶಿಕ್ಷಣ ಕರ್ನಾಟಕ (ಎಸ್‌ಎಸ್‌ಕೆ) ಸಮ್ಮತಿ ನೀಡಿದೆ.

ಕರ್ನಾಟಕ ಪಬ್ಲಿಕ್ ಶಾಲೆಗಳ (ಕೆಪಿಎಸ್) ಭಾಗವಾಗಿ 2019-20ರಿಂದಲೇ ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ (ಎಲ್‌ಕೆಜಿ-ಯುಕೆಜಿ) ತರಗತಿಗಳನ್ನು ರಾಜ್ಯ ಸರ್ಕಾರ ಆರಂಭಿಸಿತ್ತು. ಪ್ರಸ್ತುತ ರಾಜ್ಯದಲ್ಲಿ 276 ಕೆಪಿಎಸ್ ಹಾಗೂ 664 ಪೂರ್ವ ಪ್ರಾಥಮಿಕ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಬೇಡಿಕೆ ಇದ್ದರೂ, ಕೋವಿಡ್ ಕಾರಣದಿಂದ ಮತ್ತೆ ಹೊಸದಾಗಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಅವಕಾಶ ನೀಡಿರಲಿಲ್ಲ.



ಪೋಸ್ಟರ್ ಬಿಡುಗಡೆ

ಸೌಜನ್ಯಾ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳ್ತಂಗಡಿ ಚಲೋ ಪೋಸ್ಟರ್ ಅನ್ನು ನಗರದಲ್ಲಿ ಮಂಗಳವಾರ ಜನವಾದಿ ಮಹಿಳಾ ಸಂಘಟನೆ ಸದಸ್ಯರು ಬಿಡುಗಡೆ ಮಾಡಿದರು – ಪ್ರಜಾವಾಣಿ ಚಿತ್ರ

ಕೌಟುಂಬಿಕ ನ್ಯಾಯಾಲಯದ ಆದೇಶ ಎತ್ತಿಹಿಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊದಲನೆ ಮದುವೆ ಮತ್ತು ನಾಲ್ಕು ಮಕ್ಕಳ ತಾಯಿ ಎಂಬ ಸಂಗತಿಯನ್ನು ಮರೆಮಾಚಿದ್ದನ್ನು ಪರಿಗಣಿಸಿ ಮಹಿಳೆಯೊಬ್ಬರ ಎರಡನೇ ವಿವಾಹವನ್ನು ಅನೂರ್ಜಿತಗೊಳಿಸಿ ವಿಚ್ಛೇದನ ಮಂಜೂರು ಮಾಡಿದ್ದ ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.



ಕೌಟುಂಬಿಕ ನ್ಯಾಯಾಲಯದ ಆದೇಶ ರದ್ದು ಕೋರಿ ಮಹಿಳೆಯೊಬ್ಬರು ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಅಲೋಕ್ ಆರಾಧೆ (ಪ್ರಸ್ತುತ ತೆಲಂಗಾಣ ಮುಖ್ಯ ನ್ಯಾಯಮೂರ್ತಿ) ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

‘ಕೌಟುಂಬಿಕ ನ್ಯಾಯಾಲಯವು ಪತಿ ಒದಗಿಸಿದ್ದ ಸಾಕ್ಷ್ಯಧಾರಗಳನ್ನು ಸೂಕ್ಷ್ಮವಾಗಿ ಪರಿಶೀಲನೆ ನಡೆಸಿದ ನಂತರವೇ ವಿಚ್ಛೇದನ ಮಂಜೂರು ಮಾಡಿದೆ. ಹಾಗಾಗಿ, ಈ ಆದೇಶದಲ್ಲಿ ಮಧ್ಯಪ್ರವೇಶ ಮಾಡಲು ಮತ್ತು ಪತಿಯ ಸಾಕ್ಷ್ಯಧಾರಗಳನ್ನು ತಿರಸ್ಕರಿಸಲು ಯಾವುದೇ ಸಕಾರಣ ಈ ನ್ಯಾಯಪೀಠದ ಮುಂದೆ ಇಲ್ಲ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ ಮೇಲ್ಮನವಿಯನ್ನು ವಜಾಗೊಳಿಸಿದೆ.

‘ಪ್ರಕರಣದಲ್ಲಿ ಪತಿಯ (ಎರಡನೇ ಪತಿ) ವಿಚ್ಛೇದನದ ಅರ್ಜಿಗೆ ಸಂಬಂಧಿಸಿದಂತೆ ಮೇಲ್ಮನವಿದಾರರು (ಪತ್ನಿ) ಕೌಟುಂಬಿಕ ನ್ಯಾಯಾಲಯಕ್ಕೆ ಯಾವುದೇ ಆಕ್ಷೇಪಣಾ ಹೇಳಿಕೆ ಸಲ್ಲಿಸಿಲ್ಲ. ತಮ್ಮ ಪರವಾದ ಯಾವುದೇ ಸಾಕ್ಷ್ಯಧಾರಗಳನ್ನೂ ಒದಗಿಸಿಲ್ಲ. ಪತಿಯನ್ನು ಪಾಟಿ ಸವಾಲಿಗೆ ಗುರಿಪಡಿಸಿ, ಅವರ ಸಾಕ್ಷ್ಯಗಳನ್ನು ಅಲ್ಲಗಳೆಯುವ ಪ್ರಯತ್ನವನ್ನೇ ಪತ್ನಿ ಮಾಡಿಲ್ಲ’ ಎಂದು ನ್ಯಾಯಪೀಠ ಅರ್ಜಿ ವಜಾಕ್ಕೆ ಕಾರಣ ನೀಡಿದೆ. ಮೇಲ್ಮನವಿದಾರ ಪತ್ನಿಯ ಎರಡನೇ ವಿವಾಹವನ್ನು ಅಸಿಂಧುಗೊಳಿಸಿ ವಿಚ್ಛೇದನ ಮಂಜೂರು ಮಾಡಿದ್ದ ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಪುರಸ್ಕರಿಸಿದೆ.

ನಿಧನ ವಾರ್ತೆ

ಕೆ.ಪಿ. ಶಾರದಮ್ಮ



ಕಿಕ್ಕೇರಿ (ಮಂಡ್ಯ ಜಿಲ್ಲೆ): ಪಟ್ಟಣ ಮೂಲದ, ಬೆಂಗಳೂರಿನಲ್ಲಿ ನೆಲೆಸಿದ್ದ ಕೆ.ಪಿ. ಶಾರದಮ್ಮ(79) ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಅವರಿಗೆ ಪುತ್ರ, ಗುಪ್ತಚರ ವಿಭಾಗದ ಎಡಿಜಿಪಿ ಕೆ.ವಿ. ಶರತ್‌ಚಂದ್ರ, ಪುತ್ರಿ ಸುಧಾ ಇದ್ದಾರೆ. ಮೃತರು ಕುರುಹಿನಶೆಟ್ಟಿ ಸಮಾಜಕ್ಕಾಗಿ ದುಡಿದಿದ್ದರು. ಅಂತ್ಯಕ್ರಿಯೆ ಬೆಂಗಳೂರಿನಲ್ಲಿ ನಡೆಯಿತು.



ಯೋಜನೆ ರೂಪಿಸಲು ಬಿಬಿಎಂಪಿಗೆ ಸೂಚನೆ

ಕಾಂಗ್ರೆಸ್ ಶಾಸಕರ ಕ್ಷೇತ್ರಕ್ಕೆ ತಲಾ ₹45 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್‌ನ 12 ಶಾಸಕರ ಕ್ಷೇತ್ರದಲ್ಲಿ ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ತಲಾ ₹45 ಕೋಟಿ ವೆಚ್ಚ ಮಾಡಲು ಸರ್ಕಾರ ಅನುಮತಿ ನೀಡಿದೆ.


ಶಾಸಕರು ಯಾವ ಕಾಮಗಾರಿಗಳನ್ನು ನಡೆಸಬೇಕು ಎಂಬ ಬಗ್ಗೆ ಪಟ್ಟಿ ತಯಾರಿಸಿ ಬಿಬಿಎಂಪಿಗೆ ಸಲ್ಲಿಸಬೇಕು. ಆ ಕಾಮಗಾರಿಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಬಿಬಿಎಂಪಿಯ ಎಲ್ಲ ಕಾಮಗಾರಿಗಳನ್ನು ಸ್ಥಗಿತಗೊಳಿಸಿತ್ತು. ವಿಧಾನಸಭೆ ಚುನಾವಣೆ ಅವಧಿಯೂ ಸೇರಿದರೆ ಏಪ್ರಿಲ್‌ನಿಂದ ಈವರೆಗೆ ಒಂದೂ ಟೆಂಡರ್ ಕರೆಯಲಾಗಿಲ್ಲ. ಕಾಂಗ್ರೆಸ್ ಶಾಸಕರ ಒತ್ತಾಯದ ಮೇರೆಗೆ ಇದೀಗ ಸರ್ಕಾರ ಹೊಸ ಕಾಮಗಾರಿಗಳನ್ನು ನಡೆಸಲು ಅನುಮತಿ ನೀಡಿದೆ.

ಪ್ರತಿ ಕ್ಷೇತ್ರಕ್ಕೆ ₹45 ಕೋಟಿ ಹೊಸ ಅನುದಾನವೇನಲ್ಲ. ಬಿಜೆಪಿ ಅಧಿಕಾರದಲ್ಲಿದ್ದಾಗ ಅನುಮತಿಸಲಾಗಿದ್ದ ಅನುದಾನವನ್ನೇ ಇಲ್ಲಿ ಬಳಸಿಕೊಳ್ಳಲಾಗುತ್ತದೆ. ಆದರೆ, ಈಗ ಕಾಂಗ್ರೆಸ್ ಶಾಸಕರು ಹೇಳಿದ ಕಾಮಗಾರಿಗಳು ಮಾತ್ರ ನಡೆಯಲಿವೆ. ಹಿಂದೆ ನಿರ್ಧರಿಸಲಾಗಿದ್ದ ಕೆಲವು ಕಾಮಗಾರಿಗಳನ್ನು ಕೈಬಿಟ್ಟು, ಅದರ ಬದಲು ಹೊಸ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಬಿಜೆಪಿ ಶಾಸಕರಿರುವ ವಿಧಾನಸಭೆ ಕ್ಷೇತ್ರಗಳ ಅನುದಾನವನ್ನೂ ಕಾಂಗ್ರೆಸ್ ಶಾಸಕರಿರುವ ಕ್ಷೇತ್ರಕ್ಕೆ ವರ್ಗಾಯಿಸುವಂತೆಯೂ ಒತ್ತಡ ಹಾಕಲಾಗುತ್ತಿದೆ. ₹45 ಕೋಟಿ ಕಾಮಗಾರಿ ನಡೆಸಲು ಸೂಚಿಸಿರುವುದರಿಂದ ಅದನ್ನು ಇತರೆ ಕ್ಷೇತ್ರಗಳ ಕಾಮಗಾರಿಗಳನ್ನು ನಿಲ್ಲಿಸುವ ಬಾಬ್ತಿನಲ್ಲಿ ಹೊಂದಾಣಿಕೆ ಮಾಡಲು ಕಾಂಗ್ರೆಸ್ ಶಾಸಕರು ಹೇಳುತ್ತಿದ್ದಾರೆ.

‘ಬಿಜೆಪಿ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್ ಶಾಸಕರಿರುವ ಕ್ಷೇತ್ರದಲ್ಲಿ ಆರಂಭವಾಗಿದ್ದ ಕಾಮಗಾರಿಗಳನ್ನು ಬದಲಾಯಿಸುವುದು ಬೇಡ. ಅದು ಮುಂದುವರಿಯಲಿ. ಇದೀಗ ₹45 ಕೋಟಿ ಅನುದಾನವನ್ನು ಇತರೆ ಕ್ಷೇತ್ರಗಳಿಂದ ಹೊಂದಾಣಿಕೆ ಮಾಡಿಕೊಂಡು ಹೊಸ ಕಾಮಗಾರಿಗಳನ್ನೇ ಆರಂಭಿಸಲು ಕಾಂಗ್ರೆಸ್ ಶಾಸಕರು ಪಟ್ಟಿಯನ್ನು ಸಿದ್ಧಮಾಡಿಕೊಳ್ಳುತ್ತಿದ್ದಾರೆ’ ಎಂದು ಪಕ್ಷದ ಮೂಲಗಳು ತಿಳಿಸಿವೆ.



ಬಿಬಿಎಂಪಿ ವಿಧಾನಸಭೆ ಕ್ಷೇತ್ರಗಳು

ಮುಖ್ಯಾಂಶಗಳು

- ಶಾಸಕರ ಒತ್ತಾಯದ ಮೇರೆಗೆ ಹೊಸ ಕಾಮಗಾರಿಗೆ ಸರ್ಕಾರದಿಂದ ಅನುಮತಿ
- ಬಿಜೆಪಿ ಸರ್ಕಾರ ಅನುಮತಿಸಿದ್ದ ಅನುದಾನವನ್ನೇ ಬಳಕೆ
- ಬಿಬಿಎಂಪಿಯಲ್ಲಿ ಸ್ಥಗಿತಗೊಂಡಿದ್ದ ಕಾಮಗಾರಿಗಳು

ಯಶವಂತಪುರಕ್ಕೂ ₹45 ಕೋಟಿ

ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್ ಪ್ರತಿನಿಧಿಸುವ ಯಶವಂತಪುರ ವಿಧಾನಸಭೆ ಕ್ಷೇತ್ರದಲ್ಲೂ ₹45 ಕೋಟಿ ಮೌಲ್ಯದ ಕಾಮಗಾರಿ ಕೈಗೊಳ್ಳಲು ಸರ್ಕಾರ ಅನುಮೋದನೆ ನೀಡಿದೆ.

ನಗರದಲ್ಲಿ ಬಿಜೆಪಿಯ 16 ಶಾಸಕರಿದ್ದು, 15 ಶಾಸಕರಿಗೆ ಈ ಅನುದಾನವನ್ನು ನೀಡಲಾಗಿಲ್ಲ. ಯಶವಂತಪುರಕ್ಕೆ ಮಾತ್ರ ವಿಶೇಷವಾಗಿ ಈ ಅನುದಾನ ಒದಗಿಸಲಾಗಿದೆ. ಸೋಮಶೇಖರ್ ಹೇಳುವ ಕಾಮಗಾರಿಗಳು ತಕ್ಷಣವೇ ಆರಂಭವಾಗಲಿವೆ ಎಂದು ಬಿಬಿಎಂಪಿ ಮೂಲಗಳು ಹೇಳಿವೆ.

ಯಶವಂತಪುರ ವಿಧಾನಸಭೆ ಕ್ಷೇತ್ರದಲ್ಲಿ ಇತ್ತೀಚೆಗೆ ಕ್ಷಿಪ್ರ ಬೆಳವಣಿಗೆಗಳಾಗುತ್ತಿದ್ದು, ಬಿಜೆಪಿಯ ಸ್ಥಳೀಯ ಮುಖಂಡರು ಕಾಂಗ್ರೆಸ್‌ಗೆ ಸೇರಿಕೊಂಡಿದ್ದಾರೆ. ಸೋಮಶೇಖರ್ ಅವರು ಈ ಹಿಂದೆ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದಾಗ, ಈ ಮುಖಂಡರು ಅವರನ್ನು ಅನುಸರಿಸಿದ್ದರು. ಆದರೆ ಇದೀಗ ಶಾಸಕರು ಬಿಜೆಪಿಯಲ್ಲೇ ಇದ್ದರೂ ಮುಖಂಡರು ಕಾಂಗ್ರೆಸ್‌ಗೆ ಹಿಂದಿರುಗಿದ್ದಾರೆ. ಸೋಮಶೇಖರ್ ಅವರೂ ಕಾಂಗ್ರೆಸ್ ಸೇರಬಹುದು ಎಂದು ಪಕ್ಷದ ಮೂಲಗಳು ತಿಳಿಸಿವೆ.

‘ಖರ್ಗೆ ಸ್ವಾತಂತ್ರ್ಯಕ್ಕೆ ಗಾಂಧಿ ಕುಟುಂಬ ಅಡ್ಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ವತಂತ್ರವಾಗಿ ಕೆಲಸ ಮಾಡಲು ಗಾಂಧಿ ಕುಟುಂಬ ಅವಕಾಶ ನೀಡುತ್ತಿಲ್ಲ. ಅನುಭವಿ ನಾಯಕನಿಗೆ ಅನನುಭವಿ ರಾಹುಲ್ ಗಾಂಧಿ ಸಲಹೆ ನೀಡುತ್ತಿದ್ದಾರೆ’ ಎಂದು ರಾಜ್ಯಸಭೆಯ ಬಿಜೆಪಿ ಸದಸ್ಯ ಲಹರ್ ಸಿಂಗ್ ಸಿರೋಯ ಹೇಳಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಹಿರಿಯರಾದ ಖರ್ಗೆ ಅವರು ಕೆ.ಸಿ. ವೇಣುಗೋಪಾಲ್, ಜೈರಾಂ ರಮೇಶ್, ರಣದೀಪ್ ಸಿಂಗ್ ಸುರ್ಜೇವಾಲಾ ಅವರಂತಹ ಕಿರಿಯರ ಆಣತಿಯಂತೆ ಕೆಲಸ ಮಾಡುತ್ತಿದ್ದಾರೆ. ಇದನ್ನು ನಾವು ನಿರೀಕ್ಷೆ ಮಾಡಿರಲಿಲ್ಲ’ ಎಂದರು.

ಎಸ್. ನಿಜಲಿಂಗಪ್ಪ ಅವರು ಗಾಂಧಿ ಕುಟುಂಬದ ಒತ್ತಡಕ್ಕೆ ಮಣಿಯದೆ ಕೆಲಸ ಮಾಡಿದ್ದರು. ಎಚ್‌.ಡಿ. ದೇವೇಗೌಡರು ಪ್ರಧಾನಿಯಾಗಿದ್ದ ಅವಧಿಯಲ್ಲಿ ಗಾಂಧಿ ಕುಟುಂಬವು ಅವರನ್ನು ಹತ್ತಿಕ್ಕಲು ಪ್ರಯತ್ನಿಸಿತ್ತು. ಆಗ ಅವರು ಒತ್ತಡಕ್ಕೆ ಮಣಿದಿರಲಿಲ್ಲ. ಗಾಂಧಿ ಕುಟುಂಬವು ಕರ್ನಾಟಕದ ನಾಯಕರನ್ನು ಹತ್ತಿಕ್ಕಲು ಸದಾ ಪ್ರಯತ್ನಿಸುತ್ತಿರುತ್ತದೆ ಎಂದು ದೂರಿದರು.

ನೂತನ ಸಂಸತ್ ಕಟ್ಟಡ ಉದ್ಘಾಟನೆ ಸಮಾರಂಭವನ್ನು ಬಹಿಷ್ಕರಿಸುವ ಆದೇಶ ನೀಡಬೇಕೆಂಬ ರಾಹುಲ್ ಗಾಂಧಿಯವರ ಸೂಚನೆಯನ್ನು ಖರ್ಗೆಯವರು ಒಪ್ಪಿಕೊಳ್ಳಬಾರದಿತ್ತು. ಪಕ್ಷ ಅಥವಾ ಒಂದು ಕುಟುಂಬಕ್ಕಿಂತ ದೇಶ ಮುಖ್ಯ ಎಂದು ಅವರು ಯೋಚಿಸಬೇಕಿತ್ತು ಎಂದರು.

‘ಸರ್ಕಾರ ಬಹು ದಿನ ಉಳಿಯದು’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ಅಧಿಕಾರದ ದಾಹಕ್ಕಾಗಿ ಕಿತ್ತಾಡಿಕೊಂಡು ಕಾಂಗ್ರೆಸ್ ಸರ್ಕಾರ ಐದು ವರ್ಷ ಪೂರೈಸುವುದಿಲ್ಲ. ಮುಖ್ಯಮಂತ್ರಿ, ಮಂತ್ರಿ ಸ್ಥಾನಕ್ಕಾಗಿ ಸರ್ಕಾರ ಪತನವಾಗಲಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಮಾಗಡಿ ರಸ್ತೆಯ ತಾವರೆಕೆರೆಯಲ್ಲಿ ಮುಂಬರುವ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಾಗಿ ಸಿದ್ಧತೆ ಬಗ್ಗೆ ಕರೆದಿದ್ದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ‘ಸ್ವತಂತ್ರವಾಗಿ ಕಾಂಗ್ರೆಸ್ ಅಧಿಕಾರ ನಡೆಸುವಂತೆ ನಾಡಿನ ಜನತೆ ಅಧಿಕಾರ ನೀಡಿದ್ದರೂ ಉತ್ತಮ ಆಡಳಿತ ನೀಡದೆ ವರ್ಗಾವಣೆ ದಂದೆಯಲ್ಲಿ ತೊಡಗಿ ಹಣಲೂಟಿ ಮಾಡಲು ಹೊರಟಿದೆ’ ಎಂದು ದೂರಿದರು.

‘ಹಣ ಲೂಟಿ ಮಾಡಲು ಬಿಜೆಪಿಗೆ ಹೋದ ಎಸ್‌.ಟಿ. ಸೋಮಶೇಖರ್ ಸೇರಿ ಹಲವು ಬಿಜೆಪಿ ಶಾಸಕರನ್ನು ಮತ್ತೆ ಕಾಂಗ್ರೆಸ್ ಸೇರಿಸಿಕೊಳ್ಳುತ್ತಿದ್ದಾರೆ. ಇವರಿಗೆ ಮಾನ ಮರ್ಯಾದೆ ಇಲ್ಲವೇ’ ಎಂದು ಪ್ರಶ್ನಿಸಿದರು.

‘ಮೂರು ವರ್ಷ ಸಚಿವರಾಗಿದ್ದ ಎಸ್‌.ಟಿ.ಸೋಮಶೇಖರ್ ಅಭಿವೃದ್ಧಿ ಮಾಡದೆ, ಕಾಮಗಾರಿ ಹೆಸರಿನಲ್ಲಿ ಲೂಟಿ ಮಾಡಿದ್ದಾರೆ’ ಎಂದು ಆರೋಪಿಸಿದರು.

ಜೆಡಿಎಸ್ ನಾಯಕ ಟಿ.ಎನ್. ಜವರಾಯಿಗೌಡ ಮಾತನಾಡಿ, ‘ಅಭಿವೃದ್ದಿ ಕಾರ್ಯ ಕೈಗೊಳ್ಳದೆಯೇ ಹಣ, ಅಧಿಕಾರಕ್ಕಾಗಿ ಪಕ್ಷ ತ್ಯಜಿಸಲು ಮುಂದಾಗಿರುವ ಎಸ್‌. ಟಿ.ಸೋಮಶೇಖರ್ ಅವರಿಗೆ ತಕ್ಕ ಪಾಠ ಕಲಿಸುವ ಮೂಲಕ ಕ್ಷೇತ್ರದ ಜನ ಸ್ವಾಭಿಮಾನ ಮೆರೆಯಬೇಕು’ ಎಂದರು.


ತಾವರೆಕೆರೆ ಬಳಿ ನಡೆದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಮಾತನಾಡಿದರು. ಪಾಲಿಕೆ ಮಾಜಿ ಸದಸ್ಯ ಎ.ಎಂ.ಹನುಮಂತೇಗೌಡ, ಜೆಡಿಎಸ್ ಕಾನೂನು ಘಟಕದ ಅಧ್ಯಕ್ಷ ಎ.ಪಿ. ರಂಗನಾಥ್, ಬಮೂಲ್ ಮಾಜಿ ನಿರ್ದೇಶಕ ಪಂಚಲಿಂಗಯ್ಯ, ಜೆಡಿಎಸ್ ಮುಖಂಡ ಟಿ.ಎನ್‌.ಜವರಾಯಿಗೌಡ, ರಮೇಶ್‌ಗೌಡ ಇದ್ದಾರೆ.

‘ಬಿಜೆಪಿ ಕೇಂದ್ರ ನಾಯಕರನ್ನೂ ಖರೀದಿಸುವ ಸಾಮರ್ಥ್ಯ ಡಿಕೆಶಿಗೆ ಇದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನಸ್ಸು ಮಾಡಿದರೆ ಕೇಂದ್ರದ ಬಿಜೆಪಿ ನಾಯಕರನ್ನೇ ಖರೀದಿ ಮಾಡಿದರೂ ಅಚ್ಚರಿ ಇಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಮಂಗಳವಾರ ಮಾತನಾಡಿದ ಅವರು, ಶಿವಕುಮಾರ್ ಯಾರನ್ನಾದರೂ ಖರೀದಿ ಮಾಡಬಹುದು. ಆ ಸಾಮರ್ಥ್ಯ ಅವರಿಗಿದೆ. ಆದರೆ, ಅವರು ದೇವೇಗೌಡರ ಕುಟುಂಬ ಖರೀದಿ ಮಾಡಲಾಗದು ಎಂದರು.

ಜೆಡಿಎಸ್ ಶಾಸಕರನ್ನು ಕಾಂಗ್ರೆಸ್ ಸೆಳೆಯುತ್ತಿದೆ ಎನ್ನುವ ಸುದ್ದಿ ನಿಜವಲ್ಲ. ಯಾವ ಶಾಸಕರೂ ಪಕ್ಷ ತೊರೆಯುವುದಿಲ್ಲ. ಈ ರೀತಿಯ ಚರ್ಚೆ ಹುಟ್ಟು ಹಾಕಿದ ಕಾಂಗ್ರೆಸ್‌ನ 30 ಶಾಸಕರು ಪಕ್ಷ ತೊರೆಯಲು ಮುಂದಾಗಿದ್ದಾರೆ. ಅವರನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗದೆ ಬೇರೆ ಪಕ್ಷಗಳ ಶಾಸಕರ ವಿರುದ್ಧ ಸುದ್ದಿ ಹಬ್ಬಿಸುತ್ತಿದ್ದಾರೆ ಎಂದರು.

‘ತಮಿಳುನಾಡಿಗೆ ಕಾವೇರಿ ನೀರು ಬೇಡ’

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಮಳೆ ಕೊರತೆಯಾಗಿದ್ದು, ಕುಡಿಯುವ ನೀರಿಗೂ ಪರಿತಪಿಸುವ ಪರಿಸ್ಥಿತಿ ಎದುರಾಗಿದೆ. ಇಂತಹ ಸಂದರ್ಭದಲ್ಲಿ ತಮಿಳುನಾಡಿಗೆ ಕಾವೇರಿ ನೀರು ಹರಿಸುವುದು ಸೂಕ್ತವಲ್ಲ ಎಂದು ಕರ್ನಾಟಕ ಸೀನಿಯರ್ ಎಂಜಿನಿಯರ್ಸ್ ಫೋರಂ ಆಗ್ರಹಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಫೋರಂ ಅಧ್ಯಕ್ಷ ಕ್ಯಾಪ್ಟನ್ ಎಸ್. ರಾಜಾರಾವ್, ‘ತಮಿಳುನಾಡಿಗೆ ಕಾವೇರಿ ನೀರು ಹರಿಸಬೇಕಾದರೆ ನಮ್ಮಲ್ಲಿ ಕನಿಷ್ಠ 110 ಟಿಎಂಸಿ ನೀರು ಬೇಕಾಗುತ್ತದೆ. ಸದ್ಯ ಕಾವೇರಿ ಜಲಾನಯನ ಪ್ರದೇಶದಲ್ಲಿ ಕೇವಲ 50 ರಿಂದ 60 ಟಿಎಂಸಿ ನೀರಿದೆ. ನಮಗೆ ಕುಡಿಯುವುದಕ್ಕೆ 24 ಟಿಎಂಸಿ ನೀರು ಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಯಾವ ಆಧಾರದ ಮೇಲೆ ನೀರು ಹರಿಸಬೇಕು. ಜತೆಗೆ ನಮ್ಮಲ್ಲಿರುವ ಸಂಗ್ರಹವನ್ನು ಖಾಲಿ ಮಾಡಿಕೊಳ್ಳುವುದಕ್ಕೆ ಆಗುತ್ತದೆಯೇ’ ಎಂದು ಪ್ರಶ್ನಿಸಿದರು.

‘ಕರ್ನಾಟಕಕ್ಕೆ 24 ಟಿಎಂಸಿ ಕುಡಿಯುವ ನೀರು, ಹೆಚ್ಚುವರಿಯಾಗಿ 10 ಟಿಎಂಸಿ ನೀರು ಸುಪ್ರೀಂ ಕೋರ್ಟ್ ನೀಡಿದೆ. 17.15 ಟಿಎಂಸಿ ನೀರನ್ನು ಕಾವೇರಿ ಜಲವಿವಾದ ನ್ಯಾಯಮಂಡಳಿ ನೀಡಿದೆ. ಆದ್ದರಿಂದ, ನಮ್ಮ ಜಲಾಶಯಗಳಲ್ಲಿ ನೀರಿನ ಸಂಗ್ರಹ ಇರಿಸಿಕೊಳ್ಳಬೇಕಾಗಿದೆ. ಇನ್ನು ಒಂದು ತಿಂಗಳಲ್ಲಿ ಅಂತಹ ದೊಡ್ಡ ಮಳೆಯಾಗುವ ಲಕ್ಷಣವೂ ಕಾಣುತ್ತಿಲ್ಲ. ಹಿಂಗಾರು ಬೆಳೆಗೆ ನೀರನ್ನು ಹಾಗೂ ಕುಡಿಯುವ ನೀರನ್ನು ಸಂಗ್ರಹ ಮಾಡಿಕೊಳ್ಳಬೇಕು. ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕಾದರೆ ಮೇಕೆದಾಟು ಅಣೆಕಟ್ಟು ನಿರ್ಮಿಸಲೇಬೇಕು’ ಎಂದು ಸಲಹೆ ನೀಡಿದರು.

‘ತಮಿಳುನಾಡಿಗೆ ಕೆಆರ್‌ಎಸ್‌ನಿಂದ 50 ಟಿಎಂಸಿ, ಕಬಿನಿಯಿಂದ 48 ಟಿಎಂಸಿ ನೀರು ಹರಿಸಬೇಕು. ಉಳಿದ 10 ಟಿಎಂಸಿ ನೀರನ್ನು ಅಕ್ಟೋಬರ್, ನವೆಂಬರ್ ಮತ್ತು ಜನವರಿಯಲ್ಲಿ ಹಂತ–ಹಂತವಾಗಿ ಹರಿಸಬೇಕು’ ಎಂದು ಹೇಳಿದರು.

4 ದಿನದಲ್ಲಿ ನಿರ್ಧಾರ: ಸೋಮಶೇಖರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿಯಲ್ಲೇ ಮುಂದುವರಿಯಬೇಕೆ? ಅಥವಾ ಹೊರ ಬರಬೇಕೆ? ಎಂಬುದರ ಕುರಿತು ನಾಲ್ಕು ದಿನದಲ್ಲಿ ಅಂತಿಮ ನಿರ್ಧಾರ ಕೈಗೊಳ್ಳುತ್ತೇನೆ’ ಎಂದು ಶಾಸಕ ಎಸ್‌.ಟಿ. ಸೋಮಶೇಖರ್ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ನಾನು ಬಿಜೆಪಿಯಲ್ಲೇ ಇದ್ದೇನೆ. ಅನಿವಾರ್ಯವಾಗಿ ಹೊಂದಿಕೊಂಡು ಹೋಗುತ್ತಿದ್ದೇನೆ. ಇಲ್ಲಿನ ಸಮಸ್ಯೆ ಕುರಿತು ವಿಧಾನಮಂಡಲ ಅಧಿವೇಶನದ ಸಂದರ್ಭದಲ್ಲೇ ಪಕ್ಷದ ನಾಯಕರ ಗಮನಕ್ಕೆ ತಂದಿದ್ದೆ. ಆದರೆ, ಏನೂ ಪ್ರಯೋಜನ ಆಗಲಿಲ್ಲ’ ಎಂದರು.

‘ಅನಿವಾರ್ಯವಾಗಿ ನಾನೇ ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿದ್ದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿ ಕ್ಷೇತ್ರದ ಅಭಿವೃದ್ಧಿಗೆ ಅನುದಾನಕ್ಕೆ ಮನವಿ ಮಾಡಿದ್ದೆ. ಅವರು ಅನುದಾನ ಬಿಡುಗಡೆ ಮಾಡಿದ್ದಾರೆ’ ಎಂದು ಹೇಳಿದರು.

‘ನಾನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಮಾಡಿದ ಬಳಿಕ ಬಿಜೆಪಿ ಮುಖಂಡರು ಏನೇನೋ ಹೇಳುತ್ತಿದ್ದಾರೆ. ನಾನು ಲೋಕ ಸಭೆ ಚುನಾವಣೆಗೆ ಸ್ಪರ್ಧಿಸುತ್ತೇನೆ, ನನ್ನ ಮಗನನ್ನು ವಿಧಾನಸಭಾ ಚುನಾವಣಾ ಕಣಕ್ಕಿಳಿಸುತ್ತೇನೆ ಎಂದು ಸುದ್ದಿ ಹಬ್ಬಿಸಿದ್ದಾರೆ’ ಎಂದು ಅವರು ಹೇಳಿದರು.

ಯಶವಂತಪುರ ಕ್ಷೇತ್ರದಲ್ಲಿ ಎಚ್‌ಡಿಕೆ ಸಭೆ

ಬೆಂಗಳೂರು: ಬಿಜೆಪಿ ಶಾಸಕ ಎಸ್. ಟಿ.ಸೋಮಶೇಖರ್ ಕಾಂಗ್ರೆಸ್ ಸೇರುತ್ತಿದ್ದಾರೆ ಎಂಬ ಸುದ್ದಿ ಬಲಗೊಳ್ಳುತ್ತಿದ್ದಂತೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಯಶವಂತಪುರ ವಿಧಾನಸಭಾ ಕ್ಷೇತ್ರದತ್ತ ಚಿತ್ತ ಹರಿಸಿದ್ದಾರೆ.


ಎಸ್‌.ಟಿ. ಸೋಮಶೇಖರ್

ಸೋಮಶೇಖರ್ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದರೆ ಮತ್ತೆ ಉಪ ಚುನಾವಣೆ ನಡೆಯಲಿದೆ. ಮೂರು ತಿಂಗಳ ಹಿಂದಷ್ಟೇ ನಡೆದಿದ್ದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಟಿ.ಎನ್. ಜವರಾಯಿ ಗೌಡ ಅವರು ಸ್ಪರ್ಧಿಸಿದ್ದರು. ಸೋಮಶೇಖರ್ ಎದುರು ಸೋಲು ಕಂಡಿದ್ದರು. ಉಪ ಚುನಾವಣೆ ನಡೆದರೆ, ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಲು ಈಗಲೇ ತಯಾರಿ ಆರಂಭಿಸಿರುವ ಕುಮಾರಸ್ವಾಮಿ ಅವರು ಯಶವಂತಪುರದಲ್ಲಿ ಪಕ್ಷದ ಕಾರ್ಯಕರ್ತರ ಸಭೆಯನ್ನು ಮಂಗಳವಾರ ನಡೆಸಿದರು.

ಸಭೆಗೂ ಮುನ್ನ ಮಾತನಾಡಿದ ಕುಮಾರಸ್ವಾಮಿ, ಕಾಂಗ್ರೆಸ್‌ನ ‘ಘರ್ ವಾಪಸಿ’ ಸಫಲವಾಗದು. ನಮ್ಮ ಪಕ್ಷದವರು ಯಾರೂ ಹೋಗುವುದಿಲ್ಲ. ಅಭಿವೃದ್ಧಿಗಾಗಿ ಕಾಂಗ್ರೆಸ್‌ಗೆ ಹೋಗುವುದಾಗಿ ಶಾಸಕ ಸೋಮಶೇಖರ್ ಹೇಳುತ್ತಿದ್ದಾರೆ ಎನ್ನಲಾಗಿದೆ. ಹಿಂದೆ ಸಚಿವರಾಗಿದ್ದ ಅವರು ಅಭಿವೃದ್ಧಿ ಮಾಡಲಿಲ್ಲವೇ ಎಂದು ಪ್ರಶ್ನಿಸಿದರು.

ವರಿಷ್ಠರಿಂದ ಕರೆ

‘ದೆಹಲಿಗೆ ಬರುವಂತೆ ಬಿಜೆಪಿ ವರಿಷ್ಠರಿಂದ ಕರೆ ಬಂದಿದೆ. ಅಲ್ಲಿಗೆ ಹೋಗಿ ವಸ್ತುಸ್ಥಿತಿ ಕುರಿತು ಮಾಹಿತಿ ನೀಡುತ್ತೇನೆ. ಯಶವಂತಪುರ ಕ್ಷೇತ್ರದಲ್ಲಿನ ಒಳ್ಳೆಯ ವಾತಾವರಣವನ್ನು ಕೆಡಿಸಿದ್ದಾರೆ. ಗೊಂದಲ ಸರಿಪಡಿಸಿದರೆ ಮಾತ್ರ ಬಿಜೆಪಿಯಲ್ಲಿ ಮುಂದುವರಿಯುತ್ತೇನೆ’ ಎಂದು ತಿಳಿಸಿದರು.

ಸೋಮಶೇಖರ್ ಸೇರಿದಂತೆ ಬಿಜೆಪಿಯ ಕೆಲವು ಶಾಸಕರು ಪಕ್ಷ ತೊರೆದು ಕಾಂಗ್ರೆಸ್ ಸೇರಲಿದ್ದಾರೆ ಎಂಬ ಸುದ್ದಿ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಯಲ್ಲಿದೆ. ಈ ಬೆಳವಣಿಗೆಯ ಮಧ್ಯೆಯೇ ಸೋಮಶೇಖರ್ ಅವರು ಸಿದ್ದರಾಮಯ್ಯ ಮತ್ತ ಶಿವಕುಮಾರ್ ಅವರನ್ನು ಭೇಟಿಮಾಡಿದ್ದರು. ಆ ಬಳಿಕ ಪಕ್ಷ ತೊರೆಯುವ ಸುದ್ದಿ ಇನ್ನಷ್ಟು ಜೋರಾಗಿತ್ತು.

ಕಾಸ್ಮೊಪಾಲಿಟನ್ ಕ್ಲಬ್‌ಗೆ ಬಿಡಿಎ ನೋಟಿಸ್

ಸಿಎ ನಿವೇಶನದ ಗುತ್ತಿಗೆ ಕರಾರು ಉಲ್ಲಂಘನೆ: ಅಧಿಕಾರಿಗಳಿಂದಲೂ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ ಮೂರನೇ ಬ್ಲಾಕ್‌ನಲ್ಲಿರುವ ಕಾಸ್ಮೊಪಾಲಿಟನ್ ಕ್ಲಬ್‌ಗೆ ಬಿಡಿಎ ಮಂಗಳವಾರ ನೋಟಿಸ್ ಜಾರಿ ಮಾಡಿದ್ದು, ಗುತ್ತಿಗೆ ಕರಾರು ಉಲ್ಲಂಘನೆ ಬಗ್ಗೆ ವಿವರ ನೀಡುವಂತೆ ಸೂಚಿಸಿದೆ.


ಕಾಸ್ಮೊಪಾಲಿಟನ್ ಕ್ಲಬ್‌ನ ಸ್ಥಳದ ಜಂಟಿ ತನಿಖೆ ನಡೆಸಿ ಎರಡು ದಿನದಲ್ಲಿ ವರದಿ ನೀಡುವಂತೆ ಬಿಡಿಎ ದಕ್ಷಿಣ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಹಾಗೂ ಕಂದಾಯ ಅಧಿಕಾರಿಗಳಿಗೂ ಆದೇಶಿಸಲಾಗಿದೆ.

ಸಿ.ಎ (ನಾಗರಿಕ ಸೌಲಭ್ಯ) ನಿವೇಶನ ಸಂಖ್ಯೆ 1 (ಪಿ01) ಹಳೆ ನಂ.22) ಅನ್ನು ಕ್ಲಬ್ ಪರವಾಗಿ ಹಂಚಿಕೆ ಮಾಡಲಾಗಿದೆ. ಪ್ರಾಧಿಕಾರಕ್ಕೆ ಕ್ಲಬ್‌ನವರು ಬರೆದುಕೊಟ್ಟಿರುವ ‘ಅಧಿಕೃತ ಮುಚ್ಚಳಿಕೆ ಪತ್ರ’ದ ಎಲ್ಲ ಷರತ್ತುಗಳನ್ನು ಉಲ್ಲಂಘಿಸಿರುವ ಬಗ್ಗೆ ಬೆಂಗಳೂರು ನಾಗರಿಕ ಹಕ್ಕು ಹೋರಾಟ ಸಮಿತಿ ವತಿಯಿಂದ ಬಿಡಿಎ ಕಾರ್ಯದರ್ಶಿ ಅವರಿಗೆ ದೂರು ಸಲ್ಲಿಸಲಾಗಿದೆ. ಕಟ್ಟಡ ನಕ್ಷೆ ಮಂಜೂರು ಸಮಯದಲ್ಲಿ ಕ್ಲಬ್ ಆಡಳಿತ ಮಂಡಳಿಯವರು ನೀಡಿರುವ ಮುಚ್ಚಳಿಕೆ ಪತ್ರದಲ್ಲಿರುವ ಅಂಶಗಳು ಉಲ್ಲಂಘನೆಯಾಗಿರುವುದಾಗಿ ತಿಳಿಸಿದ್ದಾರೆ. ‘ಪ್ರಜಾವಾಣಿ’ಯಲ್ಲಿ ಈ ಬಗ್ಗೆ ಆಗಸ್ಟ್ 22ರಂದು ವರದಿ ಪ್ರಕಟವಾಗಿತ್ತು.

ಹೀಗಾಗಿ, ‘ಬಿಡಿಎನೊಂದಿಗೆ ಮಾಡಿಕೊಂಡಿರುವ ಗುತ್ತಿಗೆ ಕರಾರು ಪತ್ರದ ಉಲ್ಲಂಘನೆ ಬಗ್ಗೆ ನಿಮ್ಮ ಸಂಸ್ಥೆಯಿಂದ ಏಳು ದಿನಗಳಲ್ಲಿ ವರದಿ ನೀಡಬೇಕು. ಇಲ್ಲದಿದ್ದರೆ ಬಿಡಿಎ ನಾಗರಿಕ ಸೌಲಭ್ಯ ನಿವೇಶನ ಹಂಚಿಕೆ ನಿಯಮಗಳು– 1989ರನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದು ಬಿಡಿಎ ಎಸ್ಟೇಟ್ ಅಧಿಕಾರಿಗಳು ಕಾಸ್ಮೊಪಾಲಿಟನ್ ಕ್ಲಬ್ ಕಾರ್ಯದರ್ಶಿಗೆ ಆಗಸ್ಟ್ 22ರಂದು ನೋಟಿಸ್ ಜಾರಿ ಮಾಡಿದ್ದಾರೆ.

ಜಂಟಿ ಸ್ಥಳ ತನಿಖೆ: ಜಯನಗರ 3ನೇ ಬ್ಲಾಕ್ ಸಿ.ಎ. ನಿವೇಶನ ಸಂಖ್ಯೆ 1ರಲ್ಲಿ (ಪಿ–1) ಎಷ್ಟು ವಿಸ್ತೀರ್ಣವನ್ನು ಯಾವ ಉದ್ದೇಶಗಳಿಗೆ ಬಳಸಲಾಗುತ್ತಿದೆ, ಕಟ್ಟಡವನ್ನು ಅನುಮೋದಿತ ನಕ್ಷೆಯಂತೆ ನಿರ್ಮಿಸಲಾಗಿದೆಯೇ? ಉಲ್ಲಂಘನೆಯಾಗಿದೆಯೇ? ಯಾವ ಉದ್ದೇಶಕ್ಕೆ ಎಷ್ಟು ಪ್ರಮಾಣದ ಕಟ್ಟಡ ಬಳಸಲಾಗುತ್ತಿದೆ ಎಂಬ ವಿವರವನ್ನು ಜಂಟಿ ಸ್ಥಳ ತನಿಖೆ ನಡೆಸಿ ವರದಿ ಸಲ್ಲಿಬೇಕು ಎಂದು ಎಸ್ಟೇಟ್ ಅಧಿಕಾರಿಯವರು ಮುಖ್ಯ ಎಂಜಿನಿಯರ್, ಕಂದಾಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ವಾಣಿಜ್ಯ ಉದ್ದೇಶಗಳಿಗಾಗಿ ಬಳಸುತ್ತಿರುವ ಕಟ್ಟಡ ವಿಸ್ತೀರ್ಣ ಹಾಗೂ ಅವುಗಳಿಂದ ಸಂಗ್ರಹಿಸುತ್ತಿರುವ ಆದಾಯ, ಪೊಲೀಸ್ ಠಾಣೆ, ನ್ಯಾಯಾಲಯದಲ್ಲಿ ಪ್ರಕರಣಗಳಿದ್ದರೆ ವಿವರ, ಸಿ.ಎ ನಿವೇಶನದ ಮೇಲೆ ಸಾಲ ಪಡೆದಿರುವ ವಿವರ, ಗುತ್ತಿಗೆ ಕರಾರಿನ ನಿಬಂಧನೆಗಳನ್ನು ಕಾಸ್ಮೊಪಾಲಿಟನ್ ಕ್ಲಬ್ ಉಲ್ಲಂಘಿಸಿದೆಯೇ ಎಂಬ ವಿವರವನ್ನು ನೀಡಲು ಆದೇಶಿಸಲಾಗಿದೆ.


ತಿಳುವಳಿಕೆ ಪತ್ರ

ವಿಷಯ: ಜಯನಗರ 3ನೇ ಬ್ಲಾಕ್ ಬಡಾವಣೆಯಲ್ಲಿ ಮೆ॥ ಕಾಸ್ಮೊಪಾಲಿಟನ್ ಕ್ಲಬ್ ರವರ ಪರವಾಗಿ ಹಂಚಿಕೆಯಾಗಿರುವ ಸಿ.ಎ ನಿವೇಶನ ಸಂಖ್ಯೆ: 1 (ಪಿ–1) (ಹಳೆ ನಂ.22) ಗೆ ಸಂಬಂಧಿಸಿದಂತೆ ಕ್ಲಬ್‌ನ ಕಾರ್ಯ ವೈಖರಿಯ ವರದಿ ನೀಡುವ ಬಗ್ಗೆ.

ಜಯನಗರ ಮೂರನೇ ಬ್ಲಾಕ್‌ನಲ್ಲಿರುವ ಕಾಸ್ಮೊಪಾಲಿಟನ್ ಕ್ಲಬ್‌ಗೆ ಬಿಡಿಎ ಸೋಮವಾರ ನೋಟಿಸ್ ಜಾರಿ ಮಾಡಿದೆ

ಸಾಹಿತಿ ಜಯಪ್ರಕಾಶ ಗೌಡರಿಗೆ ಶಾಂತವೇರಿ ಗೋಪಾಲಗೌಡ ಪ್ರಶಸ್ತಿ ಪ್ರದಾನ

‘ಕ್ಷೀಣಿಸಿದ ಮೌಲ್ಯಯುತ ರಾಜಕಾರಣಿಗಳ ಸಂಖ್ಯೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಡವರು, ರೈತರು ಮತ್ತು ಕಾರ್ಮಿಕರನ್ನು ಪ್ರತಿನಿಧಿಸುತ್ತಿದ್ದ ಶಾಂತವೇರಿ ಗೋಪಾಲಗೌಡ ಅವರಂತಹ ಮೌಲ್ಯಯುತ ರಾಜಕಾರಣಿಗಳ ಸಂಖ್ಯೆ ಕ್ಷೀಣಿಸುತ್ತಿದೆ’ ಎಂದು ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್. ನಾಗಮೋಹನದಾಸ್ ಹೇಳಿದರು.

ಕನ್ನಡ ಜನಶಕ್ತಿ ಕೇಂದ್ರ ಮಂಗಳವಾರ ಆಯೋಜಿಸಿದ್ದ ‘ಬೆಳ್ಳಿ ಸಂಭ್ರಮದ ಶಾಂತವೇರಿ ಗೋಪಾಲಗೌಡ’ ಪ್ರಶಸ್ತಿಯನ್ನು ಸಾಹಿತಿ ಬಿ. ಜಯಪ್ರಕಾಶ ಗೌಡ ಅವರಿಗೆ ಪ್ರದಾನ ಮಾಡಿ ಮಾತನಾಡಿದ ಅವರು, ‘ಶಾಂತವೇರಿ ಗೋಪಾಲಗೌಡರು ಹೋರಾಟದ ಮೂಲಕ ವಿಧಾನಸಭೆ ಪ್ರವೇಶಿಸಿದ್ದರು. ಆದರೆ, ಇಂದು ಜಾತಿ, ಧರ್ಮ, ಹಣ, ತೋಳ್ಬಲದ ಮೂಲಕ ಚುನಾವಣೆಗಳು ನಡೆಯುತ್ತಿವೆ’ ಎಂದು ವಿಷಾದ ವ್ಯಕ್ತಪಡಿಸಿದರು.

‘ಬಿ. ಜಯಪ್ರಕಾಶ ಗೌಡ ಅವರು ಮಂಡ್ಯದ ಕರ್ನಾಟಕ ಸಂಘ ಸ್ಥಾಪಿಸಿ ಹಲವಾರು ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಅವರಿಗೆ ಈ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ನ್ಯಾಯಸಮ್ಮತವಾಗಿದೆ’ಎಂದು ಹೇಳಿದರು.

ತೀರ್ಥಹಳ್ಳಿ ಶಾಸಕ ಆರಗ ಜ್ಞಾನೇಂದ್ರ ಮಾತನಾಡಿದರು.

ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ ರಾಮೇಗೌಡ, ಶಾಂತವೇರಿ ರಾಮಮನೋಹರ್, ಮಲ್ಲಿಕಾರ್ಜುನಪ್ಪ ಇದ್ದರು.


ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್ ಅವರು ಸಾಹಿತಿ ಬಿ. ಜಯಪ್ರಕಾಶ ಗೌಡ ಅವರಿಗೆ ‘ಶಾಂತವೇರಿ ಗೋಪಾಲಗೌಡ’ ಪ್ರಶಸ್ತಿಯನ್ನು ಮಂಗಳವಾರ ಪ್ರದಾನ ಮಾಡಿದರು. ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್‌. ದೊರೆಸ್ವಾಮಿ, ಶಾಸಕ ಆರಗ ಜ್ಞಾನೇಂದ್ರ ಇದ್ದರು —ಪ್ರಜಾವಾಣಿ ಚಿತ್ರ

ಉದ್ಯೋಗ ವಾಣಿ



ತಪ್ಪಿದ ಕುವೆಂಪು ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಸ್ಥಾನ ● ನ್ಯಾಯಾಲಯದಲ್ಲಿ ಪ್ರಕರಣ ದಾಖಲು

ರಾಜ್ಯಪಾಲರ ನಡೆ ಪ್ರಶ್ನಿಸಿ ಪ್ರಾಧ್ಯಾಪಕಿ ಕೋರ್ಟ್‌ಗೆ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕುಲಪತಿ ನಿವೃತ್ತಿಯಾದ ಬಳಿಕ ಸೇವಾ ಹಿರಿತನದ ಆಧಾರದ ಮೇಲೆ ತಮಗೆ ಪ್ರಭಾರದ ಜವಾಬ್ದಾರಿ ನೀಡಿಲ್ಲ ಎಂದು ಆರೋಪಿಸಿ ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಸಿ.ಗೀತಾ ಅವರು ರಾಜ್ಯಪಾಲರ ವಿರುದ್ಧ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದ್ದಾರೆ.

ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಬಿ.ಪಿ.ವೀರಭದ್ರಪ್ಪ ಅವಧಿ ಇದೇ ಆಗಸ್ಟ್ 1ರಂದು ಪೂರ್ಣಗೊಂಡಿತ್ತು. ತೆರವಾದ ಸ್ಥಾನಕ್ಕೆ ಎರಡು ವಾರ ಕಳೆದರೂ ಪ್ರಭಾರ ಕುಲಪತಿಗಳನ್ನು ನೇಮಿಸಿರಲಿಲ್ಲ. ಆ.14ರಂದು ಅಧಿಸೂಚನೆ ಹೊರಡಿಸಿದ್ದ ರಾಜ್ಯಪಾಲರು ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದ ಮುಖ್ಯಸ್ಥ ಎಸ್. ವೆಂಕಟೇಶ್ ಅವರಿಗೆ ಪ್ರಭಾರ ವಹಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದರು.

ಸೇವಾ ಹಿರಿತನದಲ್ಲಿ ಮೊದಲ ಸ್ಥಾನದಲ್ಲಿದ್ದ ಸಿ.ಗೀತಾ ಅವರು ಹಿಂದೆ ಪ್ರಭಾರ ಕುಲಸಚಿವರಾಗಿ ಕೆಲಸ ಮಾಡಿದ್ದರು. ಈ ವೇಳೆ, ಸರ್ಕಾರದ ಅನುಮೋದನೆ ಪಡೆಯದೆ 'ಡಿ' ಗ್ರೂಪ್ ನೌಕರರಿಗೆ ಬಡ್ತಿ ನೀಡಿದ್ದಾರೆ ಎಂದು ಎನ್.ಇ.ಶಶಿಧರ್ ದೂರು ಸಲ್ಲಿಸಿದ್ದರು.

ಹಾಗೆಯೇ, ವಿಶೇಷ ಘಟಕ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಗಿರಿಜನ ಉಪಯೋಜನೆ (ಟಿಎಸ್‌ಪಿ) ಅನುದಾನದಲ್ಲಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ 'ಸ್ಮಾರ್ಟ್‌ಕ್ಲಾಸ್'ಗಳನ್ನು ಸಿದ್ಧಪಡಿಸಲಾಗಿತ್ತು. ಮಾರುಕಟ್ಟೆ ಬೆಲೆಗಿಂತ ಅಧಿಕ ದರದಲ್ಲಿ ಸಾಮಗ್ರಿಗಳನ್ನು ಖರೀದಿಸಿ ವಂಚಿಸಲಾಗಿದೆ. ಭೌತಿಕ ಪರಿಶೀಲನೆ ನಡೆಸದೆ, ನಗದು ರಸೀದಿ ಪಡೆಯದೆ ಗುತ್ತಿಗೆ ಕಂಪನಿಯೊಂದಕ್ಕೆ ₹2.99 ಕೋಟಿ ಪಾವತಿಸಲಾಗಿದೆ ಎಂದು ದೂರಿ ವಿದ್ಯಾವಿಷಯಕ ಪರಿಷತ್ ಸದಸ್ಯರಾದ ವೈ.ಆರ್ತೋಬ ನಾಯಕ ದೂರು ನೀಡಿದ್ದರು.

ಸೇವಾ ಹಿರಿತನದಲ್ಲಿ ಎರಡನೇ ಸ್ಥಾನದಲ್ಲಿರುವ ಯೋಗೀಶ್ ಅವರ ಮೇಲೂ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಯಾಗಿದ್ದ ಸಮಯದಲ್ಲಿ ಕೆಲ ಆರೋಪಗಳಿದ್ದವು. ಈ ಇಬ್ಬರ ಮೇಲೆ ಇಲಾಖಾ ವಿಚಾರಣೆ ಬಾಕಿ ಇರುವ ಕಾರಣ ಸೇವಾ ಹಿರಿತನದಲ್ಲಿ ಇಬ್ಬರ ನಂತರದ ಸ್ಥಾನದಲ್ಲಿರುವ ವೆಂಕಟೇಶ್ ಅವರಿಗೆ ಪ್ರಭಾರ ವಹಿಸುತ್ತಿರುವುದಾಗಿ ರಾಜ್ಯಪಾಲರು ಆದೇಶದಲ್ಲಿ ವಿವರಿಸಿದ್ದರು.

'ಕೆಲವರು ನನ್ನ ಮೇಲೆ ದುರುದ್ದೇಶದ ದೂರು ನೀಡಿದ್ದರು. ದೂರಿನಲ್ಲಿ ಸತ್ಯಾಂಶವಿ ಲ್ಲ ಎಂದು ಹಿಂದಿನ ಕುಲಪತಿ ವರದಿ ನೀಡಿದ್ದಾರೆ. ಹಾಗಿದ್ದರೂ ರಾಜ್ಯಪಾಲರು ಅದೇ ದೂರು ಉಲ್ಲೇಖಿಸಿ ಬೇರೆಯವರಿಗೆ ಪ್ರಭಾರ ವಹಿಸಿದ್ದಾರೆ. ಇದು ನಿಯಮಬಾಹಿರ ಕ್ರಮ' ಎಂದು ದೂರಿರುವ ಗೀತಾ ಅವರು ರಾಜ್ಯಪಾಲ, ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ಪ್ರಭಾರ ಕುಲಪತಿ ವೆಂಕಟೇಶ್ ಅವರನ್ನು ಪ್ರತಿವಾದಿಗಳನ್ನಾಗಿಸಿ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದ್ದಾರೆ. ವಿವರಣೆ ಕೇಳಿ ಕೋರ್ಟ್ ಎಲ್ಲ ಪ್ರತಿವಾದಿಗಳಿಗೂ ನೋಟಿಸ್ ಜಾರಿ ಮಾಡಿದೆ.

3ಂಗಳಲ್ಲೇ ಇಬ್ಬರು ಕುಲಸಚಿವರ ಬದಲು

ಕುವೆಂಪು ವಿಶ್ವವಿದ್ಯಾಲಯದ ಕುಲಸಚಿವ ಸ್ಥಾನಕ್ಕೆ ಒಂದು ತಿಂಗಳ ಹಿಂದೆ ಕೆಎಎಸ್ ಅಧಿಕಾರಿ ಎಂ.ಪಿ. ಮಾರುತಿ ಅವರನ್ನು ಸರ್ಕಾರ ವರ್ಗಾವಣೆ ಮಾಡಿತ್ತು. ಒಂದು ವಾರದಲ್ಲೇ ಆದೇಶ ಮಾರ್ಪಡಿಸಿ, ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪಿ.ಕಣ್ಣನ್ ಅವರನ್ನು ನೇಮಕ ಮಾಡಲಾಗಿತ್ತು. ಮತ್ತೆ 10 ದಿನಗಳಲ್ಲೇ ಅವರನ್ನೂ ಕುಲಸಚಿವ ಸ್ಥಾನದಿಂದ ಬಿಡುಗಡೆ ಮಾಡಿ, ಶಿವಮೊಗ್ಗ ಜಿಲ್ಲಾ ಪಂಚಾಯಿತಿ ಸಿಇಒ ಸ್ನೇಹಲ್ ಸುಧಾಕರ್ ಲೋಖಂಡೆ ಅವರಿಗೆ ಪ್ರಭಾರ ವಹಿಸಲಾಗಿದೆ.

> ಪ್ರಭಾರ ನೀಡಲಿಲ್ಲ ಎಂದಲ್ಲ. ಆರೋಪ ನಿರಾಧಾರ ಎಂದ ಮೇಲೂ ರಾಜ್ಯಪಾಲರು ಆದೇಶದಲ್ಲಿ ಅದನ್ನೇ ಉಲ್ಲೇಖಿಸಿದ್ದಾರೆ. ಹಾಗಾಗಿ, ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದೆ
>
> **ಸಿ.ಗೀತಾ**
> ಡೀನ್, ಶಿಕ್ಷಣ ವಿಭಾಗ, ಕುವೆಂಪು ವಿವಿ

ಲಿಂಗತ್ವ ಅಲ್ಪಸಂಖ್ಯಾತ: ಎಲ್‌ಎಲ್‌ಬಿ ಪ್ರವೇಶಕ್ಕೆ ನಿರ್ದೇಶನ

ಬೆಂಗಳೂರು: 'ಲಿಂಗತ್ವ ಅಲ್ಪಸಂಖ್ಯಾತ ವಿದ್ಯಾರ್ಥಿಯು ಅರ್ಹವಾಗಿದ್ದಲ್ಲಿ ಪ್ರಸಕ್ತ ಸಾಲಿನ ಮೂರು ವರ್ಷದ ಎಲ್‌ಎಲ್‌ಬಿ ಕೋರ್ಸ್‌ಗೆ ಪ್ರವೇಶ ಕಲ್ಪಿಸಿ' ಎಂದು ಬೆಂಗಳೂರಿನ, 'ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ'ಗೆ (ಎನ್‌ಎಲ್‌ಎಸ್‌ಐಯು) ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

ಈ ಸಂಬಂಧ ಲಿಂಗತ್ವ ಅಲ್ಪಸಂಖ್ಯಾತ ಅಭ್ಯರ್ಥಿ ಮುಗಿಲ್ ಅನ್ಬು ವಸಂತ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. 'ಪ್ರವೇಶಾತಿಯು ಅರ್ಜಿಯ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದು ನ್ಯಾಯಪೀಠ ತಿಳಿಸಿದೆ.

'ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಸಕಾರಾತ್ಮಕ ಕ್ರಮ ಕೈಗೊಳ್ಳುವುದು ಪ್ರತಿವಾದಿಗಳ ಸಾಂವಿಧಾನಿಕವಾಗಿ ಹೊಣೆಗಾರಿಕೆಯಾಗಿದೆ. ಈ ವಿಷಯದಲ್ಲಿ ಪ್ರತಿವಾದಿಗಳು ತಮ್ಮ ಹೊಣೆಗಾರಿಕೆ ನಿಭಾಯಿಸುವಲ್ಲಿ ವಿಫಲವಾಗಿದ್ದಾರೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

110 ಹಳ್ಳಿಗಳಿಗೆ ಟ್ಯಾಂಕರ್ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಲ್ಲಿ ನೀರಿನ ಸಮಸ್ಯೆ ಉಂಟಾಗಿದ್ದರೆ ಕೂಡಲೇ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲು ಸೂಚಿಸಲಾಗಿದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

110 ಹಳ್ಳಿಗಳಿಗೆ ಮಾತ್ರ ಕುಡಿಯುವ ನೀರಿನ ಪೂರೈಕೆ ಜವಾಬ್ದಾರಿ ಬಿಬಿಎಂಪಿಗಿರುವುದು. ಆದ್ದರಿಂದ, ಕೊಳವೆಬಾವಿ ಕೊರೆಯುವುದು ತಡವಾದರೆ ಟ್ಯಾಂಕರ್ ಮೂಲಕ ನೀರು ಪೂರೈಸಬೇಕು. ಇದಕ್ಕೆ ಟ್ರ್ಯಾಕರ್ ಹಾಕಿ ನೀರು ಅಗತ್ಯವಿರುವವರಿಗೆ ಪೂರೈಕೆಯಾಗುವಂತೆ ನೋಡಿಕೊಳ್ಳಬೇಕು ಎಂದು ವಲಯದ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ತುರ್ತು ಸಂದರ್ಭದಲ್ಲಿ ಕಾಮಗಾರಿಗಾಗಿ ₹10 ಕೋಟಿಗೆ ಅನುಮೋದನೆ ದೊರೆತಿದೆ. ಈ ಅನುದಾನದಲ್ಲಿ ಕೊಳವೆಬಾವಿ ಕೊರೆಸಲಾಗುವುದು. ಅಗತ್ಯವಿರುವ ಕಡೆ ಅದಕ್ಕೆ ಅನುಮತಿ ಪಡೆದುಕೊಂಡು ಮುಂದುವರಿಯಬೇಕಿದೆ. ಮಹದೇವಪುರ ಕ್ಷೇತ್ರದವರು ಹೆಚ್ಚಿನ ಹಣ ಕೇಳಿದ್ದು, ಅನುಮೋದನೆಗೆ ಕಳುಹಿಸಲಾಗಿದೆ. ಒಪ್ಪಿಗೆ ಸಿಕ್ಕ ಮೇಲೆ ಬಿಡುಗಡೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

₹44 ಕೋಟಿ ಬಿಡುಗಡೆ: ₹25 ಲಕ್ಷಕ್ಕೂ ಕಡಿಮೆ ಮೊತ್ತ ಬಿಲ್‌ಗಳನ್ನು 2021ರ ಮೇ, ಜೂನ್, ಜುಲೈ ಬಾಬ್ತಿನಲ್ಲಿ ಗುತ್ತಿಗೆದಾರರಿಗೆ ಜುಲೈ 18ರಂದು 'ಹಣ ಭರವಸೆ ಪತ್ರ' ಮೂಲಕ ಒಟ್ಟು ₹44.33 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ಕಾಮಗಾರಿಗಳಿಗೆ ಸಂಬಂಧಿಸಿದ ಬಿಲ್ಲುಗಳ ನೈಜತೆ ಪರಿಶೀಲಿಸಿಕೊಂಡು ನಿಯಮಾನುಸಾರ ಬಿಡುಗಡೆ ಮಾಡಲಾಗಿದೆ. ಒಬ್ಬರಿಗೆ ಗರಿಷ್ಠ ಮೂರು ಬಿಲ್‌ಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದರು.

ಎಸ್‌ಐಟಿ ತನಿಖೆ ಪೂರ್ಣಗೊಂಡ ಮೇಲೆ ಅದರನುಸಾರ ಮುಂದಿನ ಬಿಲ್‌ಗಳನ್ನು ಪಾವತಿ ಮಾಡಲಾಗುತ್ತದೆ ಎಂದರು.

ಮೊದಲೇ ನೀಡಿದ್ದರು: 'ಹಣ ಭರವಸೆ ಪತ್ರ'ವನ್ನು ₹25 ಲಕ್ಷಕ್ಕೂ ಕಡಿಮೆ ಮೊತ್ತ ಬಿಲ್‌ಗಳಿಗೆ ಜುಲೈ 18ರಂದೇ ಬಿಡುಗಡೆ ಮಾಡಲಾಗಿದೆ. ಎಲ್ಲ ಗುತ್ತಿಗೆದಾರರಿಗೆ ಬಾಕಿ ಇರುವ ₹675 ಕೋಟಿ ಹಾಗೂ ₹2,500 ಕೋಟಿ ಹಣ ಬಿಡುಗಡೆ ಮಾಡಿ ಎಂದು ನಾವು ಕೇಳುತ್ತಿದ್ದೇವೆ' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಕಾರ್ಯಾಧ್ಯಕ್ಷ ರವೀಂದ್ರ ಹೇಳಿದರು.

ಈಗಲ್ಲ: 'ಗುತ್ತಿಗೆದಾರರು ಆ.7ರಿಂದ ಕಾಮಗಾರಿಗಳನ್ನು ಸ್ಥಗಿತ ಮಾಡಿ ಹೋರಾಟ ಮಾಡುತ್ತಿದ್ದೇವೆ. ಆದರೆ ಬಿಬಿಎಂಪಿ ಮುಖ್ಯ ಆಯುಕ್ತರು ಜುಲೈ 18ರಂದು ಬಿಡುಗಡೆ ಮಾಡಿರುವ ಹಣವನ್ನು ಇದೀಗ ಬಿಡುಗಡೆ ಮಾಡಿರುವಂತೆ ಮಾತನಾಡುತ್ತಿರುವುದು ಸರಿಯಲ್ಲ' ಎಂದು ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್ ಆರೋಪಿಸಿದರು.

ಮೀನುಕುಂಟೆ ಹೊಸೂರು ಗ್ರಾ.ಪಂ: ಸುಬ್ರಮಣ್ಯ ಅಧ್ಯಕ್ಷ



ಯಲಹಂಕ: ಮೀನುಕುಂಟೆ ಹೊಸೂರು ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಸುಬ್ರಮಣ್ಯ ಹಾಗೂ ಉಪಾಧ್ಯಕ್ಷರಾಗಿ ಮುನಿರತ್ನಮ್ಮ ಆಯ್ಕೆಯಾಗಿದ್ದಾರೆ.

ಒಟ್ಟು 21 ಜನ ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ ಅಧ್ಯಕ್ಷ ಸ್ಥಾನಕ್ಕಾಗಿ ಸುಬ್ರಮಣ್ಯ ಮತ್ತು ಎ.ರವಿ ಸ್ಪರ್ಧಿಸಿದ್ದರು. 11 ಮತ ಪಡೆದ ಸುಬ್ರಮಣ್ಯ 1 ಮತಗಳಿಂದ ಜಯಗಳಿಸಿದರು. ಉಪಾಧ್ಯಕ್ಷ ಸ್ಥಾನಕ್ಕಾಗಿ ನಡೆದ ಚುನಾವಣೆಯಲ್ಲಿ ಮುನಿರತ್ನಮ್ಮ ಅವರು 12 ಮತ ಪಡೆದು ಜಯಗಳಿಸಿದರು. ಪ್ರತಿಸ್ಪರ್ಧಿ ಶೈಲಜಾ ಮುನಿಕಷ್ಣ 9 ಮತಗಳನ್ನು ಪಡೆದರು.

ಬಳಕೆಯ ಪರಿಣಾಮಕಾರಿ ನಿರ್ವಹಣೆಗೆ ಅನುಕೂಲ: ಕೆಇಆರ್‌ಸಿ ಅಧಿಸೂಚನೆ

ವಿದ್ಯುತ್ ಬಳಕೆಗೂ ಪ್ರೀಪೇಯ್ಡ್ ಮೀಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಬಳಕೆಯನ್ನು ಪರಿಣಾಮಕಾರಿ ನಿರ್ವಹಿಸಲು ಅನುಕೂಲ ಕಲ್ಪಿಸುವ ಪ್ರೀಪೇಯ್ಡ್ ಸ್ಮಾರ್ಟ್ ಮೀಟರ್‌ಗಳಿಗೆ ಸಂಬಂಧಿಸಿದ ಕರಡು ನಿಯಮಾವಳಿಗಳನ್ನು ರೂಪಿಸಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಅಧಿಸೂಚನೆ ಹೊರಡಿಸಿದೆ.

ಎಲ್ಲ ವರ್ಗದ ಗ್ರಾಹಕರಿಗೆ ಈ ನಿಯಮಾವಳಿಗಳನ್ನು ರೂಪಿಸಲಾಗಿದೆ. ಆದರೆ, ಪ್ರೀಪೇಯ್ಡ್ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಿಕೊಳ್ಳುವುದನ್ನು ಗ್ರಾಹಕರ ಆಯ್ಕೆಗೆ ಬಿಡಲಾಗಿದೆ.

ಈ ಹೊಸ ನಿಯಮಾವಳಿಗಳಿಂದ ಎಸ್ಕಾಂಗಳಿಗೆ ಪಾವತಿಸುವ ವಾರ್ಷಿಕ ಭದ್ರತಾ ಠೇವಣಿ ಮೊತ್ತದಲ್ಲಿ ಉಳಿತಾಯ ಆಗಲಿದೆ. ಮೊಬೈಲ್‌ಗಳಿಗೆ 'ಕರೆನ್ಸಿ ಪ್ಲಾನ್'ಗಳ ಮಾದರಿಯಲ್ಲೇ ಪ್ರೀಪೇಯ್ಡ್ ಮೀಟರ್‌ಗಳು ಕಾರ್ಯನಿರ್ವಹಿಸುತ್ತವೆ. ಈ ಮೀಟರ್‌ಗಳು ಸ್ಮಾರ್ಟ್‌ಫೋನ್‌ಗಳ ಜತೆ ಸಂಪರ್ಕ ಹೊಂದಿದ್ದು, ಗ್ರಾಹಕರಿಗೆ ಎಚ್ಚರಿಕೆ ಸಂದೇಶಗಳನ್ನು ಸಹ ನೀಡುತ್ತವೆ. ಪ್ರತಿ ತಿಂಗಳ ವಿದ್ಯುತ್ ಬಳಕೆಯ 'ಕೋಟಾ' ಮುಗಿಯುವ ಹಂತದಲ್ಲಿದ್ದಾಗ ತಕ್ಷಣ ಎಚ್ಚರಿಕೆ ಸಂದೇಶ ರವಾನಿಸುತ್ತದೆ. ಆಗ ಹೆಚ್ಚಿನ ವಿದ್ಯುತ್ ಬಳಕೆಗೆ ರೀಚಾರ್ಜ್ ಮಾಡಿಸಬಹುದು.

ಈ ಬಗ್ಗೆ ಕರಡು ಅಧಿಸೂಚನೆ ಹೊರಡಿಸಿರುವ ಕೆಇಆರ್‌ಸಿ, ಸಾರ್ವಜನಿಕರು ಹಾಗೂ ಸಂಬಂಧಪಟ್ಟವರಿಂದ ಸಲಹೆಗಳು, ಅಭಿಪ್ರಾಯಗಳು ಮತ್ತು ಆಕ್ಷೇಪಗಳನ್ನು ಆಹ್ವಾನಿಸಿದೆ. ಪ್ರೀಪೇಯ್ಡ್ ಮೀಟರ್ ಅಳವಡಿಸಬೇಕು ಎನ್ನುವುದು ಕೆಲವು ಗ್ರಾಹಕರ ಬಹುದಿನಗಳ ಬೇಡಿಕೆಯಾಗಿದೆ. ಪ್ರಸ್ತುತ ತಾತ್ಕಾಲಿಕ ಸಂಪರ್ಕಕ್ಕೆ ಮಾತ್ರ ಪ್ರೀಪೇಯ್ಡ್ ಮೀಟರ್‌ಗಳನ್ನು ಅಳವಡಿಸುವಂತೆ ಕೆಇಆರ್‌ಸಿ ಆದೇಶ ನೀಡಿತ್ತು ಎಂದು ಅಧಿಸೂಚನೆ ವಿವರಿಸಿದೆ.

ರಾಜ್ಯದ ಕೆಲವು ಭಾಗಗಳಲ್ಲಿ 2011ರಲ್ಲಿ ಪ್ರಾಯೋಗಿಕವಾಗಿ ಈ ಯೋಜನೆಯನ್ನು ಜಾರಿಗೊಳಿಸಲಾಗಿತ್ತು. ಅಧಿಸೂಚನೆ ಅನ್ವಯ ಹಾಲಿ ಗ್ರಾಹಕರು ಮತ್ತು ಹೊಸ ಗ್ರಾಹಕರು ಪ್ರೀಪೇಯ್ಡ್ ಮೀಟರ್‌ಗಳನ್ನು ಅಳವಡಿಸಿಕೊಳ್ಳಬಹುದು.

ಕೇಂದ್ರೀಯ ವಿದ್ಯುತ್ ಪ್ರಾಧಿಕಾರದ ನಿಯಮಗಳ ಅನ್ವಯ ಗ್ರಾಹಕರು ಪ್ರೀಪೇಯ್ಡ್ ಸ್ಮಾರ್ಟ್ ಮೀಟರ್‌ಗಳನ್ನು ಖರೀದಿಸಿ ಪರೀಕ್ಷೆಗೆ ಒಳಪಡಿಸಬೇಕು. ಜತೆಗೆ ಎಸ್ಕಾಂಗಳಿಂದ ಮೊಹರು ಸಹ ಹಾಕಿಸಿಕೊಳ್ಳಬಹುದು. ಪ್ರೀಪೇಯ್ಡ್ ಮೀಟರ್‌ಗಳಿಂದ ಗ್ರಾಹಕರಿಗೆ ಅನುಕೂಲವಾಗಲಿದ್ದು, ಪ್ರತಿ ತಿಂಗಳು ವಿದ್ಯುತ್ ಬಳಕೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಹುದು ಎಂದು ತಜ್ಞರು ಅಭಿಪ್ರಾಯಪಡುತ್ತಾರೆ.

ಏನೇನು ಮಾಡಬೇಕು...

- ಸ್ಮಾರ್ಟ್ ಪ್ರೀಪೇಯ್ಡ್ ಮೀಟರ್‌ಗಳನ್ನು ಎನ್‌ಎಬಿಎಲ್ ಮಾನ್ಯತೆ ಪಡೆದ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸಬಹುದು
- ಈ ಮೀಟರ್‌ಗಳನ್ನು ರಿಮೋಟ್ ಮೂಲಕವೂ ನಿಯಂತ್ರಿಸಬಹುದಾಗಿದೆ
- ಪ್ರತಿ ತಿಂಗಳು ಕನಿಷ್ಠ ಮೊತ್ತ ಹೊಂದಿರಬೇಕು
- ರೀಚಾರ್ಜ್ ಮಾಡದೆ ಶೂನ್ಯ ಮೊತ್ತ ಉಳಿದರೆ ಮೀಟರ್ ಸಂಪರ್ಕ ಸ್ವಯಂಚಾಲಿತವಾಗಿ ಕಡಿತಗೊಳ್ಳಲಿದೆ. ಗ್ರಾಹಕರಿಗೆ ಎಸ್‌ಎಂಎಸ್ ಮೂಲಕ ಸಂದೇಶ ರವಾನೆಯಾಗುತ್ತದೆ
- ಹಾಲಿ ಗ್ರಾಹಕರು ಪ್ರೀಪೇಯ್ಡ್ ಮೀಟರ್‌ಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು. ಆದರೆ, ಬಾಕಿ ಇರುವ ಮೊತ್ತ ಪಾವತಿಸಿರಬೇಕು
- ಸ್ಮಾರ್ಟ್ ಮೀಟರ್‌ಗಳಿಗೆ ಹಾನಿಯಾದರೆ ಗ್ರಾಹಕರೇ ವೆಚ್ಚ ಭರಿಸಿ ಬದಲಾಯಿಸಿಕೊಳ್ಳಬಹುದು



ಚಂದ್ರಯಾನ ಪ್ರಸಾರ

ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಚಂದ್ರಯಾನ–3ರ ನೇರ ಪ್ರಸಾರಕ್ಕಾಗಿ ಮಾಡಿರುವ ವ್ಯವಸ್ಥೆಯನ್ನು ವಿದ್ಯಾರ್ಥಿಗಳು ಮಂಗಳವಾರ ಕುತೂಹಲದಿಂದ ವೀಕ್ಷಿಸಿದರು –ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

WANTED ACCOUNTANT Qualification: B.Com Exp:10years with TDS &`GST Salary:40000/- SUPERVISORS Qualification: Under graduates`Exp: 5-10years Salary 30000/- + Incentive Call:7338084555 9845053636:Mail glprojects7889@gmail.com

"OFFICE AND Marketing Executives needed for-a reputed dental equipment Pvt.Ltd company-in Bangalore. Qualification: graduation in any discipline,with computer knowledge and well-versed English language. MBA with,or without experience. Training will_be arranged as_per the requirements,& guidelines. Interested candidates can_call: 9341223410/ 9844016274/ 9980546442"

WANTED: COMPUTER OPERATOR, TELEMARKETING, FIELD EXECUTIVE, OFFICE BOY FOR REAL ESTATE OFFICE SANJAYNAGAR RMV: 9035883017

PURCHASE EXECUTIVE (Male) Graduate, minimum 2-3 years experience, fluency in English,Hindi & Kannada, Knowledge of Computer and Tally With good Communication Skills. Salary Rs.20000-25000/-PM Location JC-Road, Bangalore-02 Contact: 9343833300 email: jatinshah@newindiaelectricals.com

OFFICE-ASSISTANTS (MALE) having COMPUTER KNOWLEDGE. Must know to read and write in TAMIL, ENGLISH & KANNADA. Office in Jayanagar. Contact: 9686680751

WANTED PRINCIPAL with 10 years experience in reputed educational institutions. Salary - Rs. 50000/- pm Acharya Sri Rakum Educational institutions, Bettenhalli Tarahunse Road, Near StoneHill International School, Devanahalli Tq, Bangalore Rural. Tel: 080 25215705 / 9459485777 Margondanahlli, rakumacharya@gmail.com

WANTED STAFF Security Guards, Kitchen Helpers, Office Female Assistant, Bus Driver. Contact: 'Professional' Bangalore. 9886236341.

WAREHOUSE INCHARGE At Gulbarga 2- 3 Yrs Experience Sap, Excel, English Essential- 9154369336, awl.ar.hyd@Gmail.Com

REQUIRED FEMALE OFFICE ASSISTANT with Computer knowledge attractive salary. Tripstart, 4th Block, Jayanagar. 9844076925.

Teachers/ Professors

WANTED TEACHERS B.Sc B.Ed to Teach Maths, Science, English Medium. Contact: 080-23350778, 9448074071. Manjunatha Vidyalaya, Magadi Road, Bangalore- 560023.

Marketing & Sales

TELECALLERS FRESHER'S (FEMALE) Any Graduates Wanted at Basaveswarnagar with Good Communication Skills (No Targets): 9742277166

Drivers

WANTED EXPERIENCED Water Tanker DRIVERS/ HELPERS in Bangalore. Contact Immediately. Phone: 9448171416

EDUCATIONAL

Tuitions

NOW AT Your Door Step Best Home Tuitions ANY Maths/ Physics/ Chemistry/ English/ French/ Hindi/ Civil/ Aeronautical/ Mechanical/ Electrical & Electronics All Subjects At All and Different Levels from 1st to 12th Standard Big Push Given for Maths Instant Results to Follow CBSE, ICSE, ISC, BE, BSC, IIT, JEE Mains & Advance at Rajajinagar, Jayanagar, Malleswaram, Vijayanagr, Basavanagudi Mahalaxmi Layout, Basaveswaranagar and also towards Peenya, Yelahanka, Kengeri, & Other Metro Areas From Mahalaxmi Layout By T.S.Shivashankar PhD (USA) Maths and Physics Expert, 9743095715 Living in Mahalaxmi Layout International Scientist & Prodigy 40 Plus Years of International Experience, Educated In USA, Brazil, Canada, England, France, Germany, Holland, Greece & Russia, Also Educated in Kendriya Vidyalaya I.I.T Kanpur (Twice) 1981, 12th Standard Pass out from K.V.I.T.T. Kanpur, Father Dr.T.K. Srikantaiah Former Professor Aeronautical Engineering Department I.I.T Kanpur PhD (Canada) Schools and Colleges Can Also Contact For Teaching Needs

PUBLIC NOTICE

NOTICE
Tata Elxsi Limited
Registered Office - ITPB Road, Whitefield, Bangalore-560048,Karnataka

Notice is hereby given that the certificate(s) for the undermentioned securities of the Company has been lost/misplaced and the holder of the said securities / applicant has applied to the Company to issue duplicate certificate.

Any person who has a claim in respect of the said securities should lodge such claim with the company at its Registered Office within 15 days from this date, else the Company will proceed to issue duplicate certificate without further information.

Name of holder-Chandra Teltia, Kind of Securities and Face value-Shares of Rs 10 each, No of Securities-100, Distinctive Numbers-11717211-11717310

Sd/- Chandra Teltia
Place: Delhi Dt:18-08-2023

PUBLIC NOTICE

Notice is hereby given that **Mr. MAHADEV.R also known as Mr.MAHADEV PAMAAR** is the absolute owner of property described in the Schedule hereunder. It is brought to the notice of the general public that, my client has negotiated and decided to purchase the Schedule Property from the above said Mr. Mahadev.R also known as Mr. Mahadev Pamaar. All persons having any claim against or to the Schedule Property or any part thereof by way of inheritance, mortgage, sale, conveyance, MOU, Agreement to sell, GPA, transfer, lease deed, tenany, license, lien, charge, trust, maintenance, easement, gift, etc., howsoever are hereby required to submit the same in writing along with documentary proof to the undersigned at their office within 15 days from the date of publication hereof, failing which our client shall proceed without any reference to such claim and the same, if any, will be considered as waived.

On the expiry of the above period my client will complete the sale transaction with the above owners as if no claims are there on the above mentioned property.

SCHEDULE PROPERTY

All that piece and parcel of the **Residential Premises bearing No. 526, New No.2 and 2/1, situated at 11th Cross, Rajamahal Vilas Extension, (Aramane nagar). Bangalore, Bruhat Bangalore Mahanagara Palike Ward No.35, PID Nos: 99-41-2 and 99-41-2/1, measuring East to West: 50-0 feet, North to South: 85-0 feet, in all measuring 4250 square** feet and bounded on :

East by : Property No. 527,
West by : Property No.525,
North by : Property No.520,
South by : Road.

Bangalore Date: 21-08-2023

K.S. VIJAYA
Advocate
KAR/1642/95
No. 3/2, 3rd Main, Chamarajapet, BANGALORE-560 018.
+91 7272878747, +91 9448613617

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats,Converted&,Agriculture Lands Call:7204995189

REAL ESTATE SELLING

Agricultural Land

Dabaspet

SALE AGRICULTURE Land 2.1Acre, 12km from Dabaspet with 80ft state Highway. 80Lacs/acre (nego) Owner: 9611776523

Industrial & Factory

Tumkur Road

SALE, INDUSTRIAL Warehouse, Commercial Land. Dabaspet to Doddaballapur, Koratagere Road. 18/25/90 Acres. 9141326819

Sites

Banashankari

BANASHANKARI 6TH Stage, 10th Block, 60x40 West Facing site for sale Rs. 7500/- Sqft. Contact: Pradeep:- 9845365079.

Flat

Basavanagudi

FLATS SALE 2 & 3 BHK, in Prime Locations. Covered Carpark General Amenities: 9886019240/ 26603673.

REAL ESTATE BUYING

General

General

WE DO KIADB, KSSIDC,BDA, BBMP, BMICAPA,BMRDA, BIAPPA,Conversion, Change of Land Use, Podi Durasti,NOC, Khata, Documentation Services. Verna Developers, MG Road. 9916310226/ 9620253180

PERSONAL

Change of Name

CHANGE OF NAME
I, **Shruthi Infenteena Rajamanickam Sheela Theres,** D/o Rajamanickam resident of 358/10 Gupta Nagar, First Cross, Angammal Colony, Salem-636009, TN, India. and currently R/at 1727, St. Margaret's Bay Rd., Timberlea B3T 1B4, NS, Canada, do hereby change by name from Shruthi Infenteena Rajamanickam Sheela Theres to **SHRUTHI INFENTEENA** with immediate effect. Vide affidavit dt. 21-08-2023 Sworn before Halifax Regional Muncipality, Province of Nova, Scotia

I BHOOMIKA Holder of Indian passport No. T8208634 Indian permanent address LORDU VIEW NEAR KANJAR CHURCH KAVDOOR KANAJAR KARKALA UDUPI KARNATAKA PIN 574102 India Residing in Kuwait at present hereby declare that hence forth my name will be reads as under Given name BHOOMIKA AND Surname CHETTIAR

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

EDUCATION CORNER

CHANGE OF NAME
I, **ANURADHA JOHNSON** D/o **Ramakrishna,** aged 40 years, Residing at No.52/4, 5th Cross, Palani Street, Subbaiahnapalya, M S Nagar Post, Bangalore – 560033. Have changed my name to **ANURADHA R.K.,** vide affidavit dated 22/08/2023 Sworn before notary Y.R. Chandrasekar, Bangalore

CHANGE OF NAME
I, **S.G. SHEKAR** Residing at 9/1, 2nd floor 'D' Street Shanthinagar, Bengaluru-560027 have changed my name to **S. GNANASEGAR** vide affidavit dated 20/8/2023, before notary S.I. Balaguru, Bengaluru. Henceforth I shall be called **S. GNANASEGAR** only.

RINKU KUMARI, Wife/o, JC682131M, NB RIS/ASH, BIRJU PRASAD, Vill- Lodipur Lanjo, Saidabad, Kako (Pali), Jehanabad, Bihar changed name RINKU KUMARI to RINKU DEVI, 16/08/2023 Notary Dhirendra.Kr.Singh, Jehanabad

I,VILAS Y.S. S/o Y.S.Somashekar Rao Residing #18/110 Eka Parnika Nilaya 2nd Main Road Poorna Pragna Layout BSK 3rd Stage Bangalore have changed my Name to VILAS RAO vide Affidavit dt.15-07-2023 sworn before Notary K.C.Gowthami Bangalore

I, ABDUL Rahim S/o Basha.S. aged about 51 Years residing at No.223, N.T.Block, Oorgaum Post K.G.F. Have changed my name to Abdul Rahim.B vide affidavit dated 19.08.2023 before Notary Thangaraj S K.G.F. Henceforth I shall be called as Abdul Rahim.B only

CHANGE OF NAME
I, **BHAGYA, Y. BHAGYA & SOWBHAGYA,** R/at. 28/1, 5th D Main, 4th Cross, 2nd BLock, HRBR Layout, Kalyannagar, Bengaluru-43, declare that all the above names pertain to me and henceforth I shall be know as **SOWBHAGYA** vide affidavit dt. 03/08/2023 before Notary Y.R.Chandrashekar, Bangalore.

CHANGE OF NAME
I, **NIHARIKA,** R/at. # 1434, 2nd Cross, Chandra Layout, Bangalore- 560040 have changed my name to **NIHARIKA BHAT** vide affidavit dated 22/08/2023 before Notary S. Ramesh, Bangalore. Henceforth I shall be called **NIHARIKA BHAT** only

SHITAL, WIFE/O, 14842805W, L/NK/SS, LAGAD BAPUSAHEB TUKARAM, Vill - Kolgaon, Shrigonda, Ahmadnagar, Maharashtra changed name SHITAL to SHITAL BAPUSAHEB LAGAD, 10/04/2023, Notary District Magistrate, Daund, Pune.

I, SOMASHEKAR ANKEGOWDA have changed my name to SOMASHEKAR M A, vide affidavit dated: 19/8/2023 Before Notary Shreeshail B.Gobbani Bangalore.

SONA DEVI, Mother/o, JC682131M, NB RIS/ASH, BIRJU PRASAD, Vill Lodipur Lanjo, Saidabad, Kako (Pali), Jehanabad, Bihar changed name SONA DEVI to SONMA DEVI, 21/08/2023 Notary K.V. Mani, Bangalore

I, S. RAMESH RAJ R/o. #13, Lakshmi Shyam Nilaya, C.K. Palya Main Road, Basavanapura, 1st Cross, Bangalore-83 states that both S. RAMESH RAJ & S. RAMESH Both are my names only, and my correct date of Birth is 26/06/1976 and in future will be using S. RAMESH RAJ in all my transactions vide affidavit dated 24/01/2023 before Notary D.S. Chandrakanth, Bangalore

Lost

DOCUMENT LOST
I, **B A PADMANABHACHAR,** R/at # 29, Ashirvad, No.001, D. Nagaraj Layout, Kavalbyrasandra, Bangalore-560032, have lost my original **sale deed of Site No. 6, Srinivasapura, Yelahanka. Doc No./ Identification No: 8820/2001- 2002.**
Finders please Contact: *Radha S, Advocate:* **9739810536** or nearest police station

DOCUMENT LOST
I, Raghu. V have lost my Release deed documents Situated at Kalyan Nagar, Bengaluru, Karnataka. Doc. No. ANK-1-04734-2006-07 dt. 09.06.2006 CD No. ANKD120 **while shifting house Finder Please** Contact or return to this Address No. 28/1, 5th 'D' Main, 4th Cross, HRBR Layout 2nd Block, Kalyan Nagar, Bengaluru-560043:
Ph: 9980013221

Others

CHANGING NAME from KUMARASWAMY A to KUMARASWAMY ANANTHAKRISHNA as per PAN and AADHAAR CARD to update profile in the Institute of Chartered Accountants of India members self-service portal.

ಸಾಹಿತ್ಯ, ಸಂಸ್ಕೃತಿಗೆ ಜೀವಂತಿಕೆ ನೀಡಿದ ಬೇಂದ್ರೆ: ಕಲ್ಗುಡಿ

‘ಬೇಂದ್ರೆ ಬೆರಗಿನ ಸಂಜೆ’ ಕಾರ್ಯಕ್ರಮದಲ್ಲಿ ಕವಿಯ ಬದುಕು–ಬರಹ ಬಣ್ಣನೆ

ಪ್ರಜಾವಾಣಿ ವಾರ್ತೆ





ನಗರದ ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ಆಯೋಜಿಸಿದ್ದ ಬೇಂದ್ರೆ ಬೆರಗಿನ ಸಂಜೆ ಕಾರ್ಯಕ್ರಮದಲ್ಲಿ ಬಸವರಾಜ ಕಲ್ಗುಡಿ ಉಪನ್ಯಾಸ ನೀಡಿದರು (ಎಡಚಿತ್ರ). ಕಾರ್ಯಕ್ರಮದಲ್ಲಿ ರಾಮಚಂದ್ರ ಹಡಪದ, ಸ್ವರ್ಷಾ ಆರ್‌.ಕೆ. ಗಾಯನ ಪ್ರಸ್ತುತ ಪಡಿಸಿದರು – ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ಕವಿ ದ.ರಾ. ಬೇಂದ್ರೆ ಅವರ ಬದುಕು–ಬರಹವನ್ನು ಎಳೆಎಳೆಯಾಗಿ ವಿಮರ್ಶಕ ಬಸವರಾಜ ಕಲ್ಗುಡಿ ಅವರು ತೆರೆದಿಟ್ಟರೆ, ಅವರ ಕವನಗಳಿಗೆ ಧ್ವನಿಯಾಗುವ ಮೂಲಕ ರಾಮಚಂದ್ರ ಹಡಪದ ಹಾಗೂ ಸ್ವರ್ಶಾ ಆರ್‌.ಕೆ. ರಂಜಿಸಿದರು.

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ‘ಬೇಂದ್ರೆ ಬೆರಗಿನ ಸಂಜೆ’ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಕಲ್ಗುಡಿ, ‘20ನೇ ಶತಮಾನದಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಒಂದು ಕಡೆ ಮರಾಠಿ, ಇನ್ನೊಂದು ಕಡೆ ಉರ್ದು ಭಾಷೆಯ ಪ್ರಾಬಲ್ಯವಿತ್ತು. ಕನ್ನಡ ಭಾಷೆಗೆ ಸಾಮಾಜಿಕ ಚಹರೆ ಇರಲಿಲ್ಲ. ಆ ಸಂದರ್ಭದಲ್ಲಿ ಬೇಂದ್ರೆಯಂತಹವರು ನಮ್ಮ ಭಾಷೆಗೆ ದೊಡ್ಡ ಸತ್ವ ನೀಡಿದರು. ಕನ್ನಡ ಸಾಹಿತ್ಯ, ಸಂಸ್ಕೃತಿಗೆ ಜೀವಂತಿಕೆ ನೀಡಿದ ಅಪರೂಪದ ಕವಿ ಬೇಂದ್ರೆ. ಅವರು ಹೊಸ ರೀತಿಯ ಪ್ರಜ್ಞೆಯನ್ನು ನಮ್ಮ ನಡುವೆ ಇಡಲು ಪ್ರಯತ್ನ ಮಾಡಿದರು. ಬೇಂದ್ರೆ ಅವರ ಸೃಜನಶೀಲತೆಯು ವರ್ತಮಾನಕ್ಕೆ ಅನುಗುಣವಾದ ಭಾಷೆ ಮತ್ತು ಶೈಲಿಯನ್ನು ಸೃಷ್ಟಿಸಿತು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಹೊಸ ಕಾಲ ತನಗಾಗಿ ಮಾತ್ರವಲ್ಲದೆ ಸುತ್ತಲಿನ ಬದುಕಿಗೂ ಅಗತ್ಯವೆಂದು ತೀವ್ರವಾಗಿ ನಂಬಿದ್ದರಿಂದ ಹೊಸ ಕಾವ್ಯ ಬೇಂದ್ರೆ ಅವರಿಂದ ಸೃಷ್ಟಿಯಾಯಿತು. ಆದರೆ, ಈ ಹೊಸ ಲಯವು ಅವರಿಗೆ ಸಾಧ್ಯವಾಗಿದ್ದು ಪರಂಪರೆಯ ಜೊತೆಗಿನ ಸಾತತ್ಯದಿಂದ. ಅವರಿಗೆ ಗಂಡು–ಹೆಣ್ಣು, ಪ್ರಕೃತಿ–ಪುರುಷ ಎರಡೂ ಬಹುಮುಖ್ಯ ದ್ರವ್ಯಗಳಾಗಿವೆ. ಮಣ್ಣಿನ ಗುಣದ ಶಬ್ದಗಳಿಗೆ ಅಮರ್ತ್ಯದ ಗುಣ ನೀಡುವ ಶಕ್ತಿ ಅವರಿಗಿತ್ತು. ಶ್ರಾವಣಮಾಸ ಬಂದರೆ ಧಾರವಾಡದಲ್ಲಿ ಬೇಂದ್ರೆ ಅವರನ್ನು ನೆನಪಿಸಿಕೊಳ್ಳದವರಿಲ್ಲ. ಯುಗಾದಿ ಬಂದರೆ ಅವರ ‘ಯುಗ ಯುಗಾದಿ ಕಳೆದರೂ...’ ಗೀತೆಯನ್ನು ಗುನುಗುತ್ತೇವೆ’ ಎಂದು ಅವರು ಹೇಳಿದರು.

ಪ್ರೇಕ್ಷಕರೊಬ್ಬರು, ‘ಬೇಂದ್ರೆ ಆಸ್ತಿಕರೆ, ನಾಸ್ತಿಕರೆ’ ಎಂದು ಕೇಳಿದ ಪ್ರಶ್ನೆಗೆ, ‘ಬೇಂದ್ರೆ ಅವರಿಗೆ ಪರಮಾತ್ಮನ ಮೇಲೆ ದೊಡ್ಡ ನಂಬಿಕೆಯಿತ್ತು. ಆದರೆ, ಕುರುಡು ನಂಬಿಕೆ ಇರಲಿಲ್ಲ’ ಎಂದು ಉತ್ತರಿಸಿದರು. ತಮ್ಮ ಉಪನ್ಯಾಸದ ನಡುವೆ ಬೇಂದ್ರೆ ಅವರ ಕವನಗಳನ್ನು ಓದಿ, ವಿವರಿಸಿದರು.

ಗಾಯಕರಾದ ರಾಮಚಂದ್ರ ಹಡಪದ ಹಾಗೂ ಸ್ವರ್ಶಾ ಆರ್‌.ಕೆ. ಅವರು ‘ಇಳಿದು ಬಾ ತಾಯೆ ಇಳಿದು ಬಾ’ ಸೇರಿದಂತೆ ವಿವಿಧ ಕವಿತೆಗಳನ್ನು ಹಾಡುವ ಮೂಲಕ ನೆರೆದಿದ್ದ ಪ್ರೇಕ್ಷಕರನ್ನು ರಂಜಿಸಿದರು.

‘ಉನ್ನತ ಶಿಕ್ಷಣಕ್ಕೆ ಉತ್ತಮ ಯೋಜನೆ’

ಬ್ರ್ಯಾಂಡ್ ಬೆಂಗಳೂರು– ಶೈಕ್ಷಣಿಕ ಬೆಂಗಳೂರು ವಿಚಾರ ಸಂಕಿರಣದಲ್ಲಿ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉನ್ನತ ಮಟ್ಟದ ಶಿಕ್ಷಣ ನೀಡಲು ನಾವೆಲ್ಲರೂ ಸೇರಿ ಉತ್ತಮ ಯೋಜನೆ ರೂಪಿಸಬೇಕಿದೆ’ ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ಹೇಳಿದರು.

ಬ್ರ್ಯಾಂಡ್ ಬೆಂಗಳೂರು ಯೋಜನೆಯಡಿ ‘ಶೈಕ್ಷಣಿಕ ಬೆಂಗಳೂರು’ ವಿಷಯಕ್ಕೆ ಸಂಬಂಧಿಸಿದಂತೆ ಸೋಮವಾರ ನಡೆದ ಮೊದಲ ಸಭೆಯಲ್ಲಿ ವಿಷಯದ ನೋಡಲ್ ಅಧಿಕಾರಿಯಾದ ಅವರು ನಾಗರಿಕರಿಂದ ಸಲಹೆ, ಅಭಿಪ್ರಾಯ ಸ್ವೀಕರಿಸಿ ಮಾತನಾಡಿದರು.

ಶೈಕ್ಷಣಿಕ ಬೆಂಗಳೂರು ವಿಷಯವಾಗಿ ಬರುವಂತಹ ಸಲಹೆಗಳ ಜೊತೆಗೆ, ಒಂದು ವಾರದೊಳಗಾಗಿ ವಿಚಾರ ಸಂಕಿರಣವನ್ನು ಏರ್ಪಡಿಸಿ ಅದರಲ್ಲಿ ಬಂದಂತಹ ಸಲಹೆಗಳನ್ನು ಕ್ರೋಡೀಕರಿಸಿ ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಹೇಳಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಸರ್ಕಾರಿ ಶಾಲಾ-ಕಾಲೇಜುಗಳು ಹಾಗೂ ಪಾಲಿಕೆಯ ಒಡೆತನದ 166 ಶಾಲಾ-ಕಾಲೇಜುಗಳಿವೆ. ಈ ಎಲ್ಲಾ ಶಾಲಾ-ಕಾಲೇಜುಗಳನ್ನು ದತ್ತು ಪಡೆಯುವ ಸಲುವಾಗಿ ಉಪ ಮುಖ್ಯಮಂತ್ರಿಯವರ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಸಭೆಯಲ್ಲಿ ಶಿಕ್ಷಣ ವಿಭಾಗದ ಸಹಾಯ ಆಯುಕ್ತರಾದ ವೆಂಕಟರಾಜು, ಕಾಲೇಜು ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಧಿಕಾರಿಗಳು, ಶಿಕ್ಷಣ ತಜ್ಞರು ಸೇರಿದಂತೆ ಇನ್ನಿತರೆ ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರಮುಖ ಸಲಹೆಗಳು

- ಬೆಂಗಳೂರನ್ನು ಜ್ಞಾನ ನಗರಿಯಾಗಿ ಪರಿವರ್ತಿಸುವುದು.
- ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟ ಶಿಕ್ಷಣ ನೀಡುವುದು.
- ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ ಮೂಲಸೌಕರ್ಯ ಕಲ್ಪಿಸುವುದು.
- ಪಾರಂಪರಿಕ ಶಾಲಾ-ಕಾಲೇಜುಗಳನ್ನು ಗುರುತಿಸಿ ಮರು ವಿನ್ಯಾಸಗೊಳಿಸುವುದು.
- ಹೆಚ್ಚು ಗ್ರಂಥಾಲಯನ್ನು ತೆರೆದು ಓದುವ ಹವ್ಯಾಸ ಹೆಚ್ಚಿಸುವುದು
- ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಕ್ಕಳಿಗೆ ತರಬೇತಿ ನಿಡುವುದು.
- ತಂತ್ರಜ್ಞಾನವನ್ನು ಬಳಸಿಕೊಂಡು ಸುಲಭ ರೀತಿಯಲ್ಲಿ ಕಲಿಯುವ ವ್ಯವಸ್ಥೆ ಕಲ್ಪಿಸುವುದು.
- ಮಕ್ಕಳ ಹೆಚ್ಚು ಆಸಕ್ತಿ ವಿಷಯದಲ್ಲಿ ಪ್ರೋತ್ಸಾಹ ನೀಡುವುದು
- ಸಿಎಸ್‌ಆರ್ ಅಡಿ ಶೈಕ್ಷಣಿಕ ವ್ಯವಸ್ಥೆಯಲ್ಲಿ ಬದಲಾವಣೆ ತರುವುದು.
- ಕೊಳೆಗೇರಿ ಪ್ರದೇಶದಲ್ಲಿರುವ ಮಕ್ಕಳಿಗೆ ಶಿಕ್ಷಣ ನೀಡಲು ಅಗತ್ಯ ಕ್ರಮ ಕೈಗೊಳ್ಳುವುದು.
- ಉತ್ತಮ ವಿಜ್ಞಾನ ಲ್ಯಾಬ್ ಹಾಗೂ ಗಣಕಯಂತ್ರ ಲ್ಯಾಬ್ ವ್ಯವಸ್ಥೆ ಕಲ್ಪಿಸುವುದು.
- ಕನ್ನಡ ಮಾಧ್ಯಮದಲ್ಲಿ ಆಂಗ್ಲ ಭಾಷೆಯನ್ನೂ ಕಲಿಸುವುದು.
- ಶಿಕ್ಷಕರಿಗೆ ಉತ್ತಮ ತರಬೇತಿ ನೀಡುವುದು.

ನಿಮ್ಹಾನ್ಸ್: 75ನೇ ವರ್ಷದ ಸಂಭ್ರಮ

ವರ್ಷಪೂರ್ತಿ ಹಲವು ಕಾರ್ಯಕ್ರಮಗಳ ಆಯೋಜನೆ

ಪ್ರಜಾವಾಣಿ ವಾರ್ತೆ



ನಿಮ್ಹಾನ್ಸ್

ಬೆಂಗಳೂರು: ಎಲ್ಲಾ ರೀತಿಯ ಮಾನಸಿಕ ರೋಗಗಳಿಗೆ ಚಿಕಿತ್ಸೆ ಒದಗಿಸುತ್ತಿರುವ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) 75ನೇ ವರ್ಷದ ಸಂಭ್ರಮದಲ್ಲಿದೆ. ಈ ಸಂಬಂಧ ವರ್ಷಪೂರ್ತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಈ ಸಂಭ್ರಮದ ಭಾಗವಾಗಿ ಇದೇ ಬುಧವಾರ ಬೆಳಿಗ್ಗೆ 11 ಗಂಟೆಗೆ ‘ಪ್ಲಾಟಿನಮ್ ಜುಬಲಿ ಇಯರ್’ ವಿಶೇಷ ಕಾರ್ಯಕ್ರಮವನ್ನು ನಿಮ್ಹಾನ್ಸ್ ಸಮ್ಮೇಳನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಯಾಗಿ ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪಾಲ್ಗೊಳ್ಳಲಿದ್ದಾರೆ. ಗೌರವ ಅತಿಥಿಗಳಾಗಿ ಡಾ. ಶರಣಪ್ರಕಾಶ್ ಆರ್. ಪಾಟೀಲ ಹಾಗೂ ಸಂಸ್ಥೆಯ ಮಾಜಿ ನಿರ್ದೇಶಕ ಡಾ.ಜಿ.ಎನ್. ನಾರಾಯಣ ರೆಡ್ಡಿ ಅವರು ಭಾಗವಹಿಸಲಿದ್ದಾರೆ. ನಿಮ್ಹಾನ್ಸ್ ಸಾಗಿಬಂದ ಹಾದಿ ಹಾಗೂ ಸಂಸ್ಥೆಯ ಸಾಧನೆಯನ್ನು ಬಿಂಬಿಸುವ ಕಿರುಚಿತ್ರವನ್ನು ಕಾರ್ಯಕ್ರಮದಲ್ಲಿ ಪ್ರಸಾರ ಮಾಡಲಾಗುತ್ತದೆ.

ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುತ್ತಿರುವ ಸಂಸ್ಥೆಯು, ವಿವಿಧ ಸಂಶೋಧನೆಗಳ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿದೆ. ನಗರದ ಹೃದಯ ಭಾಗವಾದ ಲಕ್ಕಸಂದ್ರದಲ್ಲಿ ಇರುವ ಸಂಸ್ಥೆಯು ಕೇಂದ್ರ ಆರೋಗ್ಯ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿದೆ. ಇಲ್ಲಿಗೆ ದೇಶದ ವಿವಿಧೆಡೆಯಿಂದ ರೋಗಿಗಳು ಚಿಕಿತ್ಸೆಗೆ ಬರುತ್ತಿದ್ದು, ಪ್ರತಿನಿತ್ಯ ಸರಾಸರಿ 1,700 ಹೊರರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಮಾನಸಿಕ ಅಸ್ವಸ್ಥರಿಗೆ ಚಿಕಿತ್ಸೆ ಒದಗಿಸಲು ಬ್ರಿಟಿಷ್ ವೈದ್ಯ ಚಾರ್ಲ್ಸ್ ಸ್ಮಿತ್ ಅವರು 1874ರಲ್ಲಿ ‘ಬೆಂಗಳೂರು ಲುನಾಟಿಕ್ ಅಸಿಲಮ್’ ಸ್ಥಾಪಸಿದರು. 1925ರಲ್ಲಿ ಮೈಸೂರು ಸರ್ಕಾರಿ ಮಾನಸಿಕ ಆಸ್ಪತ್ರೆ ಎಂದು ಮರುನಾಮಕರಣ ಮಾಡಲಾಯಿತು. 1936ರಲ್ಲಿ ಸ್ವಂತ ಕಟ್ಟಡ ನಿರ್ಮಾಣಕ್ಕೆ ಮೈಸೂರಿನ ಕೃಷ್ಣರಾಜ ಒಡೆಯರ್ ಅವರು ಶಂಕುಸ್ಥಾಪನೆ ನೆರವೇರಿಸಿದರು. 1940ರಲ್ಲಿ ಆಸ್ಪತ್ರೆಯು ಬೋಧನಾ ಸಂಸ್ಥೆಯಾಗಿ ಗುರುತಿಸಲ್ಪಟ್ಟಿತು ಎಂದು ಸಂಸ್ಥೆಯ ಪ್ರಾಧ್ಯಾಪಕರೊಬ್ಬರು ತಿಳಿಸಿದರು.

1974ರಲ್ಲಿ ಮೈಸೂರು ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಮಾನಸಿಕ ಆಸ್ಪತ್ರೆಯನ್ನು ಕೇಂದ್ರ ಸರ್ಕಾರದಿಂದ ಸ್ಥಾಪಿತವಾದ ಅಖಿಲ ಭಾರತ ಮಾನಸಿಕ ಆರೋಗ್ಯ ಸಂಸ್ಥೆಯಲ್ಲಿ ವಿಲೀನಗೊಳಿಸಿ, ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯನ್ನಾಗಿ ರಚಿಸಲಾಯಿತು. ಇದನ್ನು ಸ್ವಾಯತ್ತ ವಿಶ್ವವಿದ್ಯಾಲಯವಾಗಿಯೂ ಘೋಷಿಸಲಾಯಿತು ಎಂದು ಹೇಳಿದರು.

ಮಹಿಳೆ ಸ್ನಾನದ ವಿಡಿಯೊ: ಮನೆ ಮಾಲೀಕ ಬಂಧನ

ಕನಕಪುರ (ರಾಮನಗರ): ಮಹಿಳೆಯೊಬ್ಬರು ಸ್ನಾನ ಮಾಡುವುದನ್ನು ಕದ್ದು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಬಾಡಿಗೆ ಮನೆಯಲ್ಲಿ ವಾಸವಾಗಿದ್ದ ಮಹಿಳೆ ಸ್ನಾನ ಮಾಡುವುದನ್ನು ಮನೆಯ ಮಾಲೀಕ ಧನರಾಜ್ (28) ಎಂಬಾತ ಕಿಟಕಿಯ ಮೂಲಕ ಕದ್ದು ವಿಡಿಯೊ ಮಾಡಿದ್ದ. ಇದನ್ನು ವಾಟ್ಸ್ ಆ್ಯಪ್ ಗ್ರೂಪ್‌ನಲ್ಲಿ ಹಂಚಿಕೊಂಡಿದ್ದ.

ಮನೆ ಮಾಲೀಕನ ವಿರುದ್ಧ ಸಂತ್ರಸ್ತ ಮಹಿಳೆ ನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಪೊಲೀಸರು ಆರೋಪಿಯ ಮನೆಗೆ ತೆರಳಿ ಮೊಬೈಲ್ ವಶಕ್ಕೆ ಪಡೆಯಲು ಮುಂದಾದಾಗ ಆರೋಪಿಯ ತಾಯಿ ಹುಚ್ಚಮ್ಮ ಮತ್ತು ಸಂಬಂಧಿ ಕೃಷ್ಣಕುಮಾರಿ ಈ ಮೊಬೈಲ್ ನಾಶಗೊಳಿಸಿದ್ದಾರೆ. ತನಿಖೆಗೆ ಅಡ್ಡಿಪಡ್ಡಿಸಿದ ಆರೋಪದ ಮೇಲೆ ಈ ಇಬ್ಬರನ್ನೂ ವಶಕ್ಕೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಆರೋಪಿ ಧನರಾಜ್ ಜೊತೆಯಲ್ಲಿ ಇಬ್ಬರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ನಗರದಲ್ಲಿ ಇಂದು

ವಚನ ಶ್ರಾವಣ–2023: ವಚನ ಗಾಯನ: ಎಸ್. ಪಿನಾಕಪಾಣಿ, ವಚನ ಚಿಂತನ: ಪ್ರಭು ಇಸುವನಹಳ್ಳಿ, ಅಧ್ಯಕ್ಷತೆ: ಎಂ. ರಾಮಚಂದ್ರಪ್ಪ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಲಕ್ಕೇನಹಳ್ಳಿ, ಬೆಳಿಗ್ಗೆ 9.30

‘ಮೀಟ್ ಆ್ಯಂಡ್ ಗ್ರೀಟ್ ವಿತ್ ಸೆಲಿಬ್ರೆಟಿ’: ಅತಿಥಿ: ಅರುಣ್ ಬಡಿಗೇರ್, ಆಯೋಜನೆ ಮತ್ತು ಸ್ಥಳ: ಸುದೇವ್ ಶಿಕ್ಷಣ ಸಂಸ್ಥೆಯ ರಾಯಲ್ ಕಾಲೇಜು, ಮತ್ತೀಕೆರೆ, ಬೆಳಿಗ್ಗೆ 10

ರಕ್ತದಾನ ಶಿಬಿರ: ಉದ್ಘಾಟನೆ: ಜಯಕರ ಎಸ್‌.ಎಂ., ಅತಿಥಿಗಳು: ಶೇಕ್ ಲತೀಫ್, ಶ್ರೀನಿವಾಸ್ ಸಿ., ಅಜಿತ್ ಕುಮಾರ್ ಹೆಗಡೆ, ಅಧ್ಯಕ್ಷತೆ: ಆರ್. ಸರ್ವಮಂಗಲ, ಆಯೋಜನೆ: ವಾಣಿಜ್ಯ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10

ಪ್ರಥಮ ವರ್ಷದ ತರಗತಿಗಳ ಉದ್ಘಾಟನಾ ಸಮಾರಂಭ: ಅತಿಥಿಗಳು: ಎಂ. ರಾಮಯ್ಯ, ಎನ್. ಶೇಖ್ ಮಸ್ತಾನ್, ಅಧ್ಯಕ್ಷತೆ: ಕೆ.ಎಂ. ನಾಗರಾಜ್, ಆಯೋಜನೆ ಮತ್ತು ಸ್ಥಳ: ಕಮ್ಯೂನಿಟಿ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಜಯನಗರ, 2ನೇ ಹಂತ, ಬೆಳಿಗ್ಗೆ 10.30

ಜಯರಾಮ ಕೃಷ್ಣನ್ ಅವರ ‘ಏಕವ್ಯಕ್ತಿ’ ಕಲಾ ಪ್ರದರ್ಶನ: ಅತಿಥಿಗಳು: ಎಸ್‌.ಆರ್. ವಿಶ್ವನಾಥ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

‘ಬದಲಾವಣೆ ಪೋಷಿಸು’: ಅತಿಥಿಗಳು: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಪ್ರಕಾಶ್ ಬೆಳವಾಡಿ, ಅಧ್ಯಕ್ಷತೆ: ಚಂಚಲಪತಿ ದಾಸ, ಶ್ರೀಧರ್ ವೆಂಕಟ್, ಆಯೋಜನೆ: ಅಕ್ಷಯ ಪಾತ್ರ, ಸ್ಥಳ: ದಿ ನಾರ್ಥರ್ನ್ ಟೆರೆಸ್, ವರ್ಲ್ಡ್ ಟ್ರೇಡ್ ಸೆಂಟರ್, ಬ್ರಿಗೇಡ್ ಗೇಟ್‌ವೇ, ಮಧ್ಯಾಹ್ನ 3.30ರಿಂದ

‘ಮರಣ ಮೃದಂಗ’ ನಾಟಕ ಪ್ರದರ್ಶನ: ರಚನೆ: ರಾಜೇಂದ್ರ ಕಾರಂತ, ನಿರ್ದೇಶನ: ವಿಶಾಲ್ ಕಶ್ಯಪ್, ಆಯೋಜನೆ: ಸ್ಟೇಜ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.30

‘ರಾಜ್ಯ ಶಿಕ್ಷಣ ನೀತಿ–ಆಗಬೇಕಾದುದೇನು?’: ಕೆ.ವಿ. ನಾರಾಯಣ, ಶ್ರೀಪಾದ್ ಭಟ್, ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಅಂಬೇಡ್ಕರ್ ವೀಧಿ, ಸಂಜೆ 4

63 ಅಡಿ ರಾಮಾಂಜನೇಯರ ಬೃಹತ್ ಪ್ರತಿಮೆಯ ಶಂಕುಸ್ಥಾಪನೆ: ಅತಿಥಿಗಳು: ಕೆ.ಎಸ್. ಈಶ್ವರಪ್ಪ, ಎಸ್. ಸುರೇಶ್ ಕುಮಾರ್, ಕೆ. ಗೋಪಾಲಯ್ಯ, ರಶ್ಮಿ ರವಿಕಿರಣ್, ಆಯೋಜನೆ ಮತ್ತು ಸ್ಥಳ: ರಾಮ ಸೇವಾ ಮಂಡಲಿ, ರಾಜಾಜಿನಗರ, ಸಂಜೆ 4

ನಾಗರ ಪಂಚಮಿ, ಗಂಗಮ್ಮ ದೇವಿ ಜಾತ್ರೆ, ಕರಗ ವಾರ್ಷಿಕೋತ್ಸವ: ಉತ್ಸವ ಮೂರ್ತಿಯ ಮೆರವಣಿಗೆ, ಓಕಳಿ ಸಂಜೆ 5 ಆಯೋಜನೆ ಮತ್ತು ಸ್ಥಳ: ಪಾತಾಳ ಪಂಚನಾಗೇಂದ್ರಸ್ವಾಮಿ ಮತ್ತು ದೇವಸ್ಥಾನ, ಮಹಾಲಕ್ಷ್ಮಿಪುರ

ಆರೋಹಣ ಸೋಷಿಯಲ್ ಇನ್ನೋವೇಷನ್ ಅವಾರ್ಡ್ಸ್–2023: ಆಯೋಜನೆ: ಆರೋಹಣ, ಸ್ಥಳ: ತಾಜ್ ವೆಸ್ಟ್‌ಎಂಡ್, ಸಂಜೆ 5.30

‘ಜಿ. ವೆಂಕಟಸುಬ್ಬಯ್ಯ ಭಾಷಾ ಸಮ್ಮಾನ ಪುರಸ್ಕಾರ–2023’: ಭಾಷಾ ಸಮ್ಮಾನ ಪುರಸ್ಕೃತರು: ಪಂಜು ಗಂಗೊಳ್ಳಿ, ಪುರಸ್ಕಾರ ಪ್ರದಾನ: ಅ.ರಾ. ಮಿತ್ರಾ, ಅಭಿನಂದನಾ ನುಡಿ: ನಾಗೇಶ ಹೆಗಡೆ, ಉಪಸ್ಥಿತಿ: ಜಿ.ವಿ. ಅರುಣ, ಅಧ್ಯಕ್ಷತೆ: ಗಿರೀಶ್ ರಾವ್ ಹತ್ವಾರ್ (ಜೋಗಿ), ಆಯೋಜನೆ: ಕಥೆಕೂಟ, ಸ್ಥಳ: ಜಿ.ವಿ. ಜನ್ಮಶತಾಬ್ದಿ ಕಲಾಭವನ, ಜಯರಾಮ ಸೇವಾ ಮಂಡಳಿ, ಜಯನಗರ 8ನೇ ಬ್ಲಾಕ್, ಸಂಜೆ 6

ಭಾರತದ ತ್ರಿವರ್ಣ ಧ್ವಜಾರೋಹಣ: ಆಯೋಜನೆ: ಮೈಸೂರು ಪೌರ ಮತ್ತು ಸಾಮಾಜಿಕ ಪ್ರಗತಿ ಸಂಘ, ಸ್ಥಳ: ಸಜ್ಜನ ರಾವ್ ವೃತ್ತ, ವಿಶ್ವೇಶ್ವರಪುರ, ಸಂಜೆ 6.04

‘ಕುಶಲವ–ಚಂದ್ರಾವಳಿ’ ಯಕ್ಷಗಾನ ಪ್ರದರ್ಶನ: ಆಯೋಜನೆ: ಮಹಾಗಣಪತಿ ಪ್ರವಾಸಿ ಯಕ್ಷಗಾನ ಮಂಡಳಿ, ಸ್ಥಳ: ಪೇಜಾವರ ಮಠದ ವಿದ್ಯಾಪೀಠ, ಯಲಹಂಕ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ವನ್ಯಜೀವಿ ಮಂಡಳಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮತಿ

ಸ್ಥಾಯಿ ಸಮಿತಿ ರಚನೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವನ್ಯಜೀವಿ ಮಂಡಳಿಯ ಉಪಾಧ್ಯಕ್ಷರೂ ಆಗಿರುವ ಅರಣ್ಯ ಸಚಿವ ಈಶ್ವರ ಖಂಡ್ರೆ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿ ರಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪಿಗೆ ನೀಡಿದ್ದಾರೆ.

ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ರಾಜ್ಯ ವನ್ಯಜೀವಿ ಮಂಡಳಿಯ ಸಭೆ ಮಂಗಳವಾರ ನಡೆಯಿತು.

ವನ್ಯಜೀವಿ (ಸಂರಕ್ಷಣಾ) ಕಾಯ್ದೆಗೆ ಇತ್ತೀಚೆಗೆ ತಂದ ತಿದ್ದುಪಡಿ ಅನ್ವಯ ಸ್ಥಾಯಿ ಸಮಿತಿ ರಚನೆಯಾಗಲಿದ್ದು, ಹೊಸ ಸಂರಕ್ಷಿತ ಪ್ರದೇಶಗಳ ಆಯ್ಕೆ ಮತ್ತು ನಿರ್ವಹಣೆ, ಸಸ್ಯ ಮತ್ತು ಪ್ರಾಣಿ ಸಂಕುಲವನ್ನು ಕಾಪಾಡುವ ಜೊತೆಗೆ, ಮಂಡಳಿ ವಹಿಸುವ ಕೆಲಸವನ್ನು ಈ ಸಮಿತಿ ಮಾಡಲಿದೆ.

ವನ್ಯಜೀವಿ ಮಂಡಳಿ ಸಭೆಗೆ ಮಂಡನೆಯಾಗುವ ಕೆಲವು ಪ್ರಸ್ತಾವನೆಗಳಿಗೆ ಪರ- ವಿರೋಧ ಅಭಿಪ್ರಾಯ ವ್ಯಕ್ತವಾಗಿ, ಒಮ್ಮತಕ್ಕೆ ಬರಲು ಸಮಸ್ಯೆಯಾಗುತ್ತಿದೆ. ಇದನ್ನು ತಪ್ಪಿಸಲು, ಕೂಲಂಕಷವಾಗಿ ಪರಿಶೀಲಿಸಿದ ನಂತರ ಮಂಡಳಿಯ ಸಭೆಗೆ ಶಿಫಾರಸು ಮಾಡುವ ಕೆಲಸವನ್ನು ಸ್ಥಾಯಿ ಸಮಿತಿಗೆ ವಹಿಸಲಾಗುವುದು ಎಂದು ಸಭೆಯಲ್ಲಿ ಭಾಗವಹಿಸಿದ್ದ ಅಧಿಕಾರಿಯೊಬ್ಬರು ತಿಳಿಸಿದರು.

ಮಹದಾಯಿಯ ಕಳಸಾ ನಾಲಾ ತಿರುವು ಯೋಜನೆಯಲ್ಲಿ ವನ್ಯಜೀವಿ ಧಾಮದಿಂದ ಕರ್ನಾಟಕವು ನೀರು ಕೊಂಡೊಯ್ಯುತ್ತಿದೆ ಎಂದು ಗೋವಾ ಆರೋಪಿಸಿರುವ ಹಿನ್ನೆಲೆಯಲ್ಲಿ, ಈ ವಿಷಯವನ್ನು ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಕೊಂಡೊಯ್ಯಲು ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಮಹದಾಯಿ ಯೋಜನೆ ಅನುಷ್ಠಾನಕ್ಕೆ 26.92 ಹೆಕ್ಟೇರ್ ಅರಣ್ಯ ಅತ್ಯಗತ್ಯವಾಗಿದೆ. ಆದರೆ, ಹುಲಿ ಸಂರಕ್ಷಿತ ಪ್ರದೇಶದಲ್ಲಿ ಯೋಜನೆ ಅನುಷ್ಠಾನಗೊಳ್ಳುತ್ತಿದೆ ಎಂದು ಗೋವಾ ಸರ್ಕಾರ ಆಕ್ಷೇಪಿಸಿದೆ.

ಬನ್ನೇರುಘಟ್ಟ ಮಧ್ಯೆ ರಸ್ತೆಗೆ ಸಮ್ಮತಿ

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಮೂಲಕ ಹಾದುಹೋಗುವ ಸ್ಯಾಟಲೈಟ್ ಟೌನ್‌ಶಿಪ್ ರಿಂಗ್ ರೋಡ್ (ಎಸ್‌ಟಿಆರ್‌ಆರ್) ಎರಡನೇ ಹಂತ ಯೋಜನೆಗೂ ಅನುಮೋದನೆ ನೀಡಲಾಗಿದೆ.

ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಈ ಹಿಂದಿನ ವನ್ಯಜೀವಿ ಮಂಡಳಿಯ ಸಭೆಯಲ್ಲಿ, ಪ್ರಸ್ತಾವಿತ ಈ ರಿಂಗ್ ರೋಡ್‌ನಿಂದ ವನ್ಯಜೀವಿಗಳಿಗೆ ತೊಂದರೆ ಆಗಲಿದ್ದು, ಪರ್ಯಾಯ ಮಾರ್ಗ ಗುರುತಿಸುವಂತೆ ಸಲಹೆ ನೀಡಿದ್ದರು. ಅದರಂತೆ ಪರಿಷ್ಕೃತ ಪ್ರಸ್ತಾವನೆಯನ್ನು ಸಭೆಗೆ ಮಂಡಿಸಲಾಗಿತ್ತು.

ದಾಸಪ್ಪ ಆಸ್ಪತ್ರೆಯಲ್ಲಿ ಉಚಿತ ಫಿಸಿಯೊಥೆರಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಸಪ್ಪ ಹೆರಿಗೆ ಆಸ್ಪತ್ರೆಯ ಪಾಲಿಕ್ಲಿನಿಕ್ ವಿಭಾಗದ ಕಟ್ಟಡದಲ್ಲಿ ಉಚಿತ ಫಿಸಿಯೋಥೆರಪಿ ಕೇಂದ್ರ ಪ್ರಾರಂಭಿಸಲಾಗುತ್ತಿದೆ ಎಂದು ದಕ್ಷಿಣ ವಲಯ ಆಯುಕ್ತ ಜಯರಾಂ ರಾಯಪುರ ತಿಳಿಸಿದರು.

ಕೇಂದ್ರದ ನವೀಕರಣ ನಡೆಯುತ್ತಿದ್ದು, 15 ದಿನಗಳಲ್ಲಿ ಎಲ್ಲಾ ಕೆಲಸವನ್ನು ಪೂರ್ಣಗೊಳಿಸಿ ರೋಗಿಗಳಿಗೆ ಫಿಸಿಯೋಥೆರಪಿ ಸೇವೆಯನ್ನು ಪ್ರಾರಂಭಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ದಾಸಪ್ಪ ಹೆರಿಗೆ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಫಿಜಿಯೋಥೆರಪಿ ಕೇಂದ್ರದ ಅವಶ್ಯಕತೆಗಳ ಬಗ್ಗೆ ಎಪಿಡಿ ಸಂಸ್ಥೆಯವರೊಂದಿಗೆ ಚರ್ಚಿಸಿದರು. ಎಪಿಡಿ, ಕೆ.ಎಸ್.ಡಿ.ಸಿ.ಎಫ್ ಸೇರಿ ತ್ರಿಪಕ್ಷ ಒಪ್ಪಂದದಲ್ಲಿ ಪ್ರಾರಂಭಿಸಲಾಗುತ್ತಿದೆ ಎಂದರು.

ದಾಸಪ್ಪ ಹೆರಿಗೆ ಆಸ್ಪತ್ರೆಯ ಆಪರೇಷನ್ ಥಿಯೇಟರ್, ಹೆರಿಗೆ ಕೊಠಡಿ, ಔಷಧ ಉಗ್ರಾಣ ಪರಿಶೀಲಿಸಿದರು. ಆವರಣದಲ್ಲಿರುವ ಎಲ್ಲಾ ಕಟ್ಟಡಗಳು ಹಾಗೂ ಕಚೇರಿಗಳನ್ನು ಪರಿಶೀಲಿಸಿ ಹಾಳಾಗಿರುವ ಕಡೆ ತ್ವರಿತವಾಗಿ ದುರಸ್ತಿ ಕಾರ್ಯ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದರು.



ದಕ್ಷಿಣ ವಲಯ ಆಯುಕ್ತ ಜಯರಾಂ ರಾಯಪುರ ಅವರು ದಾಸಪ್ಪ ಹೆರಿಗೆ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು

ದಾಸಪ್ಪ ಹೆರಿಗೆ ಆಸ್ಪತ್ರೆ ಹಾಗೂ ಜನೌಷಧಿ ಕೇಂದ್ರ ಪರಿಶೀಲಿಸಿ, ಆಸ್ಪತ್ರೆಯಲ್ಲಿ ಮೂಲಸೌಕರ್ಯಗಳು ಹಾಗೂ ಅತ್ಯವಶ್ಯಕ ಔಷಧಗಳ ಶೇಖರಣೆ ಮಾಡಿಟ್ಟುಕೊಂಡಿರಬೇಕು. ಆಸ್ಪತ್ರೆಯ ತಜ್ಞ ವೈದ್ಯರು, ಪ್ರಸೂತಿ ತಜ್ಞರು, ಮಕ್ಕಳ ತಜ್ಞ ವೈದ್ಯರೊಂದಿಗೆ ಸಮಾಲೋಚನೆ ನಡೆಸಿದರು.

ದಾಸಪ್ಪ ಹೆರಿಗೆ ಆಸ್ಪತ್ರೆಯ ಪ್ರಮುಖ ದ್ವಾರದ ಬಳಿ ಒಳ ಚರಂಡಿ ಬ್ಲಾಕ್ ಆಗಿರುವ ಕಾರಣ ರಸ್ತೆಯ ಮೇಲೆ ನೀರು ಹರಿಯುತ್ತಿದೆ. ಇದಕ್ಕೆ ಶಾಶ್ವತ ಪರಿಹಾರ ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಅಧಿಕಾರಿಗಳಿಗೆ ಗಡುವು ನಿಗದಿ: ಡಿಕೆಶಿ

ಎತ್ತಿನಹೊಳೆ: 100 ದಿನದಲ್ಲಿ ನೀರು

ಪ್ರಜಾವಾಣಿ ವಾರ್ತೆ

ಹಾಸನ: ‘ಮುಂದಿನ 100 ದಿನಗಳಲ್ಲಿ ಎತ್ತಿನಹೊಳೆ ಯೋಜನೆ ಮೊದಲ ಹಂತದ 100 ಕಿ.ಮೀ ವರೆಗೆ ನೀರು ಹರಿಸಲಾಗುವುದು’ ಎಂದು ಉಪ ಮುಖ್ಯಮಂತ್ರಿ, ಜಲ ಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಸಕಲೇಶಪುರದಲ್ಲಿ ಮಂಗಳವಾರ ಯೋಜನೆಯ ಪ್ರಗತಿ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ‘₹24 ಸಾವಿರ ಕೋಟಿ ವೆಚ್ಚದ ಯೋಜನೆಗೆ ಈಗಾಗಲೇ ₹4 ಸಾವಿರ ಕೋಟಿ ವೆಚ್ಚವಾಗಿದೆ. ಆದರೂ ಕಾಮಗಾರಿ ಸಮಾಧಾನ ತಂದಿಲ್ಲ’ ಎಂದರು.

‘ಮೊದಲ ಹಂತದ ಯೋಜನೆಗೆ ನೀರು ಹರಿಸಲು ಅರಣ್ಯ ಇಲಾಖೆ, ಕಂದಾಯ ಮತ್ತು ವಿದ್ಯುತ್ ಸರಬರಾಜು ಇಲಾಖೆ ಸಮನ್ವಯದಿಂದ ಕೆಲಸ ಮಾಡುವ ಮೂಲಕ 100 ದಿನಗಳಲ್ಲಿ ಯೋಜನೆ ಸಾಕಾರಗೊಳಿಸಲು ಅಧಿಕಾರಿಗಳಿಗೆ ತಾಕೀತು ಮಾಡಲಾಗಿದೆ’ ಎಂದರು.

‘ಯೋಜನೆಯ ಮೊದಲ ಹಂತದ ನೀರನ್ನು ಎತ್ತುವಳಿ ಮಾಡುವುದು ಪ್ರಥಮ ಆದ್ಯತೆಯಾಗಿದ್ದು, ನಂತರ ಮೂಲಸೌಕರ್ಯ ಒದಗಿಸಲು ಸೂಚಿಸಲಾಗಿದೆ. ಯೋಜನೆಯ ಮೂಲ ಉದ್ದೇಶಕ್ಕೆ ಧಕ್ಕೆಯಾದಲ್ಲಿ, ಪರ್ಯಾಯ ವ್ಯವಸ್ಥೆ ಬಗ್ಗೆಯೂ ಚಿಂತಿಸಲಾಗುವುದು’ ಎಂದರು. ‘ತಮಿಳುನಾಡಿಗೆ ನೀರು ಹರಿಸಿರುವ ಸಂಬಂಧ ಮಂಡ್ಯದಲ್ಲಿ ನಡೆಯುತ್ತಿರುವುದು ರಾಜಕೀಯ ಪ್ರೇರಿತ ಪ್ರತಿಭಟನೆ’ ಎಂದು ಟೀಕಿಸಿದರು.

‘ತಮಿಳುನಾಡಿಗೆ 32 ಟಿಎಂಸಿ ಅಡಿ ನೀರು ಬಿಡಬೇಕು. ಈಗಾಗಲೇ 24 ಟಿಎಂಸಿ ಅಡಿ ಬಿಡಲಾಗಿದೆ. 8 ಟಿಎಂಸಿ ಅಡಿ ನೀರು ಬಿಡಲು ತಮಿಳುನಾಡು ಸುಪ್ರೀಂ ಕೋರ್ಟ್ ಮೊರೆ ಹೋಗಿದೆ. ಈ ಬಗ್ಗೆ ಪ್ರತಿಪಕ್ಷಗಳ ಸಭೆ ಕರೆಯಲಾಗಿದೆ’ ಎಂದು ಹೇಳಿದರು.

ಅಕ್ರಮ ಬಯಲಿಗೆಳೆದ ಅಧಿಕಾರಿ ಎತ್ತಂಗಡಿ!

ಪ್ರಜಾವಾಣಿ ವಾರ್ತೆ

ಯಾದಗಿರಿ: ನಗರಸಭೆಯಲ್ಲಿ 1,310 ಅಕ್ರಮ ಖಾತಾ ನಕಲು, ಸರ್ಕಾರಿ ಆಸ್ತಿಯನ್ನು ಖಾಸಗಿಯವರಿಗೆ ಪರಭಾರೆ ಮಾಡಿದ್ದ ಹಿಂದಿನ ಪೌರಾಯುಕ್ತ, ಸಿಬ್ಬಂದಿ ವಿರುದ್ಧ ಸರ್ಕಾರಕ್ಕೆ ದೂರು ಸಲ್ಲಿಸಿದ್ದ ಪೌರಾಯುಕ್ತ ಸಂಗಮೇಶ ಉಪಾಸೆ ಅವರನ್ನು ಜಿಲ್ಲಾಧಿಕಾರಿ ಡಾ.ಸುಶೀಲಾ ಬಿ. ಅವರು ಕರ್ತವ್ಯದಿಂದ ಬಿಡುಗಡೆಗೊಳಿಸಿ ಮಂಗಳವಾರ ಆದೇಶಿಸಿದ್ದಾರೆ.



ಸಂಗಮೇಶ ಉಪಾಸೆ

1,310 ಅಕ್ರಮ ಖಾತಾ ನಕಲು ಮಾಡಿದ್ದರಿಂದ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ನಷ್ಟವಾಗಿದೆ ಹಾಗೂ ₹4 ಕೋಟಿ ಮೌಲ್ಯದ ಸರ್ಕಾರಿ ಆಸ್ತಿಯನ್ನು ಖಾಸಗಿಯವರಿಗೆ ಪರಭಾರೆ ಮಾಡಲಾಗಿದೆ ಎಂದು ನಗರಸಭೆಯ ಹಿಂದಿನ ಪೌರಾಯುಕ್ತರ ಹಾಗೂ ಅಧಿಕಾರಿಗಳ ವಿರುದ್ಧ ಸಂಗಮೇಶ ಉಪಾಸೆ ಅವರು ಸರ್ಕಾರಕ್ಕೆ ದೂರು ಸಲ್ಲಿಸಿದ್ದರು.

ವೃಂದ ಮತ್ತು ನೇಮಕಾತಿ ನಿಯಮಾವಳಿಯ ಪ್ರಕಾರ ಯಾದಗಿರಿ ನಗರಸಭೆಗೆ ಪೌರಾಯುಕ್ತರು ಶ್ರೇಣಿ-2 ಹುದ್ದೆಯ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ಆದರೆ, ಪ್ರಸ್ತುತ ಸಂಗಮೇಶ ಉಪಾಸೆ ಅವರು ವಾಣಿಜ್ಯ ತೆರಿಗೆ ಇಲಾಖೆಯವರಾಗಿದ್ದಾರೆ. ಅವರು ನೀಡಿರುವ ದೂರುಗಳನ್ನು ಈಗಾಗಲೇ ತನಿಖಾ ತಂಡಕ್ಕೆ ವಹಿಸಲಾಗಿದೆ. ದೂರುಗಳ ಕುರಿತು ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡುವ ನಿಟ್ಟಿನಲ್ಲಿ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಸಂಗಮೇಶ ಉಪಾಸೆ ಅವರನ್ನು ಪೌರಾಯುಕ್ತರ ಹುದ್ದೆಯಿಂದ ಬಿಡುಗಡೆಗೊಳಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.

ಹಿಂದಿನ ಪೌರಾಯುಕ್ತರಾಗಿದ್ದ ಶರಣಪ್ಪ, ಭೀಮಣ್ಣ ಟಿ. ನಾಯಕ, ಹಿಂದಿನ ಕಂದಾಯ ಅಧಿಕಾರಿಗಳಾದ ವಿಶ್ವಪ್ರತಾಪ ಅಲೆಗ್ಸಾಂಡರ್, ನರಸಿಂಹರೆಡ್ಡಿ, ಎಫ್‌ಡಿಎ ರಿಯಾಜುದ್ದೀನ್ ಇತರರು ಜಿಲ್ಲಾಧಿಕಾರಿಗೆ ಈ ಕುರಿತು ದೂರು ಸಲ್ಲಿಸಿರುವುದನ್ನೂ ಜಿಲ್ಲಾಧಿಕಾರಿ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ಸಿ.ಟಿ.ರವಿ ಹೇಳಿಕೆ ಬಾಲಿಶ: ಟೀಕೆ



ಅನೀಸ್ ಪಾಷಾ

ದಾವಣಗೆರೆ: ‘ಶೇ 40 ಲಂಚ ಆರೋಪ ಕುರಿತ ತನಿಖೆಗೆ ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದ ಸಮಿತಿ ರಚನೆ ಸಂಬಂಧ ಮಾಜಿ ಸಚಿವ ಸಿ.ಟಿ.ರವಿ ನೀಡಿರುವ ಹೇಳಿಕೆ ಬಾಲಿಶವಾಗಿದ್ದು, ಸತ್ಯ ಹೊರಬೀಳಲಿದೆ ಎಂಬ ಭಯದಿಂದ ಕೂಡಿದ್ದಾಗಿದೆ’ ಎಂದು ವಕೀಲ ಅನೀಸ್ ಪಾಷಾ ಟೀಕಿಸಿದ್ದಾರೆ.

ಭಯಭೀತ ಬಿಜೆಪಿಯವರು ಬಾಯಿಗೆ ಬಂದಂತೆ ಮಾತನಾಡಲು ಆರಂಭಿಸಿರುವುದು, ‘ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿಕೊಂಡ’ ಎಂಬ ಗಾದೆಯಂತಾಗಿದೆ. ನ್ಯಾಯಮೂರ್ತಿಗಳ ಬಗ್ಗೆ ಮಾತನಾಡಲು ಭ್ರಷ್ಟಾಚಾರಿಗಳಿಗೆ ಯಾವುದೇ ಅರ್ಹತೆ ಇಲ್ಲ. ಘನತೆವೆತ್ತ ಸ್ಥಾನದಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿಗಳ ಬಗ್ಗೆ ಕೀಳಾಗಿ ನಾಲಿಗೆ ಹರಿಬಿಡಲು ದೇಶ ವಿರೋಧಿಗಳಿಗೆ ಮಾತ್ರ ಸಾಧ್ಯ’ ಎಂದು ಅವರು ಕುಟುಕಿದ್ದಾರೆ.

‘ಕಮಿಷನ್ ಬಗ್ಗೆ ಗುತ್ತಿಗೆದಾರರ ಅಧ್ಯಕ್ಷ ಕೆಂಪಣ್ಣ ಅವರು ಪತ್ರ ಬರೆದರೂ ಪ್ರಧಾನಿಯವರು ಅದರ ಗೋಜಿಗೆ ಹೋಗಿಲ್ಲ. ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವೂ ತಲೆ ಕೆಡಿಸಿಕೊಂಡಿರಲಿಲ್ಲ. ದೂರಿನ ಸತ್ಯಾಸತ್ಯತೆ ಬಗ್ಗೆ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ತನಿಖೆ ಮಾಡಲು ಕ್ರಮ ತೆಗೆದುಕೊಂಡ ತಕ್ಷಣ ಬಿಜೆಪಿಯವರು ಭಯಭೀತರಾಗಿದು ಮೇಲ್ನೋಟಕ್ಕೆ ಕಂಡುಬರುತ್ತದೆ’ ಎಂದಿದ್ದಾರೆ.

ಸೆ. 7ರಂದು ಭಾರತಕ್ಕೆ ಬೈಡನ್

ವಾಷಿಂಗ್ಟನ್ (ಪಿಟಿಐ): ನವದೆಹಲಿಯಲ್ಲಿ ನಡೆಯಲಿರುವ ಜಿ–20 ನಾಯಕರ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಸೆ. 7ರಿಂದ 10ರವರೆಗೆ ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ಶ್ವೇತಭವನವು ಮಂಗಳವಾರ ತಿಳಿಸಿದೆ.

ಹರಿಯಾಣ: ವಿಎಚ್‌ಪಿ ಯಾತ್ರೆಗೆ ಅನುಮತಿ ನಿರಾಕರಣೆ

ಗುರುಗ್ರಾಮ (ಪಿಟಿಐ): ಇದೇ ಜುಲೈನಲ್ಲಿ ಕೋಮುಹಿಂಸಾಚಾರ ನಡೆದಿದ್ದ ಹರಿಯಾಣದ ನೂಹ್‌ನಲ್ಲಿ ಆಗಸ್ಟ್ 28ರಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಹಮ್ಮಿಕೊಂಡಿರುವ ಬ್ರಿಜ್ ಮಂಡಲ್ ಜಲಾಭಿಷೇಕ ಯಾತ್ರೆಗೆ ಜಿಲ್ಲಾಡಳಿತವು ಅನುಮತಿ ನಿರಾಕರಿಸಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಯಾತ್ರೆಯ ಆಯೋಜಕರು ಮೆರವಣಿಗೆ ನಡೆಸಲು ಕೋರಿ ಸಲ್ಲಿಸಿದ್ದ ಮನವಿಯನ್ನು ಮಂಗಳವಾರ ಸಂಜೆ ನೂಹ್ ಜಿಲ್ಲಾಡಳಿತವು ತಿರಸ್ಕರಿಸಿದೆ.

ರ್‍ಯಾಗಿಂಗ್, ಲೈಂಗಿಕ ದೌರ್ಜನ್ಯದಿಂದ ವಿದ್ಯಾರ್ಥಿ ಸಾವು

ಕೋಲ್ಕತ್ತ (ಪಿಟಿಐ): ‘ಜಾಧವಪುರ ವಿಶ್ವವಿದ್ಯಾಲಯದ ಪ್ರಥಮ ವರ್ಷದ ವಿದ್ಯಾರ್ಥಿ ಹಾಸ್ಟೆಲ್‌ನ 2ನೇ ಮಹಡಿಯಿಂದ ಬಿದ್ದು ಸಾವಿಗೀಡಾಗುವ ಮೊದಲು ರ್‍ಯಾಗಿಂಗ್ ಮತ್ತು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದ’ ಎಂದು ಕೋಲ್ಕತ್ತ ಪೊಲೀಸರು ಸಲ್ಲಿಸಿರುವ ಪ್ರಾಥಮಿಕ ವರದಿಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಯನ್ನು ಬೆತ್ತಲೆಗೊಳಿಸಿ ಹಾಸ್ಟೆಲ್‌ನ ಕಾರಿಡಾರ್‌ನಲ್ಲಿ ತಿರುಗಾಡುವಂತೆ ಮಾಡಲಾಗಿತ್ತು. ಈ ಸಂಬಂಧ ವಿಶ್ವವಿದ್ಯಾಲಯದ ಹಳೆಯ ಮತ್ತು ಈಗಿನ 12 ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ ಎಂದೂ ಪೊಲೀಸರು ತಿಳಿಸಿದ್ದಾರೆ. ಆ. 9ರಂದು ವಿದ್ಯಾರ್ಥಿಯು ಹಾಸ್ಟೆಲ್‌ನ 2ನೇ ಮಹಡಿಯಿಂದ ಬಿದ್ದು ಸಾವಿಗೀಡಾಗಿದ್ದ. ಈ ಕುರಿತು ಕೋಲ್ಕತ್ತ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅಭಿಪ್ರಾಯ

‘ಸಾಲ ನೀಡುವಿಕೆಯಲ್ಲೂ ಲಿಂಗ ತಾರತಮ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬ್ಯಾಂಕ್‌ಗಳಲ್ಲಿ ಮಹಿಳಾ ಉದ್ದಿಮೆದಾರರಿಗೆ ಸುಲಭವಾಗಿ ಸಾಲ ದೊರೆಯುತ್ತಿಲ್ಲ. ಪುರುಷರಿಗೆ ಮಾತ್ರ ಆದ್ಯತೆ ದೊರೆಯುತ್ತಿದೆ. ಈ ರೀತಿಯ ಲಿಂಗ ಅಸಮಾನತೆ ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಎಂಜಿನಿಯರಿಂಗ್ ಮ್ಯಾನುಫ್ಯಾಕ್ಚರರ್ ಎಂಟರ್‌ಪ್ರನರ್ಸ್ ರಿಸೋರ್ಸ್ ಗ್ರೂಪ್ (ಇಎಂಇಆರ್‌ಜಿ) ಮತ್ತು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯ (ಎಂಎಸ್‌ಎಂಇ) ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಜಗತ್ತಿನಾದ್ಯಂತ ಮಹಿಳಾ ಉದ್ಯಮಿಗಳು ಯಶಸ್ಸು ಗಳಿಸುತ್ತಿದ್ದಾರೆ. ತಂತ್ರಜ್ಞಾನ ಮತ್ತು ಉದ್ಯಮಶೀಲತೆ ಕ್ಷೇತ್ರದ ಹೊಸ ಸವಾಲುಗಳಿಗೆ ಪರಿಹಾರಗಳನ್ನು ರೂಪಿಸುತ್ತಿದ್ದಾರೆ. ಭಾರತದ ಬಂಡವಾಳದ ನಿಧಿಯಲ್ಲಿ ಮಹಿಳಾ ನೇತೃತ್ವದ ನವೋದ್ಯಮಿಗಳಿಗೆ ಶೇ 0.3 ಮಾತ್ರ ಮೀಸಲಿಡಲಾಗಿದೆ. ಮಹಿಳಾ ಉದ್ಯಮಿಗಳಲ್ಲಿ ಶೇ 85ಕ್ಕಿಂತ ಹೆಚ್ಚು ಮಂದಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಪಡೆಯಲು ಪರದಾಡುತ್ತಿದ್ದಾರೆ. ಇದು ಲಿಂಗ ತಾರತಮ್ಯವನ್ನು ಬಹಿರಂಗಪಡಿಸುತ್ತದೆ’ ಎಂದು ವಿಷಾದ ವ್ಯಕ್ತಪಡಿಸಿದರು.



ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಹಿಳಾ ಉದ್ದಿಮೆದಾರರು ತಯಾರಿಸಿದ ವಿವಿಧ ವಸ್ತುಗಳನ್ನು ಸಚಿವ ಪ್ರಿಯಾಂಕ್ ಖರ್ಗೆ ವೀಕ್ಷಿಸಿದರು. ಇಎಂಇಆರ್‌ಜಿ ಅಧ್ಯಕ್ಷೆ ಸುಮಿತಾ ನಾಯಕ್, ಸಿಂಬಯೋಸಿಸ್ ಕಾನೂನು ಶಾಲೆಯ ನಿರ್ದೇಶಕಿ ಶಶಿಕಲಾ ಗುರ್ಪುರ್, ಉಬುಂಟು ಅಧ್ಯಕ್ಷೆ ರತ್ನಪ್ರಭಾ ಇದ್ದರು –ಪ್ರಜಾವಾಣಿ ಚಿತ್ರ

‘ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ ವೃದ್ಧಿ ಯೋಜನೆಯನ್ನು ಆರಂಭಿಸಿ ಶೇ 4 ಬಡ್ಡಿಯಲ್ಲಿ ₹ 10 ಲಕ್ಷದವರೆಗೆ ಸಾಲ ನೀಡಲಾಗುತ್ತಿದೆ’ ಎಂದರು.

ಉಬುಂಟು ಅಧ್ಯಕ್ಷೆ ರತ್ನಪ್ರಭಾ, ಪುಣೆ ಸಿಂಬಯೋಸಿಸ್ ಕಾನೂನು ಶಾಲೆಯ ನಿರ್ದೇಶಕಿ ಶಶಿಕಲಾ ಗುರ್ಪುರ್, ಇಎಂಇಆರ್‌ಜಿ ಅಧ್ಯಕ್ಷೆ ಸುಮಿತಾ ನಾಯಕ್, ಉಪಾಧ್ಯಕ್ಷೆ ಪ್ರತಿಭಾ ನಕಿಲ್, ಕಾರ್ಯದರ್ಶಿ ಆಶಾ ವಿ.ಎಂ, ಸಂಸ್ಥಾಪಕ ಅಧ್ಯಕ್ಷರಾದ ಉಮಾ ರೆಡ್ಡಿ, ರವಿಕುಮಾರ್ ಮಾತನಾಡಿದರು.

ಸನ್ಮಾನ: ಉದ್ದಿಮೆ ರಂಗದಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಸಮಾರೋಪ ಸಮಾರಂಭದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಸನ್ಮಾನಿಸಿದರು.

ಸಚಿವ ಎಂ.ಬಿ.ಪಾಟೀಲ ಸೇರಿ ಐವರಿಗೆ 'ಕರ್ಮಯೋಗಿ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಎಸ್.ಆರ್. ಪಾಟೀಲ ಫೌಂಡೇಷನ್ ಹಾಗೂ ಪಾಟೀಲ ಗ್ರೂಪ್ ಆಫ್ ಇಂಡಸ್ಟ್ರೀಸ್ ನೀಡುವ 'ಕರ್ಮಯೋಗಿ' ಪ್ರಶಸ್ತಿಗೆ ವಿಜಯಪುರದ ಬಿಎಲ್‌ಡಿಇಎ ಅಧ್ಯಕ್ಷ, ಸಚಿವ ಎಂ.ಬಿ.ಪಾಟೀಲ (ಶಿಕ್ಷಣ ಕ್ಷೇತ್ರ) ಸೇರಿದಂತೆ ಐವರು ಆಯ್ಕೆಯಾಗಿದ್ದಾರೆ.

ರಾಜ್ಯಸಭಾ ಮಾಜಿ ಸದಸ್ಯ ಬಸವರಾಜ ಪಾಟೀಲ ಸೇಡಂ (ಸಮಾಜ ಸೇವೆ), ಮುಂಬೈನ ಬಜಾಜ್ ಅರ್ಥ್ಸ್ ಪ್ರೈ. ಲಿಮಿಟೆಡ್ ಮುಖ್ಯಸ್ಥ ಶ್ಯಾಮ ಬಜಾಜ್ (ಉದ್ಯಮ), ಖ್ಯಾತ ಚಿತ್ರಕಲಾವಿದ ಜೆ.ಎಸ್.ಖಂಡೇರಾವ (ಲಲಿತಕಲೆ), ಲೇಖಕ ಎಚ್.ಟಿ.ಪೋತೆ (ಸಾಹಿತ್ಯ) ಅವರಿಗೆ ಪ್ರಶಸ್ತಿ ನೀಡಲಾಗುವುದು ಎಂದು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಮನು ಬಳಿಗಾರ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ತಲಾ ₹51 ಸಾವಿರ ಮತ್ತು ಫಲಕವನ್ನು ಪ್ರಶಸ್ತಿ ಒಳಗೊಂಡಿದೆ. ಉದ್ಯಮಿ ಎಸ್.ಎಸ್. ಪಾಟೀಲ ಪ್ರಥಮ ಪುಣ್ಯ ಸ್ಮರಣೆ ಪ್ರಯುಕ್ತ ಕಲಬುರಗಿಯ ಸಂಗಮ ತ್ರಿವೇಣಿ ಚಿತ್ರಮಂದಿರದಲ್ಲಿ ಆ.23 ಬೆಳಿಗ್ಗೆ 11.30ಕ್ಕೆ ಹಮ್ಮಿಕೊಂಡಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಹೇಳಿದರು.

'ಕುವೆಂಪು ದೀಪ' ಪ್ರಶಸ್ತಿಗೆ ವಿಮರ್ಶಕ ಡಾ. ನರಹಳ್ಳಿ ಆಯ್ಕೆ

ಪ್ರಜಾವಾಣಿ ವಾರ್ತೆ

ಕಾರವಾರ: ಹೊನ್ನಾವರದ ಜಾನಪದ ವಿಶ್ವ ಪ್ರತಿಷ್ಠಾನ ನೀಡುವ 2023ನೇ ಸಾಲಿನ 'ಕುವೆಂಪು ದೀಪ' ಪ್ರಶಸ್ತಿಗೆ ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರತಿಷ್ಠಾನವು ವಿವಿಧ ಕ್ಷೇತ್ರಗಳ ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ. 'ಕಾರಂತ ದೀಪ' ಪ್ರಶಸ್ತಿಗೆ ಬೆಂಗಳೂರು ವಿಶ್ವವಿದ್ಯಾಲಯದ ಡೀನ್ ಡಾ.ಸಿ.ನಾಗಭೂಷಣ, 'ಕಲಾ ದೀಪ' ಪ್ರಶಸ್ತಿಗೆ ಕಲಾವಿದ ಎಚ್.ಎನ್. ಸುರೇಶ್, 'ದೇವಮ್ಮ ರಾಮನಾಯಕ ದೀಪ' ಪ್ರಶಸ್ತಿಗೆ ಅಂಕೋಲಾದ ಕಮ್ಮಾರ ಚಂದ್ರಕಾಂತ ಆಚಾರಿ ಮತ್ತು 'ವಿದ್ಯಾರ್ಥಿ ದೀಪ' ಪ್ರಶಸ್ತಿಗೆ ಯೋಗಪಟು ಶ್ರೀನಿಧಿ ಗೌಡ ಅವರನ್ನು ಆಯ್ಕೆ ಮಾಡಿದೆ.

'ಪ್ರಶಸ್ತಿಯು ತಲಾ ₹6 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ. ಸೆ. 5ರಂದು ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಪ್ರತಿಷ್ಠಾನದ ಸವಿತಾ ಉದಯ್ ತಿಳಿಸಿದ್ದಾರೆ.

ನ್ಯಾ. ಪ್ರಕಾಶ್ ಶ್ರೀವಾಸ್ತವ್ ಎನ್‌ಜಿಟಿ ಮುಖ್ಯಸ್ಥರಾಗಿ ನೇಮಕ

ನವದೆಹಲಿ (ಪಿಟಿಐ): ಕಲ್ಕತ್ತಾ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾಸ್ತವ್ ಅವರನ್ನು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ (ಎನ್‌ಜಿಟಿ) ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ.

ಬುಧವಾರ ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸೋಮವಾರ ಶ್ರೀವಾಸ್ತವ್ ಅವರಿಗೆ ನೇಮಕಾತಿ ಪತ್ರವನ್ನು ನೀಡಲಾಗಿದೆ ಎಂದೂ ತಿಳಿಸಿವೆ.

ತಮಿಳುನಾಡಿಗೆ ನೀರು ಹರಿಸುವುದು ವಿರೋಧಿಸಿ ಎಕ್ಸ್‌ಪ್ರೆಸ್‌ವೇ ತಡೆಯಲು ಯತ್ನ

ರೈತರ ಬಂಧನ, ಬಿಡುಗಡೆ

ಪ್ರಜಾವಾಣಿ ವಾರ್ತೆ



ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್‌ವೇಗೆ ನುಗ್ಗಲು ಯತ್ನಿಸಿದ ರೈತಸಂಘ (ಮೂಲಸಂಘಟನೆ) ಹಾಗೂ ಇತರ ಸಂಘಟನೆಗಳ ಸದಸ್ಯರನ್ನು ಪೊಲೀಸರು ತಡೆದರು

ಮಂಡ್ಯ: ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್‌ವೇ ತಡೆಯಲು ಯತ್ನಿಸಿದ ರೈತಸಂಘ (ಮೂಲ ಸಂಘಟನೆ) ಹಾಗೂ ಇತರ ಸಂಘಟನೆಗಳ ಸದಸ್ಯರನ್ನು ಮಂಗಳವಾರ ಪೊಲೀಸರು ಬಂಧಿಸಿ, ನಂತರ ಬಿಡುಗಡೆ ಮಾಡಿದರು.

ತಾಲ್ಲೂಕಿನ ಇಂಡುವಾಳು ಬಳಿ ಎತ್ತಿನಗಾಡಿ, ಟ್ರ್ಯಾಕ್ಟರ್‌ಗಳೊಂದಿಗೆ ಎಕ್ಸ್‌ಪ್ರೆಸ್‌ವೇಗೆ ನುಗ್ಗಲು ಯತ್ನಿಸಿದ ಪ್ರತಿಭಟನಕಾರರನ್ನು ಪೊಲೀಸರು ಬಂಧಿಸಿದರು. ಆ ಸಂದರ್ಭದಲ್ಲಿ ರೈತರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ರೈತರು ಸರ್ವೀಸ್ ರಸ್ತೆಯಲ್ಲೇ ನಿಂತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

'ರೈತರೇ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಿ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಾಲಿಶ ಹೇಳಿಕೆ ನೀಡಿದ್ದಾರೆ. ಹಾಗಾದರೆ ರಾಜ್ಯ ಸರ್ಕಾರ ಏಕಿರಬೇಕು? ರಾಜ್ಯದಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮೂರೂ ಸರ್ಕಾರಗಳು ಕಾವೇರಿ ನೀರು ಹರಿಸುವ ಮೂಲಕ ರೈತರ ಬೆನ್ನಿಗೆ ಚೂರಿ ಹಾಕಿವೆ' ಎಂದು ಮೂಲ ಸಂಘಟನೆ ಜಿಲ್ಲಾ ಘಟಕದ ಅಧ್ಯಕ್ಷ ಇಂಡುವಾಳ ಚಂದ್ರಶೇಖರ್ ಆಕ್ರೋಶ ವ್ಯಕ್ತಪಡಿಸಿದರು.

'ಮಳೆಯ ಕೊರತೆಯಿಂದಾಗಿ ಕಾವೇರಿ ಅಚ್ಚುಕಟ್ಟಿನ ರೈತರು ಅನುಭವಿಸುತ್ತಿರುವ ಸಮಸ್ಯೆಯನ್ನು ಸುಪ್ರೀಂ ಕೋರ್ಟ್ ಮುಂದೆ ಸಮರ್ಥವಾಗಿ ಮಂಡಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಮಳೆ ಇಲ್ಲದಿದ್ದರೂ ನೀರು ಕೊಡಿ ಎಂದು ಯಾವ ಕೋರ್ಟ್ ಕೂಡ ಹೇಳಿಲ್ಲ. ಸಂಕಷ್ಟ ಪರಿಹಾರ ಸೂತ್ರದಡಿ ರೈತರ ಹಿತ ಕಾಯಬೇಕು' ಎಂದು ಒತ್ತಾಯಿಸಿದರು.

ರೈತ ಸಂಘದ ಪ್ರಮುಖರಾದ ಮಂಜೇಶ್‌ಗೌಡ, ನಾಗೇಂದ್ರಸ್ವಾಮಿ, ರಾಮಲಿಂಗೇಗೌಡ, ಕಸ್ತೂರಿ ಕರ್ನಾಟಕ ಜನಪರ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ರಮೇಶ್‌ಗೌಡ, ಕಬ್ಬು ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಸಾತನೂರು ವೇಣುಗೋಪಾಲ್ ಇದ್ದರು.

ಕಾವೇರಿ ವಿವಾದ: 25 ರಂದು ವಿಚಾರಣೆ

ನವದೆಹಲಿ: ತಮಿಳುನಾಡಿಗೆ ನಿತ್ಯ 24 ಸಾವಿರ ಕ್ಯೂಸೆಕ್ ಕಾವೇರಿ ನೀರು ಹರಿಸಬೇಕು ಎಂದು ತಮಿಳುನಾಡು ಸರ್ಕಾರ ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್‌ನ ವಿಶೇಷ ಪೀಠ ಇದೇ 25ರಂದು ವಿಚಾರಣೆ ನಡೆಸಲಿದೆ. ವಿಶೇಷ ಪೀಠದ ನೇತೃತ್ವವನ್ನು ನ್ಯಾ. ಬಿ.ಆರ್.ಗವಾಯಿ ವಹಿಸಲಿದ್ದು, ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಹಾಗೂ ಪ್ರಶಾಂತ್ ಕುಮಾರ್ ಮಿಶ್ರಾ ಇರಲಿದ್ದಾರೆ. ಪ್ರಕರಣದ ವಿಚಾರಣೆ ನಡೆಸುತ್ತಿದ್ದ ಪೀಠದ ನ್ಯಾಯಮೂರ್ತಿಯೊಬ್ಬರು ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ವಿಚಾರಣೆಗೆ ಪ್ರತ್ಯೇಕ ಪೀಠ ರಚಿಸುವುದಾಗಿ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಸೋಮವಾರ ತಿಳಿಸಿದ್ದರು.

₹ 2.35 ಕೋಟಿ ಕಾಣಿಕೆ ಸಂಗ್ರಹ

ಪ್ರಜಾವಾಣಿ ವಾರ್ತೆ

ರಾಯಚೂರು: ಮಂತ್ರಾಲಯ ಮಠದ ಕಾಣಿಕೆ ಹುಂಡಿಯಲ್ಲಿ 22 ದಿನಗಳಲ್ಲಿ ₹2.35 ಕೋಟಿ ಸಂಗ್ರಹವಾಗಿದೆ. ಮಠದ ಸಿಬ್ಬಂದಿ ಮಂಗಳವಾರ ಹುಂಡಿ ತೆರೆದು ಎಣಿಕೆ ಮಾಡಿದರು. ಹಣವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆ ಎಂದು ಮಠ ಪ್ರಕಟಣೆಯಲ್ಲಿ ತಿಳಿಸಿದೆ. ಮಂತ್ರಾಲಯ ಮಠದ ಮಂಚಾಲಮ್ಮ ದೇವಿಗೆ ಸುಬುದೇಂದ್ರ ತೀರ್ಥ ಸ್ವಾಮೀಜಿ ಪಂಚಾಮೃತಾಭಿಷೇಕ, ಸುಗಂಧ ದ್ರವ್ಯ ಅಭಿಷೇಕ ನೆರವೇರಿಸಿದರು.



ನಕ್ಷತ್ರಗಳಿಗೂ ಸಾವಿರುತ್ತದೆ. ಈ ಹಂತವನ್ನು ತಲುಪಿದಾಗ ಅವು ಅಪಾರ ಶಕ್ತಿಯನ್ನು ಹೊರಚೆಲ್ಲಿ ಸ್ಫೋಟಗೊಳ್ಳುತ್ತವೆ. ಸ್ಫೋಟದ ಬಳಿಕ ಉಳಿದುಕೊಳ್ಳುವ ನಕ್ಷತ್ರದ ತಿರುಳು, ಅಥವಾ ಮಧ್ಯಭಾಗ ಅಪಾರ ಅಯಸ್ಕಾಂತೀಯ ಗುಣವನ್ನು ಹೊಂದಿರುತ್ತದೆ.

ಬೆಳಕನ್ನು ಹಿಡಿದಿಡುವ ಅಯಸ್ಕಾಂತ

ನೇಸರ ಕಾಡನಕುಪ್ಪೆ


ಬೆಳಕನ್ನು ಹಿಡಿದಿಡಲು ಸಾಧ್ಯವೇ? ಕಷ್ಟಸಾಧ್ಯ – ಎಂಬ ಉತ್ತರ ತಕ್ಷಣ ಬರಬಹುದೋ ಏನೋ? ಬೆಳಕನ್ನು ಉತ್ಪಾದಿಸಬಹುದೇ ಹೊರತು ಒಂದೆಡೆ ಕೂಡಿಹಾಕಲಾಗದು ಎಂಬ ವಾದ ಬಹುಕಾಲದಿಂದಲೂ ಇದೆ. ಆದರೆ, ವಿಜ್ಞಾನಿಗಳಿಗೆ ಒಮ್ಮೆ ಹೀಗೆ ಸವಾಲು ಹಾಕಿಬಿಟ್ಟರೆ ಅದನ್ನು ಸಾಧಿಸಿ ತೋರಿಸುವವರೆಗೂ ಅವರಿಗೆ ನೆಮ್ಮದಿ ಇರದು. ಹೀಗೆ, ಸವಾಲನ್ನು ಸ್ವೀಕರಿಸಿ ಬೆಳಕನ್ನು ಒಂದೆಡೆ ಬಂಧಿಸಿ ಇಡುವಲ್ಲಿ ಇಲ್ಲಿನ ವಿಜ್ಞಾನಿಗಳು ಯಶಸ್ವಿಯಾಗಿದ್ದಾರೆ.

ಅದರಲ್ಲೂ, ಈ ಸಂಶೋಧನೆಯಲ್ಲೊಂದು ವಿಶೇಷವಿದೆ. ಬಂಧಿಸಿಟ್ಟ ಬೆಳಕು ಎಷ್ಟು ಕಾಲ ಬಂಧನದಲ್ಲೇ ಇದ್ದರೂ ಕೊಂಚವೂ ಮಾಸದಂತೆ, ಕ್ಷೀಣಿಸದಂತೆ, ಇದ್ದ ಹಾಗೆಯೇ ಇರುವಂತಹ ಸಾಮರ್ಥ್ಯ ಇರುವಂತೆಯೂ ವಿಜ್ಞಾನಿಗಳು ವಿಧಾನವನ್ನು ಕಂಡುಹಿಡಿದಿದ್ದಾರೆ.

ಅಮೆರಿಕದ ಸಿಟಿ ಕಾಲೇಜ್ ಆಫ್ ನ್ಯೂಯಾರ್ಕ್ ವಿಜ್ಞಾನಿಗಳ ತಂಡವು ಹೊಸತೊಂದು ರೀತಿಯ ಅಯಸ್ಕಾಂತವನ್ನು ಕಂಡುಹಿಡಿದಿದೆ. ಈ ಅಯಸ್ಕಾಂತವು ಅದೆಷ್ಟು ಬಲಶಾಲಿಯಾಗಿದೆ ಎಂದರೆ, ಅದರಿಂದ ಬೆಳಕಿಗೂ ತಪ್ಪಿಸಿಕೊಂಡು ಹೋಗಲು ಸಾಧ್ಯವಿಲ್ಲ. ಒಮ್ಮೆ ಈ ಅಯಸ್ಕಾಂತಕ್ಕೆ ಸಿಲುಕಿದ ಬೆಳಕು, ಆ ಅಯಸ್ಕಾಂತದ ಒಳಗೆ ಶಾಶ್ವತವಾಗಿ ಇರುವಂತೆ ಆಗುತ್ತದೆ. ಆದರೆ, ಬೇಕಾದಾಗ ಅಗತ್ಯವಿದ್ದಷ್ಟು ಬೆಳಕನ್ನು ಮಾತ್ರವೇ ಹೊರತೆಗೆಯುವ ವಿಧಾನವೂ ಇಲ್ಲಿ ಆವಿಷ್ಕಾರಗೊಂಡಿದೆ.

ಈ ಸಂಶೋಧನೆಯ ಬಗ್ಗೆ ತಿಳಿಯಬೇಕಾದರೆ, ಮೊದಲು ಮತ್ತೊಂದು ವೈಜ್ಞಾನಿಕ ವಿಸ್ಮಯದ ಬಗ್ಗೆ ತಿಳಿದುಕೊಳ್ಳುವುದು ಒಳ್ಳೆಯದು. ಅದೇ ಕಪ್ಪುರಂಧ್ರಗಳ ರಹಸ್ಯ. ಈ ಕಪ್ಪುರಂಧ್ರಗಳು ಒಮ್ಮೆ ಮನೋಜ್ಞವಾಗಿ ಬದುಕಿ, ಪ್ರಜ್ವಲಿಸಿ, ಆಯುಸ್ಸನ್ನು ಪೂರ್ಣಗೊಳಿಸಿರುವ ನಕ್ಷತ್ರಗಳು. ಇವನ್ನು 'ಕೃಷ್ಣಕಾಯ'ಗಳೆಂದೂ ಕರೆಯಲಾಗುವುದು. ಹಿಂದೊಮ್ಮೆ ನಕ್ಷತ್ರಗಳ ಹುಟ್ಟು–ಸಾವಿನ ಬಗ್ಗೆ 'ಪ್ರಜಾವಾಣಿ'ಯ ತಂತ್ರಜ್ಞಾನ ಪುಟದಲ್ಲಿ ಚರ್ಚಿಸಲಾಗಿತ್ತು ('ಸಾವನ್ನೂ ಗೆದ್ದ ಗ್ರಹ' – 12 ಜುಲೈ, 2023). ಎಲ್ಲ ಜೀವಿಗಳಿಗೆ ತಮ್ಮ ಜೀವಿತಾವಧಿಯಲ್ಲಿ ಹುಟ್ಟು, ಬಾಲ್ಯ, ಯೌವನ, ಪ್ರೌಢ, ವೃದ್ಧಾಪ್ಯದಂತೆ ವಿವಿಧ ಹಂತಗಳು ಇರುವಂತೆ ನಕ್ಷತ್ರಗಳಿಗೂ ವಿವಿಧ ಹಂತಗಳಿರುತ್ತವೆ.

ನಕ್ಷತ್ರಗಳು ಈ ಹಂತಗಳಲ್ಲಿ ತಮ್ಮ ಬಣ್ಣ, ಗಾತ್ರ, ಶಾಖ, ಪ್ರಭೆಯನ್ನು ಬದಲಿಸಿಕೊಳ್ಳುತ್ತಿರುತ್ತವೆ. ನಕ್ಷತ್ರಗಳಿಗೂ ಸಾವಿರುತ್ತದೆ. ಈ ಹಂತವನ್ನು ತಲುಪಿದಾಗ ಅವು ಅಪಾರ ಶಕ್ತಿಯನ್ನು ಹೊರಚೆಲ್ಲಿ ಸ್ಫೋಟಗೊಳ್ಳುತ್ತವೆ. ಸ್ಫೋಟದ ಬಳಿಕ ಉಳಿದುಕೊಳ್ಳುವ ನಕ್ಷತ್ರದ ತಿರುಳು, ಅಥವಾ ಮಧ್ಯಭಾಗ ಅಪಾರ ಅಯಸ್ಕಾಂತೀಯ ಗುಣವನ್ನು ಹೊಂದಿರುತ್ತದೆ. ಇದೆಷ್ಟು ಶಕ್ತಿಶಾಲಿಯಾದ ಅಯಸ್ಕಾಂತೀಯ ಗುಣವನ್ನು ಹೊಂದಿರುತ್ತದೆಯೆಂದರೆ, ಅದರಿಂದ ಬೆಳಕು ಸಹ ತಪ್ಪಿಸಿಕೊಳ್ಳಲಾಗದು!





ಈ ಕೃಷ್ಣಕಾಯಗಳು ಇಂದಿಗೂ ಬಲು ನಿಗೂಢ. ಇವನ್ನು ಕಪ್ಪುರಂಧ್ರಗಳೆಂದೂ, ಇವು ಬೇರೊಂದು ಕಾಲಮಾನಕ್ಕೆ, ಸ್ಥಳಕ್ಕೆ ಮಾರ್ಗ ಒದಗಿಸುವ ಬಾಹ್ಯಾಕಾಶದ ಹೆದ್ದಾರಿಗಳೆಂದೂ ವ್ಯಾಖ್ಯಾನಿಸಲ್ಪಟ್ಟಿವೆ. ಆದರೆ, ಈ ವೈಜ್ಞಾನಿಕ ವಾದಗಳನ್ನು ಪ್ರಾಯೋಗಿಕವಾಗಿ ನಿರೂಪಿಸುವ ಅರ್ಹತೆ ಮಾನವ ಪ್ರಭೇದಕ್ಕೆ ಇನ್ನೂ ಸಿಕ್ಕಿಲ್ಲ. ಮನುಷ್ಯನ ಆಯುಸ್ಸು, ದೈಹಿಕ ಸಾಮರ್ಥ್ಯದ ಮಿತಿ – ಇತ್ಯಾದಿಗಳು ಇದಕ್ಕೆ ಕಾರಣ. ಆದರೆ, ಈ ವೈಜ್ಞಾನಿಕ ವಾದಗಳನ್ನು ಈ ಕಪ್ಪುರಂಧ್ರಗಳು ಇರುವಲ್ಲಿಗೇ ಹೋಗಿ ನಿರೂಪಿಸಬೇಕು ಎಂದೇನೂ ಇಲ್ಲ. ಈ ಬಗೆಯ ಅಂತರಿಕ್ಷದ ಅದ್ಭುತಗಳನ್ನು ಕೃತಕವಾಗಿ ಪ್ರಯೋಗಾಲಯದಲ್ಲಿ ಸೃಷ್ಟಿಸಿ, ಕೆಲವು ವಾದಗಳನ್ನು ಸಾಬೀತುಪಡಿಸುವ ಸಾಧ್ಯತೆಗಳು ಇರುತ್ತವೆ. ಅಂಥದ್ದೇ ಒಂದು ಪ್ರಯೋಗವನ್ನು ನಡೆಸಿ, ವಿಜ್ಞಾನಿಗಳು ಇಲ್ಲಿ ಯಶಸ್ಸು ಕಂಡಿದ್ದಾರೆ.

ಅಮೆರಿಕದ ಸಿಟಿ ಕಾಲೇಜ್ ಆಫ್ ನ್ಯೂಯಾರ್ಕ್ ವಿಜ್ಞಾನಿಗಳ ತಂಡವು ಇದೇ ಬಗೆಯ ಪ್ರಯೋಗವೊಂದನ್ನು ಮಾಡಿದೆ. ಈ ತಂಡಕ್ಕೆ 'ಕೃಷ್ಣಕಾಯ'ವೇ ಸ್ಫೂರ್ತಿ! ಕೃಷ್ಣಕಾಯಗಳ ಅಯಸ್ಕಾಂತ ಗುಣವನ್ನು ಅಧ್ಯಯನ ಮಾಡಿರುವ ತಂಡವು ಅತ್ಯಂತ ಶಕ್ತಿಶಾಲಿಯಾದ ಅಯಸ್ಕಾಂತವು ಬೆಳಕನ್ನು ಬಂಧಿಸಿ ಇಡಬಲ್ಲದೇ ಎಂಬುದನ್ನು ಪ್ರಯೋಗದ ಮೂಲಕ ಅರಿತುಕೊಳ್ಳಲು ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆ. ಭಾರತ ಮೂಲದ ಭೌತವಿಜ್ಞಾನಿ ವಿನೋದ್ ಎಂ. ಮೆನನ್ ಹಾಗೂ ತಂಡವು ಈ ಸಂಶೋಧನೆ ಮಾಡಿದೆ. ತಮ್ಮ ಸಂಶೋಧನೆಯನ್ನು ಈ ತಂಡವು 'ನೇಚರ್' ನಿಯತಕಾಲಿಕೆಯಲ್ಲಿ ಪ್ರಕಟಿಸಿದೆ.

ಈ ವಿಜ್ಞಾನಿಗಳ ತಂಡವು ಬಹು ಪದರಗಳುಳ್ಳ ಅಯಸ್ಕಾಂತವನ್ನು ತಮ್ಮ ಸಂಶೋಧನೆಗೆ ಬಳಸಿಕೊಂಡಿದ್ದಾರೆ. ಅಯಸ್ಕಾಂತಗಳಲ್ಲಿ ಎರಡು ವಿಧ. ಭೂಮಿಯೊಳಗೆ ನೈಸರ್ಗಿಕವಾಗಿ ಸಿಗುವ ಅಯಸ್ಕಾಂತ. ಮತ್ತೊಂದು, ಕೃತಕವಾಗಿ ವಿದ್ಯುತ್ ಪ್ರವಾಹ ಹಾಗೂ ಇತರ ಕೃತಕ ವಿಧಾನಗಳಿಂದ ಉತ್ಪಾದಿಸುವ ಅಯಸ್ಕಾಂತ. ಕೆಲವು ಅಯಸ್ಕಾಂತಗಳು ವಿದ್ಯುತ್ ಪ್ರವಾಹ ಆದಾಗ ಮಾತ್ರ ಶಕ್ತಿ ಪಡೆದುಕೊಂಡು ಅಯಸ್ಕಾಂತೀಯ ಗುಣವನ್ನು ಹೊಂದುತ್ತವೆ. ವಿಜ್ಞಾನಿಗಳು ತಮ್ಮ ಪ್ರಯೋಗಕ್ಕೆ ಕೃತಕ ಅಯಸ್ಕಾಂತವನ್ನು ಬಳಸಿದ್ದಾರೆ. ಅಂದರೆ, ಅಯಸ್ಕಾಂತೀಯ ಕ್ಷೇತ್ರವನ್ನು ಸೃಷ್ಟಿಸಿ ಬಹು ಪದರಗಳಲ್ಲಿ ಹಲವು ಅಯಸ್ಕಾಂತಗಳನ್ನು ಇರಿಸಿ, ಬೆಳಕನ್ನು ಕೇಂದ್ರವೊಂದರಲ್ಲಿ ಬಂಧಿಸಿ ಇಡುವಂತೆ ಮಾಡಿದ್ದಾರೆ.

ಇಲ್ಲಿ ವಿದ್ಯುತ್ ಪ್ರವಾಹ ಇರುವ ಕಾರಣ ಅಯಸ್ಕಾಂತದ ಅಯಸ್ಕಾಂತೀಯ ಶಕ್ತಿಯನ್ನು ನಿಯಂತ್ರಿಸಬಹುದು. ಹೆಚ್ಚಿಸುವ, ಕುಗ್ಗಿಸುವ ಸಾಧ್ಯತೆ ಇರುತ್ತದೆ. ಈ ಅಯಸ್ಕಾಂತ ಮೂಲಕ ಬೆಳಕನ್ನು ಹಾಯಿಸಿದಾಗ ಅಯಸ್ಕಾಂತದ ಪ್ರಭಾವಕ್ಕೆ ಸಿಲುಕಿ ಒಳಗೆ ಬಂಧಿಸಲ್ಪಟ್ಟಿದೆ. 'ಬೆಳಕಿಗೆ ಅತಿ ಪ್ರಖರವಾದ ಪ್ರತಿಫಲನ ಶಕ್ತಿ ಇರುತ್ತದೆ. ಒಮ್ಮೆ ಪದರಗಳುಳ್ಳ ಅಯಸ್ಕಾಂತದ ಒಳಗೆ ಹೋಗುವ ಬೆಳಕು ಒಳಭಾಗದಲ್ಲಿಯೇ ಪ್ರತಿಫಲಗೊಳ್ಳುತ್ತ ಸದಾ ಅಲ್ಲಿಯೇ ಇರುತ್ತದೆ. ಜೊತೆಗೆ, ಬೆಳಕಿನ ಶಕ್ತಿಯನ್ನು ಹೆಚ್ಚಿಸುವ ಸಾಧ್ಯತೆಯೂ ಇದರಿಂದ ಹೆಚ್ಚಾಗುತ್ತದೆ' ಎಂದು ತಂಡದ ಪ್ರಮುಖ ವಿಜ್ಞಾನಿ ಫ್ಲೋರಿಯನ್ ಡರ್ನ್‌ಬರ್ಗರ್ ತಿಳಿಸಿದ್ದಾರೆ.

ಬಳಕೆ ಎಲ್ಲೆಲ್ಲಿ?

ಇದಕ್ಕೆ ಬಳಕೆಯ ಸಾಧ್ಯತೆಗಳು ಸಾಕಷ್ಟಿವೆ. ಶೇಖರಿಸಿದ ಬೆಳಕನ್ನು ಮರುಬಳಕೆ ಮಾಡುವುದು. ಅಂದರೆ ಬೆಳಕನ್ನು ವಿದ್ಯುತ್ತಾಗಿ ಪರಿವರ್ತಿಸುವ ಸಾಧ್ಯತೆಗಳನ್ನು ಮತ್ತಷ್ಟು ಸಂಶೋಧನೆಗಳಿಗೆ ಒಳಪಡಿಸುವುದು. ಈಗಾಗಲೇ ಬೆಳಕನ್ನು ವಿದ್ಯುತ್ತಾಗಿ ಪರಿವರ್ತನೆ ಮಾಡುವ ತಂತ್ರಜ್ಞಾನ ಶೋಧವಾಗಿದೆ. ಇದರಿಂದ ಬೆಳಕನ್ನು ಒಂದೆಡೆಯಿಂದ ಇನ್ನೊಂದೆಡೆಗೆ ರವಾನೆ ಮಾಡುವ ಅವಕಾಶ ಸಿಕ್ಕಂತಾಗುತ್ತದೆ. ಅಲ್ಲದೇ, ಬೆಳಕಿನ ಮೂಲಕ ದತ್ತಾಂಶ ರವಾನೆ ಮಾಡುವ ತಂತ್ರಜ್ಞಾನವೂ ನಮ್ಮಲ್ಲಿ ಆಗಲೇ ಇದೆ. ಇದನ್ನು ಮತ್ತಷ್ಟು ಹೊಸ ಬಗೆಗಳಲ್ಲಿ ಸಂಶೋಧನೆ ಮಾಡುವ ಅವಕಾಶಗಳು ಇದರಿಂದ ಸಿಕ್ಕಂತೆ ಆಗುತ್ತದೆ.

ಜೊತೆಗೆ, ಅತಿ ಸರಳವಾಗಿ ಬೆಳಕನ್ನು ಬೆಳಕಂತೆ ಮಾಡಿಕೊಳ್ಳುವ ಸಾಧ್ಯತೆಗಳೂ ಇದರಿಂದ ಹೆಚ್ಚುತ್ತದೆ. ಅಯಸ್ಕಾಂತದ ಶಕ್ತಿಗೆ ಅನುಸಾರವಾಗಿ ಬೆಳಕನ್ನು ಸಂಗ್ರಹಿಸುವ ಸಾಮರ್ಥ್ಯವೂ ಏರಿಳಿತವಾಗುತ್ತದೆ. ಪ್ರಬಲವಾದ ಅಯಸ್ಕಾಂತವು ಹೆಚ್ಚು ಪ್ರಮಾಣದ ಬೆಳಕನ್ನು ಶೇಖರಿಸಿಡಬಲ್ಲದು. ಆದರೆ, ಬೆಳಕನ್ನು ಶೇಖರಿಸಲು ಈ ವಿಜ್ಞಾನಿಗಳು ಕಂಡುಹಿಡಿದಿರುವ ವಿಧಾನಗಳು ತಿಳಿದಿರಬೇಕು. ಹಾಗಾಗಿ, ಎಲ್ಲ ಅಯಸ್ಕಾಂತಗಳೂ ಬೆಳಕನ್ನು ಹಿಡಿದಿಡಲಾರವು ಎಂಬ ಅಂಶವನ್ನು ಅಲ್ಲಗಳೆಯಲಾಗದು. ❖



ರಿಮೋಟ್ ಸೆನ್ಸಿಂಗ್ ಮತ್ತು ಜಲಾಶಯಗಳ ಹೂಳು

ಸುಧೀರ ಎಚ್. ಎಸ್.

ಯಾವುದೇ ಕೆರೆ, ಕಟ್ಟೆ ಅಥವಾ ಜಲಾಶಯಕ್ಕೆ ಹಳ್ಳ, ತೊರೆ ಅಥವಾ ನದಿಗಳಿಂದ ಸಂಗ್ರಹವಾದ ನೀರು, ತನ್ನ ಜೊತೆ ಮಣ್ಣನ್ನೂ ಕೊಚ್ಚಿಕೊಂಡು ಬರುವುದು ಸಹಜ. ಈ ರೀತಿ ಜಲಾಶಯ–ಕೆರೆ–ಕಟ್ಟೆಗಳಲ್ಲಿ ಸೇರಿರುವ ಮಣ್ಣನ್ನು ಹೂಳು ಎಂದು ಕರೆಯುತ್ತೇವೆ. ಹೂಳು ಶೇಖರಣೆಯಾಗುವ ಪ್ರಕ್ರಿಯೆಗೆ 'ಸೆಡಿಮೆಂಟೇಶನ್' ಅನ್ನುತ್ತಾರೆ.

ಗ್ರಾಮೀಣ ಭಾಗದಲ್ಲಿ ಕೆರೆಕಟ್ಟೆಗಳಲ್ಲಿ ಕೆಲವು ವರ್ಷಗಳಿಗೊಮ್ಮೆ ಹೂಳೆತ್ತುವುದುಂಟು. ನಗರಗಳ ಕೆರೆಗಳಲ್ಲೂ ಇದಕ್ಕೆ ಯೋಜನೆಗಳನ್ನೇ ರೂಪಿಸಿ ಹೂಳೆತ್ತುವ ಕಾರ್ಯಕ್ರಮ ನಡೆಸುತ್ತಾರೆ. ಆದರೆ ಜಲಾಶಯಗಳಲ್ಲಿ ಹೀಗೆ ತುಂಬಿಕೊಂಡ ಹೂಳಿನಿಂದ ಹೆಚ್ಚು ತಾಪತ್ರಯ. ಈ ಹೂಳನ್ನು ಸಣ್ಣ ಪ್ರಮಾಣದ ಕೆರೆಕಟ್ಟೆಗಳಂತೆ ಜಲಾಶಯಗಳಿಂದ ಹೊರತೆಗೆಯುವುದು ಅಷ್ಟು ಸುಲಭವಾಗಿ ಆಗುವ ಕೆಲಸವಲ್ಲ.

ಜಲಾಶಯಗಳಲ್ಲಿ ಸೆಡಿಮೆಂಟೇಶನ್ ತಪ್ಪಿಸಲು ಆಗುವುದಿಲ್ಲ. ಏಕೆಂದರೆ ಜಲಾಶಯಗಳಿಗೆ ಹಲವು ಮೂಲಗಳಿಂದ ನೀರು ಹರಿದುಬಂದಿರುತ್ತದೆ. ಮಣ್ಣಿನ ಮೇಲೆ ಪರಿಣಾಮ ಬೀರುವ ಅವೈಜ್ಞಾನಿಕ ಭೂ-ಬಳಕೆಯ ಬದಲಾವಣೆಗಳು ಮತ್ತು ಅಂತಹ ಭೂ-ಬಳಕೆಯ ಪರಿವರ್ತನೆಗಳು ನೀರಿನ ಹರಿವಿನ ಮೇಲೆ ಪರಿಣಾಮ ಬೀರುತ್ತವೆ, ಜೊತೆಗೆ ಅದು ಹೂಳನ್ನೂ ಹೆಚ್ಚಿಸುತ್ತದೆ. ಕೊನೆಗೆ ಈ ಹೂಳು ಜಲಾಶಯಗಳಲ್ಲಿ ಸಂಗ್ರಹವಾಗುತ್ತದೆ. ಜಲಾಶಯಗಳಲ್ಲಿ ಹೂಳಿನ ನಿರಂತರ ಸಂಗ್ರಹಣೆಯು ಅದರ (ಜಲ) ಶೇಖರಣಾ ಸಾಮರ್ಥ್ಯವನ್ನು ಕಡಿಮೆ ಮಾಡುತ್ತದೆ. ಆಗ ಸಹಜವಾಗಿಯೇ ಆ ಜಲಾಶಯದ ಉಪಯುಕ್ತತೆಯೂ ಕಡಿಮೆ ಆಗುತ್ತದೆ. ಜೊತೆಗೆ ಇದರಿಂದ ವಿವಿಧ ರೀತಿಯ ನಕಾರಾತ್ಮಕ ಪರಿಣಾಮಗಳೂ ಎದುರಾಗಬಹುದು.

ಒಟ್ಟಿನಲ್ಲಿ, ಜಲಾಶಯಗಳಲ್ಲಿ ಹೂಳು ತುಂಬುವಿಕೆಯು ಒಂದು ದೊಡ್ಡ ಸಮಸ್ಯೆ. ಒಂದೆಡೆ, ಜಲಾಶಯಗಳನ್ನು ದೀರ್ಘಕಾಲ ಸುರಕ್ಷಿತವಾಗಿರುವಂತೆ ಕಾಪಾಡಿಕೊಳ್ಳಬೇಕಾಗುತ್ತದೆ. ಇನ್ನೊಂದೆಡೆ, ನಗರೀಕರಣ,ಕೃಷಿ ಮತ್ತು ಕೈಗಾರಿಕೆ ಸೇರಿದಂತೆ ಇತರೆ ಆರ್ಥಿಕ ಚಟುವಟಿಕೆಗಳಿಂದ ಭೂ-ಬಳಕೆ ಹೆಚ್ಚುತ್ತಿದೆ; ಸಹಜವಾಗಿಯೇ ಇವು ಮಣ್ಣಿನ ಸವಕಳಿಯನ್ನು ಹೆಚ್ಚಿಸುತ್ತಿದೆ. ಕೊನೆಗೆ ಇದು ಜಲಾಶಯಗಳಲ್ಲಿ ಹೂಳಿನ ಅಂಶವನ್ನು ಹೆಚ್ಚಾಗಿಸುತ್ತಿದೆ. ಇದರಿಂದ ಜಲಾಶಯದ ನೀರಿನ ಸಂಗ್ರಹ ಸಾಮರ್ಥ್ಯದಲ್ಲಿ ಕಡಿತ ಉಂಟಾಗುತ್ತಿದೆ. ಹೀಗಾಗಿ ಜಲಾಶಯದ ಮೇಲಿನ ಅವಲಂಬನೆ ಅನಿಶ್ಚಿತವಾಗಬಹುದು.

ಇದರಿಂದ ಜಲವಿದ್ಯುತ್ ಉತ್ಪಾದನೆ ಮತ್ತು ಕೃಷಿ ಮುಂತಾದ ಚಟುವಟಿಕೆಗಳ ಮೇಲೂ ಪರಿಣಾಮ ಬೀರಬಹುದು.



ಆದರೆ ಜಲಾಶಯಗಳಲ್ಲಿಯ ಹೂಳಿನ ಪ್ರಮಾಣವನ್ನು ನಿರ್ಧರಿಸುವುದು ಸವಾಲಿನ ಕೆಲಸ. ಸಾಂಪ್ರದಾಯಿಕವಾಗಿ ಈ ಪ್ರಮಾಣವನ್ನು ನಿರ್ಣಯಿಸಲು 'ಹೈಡ್ರೋಗ್ರಾಫಿಕ್' ಸಮೀಕ್ಷೆಗಳನ್ನು ಕೈಗೊಳ್ಳಲಾಗುತ್ತದೆ. ಆದರೆ ಇದು ದುಬಾರಿ ಮತ್ತು ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತದೆ. ಇತ್ತೀಚಿನ ವರ್ಷಗಳಲ್ಲಿ, ಉಪಗ್ರಹಗಳನ್ನು ಆಧರಿಸಿ ರಿಮೋಟ್ ಸೆನ್ಸಿಂಗ್‌ನಿಂದ ಜಲಾಶಯಗಳ ಹೂಳಿನ ಪ್ರಮಾಣವನ್ನು ಕಂಡುಹಿಡಿಯುವಂತಾಗುತ್ತಿದೆ. ಇದು ವೇಗವಾದ ಮತ್ತು ಅಗ್ಗದ ದಾರಿ. ಪ್ರಾರಂಭಿಕವಾಗಿ ನಾಸಾ ಸಂಸ್ಥೆಯ ಲ್ಯಾಂಡ್‌ಸ್ಯಾಟ್ ಸರಣಿಯ ಆಪ್ಟಿಕಲ್ ರಿಮೋಟ್ ಸೆನ್ಸಿಂಗ್ ಡೇಟಾವನ್ನು ಬಳಸಲಾಗುತ್ತಿತ್ತು. ಇದರಿಂದ NDVI ಮತ್ತು NDWI ಎಂಬ ಸೂಚ್ಯಂಕವನ್ನು ಆಧರಿಸಿ ನೀರಿನ ಪಿಕ್ಸೆಲ್‌ಗಳನ್ನು ಗುರುತಿಸಿ, ವಿಶ್ಲೇಷಿಸಲಾಗುತ್ತದೆ. ಭಾರತ ಸರ್ಕಾರದ ಕೇಂದ್ರ ಜಲ ಆಯೋಗವು ಈಗಾಗಲೇ ಹಲವಾರು ಜಲಾಶಯಗಳಲ್ಲಿನ ಹೂಳಿನ ಶೇಖರಣೆ ಮತ್ತು ಜಲಾಶಯದಲ್ಲಿನ ನೀರಿನ ಪ್ರಮಾಣದ ಮೌಲ್ಯಮಾಪನ ಮಾಡಲು ಲ್ಯಾಂಡ್‌ಸ್ಯಾಟ್‌ನಿಂದ ಆಪ್ಟಿಕಲ್ ರಿಮೋಟ್ ಸೆನ್ಸಿಂಗ್ ಡೇಟಾವನ್ನು ಬಳಸಿದೆ.


ರಿಮೋಟ್ ಸೆನ್ಸಿಂಗ್ ಡೇಟಾವನ್ನು ಬಳಸಿಕೊಂಡು, ಜಲಾಶಯದ ನೀರು ಹರಡುವ ಪ್ರದೇಶ ಮತ್ತು ನೀರಿನ ಮಟ್ಟವನ್ನು ಕಂಡುಕೊಂಡ ನಂತರ, ಟ್ರೆಪೆಜೋಡಲ್ ಸೂತ್ರದ ಸಹಾಯದಿಂದ ಜಲಾಶಯದಲ್ಲಿ ನೀರನ್ನು ಹಿಡಿದಿಟ್ಟುಕೊಳ್ಳುವ ಪ್ರಮಾಣವನ್ನು ನಿರ್ಣಯಿಸಲಾಗುತ್ತದೆ. ಜಲಾಶಯ ಯೋಜನೆ ರೂಪಿಸಿದ ಹಂತದಲ್ಲಿಯೇ ಸಾಧಾರಣವಾಗಿ ಪ್ರತಿ ನೀರಿನ ಮಟ್ಟ - ವಿಸ್ತೀರ್ಣ - ನೀರಿನ ಪ್ರಮಾಣದ ಒಂದು ಕೋಷ್ಟಕ(elevation-area-capacity table) ವಿರುತ್ತದೆ. ಇದನ್ನು ರಿಮೋಟ್ ಸೆನ್ಸಿಂಗ್‌ನಿಂದ ಪಡೆದ ಮಾಹಿತಿಯ ಜೊತೆ ಹೋಲಿಸಲಾಗುತ್ತದೆ. ಜಲಾಶಯದಲ್ಲಿ ನೀರಿನ ಪ್ರಮಾಣ ಕಡಿಮೆ ಎಂದು ಕಂಡುಬಂದರೆ, ಹೂಳಿರುವುದು ಸ್ಪಷ್ಟವಾಗುತ್ತದೆ.

ಆದರೆ ಹೀಗೆ ಆಪ್ಟಿಕಲ್ ರಿಮೋಟ್ ಸೆನ್ಸಿಂಗ್ ಅನ್ನು ಬಳಸಲು ಒಂದು ಪ್ರಮುಖ ಸಮಸ್ಯೆ ಎಂದರೆ, ನಮ್ಮಲ್ಲಿ ಹೆಚ್ಚಾಗಿ ಜಲಾಶಯಗಳು ತುಂಬುವುದು ಮಳೆಗಾಲದಲ್ಲಿ ಮಾತ್ರ. ಆ ಸಮಯದಲ್ಲಿ ಹೆಚ್ಚಾಗಿ ಮೋಡಗಳು ಕವಿದಿರುತ್ತದೆ. ಹೀಗೆ ಮೋಡ ಕವಿದ ವಾತಾವರಣದಲ್ಲಿ ಆಪ್ಟಿಕಲ್ ರಿಮೋಟ್ ಸೆನ್ಸಿಂಗ್‌ನಿಂದ ಪಡೆಯಬಹುದಾದ ಮಾಹಿತಿ ಅಷ್ಟಾಗಿ ಪ್ರಯೋಜನಕಾರಿಯಾಗಿರದು. ಇದಕ್ಕೆ ಪರಿಹಾರವಾಗಿ, 'ಮೈಕ್ರೋವೇವ್ ರಿಮೋಟ್ ಸೆನ್ಸಿಂಗ್ ಡೇಟಾ' ತುಂಬಾ ಸಹಾಯಕವಾಗಿದೆ. ಅದರಲ್ಲೂ ಯುರೋಪಿಯನ್ ಸ್ಪೇಸ್ ಏಜೆನ್ಸಿಯಿಂದ (ESA) ಸೆಂಟಿನೆಲ್-1A ಎಂಬ ಉಪಗ್ರಹದ ಡೇಟಾ ಯಾವುದೇ ಶುಲ್ಕವಿಲ್ಲದೆ ಲಭ್ಯವಾಗಿರುವುದು ಒಂದು ವರವಾಗಿದೆ. ಮೋಡ ಕವಿದ ವಾತಾವರಣದಲ್ಲೂ ಮೈಕ್ರೋವೇವ್ ರಿಮೋಟ್ ಸೆನ್ಸಿಂಗ್ ಡೇಟಾವನ್ನು ಪಡೆಯಬಹುದಾಗಿದೆ. ಈ ವಿಧಾನದಲ್ಲಿ ನೀರಿನ ಪಿಕ್ಸೆಲ್‌ಗಳನ್ನು ಚೆನ್ನಾಗಿ ಗುರುತಿಸಬಹುದು.

ಸೆಂಟಿನೆಲ್-1A ಸಿಂಥೆಟಿಕ್ ಅಪರ್ಚರ್ ರೇಡಾರ್(SAR)ನ ಸಿ-ಬ್ಯಾಂಡ್ ಡೇಟಾವನ್ನು ಬಳಸಲಾಗುತ್ತದೆ. ಇದು ಪ್ರತಿ 12 ದಿನಗಳ ಪುನರಾವರ್ತಿತ ಅವಧಿಯನ್ನು ಹೊಂದಿದೆ. ಸೆಂಟಿನೆಲ್-1A 'ಗ್ರೌಂಡ್ ರೇಂಜ್ ಡಿಟೆಕ್ಟೆಡ್' (GRD) ಡೇಟಾವನ್ನು ಕೋಪರ್ನಿಕಸ್-ಸೆಂಟಿನೆಲ್ ಹಬ್ (https://scihub.copernicus.eu/dhus/)ನಿಂದ ಪಡೆಯಬಹುದು. ಇದು ಸೆಂಟಿನೆಲ್ ಡೇಟಾವನ್ನು ಪಡೆಯಲು ಮುಕ್ತ ತಾಣವಾಗಿದೆ.

SAR ಚಿತ್ರದ ಮೂಲಕ ಭೂಭಾಗವನ್ನೂ ಜಲಾಶಯದ ಜಲಭಾಗವನ್ನೂ ಗುರುತಿಸಲು ಸಾಧ್ಯ. ಜಲಾಶಯದಲ್ಲಿ ನಿಂತಿರುವ ಜಲಭಾಗವು ಹಿಮ್ಮುಖ ಚಲನಶೀಲವನ್ನು (back-scattering) ಹೊಂದಿರುವಂತೆ ಚಿತ್ರದಲ್ಲಿ ಗೋಚರಿಸುತ್ತದೆ. ಜೊತೆಗೆ ನೀರಿನ ಪಿಕ್ಸೆಲ್‌ಗಳು ಗಾಢವಾದ ಬಣ್ಣದಲ್ಲಿಯೂ ಕಾಣುತ್ತಿರುತ್ತವೆ. ಆದ ಕಾರಣ ಜಲಾಶಯದ ನೀರಿನ ವಿಸ್ತೀರ್ಣವನ್ನು ಸುಲಭವಾಗಿ ಗುರುತಿಸಬಹುದು. ಹೀಗಾಗಿ, ಸೆಂಟಿನೆಲ್-1A SAR ಡೇಟಾವನ್ನು ಜಲಾಶಯಗಳ ಹೂಳಿನ ಪ್ರಮಾಣವನ್ನು ನಿರ್ಣಯಿಸಲು ಬಳಸಬಹುದಾಗಿದೆ. ಗೂಗಲ್ ಅರ್ಥ್ ಎಂಜಿನ್ ಸಹಾಯದಿಂದ ನೇರವಾಗಿ ಸೆಂಟಿನಲ್-1A SAR ಡೇಟಾವನ್ನು ಪಡೆದು, ಅಲ್ಲಿಯೇ ಅದನ್ನು ವಿಶ್ಲೇಷಿಸಲೂ ಸಾಧ್ಯ. ಎಂದರೆ ಯಾವ ಕೆಲಸವನ್ನು ಈ ಮೊದಲು ವಾರಗಟ್ಟಲೇ ಮಾಡಬೇಕಾಗುತ್ತಿತ್ತೋ ಅದನ್ನು ಇಂದು ಕೆಲವೇ ಗಂಟೆಗಳಲ್ಲಿ ಮಾಡುವಂತಾಗಿದೆ.

ಒಟ್ಟಾರೆ, ಸೆಂಟಿನೆಲ್-1A SAR ಡೇಟಾ ಮತ್ತು ಕ್ಲೌಡ್ ಕಂಪ್ಯೂಟಿಂಗ್ ಸಂಪನ್ಮೂಲಗಳನ್ನು ಬಳಸಿಕೊಂಡು ಕಡಿಮೆ ಸಮಯದಲ್ಲಿ ಜಲಾಶಯಗಳ ಹೂಳನ್ನು ಅಂದಾಜು ಮಾಡಲು ಸಾಧ್ಯ. ❖



ಸ್ಯಾಮ್‌ಸಂಗ್ ಗ್ಯಾಲಕ್ಸಿ ಫೋಲ್ಡ್ 5: ಮಡಚುವ ಅತ್ಯಾಧುನಿಕ ಸ್ಮಾರ್ಟ್‌ಫೋನ್

ಸ್ಯಾಮ್‌ಸಂಗ್ ಗ್ಯಾಲಕ್ಸಿ ಐಷಾರಾಮಿ ಫೋನ್‌ಗಳು

ಅವಿನಾಶ್ ಬಿ.

ದೇಶದ ಪ್ರಮುಖ ಫೋನ್ ತಯಾರಿಕಾ ಕಂಪನಿ ಸ್ಯಾಮ್‌ಸಂಗ್ ಐಷಾರಾಮಿ ವಿಭಾಗದಲ್ಲಿ ಇತ್ತೀಚೆಗೆ ಎರಡು ಮಡಚುವ ಸ್ಮಾರ್ಟ್‌ಫೋನ್‌ಗಳನ್ನು ಭಾರತೀಯ ಮಾರುಕಟ್ಟೆಗೆ ಪರಿಚಯಿಸಿದೆ. ಅಡ್ಡವಾಗಿ ಪುಸ್ತಕದಂತೆ ಮಡಚಬಲ್ಲ ಸ್ಯಾಮ್‌ಸಂಗ್ ಗ್ಯಾಲಕ್ಸಿ ಝಡ್ ಫೋಲ್ಡ್ 5 ಹಾಗೂ ಲಂಬವಾಗಿ ಮುಚ್ಚಬಲ್ಲ ಸ್ಯಾಮ್‌ಸಂಗ್ ಗ್ಯಾಲಕ್ಸಿ ಝಡ್ ಫ್ಲಿಪ್ 5. ಇವುಗಳು ಹೇಗಿವೆ?

ಎರಡೂ ಫೋನ್‌ಗಳಲ್ಲಿ ಆಂಡ್ರಾಯ್ಡ್ 13 ಕಾರ್ಯಾಚರಣಾ ವ್ಯವಸ್ಥೆ ಆಧಾರದ ಒನ್ ಯುಐ 5.1.1 ಕಾರ್ಯಾಚರಣಾ ವ್ಯವಸ್ಥೆ ಇದ್ದು, ಎರಡನೇ ಪೀಳಿಗೆಯ ಕ್ವಾಲ್ಕಂ ಸ್ನ್ಯಾಪ್‌ಡ್ರ್ಯಾಗನ್ 8 ಚಿಪ್‌ಸೆಟ್ ಬಳಕೆಯಾಗಿದ್ದು, ಜಲನಿರೋಧಕತೆ ವ್ಯವಸ್ಥೆಯಿದೆ.

ಗ್ಯಾಲಕ್ಸಿ ಝಡ್ ಫೋಲ್ಡ್ 5: ಗುಣಮಟ್ಟದ ಶಕ್ತಿಶಾಲಿ ಫೋನ್

ವಿನ್ಯಾಸ, ಸ್ಕ್ರೀನ್: ಝಡ್ ಫೋಲ್ಡ್ 5 ಮಧ್ಯಭಾಗದಲ್ಲಿ ಪುಸ್ತಕದಂತೆ (ಲಂಬವಾಗಿ) ಮಡಚಬಹುದಾದ ಸ್ಮಾರ್ಟ್‌ಫೋನ್ ಆಗಿದ್ದು, ತೆರೆದಾಗ 7.6 ಇಂಚಿನ ಸ್ಕ್ರೀನ್, ಮುಚ್ಚಿದಾಗ 6.2 ಇಂಚು ಸ್ಕ್ರೀನ್ ಇದೆ. ಹಿಂಭಾಗದಲ್ಲಿ ತ್ರಿವಳಿ ಕ್ಯಾಮೆರಾ ಸೆಟಪ್ ಆಕರ್ಷಕವಾಗಿದ್ದರೆ, ಮುಂಭಾಗದಲ್ಲಿ ಎರಡೂ ಸ್ಕ್ರೀನ್‌ಗಳಲ್ಲಿ (ತೆರೆದಾಗ ದೊಡ್ಡ ಸ್ಕ್ರೀನ್, ಮಡಚಿದಾಗ ಸಣ್ಣ ಸ್ಕ್ರೀನ್) ಒಂದೊಂದು ಸೆಲ್ಫಿ ಕ್ಯಾಮೆರಾ ಇದ್ದೂ ಇಲ್ಲದಂತೆ ಅಡಗಿ ಕುಳಿತಿದೆ. ಪವರ್ ಬಟನ್‌ನಲ್ಲಿ ಫಿಂಗರ್ ಪ್ರಿಂಟ್ ಸೆನ್ಸರ್ ಇದ್ದು, ತಳಭಾಗದಲ್ಲಿ ಉತ್ತಮ ಸ್ಪೀಕರ್ ಗ್ರಿಲ್, ಮೈಕ್ ಇದೆ. ತೂಕ 253 ಗ್ರಾಂ. ಬಿಸಿಲಿನಲ್ಲಿ ಬಳಸುವಾಗಲೂ ಸ್ಕ್ರೀನ್‌ನ ಬೆಳಕಿನ ಪ್ರಖರತೆಯು ಚೆನ್ನಾಗಿ ಹೊಂದಿಕೊಳ್ಳುವ ಮೂಲಕ, ಓದುವುದಕ್ಕೆ ಯಾವುದೇ ಸಮಸ್ಯೆಯಾಗುವುದಿಲ್ಲ.

ಕಾರ್ಯಾಚರಣೆ: ಫೋಲ್ಡ್ 4ಕ್ಕೆ ಹೋಲಿಸಿದರೆ, ಹೆಚ್ಚು ಕೆಲಸ ಮಾಡಿದಾಗ ಫೋಲ್ಡ್ 5 ಫೋನ್ ಅಷ್ಟೊಂದು ಬಿಸಿ ಆಗುವುದಿಲ್ಲ. ಕಾರ್ಯಾಚರಣೆ ಸುಲಲಿತವಾಗಿದ್ದು, ಮಲ್ಟಿ ವಿಂಡೋ ವ್ಯವಸ್ಥೆ ಆಕರ್ಷಕವಾಗಿದೆ. ಎಂದರೆ, ಫೋನ್ ತೆರೆದಾಗ ಎರಡೂ ಪಾರ್ಶ್ವಗಳಲ್ಲಿ ಎರಡು-ಮೂರು ಆ್ಯಪ್‌ಗಳನ್ನು ತೆರೆದಿಟ್ಟು ಕೆಲಸ ಮಾಡಬಹುದು. ಸ್ಕ್ರೀನ್ ದೊಡ್ಡದಾಗಿರುವುದರಿಂದ ಹಲವು ಆ್ಯಪ್‌ಗಳ ಕೆಲಸ ಸುಲಭವಾಗುತ್ತದೆ.

ಕ್ಯಾಮೆರಾ: 50 MP ಸಾಮರ್ಥ್ಯದ ಪ್ರಧಾನ ಲೆನ್ಸ್, 10 MP 3x ಟೆಲಿಫೋಟೊ ಲೆನ್ಸ್ ಮತ್ತು 12 ಮೆಗಾಪಿಕ್ಸೆಲ್ ಸಾಮರ್ಥ್ಯದ ಅಲ್ಟ್ರಾ ವೈಡ್ ಲೆನ್ಸ್‌ಗಳ ಸಂಗಮವಾಗಿರುವ ತ್ರಿವಳಿ ಕ್ಯಾಮೆರಾ ಸೆಟಪ್‌ನಿಂದ ಚಿತ್ರಗಳು, ವಿಡಿಯೊಗಳು ಸ್ಪಷ್ಟವಾಗಿ ಸೆರೆಯಾಗುತ್ತವೆ. ಜೊತೆಗೆ, 4 ಮೆಗಾಪಿಕ್ಸೆಲ್ ಸಾಮರ್ಥ್ಯದ ಒಳಭಾಗದ (ತೆರೆದಾಗ ಕಾಣಿಸುವ ಸ್ಕ್ರೀನ್‌ನ ಮುಂಭಾಗದಲ್ಲಿ) ಹಾಗೂ 10 ಮೆಗಾಪಿಕ್ಸೆಲ್ ಸಾಮರ್ಥ್ಯದ ಮುಂಭಾಗದ ಸ್ಕ್ರೀನ್‌ನಲ್ಲಿರುವ (ಮಡಚಿದಾಗ ಕಾಣಿಸುವ) ಲೆನ್ಸ್ ಸೆಲ್ಫಿ ಮತ್ತು ವಿಡಿಯೊ ಕರೆಗಳಿಗೆ ಬಳಸಬಹುದು. ಪ್ರಧಾನ ಕ್ಯಾಮೆರಾ ಸೆಟಪ್‌ನಲ್ಲಿ ಆಪ್ಟಿಕಲ್ ಇಮೇಜ್ ಸ್ಟೆಬಿಲೈಸೇಶನ್ ವೈಶಿಷ್ಟ್ಯವಿರುವುದರಿಂದ ಚಿತ್ರ ಅಥವಾ ವಿಡಿಯೊ ಶೇಕ್ ಆಗದೆ ಸ್ಥಿರತೆ ಕಾಯ್ದುಕೊಳ್ಳುವಲ್ಲಿ ಅನುಕೂಲಕರವಾಗಿದೆ. ಬಣ್ಣಗಳ ಸ್ಪಷ್ಟತೆ, ಚಿತ್ರದ ನಿಖರತೆ ಸ್ಯಾಮ್‌ಸಂಗ್‌ನ ಪ್ರಮುಖ ವೈಶಿಷ್ಟ್ಯವಾಗಿದ್ದು, 8ಕೆ ಸಾಮರ್ಥ್ಯದ ವಿಡಿಯೊ ರೆಕಾರ್ಡಿಂಗ್ ಮಾಡಬಹುದಾಗಿದೆ.

ಬ್ಯಾಟರಿ: ಪೂರ್ಣ ಪರದೆಯಲ್ಲಿ ಹಾಗೂ ಮಲ್ಟಿಟಾಸ್ಕಿಂಗ್ ಮಾಡುತ್ತಲೇ, ಒಂದು ದಿನ ಪೂರ್ತಿ ಬ್ಯಾಟರಿ ಚಾರ್ಜ್ ಲಭ್ಯವಾಗಿರುವುದು ವಿಶೇಷ. 4,440 mAh ಸಾಮರ್ಥ್ಯದ ಬ್ಯಾಟರಿಯಿದ್ದರೂ, 5000mAh ಬ್ಯಾಟರಿಯ ಸಾಧನಗಳಿಗಿಂತ ಚೆನ್ನಾಗಿ ಕೆಲಸ ಮಾಡುತ್ತದೆ.

ಬೆಲೆ: 256ಜಿಬಿ ಆವೃತ್ತಿಗೆ ₹1,54,999; 512ಜಿಬಿ ಸಾಧನಕ್ಕೆ ₹1,64,999 ಹಾಗೂ 1ಟಿಬಿ ಆವೃತ್ತಿಗೆ ₹1,84,999.

4 ಬಾರಿ ಕಾರ್ಯಾಚರಣಾ ವ್ಯವಸ್ಥೆಯ ಅಪ್‌ಗ್ರೇಡ್ ನೀಡುವುದಾಗಿ ಕಂಪನಿ ಭರವಸೆ ನೀಡಿದೆ. ಒಟ್ಟಿನಲ್ಲಿ, ಬೆಲೆ ಮತ್ತು ತೂಕ ಜೇಬಿಗೆ ಭಾರ ಅನ್ನಿಸಿದರೂ, ಮಿನಿ ಕಂಪ್ಯೂಟರಿನಂತಿರುವ ಗುಣಮಟ್ಟದ ಸ್ಮಾರ್ಟ್ ಫೋನ್ ಬೇಕು ಅನ್ನಿಸುವವರಿಗೆ ಇದು ಸೂಕ್ತವಾಗಬಹುದು.

ಸ್ಯಾಮ್‌ಸಂಗ್ ಗ್ಯಾಲಕ್ಸಿ ಫ್ಲಿಪ್ 5



ಸ್ಯಾಮ್‌ಸಂಗ್ ಗ್ಯಾಲಕ್ಸಿ ಝಡ್ ಫ್ಲಿಪ್ 5: ಲಂಬವಾಗಿ ಮಡಚಬಲ್ಲ ಸ್ಟೈಲಿಶ್ ಫೋನ್

ನ್ಯಾಸ, ಸ್ಕ್ರೀನ್: ಕಳೆದ ವರ್ಷದ ಫ್ಲಿಪ್ 4 ಆವೃತ್ತಿಗೆ ಹೋಲಿಸಿದರೆ ಫ್ಲಿಪ್ 5ರಲ್ಲಿ ಮುಚ್ಚಿದಾಗ ಕವರ್ ಡಿಸ್‌ಪ್ಲೇ ದೊಡ್ಡದಾಗಿದೆ. 3.4 ಇಂಚು ಸೂಪರ್ ಅಮೋಲೆಡ್ ಡಿಸ್‌ಪ್ಲೇ ಹಾಗೂ 60Hz ರಿಫ್ರೆಶ್ ರೇಟ್ ಇರುವ ಕವರ್ ಡಿಸ್‌ಪ್ಲೇ (ಮಡಚಿದಾಗ) ಮತ್ತು ತೆರೆದಾಗ 6.7 ಇಂಚಿನ ಸೂಪರ್ ಅಮೋಲೆಡ್, 120Hz ರಿಫ್ರೆಶ್ ರೇಟ್ ಇರುವ ಸ್ಕ್ರೀನ್ ಇಲ್ಲಿದೆ. ಕಳೆದ ಆವೃತ್ತಿಯಲ್ಲಿ ಕವರ್ ಡಿಸ್‌ಪ್ಲೇ ಗಾತ್ರ ಕೇವಲ 1.9 ಇಂಚು ಇತ್ತು. ನೋಟದಲ್ಲಿ ಕಂಪ್ಯೂಟರಿನ ಫೋಲ್ಡರ್ ಐಕಾನ್ ರೀತಿ ಕಾಣಿಸುತ್ತದೆ. ಇದನ್ನು ಫ್ಲೆಕ್ಸ್ ವಿಂಡೋ ಎಂದು ಸ್ಯಾಮ್‌ಸಂಗ್ ಕರೆದಿದೆ. ವಾಚ್ ಫೇಸ್‌ಗಳ ರೀತಿಯಲ್ಲಿ ಕಾರ್ಡ್ ಮಾದರಿಯ ಸ್ಕ್ರೀನ್ ಲೇಔಟ್‌ಗಳನ್ನು ಒದಗಿಸಲಾಗಿದೆ. ಮಡಚಿದ್ದ ಸ್ಥಿತಿಯಲ್ಲಿಯೇ ಸ್ವೈಪ್ ಮಾಡುತ್ತಾ ನಮಗೆ ಬೇಕಾದ ಆ್ಯಪ್ ನೋಡಬಹುದಾಗಿದೆ. ತಕ್ಷಣ ವೀಕ್ಷಣೆಗಾಗಿ ಬೇಕಾಗಿರುವ ಆ್ಯಪ್‌ಗಳನ್ನು ಸೇರಿಸಬಹುದು ಅಥವಾ ತೆಗೆಯಬಹುದಾಗಿದೆ.

ಕ್ಯಾಮೆರಾ: 12 ಮೆಗಾಪಿಕ್ಸೆಲ್ ಸಾಮರ್ಥ್ಯದ ಪ್ರಧಾನ ಕ್ಯಾಮೆರಾ ಹಾಗೂ 12 MP ಸಾಮರ್ಥ್ಯದ ಅಲ್ಟ್ರಾ ವೈಡ್ ಕ್ಯಾಮೆರಾ ಸೆನ್ಸರ್ ಇದ್ದು, 10MP ಸೆಲ್ಫಿ ಕ್ಯಾಮೆರಾ ಇದೆ. ವಿಶೇಷವೆಂದರೆ, ಮಡಚಿದ ಸಂದರ್ಭದಲ್ಲಿ ಪ್ರಧಾನ ಕ್ಯಾಮೆರಾವನ್ನೇ ಸೆಲ್ಫಿ ಕ್ಯಾಮೆರಾ ಆಗಿ ಬಳಸಬಹುದು. ಪ್ರಧಾನ ಕ್ಯಾಮೆರಾದಲ್ಲೇ ಸೆಲ್ಫಿ ತೆಗೆಯುವುದು ಮತ್ತಷ್ಟು ಸುಲಭವಾಗಿದೆ. ಸೆರೆಹಿಡಿದ ಚಿತ್ರ ಮತ್ತು ವಿಡಿಯೊಗಳ ಗುಣಮಟ್ಟವೂ ಶಾರ್ಪ್ ಚೆನ್ನಾಗಿದೆ.

ಕಾರ್ಯಾಚರಣೆ: ತೆರೆದ ಸ್ಕ್ರೀನ್‌ನಲ್ಲಿ ಕಾರ್ಯಾಚರಣೆ ಸುಲಲಿತವಾಗಿದೆ. ಯಾವುದೇ ಗೇಮ್ ಆಡುವಾಗ ಅಥವಾ ವಿಡಿಯೊ ಪ್ಲೇ ಮಾಡುವಾಗ ವಿಳಂಬದ (ಲ್ಯಾಗಿಂಗ್) ಅನುಭವ ಬಂದಿಲ್ಲ. ಮುಚ್ಚಿರುವಾಗ, ಫ್ಲೆಕ್ಸ್ ವಿಂಡೋದಲ್ಲಿನ ನೋಟಿಫಿಕೇಶನ್ ಕೇವಲ ನೋಡುವುದಷ್ಟೇ ಸಾಧ್ಯ, ಕ್ಯಾಮೆರಾವನ್ನು ಈ ವಿಂಡೋದಿಂದಲೇ ನಿಭಾಯಿಸಬಹುದು; ವಿಡಿಯೊ, ಫೋಟೊ ಹಾಗೂ ಪೋರ್ಟ್ರೇಟ್ ಫೋಟೊಗಳನ್ನು ಸೆಲ್ಫೀ ರೂಪದಲ್ಲಿ ತೆಗೆಯಬಹುದಾಗಿದೆ.

ಬ್ಯಾಟರಿ: 3700mAh ಬ್ಯಾಟರಿ ಇದ್ದು, 25W ವೇಗದ ಚಾರ್ಜಿಂಗನ್ನು ಬೆಂಬಲಿಸಬಲ್ಲುದು. 15W ವೈರ್‌ಲೆಸ್ ಚಾರ್ಜಿಂಗ್‌ನ್ನು ಕೂಡ ಇದು ಬೆಂಬಲಿಸುತ್ತದೆ. ಸಾಮಾನ್ಯ ಕೆಲಸ ಕಾರ್ಯಗಳ ನಿಭಾವಣೆಯ ಸಂದರ್ಭದಲ್ಲಿ ಇಪ್ಪತ್ತನಾಲ್ಕು ಗಂಟೆಗಳ ಕಾಲದ ಬ್ಯಾಟರಿ ಚಾರ್ಜ್‌ಗೆ ಸಮಸ್ಯೆಯಾಗಿಲ್ಲ.

ಸ್ಯಾಮ್‌ಸಂಗ್ ಗ್ಯಾಲಕ್ಸಿ ಝಡ್ ಫ್ಲಿಪ್ 5 ಬೆಲೆ 256ಜಿಬಿ ಆವೃತ್ತಿಗೆ ₹99,999 ಹಾಗೂ 512ಜಿಬಿ ಆವೃತ್ತಿಗೆ ₹1,09,999. ಇದು ಜೇಬಿನಲ್ಲಿ ಸುಲಭವಾಗಿ ಕೂರಬಹುದಾದ, ಆಕರ್ಷಕ ನೋಟದ ಮಡಚುವ ಫೋನ್. ವಿನೂತನತೆ ಇಷ್ಟಪಡುವವರಿಗೆ ಇದು ಸೂಕ್ತವಾಗಬಹುದು. ❖

ಕನ್ನಡ ಮತ್ತು ಇತರ ಭಾರತೀಯ ಭಾಷಾ ಶಿಕ್ಷಣವನ್ನು ವಿರೋಧಿಸುತ್ತದೆಯೇ? ಎಂದ ಕೇಂದ್ರ ಶಿಕ್ಷಣ ಸಚಿವ

ಎನ್‌ಇಪಿ ರದ್ದತಿ: ಡಿಕೆಶಿಗೆ ಪ್ರಧಾನ್ 8 ಪ್ರಶ್ನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರ ರೂಪಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)ಯನ್ನು ರದ್ದುಗೊಳಿಸಿ, ರಾಜ್ಯ ಶಿಕ್ಷಣ ನೀತಿ ಜಾರಿಗೆ ತರಲು ಸಮಿತಿ ರಚಿಸುವ ತೀರ್ಮಾನ ಕೈಗೊಂಡಿರುವ ರಾಜ್ಯದ ಕ್ರಮವನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಆಕ್ಷೇಪಿಸಿದ್ದಾರೆ.


ಧರ್ಮೇಂದ್ರ ಪ್ರಧಾನ್

ಎನ್‌ಇಪಿ ರದ್ದುಗೊಳಿಸುವ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಸೋಮವಾರ ಪೋಸ್ಟ್ ಪ್ರಕಟಿಸಿದ್ದರು. ಈ ಹಿನ್ನೆಲೆಯಲ್ಲಿ 8 ಪ್ರಶ್ನೆಗಳಿರುವ ವಿಡಿಯೊ ಹೇಳಿಕೆಯನ್ನು ಧರ್ಮೇಂದ್ರ ಪ್ರಧಾನ್ ಬಿಡುಗಡೆ ಮಾಡಿದ್ದಾರೆ.

ಎನ್‌ಇಪಿ ರದ್ದತಿ ಕುರಿತ ಅಸಂಬದ್ಧ ಹೇಳಿಕೆಗಳು ದೆಹಲಿಯಲ್ಲಿರುವ ಅವರ (ರಾಜ್ಯ ಕಾಂಗ್ರೆಸ್ ನಾಯಕರ) ರಾಜಕೀಯ ಯಜಮಾನರನ್ನು ಮೆಚ್ಚಿಸಬಹುದು. ಆದರೆ, ಕರ್ನಾಟಕದ ವಿದ್ಯಾರ್ಥಿಗಳ ಹಿತಾಸಕ್ತಿಗಳಿಗೆ ಧಕ್ಕೆ ತರುತ್ತವೆ ಎಂದು ಎಚ್ಚರಿಸಿದ್ದಾರೆ.

ಎನ್‌ಇಪಿ ಜಾರಿಗೊಳಿಸಿದ ದೇಶದ ಮೊದಲ ರಾಜ್ಯ ಕರ್ನಾಟಕ. ಸಚಿವ ಪ್ರಧಾನ್ ಆಗಸ್ಟ್ 2021 ರಲ್ಲಿ ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಎನ್‌ಇಪಿಯನ್ನು ಅನುಷ್ಠಾನಕ್ಕೆ ತಂದಿದ್ದರು.

ಡಿ.ಕೆ.ಶಿವಕುಮಾರ್ ಹೇಳಿದ್ದು ಏನು?


ಡಿ.ಕೆ ಶಿವಕುಮಾರ್

ಎನ್‌ಇಪಿ ರದ್ದತಿಗೆ ಸಂಬಂಧಿಸಿದಂತೆ ಸೋಮವಾರ ಎಕ್ಸ್‌ನಲ್ಲಿ ಪೋಸ್ಟ್ ಪ್ರಕಟಿಸಿದ್ದ ಡಿಸಿಎಂ ಡಿ.ಕೆ ಶಿವ ಕುಮಾರ್, 'ಕರ್ನಾಟಕದಲ್ಲೇ ಮೊದಲು ಎನ್‌ಇಪಿ ಜಾರಿ ಮಾಡುವ ತರಾತುರಿ ಏನಿದೆ? ಗುಜರಾತ್, ಉತ್ತರ ಪ್ರದೇಶದಲ್ಲಿ ಏಕೆ ಎನ್‌ಇಪಿ ಜಾರಿ ಮಾಡಿಲ್ಲ. ಕರ್ನಾಟಕ ದಲ್ಲಿರುವ ಶಿಕ್ಷಣ ವ್ಯವಸ್ಥೆ ದೇಶಕ್ಕೇ ಮಾದರಿಯಾಗಿದೆ. ಅದರಿಂದಾಗಿಯೇ ಇಂದು ಬೆಂಗಳೂರು ಐಟಿ ರಾಜಧಾನಿ ಯಾಗಿರುವುದು. ರಾಜ್ಯದಲ್ಲಿನ ಅದೆಷ್ಟೋ ಜನ ವಿದೇಶದಲ್ಲಿ ಒಳ್ಳೆಯ ಸ್ಥಾನದಲ್ಲಿದ್ದಾರೆ. ಅದಕ್ಕೂ ನಮ್ಮ ಶಿಕ್ಷಣ ವ್ಯವಸ್ಥೆಯೇ ಕಾರಣ. ನಮ್ಮ ರಾಜ್ಯದಲ್ಲಿ ಎನ್‌ಇಪಿ ಇನ್ನು ಮುಂದಕ್ಕೆ ಅನ್ವಯಿಸುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ನಾವು ಪ್ರತ್ಯೇಕವಾಗಿ ಸಮಿತಿಯನ್ನು ರಚಿಸುತ್ತೇವೆ' ಎಂದಿದ್ದರು.

ಏನವು ಪ್ರಶ್ನೆಗಳು?

1. ಕರ್ನಾಟಕದಲ್ಲಿರುವ ಕಾಂಗ್ರೆಸ್ ಸರ್ಕಾರ ಕನ್ನಡ ಮತ್ತು ಇತರ ಭಾರತೀಯ ಭಾಷಾ ಶಿಕ್ಷಣವನ್ನು ವಿರೋಧಿಸುತ್ತದೆಯೇ?
2. ಎನ್‌ಇಪಿಯು ಈ ದೇಶದ ಶಿಕ್ಷಣತಜ್ಞರು ರೂಪಿಸಿದ ದಾರ್ಶನಿಕ, ತಾತ್ವಿಕ ದಾಖಲೆಯಾಗಿದೆ; ಇದು ರಾಜಕೀಯ ದಾಖಲೆಯಲ್ಲ. ಇದನ್ನು ರದ್ದು ಮಾಡಿ ಕಾಂಗ್ರೆಸ್ ನಾಯಕರು ದೇಶದ ಯುವ ಜನತೆಗೆ, ಅದರಲ್ಲೂ ಕರ್ನಾಟಕದ ವಿದ್ಯಾರ್ಥಿಗಳಿಗೆ ಏನು ಸಂದೇಶ ನೀಡಲು ಬಯಸಿದ್ದಾರೆ?
3. ಔಪಚಾರಿಕ ಶಿಕ್ಷಣದ ಭಾಗವಾಗಿರುವ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು ಕಾಂಗ್ರೆಸ್ ಪಕ್ಷ ವಿರೋಧಿಸುತ್ತದೆಯೇ?
4. ನಮ್ಮ ಮಕ್ಕಳು 2ನೇ ತರಗತಿ ಪೂರ್ಣ ಗೊಳಿಸುವ ಹೊತ್ತಿಗೆ ಸಾಕ್ಷರತೆ ಮತ್ತು ಗಣಿತದ ಪರಿಣತಿ ಸಾಧಿಸಬೇಕೆಂದು ಅವರು ಬಯಸುವುದಿಲ್ಲವೇ?
5. ಸ್ಥಳೀಯ ಆಟಿಕೆಗಳು, ಆಟಗಳು ಮತ್ತು ಆಟದ ಆಧಾರಿತ ಕಲಿಕೆಯನ್ನು ಕಾಂಗ್ರೆಸ್ ವಿರೋಧಿಸುತ್ತದೆಯೇ? ಕರ್ನಾಟಕದಲ್ಲಿ 'ಚೆನ್ನೆಮಣೆ' ಯನ್ನು ಕಾಂಗ್ರೆಸ್ ನಾಯಕರು ವಿರೋಧಿಸುತ್ತಾರೆಯೇ?
6. ನೀಟ್, ಸಿಯುಇಟಿ, ಜೆಇಇ ರೀತಿಯ ಪರೀಕ್ಷೆಗಳನ್ನು ಸ್ಥಳೀಯ ಭಾಷೆಗಳಲ್ಲಿ ನಡೆಸುವುದನ್ನು ಅವರು ಬಯಸುವುದಿಲ್ಲವೇ ?
7. ರಾಷ್ಟ್ರೀಯ ಸಂಶೋಧನಾ ಪ್ರತಿ ಷ್ಠಾನದ ಮೂಲಕ ಕರ್ನಾಟಕದ ಯುವಕರು ವಿಶ್ವದರ್ಜೆಯ ಸಂಶೋಧನಾ ಸೌಲಭ್ಯಗಳನ್ನು ಪಡೆಯುವುದನ್ನು ಶಿವಕುಮಾರ್ ಬಯಸುವುದಿಲ್ಲವೇ ಅಥವಾ ಈ ಶತಮಾನದ ಹೊಸ, ಅತ್ಯಾಧುನಿಕ ತಂತ್ರಜ್ಞಾನಗಳ ಬಗ್ಗೆ ವಿದ್ಯಾರ್ಥಿಗಳು ಕಲಿಯಲು ಅವರು ಬಯಸುವುದಿಲ್ಲವೇ?
8. 21ನೇ ಶತಮಾನದ ಶಿಕ್ಷಣಕ್ಕೆ ಸಂಬಂಧಿಸಿದ ಹೊಸ ಪಠ್ಯಪುಸ್ತಕಗಳನ್ನು ಅವರು ಬಯಸುವುದಿಲ್ಲವೇ?

ಸಾಹಿತಿಗಳಿಗೆ ಭದ್ರತೆ ಒದಗಿಸಲು ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆದರಿಕೆ ಎದುರಿಸುತ್ತಿರುವ ಸಾಹಿತಿಗಳು ಮತ್ತು ಚಿಂತಕರಿಗೆ ಅಗತ್ಯ ಭದ್ರತೆ ಒದಗಿಸಲು ರಾಜ್ಯ ಸರ್ಕಾರ ಸಿದ್ಧವಿದೆ. ಸಾಹಿತಿಗಳು ಬಯಸಿದರೆ ರಕ್ಷಣೆ ಒದಗಿಸಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಕೆ. ಮರುಳಸಿದ್ದಪ್ಪ ನೇತೃತ್ವದಲ್ಲಿ ಮಂಗಳವಾರ ಪರಮೇಶ್ವರ ಅವರನ್ನು ಭೇಟಿಮಾಡಿದ ಸಾಹಿತಿಗಳು, ನಿರಂತರವಾಗಿ ಬೆದರಿಕೆ ಕರೆಗಳು ಮತ್ತು ಪತ್ರಗಳು ಬರುತ್ತಿರುವ ಕುರಿತು ಮಾಹಿತಿ ನೀಡಿದರು. ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಗೃಹ ಸಚಿವರು, 'ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಕಾರಣದಿಂದ ರಾಜ್ಯದಲ್ಲಿ ಗೌರಿ ಲಂಕೇಶ್ ಮತ್ತು ಎಂ.ಎಂ. ಕಲಬುರ್ಗಿ ಅವರ ಕೊಲೆಗಳಾಗಿವೆ. ಈಗಲೂ ಹಲವು ಸಾಹಿತಿಗಳಿಗೆ ಬೆದರಿಕೆ ಇರುವುದು ನಮ್ಮ ಗಮನಕ್ಕೆ ಬಂದಿದೆ. ಈ ಬಗ್ಗೆ ಹಿರಿಯ ಪೊಲೀಸ್ ಅಧಿಕಾರಿಗಳಿಂದ ತನಿಖೆ ನಡೆಸಲಾಗುವುದು' ಎಂದರು.

ಸಾಹಿತಿಗಳ ಮನವಿ ಪತ್ರವನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ನೀಡಲಾಗಿದೆ. ಅವರು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತಾರೆ. ಇಬ್ಬರು ಸಾಹಿತಿಗಳಿಗೆ ಪೊಲೀಸ್ ಭದ್ರತೆಯನ್ನು ಈಗಾಗಲೇ ಒದಗಿಸಲಾಗಿದೆ. ಇನ್ನು ಯಾವುದೇ ಸಾಹಿತಿಗಳು ಕೋರಿಕೆ ಸಲ್ಲಿಸಿದರೆ ವೈಯಕ್ತಿಕ ಭದ್ರತೆ ಒದಗಿಸಲಾಗುವುದು ಎಂದು ತಿಳಿಸಿದರು.

ಮರುಳಸಿದ್ದಪ್ಪ ಮಾತನಾಡಿ, 'ಬಿಜೆಪಿಯ ಅಪಾಯಕಾರಿ ನಡೆಯನ್ನು ಟೀಕಿಸಿದ್ದೇವೆ. ಇದರಿಂದ ಬಿಜೆಪಿಯವರಿಗೆ ಆತಂಕವಾಗಿದೆ. ಗೌರಿ ಲಂಕೇಶ್ ಕೊಲೆ ಏಕೆ ನಡೆದಿದೆ ಎಂಬುದು ಗೊತ್ತಿದೆ. ಅದೇ ಗುಂಪು ನಮ್ಮನ್ನು ಬೆದರಿಸುತ್ತಿದೆ. ಆ ಗುಂಪನ್ನು ಪತ್ತೆಹಚ್ಚಬೇಕು' ಎಂದರು.

ಎಸ್.ಜಿ. ಸಿದ್ದರಾಮಯ್ಯ, ಬಂಜಗೆರೆ ಜಯಪ್ರಕಾಶ್, ಜಿ. ರಾಮಕೃಷ್ಣ, ಎಲ್. ಎನ್. ಮುಕುಂದರಾಜ್, ಜಾಣಗೆರೆ ವೆಂಕಟರಾಮಯ್ಯ ಸೇರಿದಂತೆ ಹಲವು ಸಾಹಿತಿಗಳು ನಿಯೋಗದಲ್ಲಿದ್ದರು. ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಕೂಡ ಸಭೆಯಲ್ಲಿದ್ದರು.

ಎನ್‌ಇಪಿ: ಚರ್ಚೆಗೆ ಬಿಜೆಪಿ ಪಂಥಾಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಹಿಂಪಡೆದು 'ಸೋನಿಯಾ ಗಾಂಧಿ ಶಿಕ್ಷಣ ನೀತಿ (ಎಸ್‌ಇಪಿ)' ರೂಪಿಸಲು ಮುಂದಾಗಿರುವ ಕಾಂಗ್ರೆಸ್ ಸರ್ಕಾರ ಎನ್‌ಇಪಿ ಕುರಿತು ಸಾರ್ವಜನಿಕ ವೇದಿಕೆಯಲ್ಲಿ ಬಹಿರಂಗ ಚರ್ಚೆ ಆಯೋಜಿಸಬೇಕು ಎಂದು ಬಿಜೆಪಿ ನಾಯಕರು ಪಂಥಾಹ್ವಾನ ನೀಡಿದರು.


ಶಿಕ್ಷಣ ತಜ್ಞರ ಸಮಾವೇಶದಲ್ಲಿ ಬಿಜೆಪಿ ಶಾಸಕರಾದ ಬಸವರಾಜ ಬೊಮ್ಮಾಯಿ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಮುಖಂಡರಾದ ಸಿ.ಟಿ.ರವಿ, ವಿಶ್ವೇಶ್ವರ ಹೆಗಡೆ ಕಾಗೇರಿ, ಬಿ.ಸಿ.ನಾಗೇಶ್ ಮತ್ತಿತರರು ಭಾಗವಹಿಸಿದ್ದರು

ನಗರದಲ್ಲಿ ಮಂಗಳವಾರ ಪೀಪಲ್ಸ್ ಫೋರಂ ಫಾರ್ ಕರ್ನಾಟಕ ಎಜುಕೇಶನ್ ಆಯೋಜಿಸಿದ್ದ ಶಿಕ್ಷಣ ತಜ್ಞರ ಸಮಾವೇಶದಲ್ಲಿ ಮಾತನಾಡಿದ ಶಾಸಕರಾದ ಬಸವರಾಜ ಬೊಮ್ಮಾಯಿ, ಡಾ. ಸಿ.ಎನ್.ಅಶ್ವತ್ಥನಾರಾಯಣ ಸೇರಿದಂತೆ ಹಲವು ಬಿಜೆಪಿ ಮುಖಂಡರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎನ್‌ಇಪಿ ಕುರಿತು ಬಹಿರಂಗ ಚರ್ಚೆ ಆಯೋಜಿಸುವಂತೆ ಸವಾಲು ಹಾಕಿದರು.

ಬಸವರಾಜ ಬೊಮ್ಮಾಯಿ ಮಾತನಾಡಿ, ಸೋನಿಯಾ ಗಾಂಧಿ ಇಟಲಿಯಿಂದ ಬಂದಂತೆ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಮೆಕಾಲೆ ಶಿಕ್ಷಣ ವ್ಯವಸ್ಥೆಯನ್ನು ಪುನರ್‌ಸ್ಥಾಪಿಸಲು ಹೊರಟಿದೆ. ಪ್ರಗತಿಪರರು ಈ ರಾಜ್ಯದ ಶಿಕ್ಷಣ ವ್ಯವಸ್ಥೆಯನ್ನು ಹಿಂದಕ್ಕೆ ಕಳುಹಿಸುತ್ತಿದ್ದಾರೆ. ಹಾಗಾಗಿ, ಎನ್‌ಇಪಿ ರದ್ದುಗೊಳಿಸಿದರೆ ಜನಾಂದೋಲನವೇ ನಡೆಯಲಿದೆ ಎಂದರು.

ಬಿಜೆಪಿ ಜಾರಿಗೆ ತಂದಿದೆ ಎನ್ನುವ ಒಂದೇ ಕಾರಣಕ್ಕೆ ಎನ್‌ಇಪಿ ರದ್ದು ಮಾಡುತ್ತಿದ್ದಾರೆ. ವಿಧಾನಸೌಧದಲ್ಲಿ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳನ್ನು ಕೂರಿಸಿಕೊಂಡು ಸಭೆ ನಡೆಸಿದ ಮುಖ್ಯಮಂತ್ರಿ, ಈ ಬಗ್ಗೆ ಚರ್ಚೆ ಮಾಡದೇ ಇಂತಹ ನಿರ್ಧಾರಕ್ಕೆ ಬಂದಿದ್ದಾರೆ. ಅದನ್ನು ಯಾವ ಕುಲಪತಿಯೂ ಪ್ರಶ್ನೆ ಮಾಡದೆ ಎದ್ದು ಬಂದಿದ್ದು ವಿಪರ್ಯಾಸ. ಅವರ ಸುತ್ತಲೂ ಇರುವವರು ದಾರಿ ತಪ್ಪಿಸುತ್ತಿದ್ದಾರೆ ಎಂದು ಬೊಮ್ಮಾಯಿ ದೂರಿದರು.

ಮಾಜಿ ಕುಲಪತಿಗಳ ಬೆಂಬಲ

ರಾಷ್ಟ್ರೀಯ ಶಿಕ್ಷಣ ನೀತಿಯನ್ನು ವಿವಿಧ ವಿಶ್ವವಿದ್ಯಾಲಯಗಳ ಮಾಜಿ ಕುಲಪತಿಗಳು ಬೆಂಬಲಿಸಿದರು.

ಬಿ.ತಿಮ್ಮೇಗೌಡ, ಮಲ್ಲೇಪುರಂ ಜಿ.ವೆಂಕಟೇಶ್, ಕೆ.ಆರ್.ವೇಣುಗೋಪಾಲ್, ಮೀನಾ ಚಂದಾವರ್ಕರ್, ಕರಿಸಿದ್ದಪ್ಪ ಮತ್ತಿತರರು ಸಮಾವೇಶದಲ್ಲಿ ಭಾಗವಹಿಸಿ, ಎನ್‌ಇಪಿ ಪರ ಧ್ವನಿ ಎತ್ತಿದರು. ರಾಜ್ಯ ಸರ್ಕಾರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪುನರ್ ಅವಲೋಕಿಸಬೇಕು. ಒಳ್ಳೆಯ ಅಂಶಗಳನ್ನು ಉಳಿಸಿಕೊಳ್ಳಬೇಕು ಆದರೆ, ರಾಜಕೀಯ ಕಾರಣಗಳಿಗಾಗಿ ರದ್ದು ಪಡಿಸುವುದು ಸರಿಯಲ್ಲ ಎಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳ ವಿಕಾಸಕ್ಕೆ ಪೂರಕವಾದ ಅಂಶಗಳನ್ನು ಎನ್‌ಇಪಿ ಒಳಗೊಂಡಿದೆ. ಬೇರೆ ರಾಜ್ಯ, ದೇಶಗಳ ಶಿಕ್ಷಣ ವ್ಯವಸ್ಥೆಯ ಜತೆ ಸ್ಪರ್ಧಿಸಲು ವೇದಿಕೆ ಒದಗಿಸುತ್ತದೆ
ಅನುರಾಗ್ ಬೆಹರ್
ಕುಲಪತಿ, ಅಜೀಂ ಪ್ರೇಮ್‌ಜಿ ವಿ.ವಿ.

ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜಕೀಯ ಪ್ರತಿಷ್ಠೆಯಾಗಿ ನೋಡದೇ, ವಿದ್ಯಾರ್ಥಿಗಳ ಹಿತಾಸಕ್ತಿ ಆಧಾರದಲ್ಲಿ ಪುನರ್ ವಿಮರ್ಶೆ ಮಾಡಬೇಕು
ಬಿ.ತಿಮ್ಮೇಗೌಡ, ಮಾಜಿ ಉಪಾಧ್ಯಕ್ಷ, ರಾಜ್ಯ ಉನ್ನತ ಶಿಕ್ಷಣ ಪರಿಷತ್

ಲೋಕಾಯುಕ್ತ ಪೊಲೀಸರಿಂದ ಕೆ.ಟಿ. ಶ್ರೀನಿವಾಸಮೂರ್ತಿ ಬಂಧನ

ಸರ್ವೆ ಅಧೀಕ್ಷಕ 5 ಮದ್ಯದಂಗಡಿ ಒಡೆಯ!

ಪ್ರಜಾವಾಣಿ ವಾರ್ತೆ


ಕೆ.ಟಿ. ಶ್ರೀನಿವಾಸ ಮೂರ್ತಿ

ಬೆಂಗಳೂರು: ಬೆಂಗಳೂರ ಪೂರ್ವ (ಕೆ.ಆರ್. ಪುರ) ತಾಲ್ಲೂಕಿನ ಭೂ ಮಾಪನ ಇಲಾಖೆ ಅಧೀಕ್ಷಕ ಕೆ.ಟಿ. ಶ್ರೀನಿವಾಸಮೂರ್ತಿ ಐದು ಮದ್ಯದಂಗಡಿ ಒಡೆತನ ಹೊಂದಿರುವುದನ್ನು ಲೋಕಾಯುಕ್ತ ಪೊಲೀಸರು ಪತ್ತೆಹಚ್ಚಿದ್ದಾರೆ.

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಮೇಲೆ ಈ ಅಧಿಕಾರಿ ವಿರುದ್ಧ ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ಘಟಕದಲ್ಲಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಲಾಗಿದೆ. ಬೆಂಗಳೂರು ಮತ್ತು ತುಮಕೂರಿನಲ್ಲಿ ಆರೋಪಿಗೆ ಸಂಬಂಧಿಸಿದ 14 ಸ್ಥಳಗಳ ಮೇಲೆ ಮಂಗಳವಾರ ಬೆಳಿಗ್ಗೆ ಏಕಕಾಲದಲ್ಲಿ ಶೋಧ ನಡೆಸಲಾಗಿದೆ.

ಬೆಂಗಳೂರು ಮತ್ತು ತುಮಕೂರಿನಲ್ಲಿ ಆರೋಪಿಯ ಪತ್ನಿ, ಸಹೋದರ ಮತ್ತು ಸಹೋದರಿ ಹೆಸರಿನಲ್ಲಿ ಐದು ಮದ್ಯದಂಗಡಿಗಳನ್ನು ಹೊಂದಿರುವುದು ತನಿಖೆ ವೇಳೆ ಪತ್ತೆಯಾಗಿದೆ. ಇನ್ನೂ ಏಳು ಮದ್ಯದಂಗಡಿಗಳನ್ನು ಬೇನಾಮಿಯಾಗಿ ಹೊಂದಿರುವ ಕುರಿತು ಶೋಧದ ಬಳಿಕ ಮಾಹಿತಿ ಲಭ್ಯವಾಗಿದೆ. ಈ ಬಗ್ಗೆ ತನಿಖೆ ಮುಂದುವರಿಸಲಾಗಿದೆ ಎಂದು ಲೋಕಾಯುಕ್ತದ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಶ್ರೀನಿವಾಸಮೂರ್ತಿ ಬೆಂಗಳೂರಿನ ಅಂದ್ರಹಳ್ಳಿ, ಹೆಣ್ಣೂರು ಮತ್ತು ಕೊತ್ತನೂರಿನಲ್ಲಿ ತಲಾ ಎರಡು ನಿವೇಶನ ಹಾಗೂ ಎರಡು ಮನೆಗಳನ್ನು ಹೊಂದಿರುವುದನ್ನು ತನಿಖಾ ತಂಡ ಪತ್ತೆಮಾಡಿದೆ. ಕುಟುಂಬದ ಸದಸ್ಯರು ಮತ್ತು ಸಂಬಂಧಿಕರ ಹೆಸರಿನಲ್ಲಿ ಇನ್ನೂ ಕೆಲವೆಡೆ ಬೇನಾಮಿ ಆಸ್ತಿ ಹೊಂದಿರುವ ಸುಳಿವು ಲಭಿಸಿದ್ದು, ಶೋಧ ಮುಂದುವರಿಸಲಾಗಿದೆ ಎಂದು ಮೂಲಗಳು ಹೇಳಿವೆ.

ನೆಲಮಂಗಲ ಸಮೀಪದ ಲಕ್ಕೇನಹಳ್ಳಿಯಲ್ಲಿ ಶ್ರೀನಿವಾಸಮೂರ್ತಿ ಬೃಹತ್ ಬಂಗಲೆಯೊಂದನ್ನು ಇತ್ತೀಚೆಗಷ್ಟೇ ನಿರ್ಮಿಸಿದ್ದರು. ಅಲ್ಲಿಯೂ ಶೋಧ ನಡೆಸಲಾಗಿದೆ. ಸಂಜೆಯವರೆಗೂ ನಡೆದ ಕಾರ್ಯಾಚರಣೆಯಲ್ಲಿ ಆರೋಪಿ ಬಳಿ ಒಟ್ಟು ₹4.39 ಕೋಟಿ ಮೌಲ್ಯದ ಆಸ್ತಿಗಳನ್ನು ಪತ್ತೆಮಾಡಲಾಗಿದೆ.

ತನಿಖೆಗೆ ಅಸಹಕಾರ: ದಾಳಿಯ ಸಂದರ್ಭದಲ್ಲಿ ಶ್ರೀನಿವಾಸಮೂರ್ತಿ ಮನೆಯಲ್ಲೇ ಇದ್ದರು. ಆಸ್ತಿಗಳ ಒಡೆತನ, ಹಣಕಾಸು ವಹಿವಾಟಿಗೆ ಸಂಬಂಧಿಸಿದಂತೆ ಆರೋಪಿ ಹಾಗೂ ಅವರ ಕುಟುಂಬದವರು ತನಿಖೆಗೆ ಸಹಕಾರ ನೀಡಿಲ್ಲ. ತನಿಖಾ ತಂಡವು ಕಲೆಹಾಕಿರುವ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸದೇ ಸತಾಯಿಸಿದರು. ಯಾವ ಪ್ರಶ್ನೆಗೂ ಉತ್ತರ ನೀಡಲಿಲ್ಲ ಎಂದು ತಿಳಿಸಿವೆ.

ಶಾಸಕರ ಜತೆಗೆ ಹಣಕಾಸು ನಂಟು?

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಪ್ರಭಾವಿಯಾಗಿದ್ದ ಒಬ್ಬರು ಸೇರಿದಂತೆ ಕೆಲವು ಶಾಸಕರ ಜತೆ ಭೂಮಾಪನ ಇಲಾಖೆ ಅಧೀಕ್ಷಕ ಶ್ರೀನಿವಾಸಮೂರ್ತಿ ಹಣಕಾಸು ವ್ಯವಹಾರದ ನಂಟು ಹೊಂದಿದ್ದರು ಎಂಬ ಮಾಹಿತಿ ಲೋಕಾಯುಕ್ತ ಪೊಲೀಸರಿಗೆ ಲಭಿಸಿದೆ.

'ಕೆಲವು ಶಾಸಕರಿಗೆ ಅಗತ್ಯ ಸಂದರ್ಭಗಳಲ್ಲಿ ಈ ಅಧಿಕಾರಿ ನಗದು ವ್ಯವಸ್ಥೆ ಮಾಡುತ್ತಿದ್ದರು ಎಂಬ ಮಾಹಿತಿ ಸಿಕ್ಕಿದೆ. ಶಾಸಕರು ಮತ್ತು ಶ್ರೀನಿವಾಸಮೂರ್ತಿ ಪರಸ್ಪರರನ್ನು 'ಅಣ್ಣ' ಎಂದೇ ಸಂಬೋಧಿಸಿಕೊಳ್ಳುತ್ತಿದ್ದರು ಎಂಬುದೂ ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

ಲೋಕಾಯುಕ್ತ ಬಲೆಗೆ ಉಪ ತಹಶೀಲ್ದಾರ್


ಪರಮೇಶ್ವರ ನಾಯ್ಕ


ಪ್ರಕಾಶ್

ಹೊಳೆಹೊನ್ನೂರು: ಶಿವಮೊಗ್ಗ ತಾಲ್ಲೂಕಿನ ಹೊಳಲೂರು ಗ್ರಾಮದ ನಾಡಕಚೇರಿಯಲ್ಲಿ ಮಂಗಳವಾರ ಲಂಚ ಪಡೆಯುತ್ತಿದ್ದ ವೇಳೆ ಉಪ ತಹಶೀಲ್ದಾರ್ ಪರಮೇಶ್ವರ ನಾಯ್ಕ ಹಾಗೂ ಏಜೆಂಟ್ ಪ್ರಕಾಶ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಕ್ಯಾತಿನಕೊಪ್ಪ ಗ್ರಾಮದ ಶಿವರಾಜ್ ಅವರು 2 ಎಕರೆ ಬಗರ್ ಹುಕುಂ ಜಮೀನು ಹೊಂದಿದ್ದು, ಆ ಜಮೀನಿನ ಖಾತೆ ಮಾಡಿಕೊಡುವ ಸಂಬಂಧ ಶಿವರಾಜ್ ಬಳಿ ಪರಮೇಶ್ವರ ನಾಯ್ಕ ₹ 40,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಮಂಗಳವಾರ ₹ 30,000 ಲಂಚದ ಹಣವನ್ನು ಏಜೆಂಟ್ ಪ್ರಕಾಶ್ ಮೂಲಕ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಪ್ರಕಾಶ್ ಹಾಗೂ ಉಪ ತಹಶೀಲ್ದಾರ್ ಪರಮೇಶ್ವರ ಅವರನ್ನು ಬಂಧಿಸಿದ್ದಾರೆ.

ಲೋಕಾಯುಕ್ತ ಡಿವೈಎಸ್‌ಪಿ ಉಮೇಶ್, ಈಶ್ವರ ನಾಯ್ಕ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದೆ.

120 ತಾಲ್ಲೂಕಿಗೆ ಬರದ ಛಾಯೆ

ಒಂದನೇ ಪುಟದಿಂದ...

'ಆಗಸ್ಟ್ ತಿಂಗಳಲ್ಲಿ ಅನೇಕ ಭಾಗಗಳಲ್ಲಿ ಮಳೆ ಕೊರತೆಯಾಗಿದೆ. ಜುಲೈ ತಿಂಗಳಲ್ಲಿ ಬಿತ್ತನೆಯಾದ ಕೆಲವು ಬೆಳೆಗಳು ತೇವಾಂಶ ಕೊರತೆ ಅನುಭವಿಸುತ್ತಿವೆ. ಮಳೆ ಕೊರತೆ ಮುಂದುವರಿದರೆ ಬೆಳೆಗಳು ಒಣಗುವ ಸಾಧ್ಯತೆಯಿದೆ. ಸೆಪ್ಟೆಂಬರ್‌ನ ಮಳೆ ಮುನ್ಸೂಚನೆ ಆಗಸ್ಟ್ ಅಂತ್ಯದಲ್ಲಿ ಸಿಗಲಿದೆ' ಎಂದು ಹೇಳಿದರು.

'ಕುಡಿಯುವ ನೀರಿಗೆ ಅಂಥ ಸಮಸ್ಯೆ ಇಲ್ಲ. 114 ಗ್ರಾಮಗಳಿಗೆ ಖಾಸಗಿ ಕೊಳವೆ ಬಾವಿಗಳಿಂದ, 25 ಗ್ರಾಮಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಕೆಲವು ತಾಲ್ಲೂಕುಗಳಲ್ಲಿ 15 ವಾರಗಳಿಗೆ ಸಾಕಾಗುವಷ್ಟು, ಕೆಲವು ತಾಲ್ಲೂಕುಗಳಲ್ಲಿ 30 ವಾರಗಳಿಗೆ ಸಾಕಾಗುವಷ್ಟು ಮೇವು ಲಭ್ಯವಿದೆ. ಮುಂದಿನ ದಿನಗಳಲ್ಲಿ ಮೇವಿನ ಕೊರತೆ ಉಂಟಾಗದಂತೆ ಇಲಾಖೆಯ ಯೋಜನೆಗಳ ಮೂಲಕ ರೈತರಿಗೆ ಮೇವಿನ ಬೀಜ ವಿತರಿಸಿ ಮೇವು ಬೆಳೆಸಲು ಕ್ರಮ ಕೈಗೊಳ್ಳಲಾಗಿದೆ' ಎಂದೂ ತಿಳಿಸಿದರು.

ತೋಟಗಾರಿಕೆ ಬೆಳೆ

1.82 ಲಕ್ಷ ಹೆಕ್ಟೇರ್
ಆಗಿರುವ ಬಿತ್ತನೆ

2.15 ಲಕ್ಷ ಹೆಕ್ಟೇರ್
ಇದೇ ಅವಧಿಯ ವಾಡಿಕೆ ಬಿತ್ತನೆ

65%
ಆಗಿರುವ ಬಿತ್ತನೆ ಪ್ರಮಾಣ

ಈಗಿನ ಮಾಹಿತಿ ಪ್ರಕಾರ ಸೆಪ್ಟೆಂಬರ್‌ನಲ್ಲೂ ಕಡಿಮೆ ಮಳೆಯಾಗುವ ಸೂಚನೆಯಿದೆ. ಮಳೆ ಕೊರತೆ ಮುಂದುವರಿದರೆ ಅದನ್ನು ಎದುರಿಸಲು ಸರ್ಕಾರ ಸನ್ನದ್ಧ ಆಗಬೇಕಿದೆ. ಈ ಬಗ್ಗೆ ಚರ್ಚಿಸಿದ್ದೇವೆ
ಕೃಷ್ಣ ಬೈರೇಗೌಡ, ಕಂದಾಯ ಸಚಿವ

ಮುಂಗಾರು ಮಳೆ (ಮಿ.ಮೀ.ಗಳಲ್ಲಿ)

ಅವಧಿ	ಆಗಿರುವ ಮಳೆ	ವಾಡಿಕೆ ಮಳೆ	ಕೊರತೆ (ಶೇ)
ಜೂನ್ 1ರಿಂದ–ಆಗಸ್ಟ್ 21	487	635	23

ಕೃಷಿ

ಒಟ್ಟು ಬಿತ್ತನೆ ಗುರಿ	82.35 ಲಕ್ಷ ಹೆಕ್ಟೇರ್
ಆಗಸ್ಟ್ 4ರವರೆಗೆ ಬಿತ್ತನೆ	51.87 ಲಕ್ಷ ಹೆಕ್ಟೇರ್
ವಾಡಿಕೆ ಬಿತ್ತನೆ	60.26 ಲಕ್ಷ ಹೆಕ್ಟೇರ್
ಆಗಿರುವ ಬಿತ್ತನೆ	89%

ಬಿತ್ತನೆ ಕುರಿತು ಮಾಹಿತಿ ನೀಡಿದ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, 'ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ಆಶ್ರಿತ ಬೆಳೆ ಬೆಳೆಯದಂತೆ ರೈತರಿಗೆ ಮನವಿ ಮಾಡಲಾಗಿದೆ.

ಸದ್ಯ 15 ದಿನಗಳಿಗೊಮ್ಮೆ ಕಟ್ಟು ನೀರು ಪದ್ಧತಿಯಲ್ಲಿ ನೀರು ಕೊಡಲಾಗುತ್ತಿದ್ದು, ಮೂರು ತಿಂಗಳಿಗೆ ಕೊಡುವಷ್ಟು ಮಾತ್ರ ನೀರು ಲಭ್ಯವಿದೆ' ಎಂದು ಹೇಳಿದರು.

ಮಾಜಿ ಸಚಿವ ಶ್ರೀರಂಗ ದೇವರಾಯಲು ನಿಧನ



ಗಂಗಾವತಿ (ಕೊಪ್ಪಳ ಜಿಲ್ಲೆ): ವಿಜಯನಗರ ಅರಸರ ವಂಶಸ್ಥ, ಮಾಜಿ ಸಚಿವ ಶ್ರೀರಂಗ ದೇವರಾಯಲು (87) ಅವರು ಗಂಗಾವತಿಯ ತಮ್ಮ ನಿವಾಸದಲ್ಲಿ ಮಂಗಳವಾರ ನಿಧನರಾದರು. ಅವರಿಗೆ ಪತ್ನಿ ಲಲಿತಾರಾಣಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ.

1974ರಲ್ಲಿ ಗಂಗಾವತಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಕ್ರಿಯ ರಾಜಕಾರಣ ಪ್ರವೇಶಿಸಿದ್ದರು. ವೀರಪ್ಪ ಮೊಯಿಲಿ ಅವರ ಸಂಪುಟದಲ್ಲಿ ಸಚಿವರಾಗಿದ್ದರು. 2004ರಲ್ಲಿ ಸೋತ ನಂತರ ಚುನಾವಣಾ ರಾಜಕಾರಣದಿಂದ ದೂರ ಉಳಿದಿದ್ದರು. 1974, 1978ರಲ್ಲಿ ಗಂಗಾವತಿ ಯಲ್ಲಿ ಸೋತಿದ್ದರು. ನಂತರ 1983, 1985ರಲ್ಲಿ ಕನಕಗಿರಿ ಕ್ಷೇತ್ರದಿಂದ ಸ್ಪರ್ಧಿಸಿ ಶಾಸಕರಾಗಿದ್ದರು. 1989, 1994 ಹಾಗೂ 1999ರಲ್ಲಿ ಗಂಗಾವತಿ ಕ್ಷೇತ್ರದಿಂದ ಗೆಲುವು ಸಾಧಿಸಿದ್ದರು.

ಸ್ವಗ್ರಾಮ ಆನೆಗೊಂದಿಯಲ್ಲಿ ಬುಧವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಧ್ವನಿ ಎತ್ತದಿದ್ದರೆ ಏನೂ ಸಿಗಲ್ಲ: ಪರಮೇಶ್ವರ

ಕರ್ನಾಟಕ ರಾಜ್ಯ ಸಂವಿಧಾನ ಬಳಗದಿಂದ ಸಮುದಾಯ ಸಾಧಕರಿಗೆ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೋಷಿತ ವರ್ಗದವರು ಸಂಘಟಿತರಾಗಿ ಹೋರಾಟ ಮಾಡಬೇಕು. ಧ್ವನಿ ಎತ್ತದೆ ಹೋದರೆ ಏನೂ ಸಿಗುವುದಿಲ್ಲ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಕರ್ನಾಟಕ ರಾಜ್ಯ ಸಂವಿಧಾನ ಬಳಗ ಮಂಗಳವಾರ ಆಯೋಜಿಸಿದ್ದ ಸಮುದಾಯದ ಸಾಧಕರಿಗೆ ಸಮುದಾಯದವರಿಂದ ಗೌರವ ಸಮರ್ಪಣಾ ಸಮಾರಂಭದಲ್ಲಿ ಅವರು ಮಾತನಾಡಿದರು.



ಕರ್ನಾಟಕ ರಾಜ್ಯ ಸಂವಿಧಾನ ಬಳಗ ಮಂಗಳವಾರ ಆಯೋಜಿಸಿದ್ದ ಸಮುದಾಯದ ಸಾಧಕರಿಗೆ ಸಮುದಾಯದವರಿಂದ ಗೌರವ ಸಮರ್ಪಣಾ ಸಮಾರಂಭದಲ್ಲಿ ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ 'ಸಮುದಾಯ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

'ಜಾತಿ, ಉಪ ಜಾತಿ, ಉಪ ಉಪ ಜಾತಿ ಎಂದು ನಮ್ಮನ್ನು ಒಡೆದಾಳುವ ನೀತಿಯನ್ನು ಇನ್ನೆಷ್ಟು ವರ್ಷ ಸಹಿಸಿಕೊಳ್ಳಬೇಕು. ಈ ಜಾತಿ ವ್ಯವಸ್ಥೆ ಬಗ್ಗೆ ಧ್ವನಿ ಎತ್ತಬೇಕು. ಸಮಾಜದಲ್ಲಿ ಸಮಾನತೆ ಮತ್ತು ಶಿಕ್ಷಣ ಸಿಗಬೇಕಾದರೆ ಸಂಘಟಿತ ಹೋರಾಟ ಅಗತ್ಯ' ಎಂದರು.

'ದೇಶಕ್ಕೆ ಒಕ್ಕೂಟ ವ್ಯವಸ್ಥೆಯನ್ನು ನೀಡಿದವರು ಅಂಬೇಡ್ಕರ್. ವಿಶ್ವದ ಮೂರನೇ ಆರ್ಥಿಕ ಶಕ್ತಿ ಎಂದೆಲ್ಲ ಮಾತನಾಡುವ ನಾಯಕರು, ದಲಿತರ ಬಗ್ಗೆ ಏಕೆ ಮಾತನಾಡುವುದಿಲ್ಲ. ಕಾಂಗ್ರೆಸ್ ಸೇರಿದಂತೆ ಎಲ್ಲ ಪಕ್ಷಗಳ ನಾಯಕರೂ ನಮ್ಮ ಬಗ್ಗೆ ಏಕೆ ಮಾತನಾಡುವುದಿಲ್ಲ' ಎಂದು ಪ್ರಶ್ನಿಸಿದರು.

'ಸಂವಿಧಾನದಲ್ಲಿ ಅಂಬೇಡ್ಕರ್ ಶೇ 18ರಷ್ಟು ಮೀಸಲು ಕೊಟ್ಟಿದ್ದಾರೆ. ನೀವು ನಮಗೆ ಏನು ಕೊಟ್ಟಿದ್ದೀರಿ? ಹಿಂದೂ ರಾಷ್ಟ್ರ ಮಾಡಲು ಹೊರಟಿದ್ದೀರಿ. ಜಾತಿ ಇಲ್ಲ, ಎಲ್ಲರೂ ಹಿಂದೂಗಳೇ ಎಂದು ಸಾರಿಬಿಡಿ ನೋಡೋಣ' ಎಂದು ಪ್ರಧಾನ ಮಂತ್ರಿಯವರ ಹೆಸರು ಉಲ್ಲೇಖಿಸದೆ ಸವಾಲು ಹಾಕಿದರು.

'ಸಮುದಾಯದ ಎಡ–ಬಲದವರು ಒಂದೇ ವೇದಿಕೆಯಲ್ಲಿದ್ದು, ಎಸ್‌ಸಿ/ಎಸ್‌ಟಿಯವರಿಗೆ ಎಲ್ಲ ರೀತಿಯ ಹಕ್ಕುಗಳು ಸಿಗಲು ಪ್ರಯತ್ನಿಸಬೇಕು ಎಂದು ಎಲ್ಲ ಶಾಸಕರನ್ನು ಕರೆದಿದ್ದೆವು. ಆದರೆ ಹಲವರು ಬಂದಿಲ್ಲ. ಅವರಿಗೆ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಬೇಕು' ಎಂದು ಸಂವಿಧಾನ ಬಳಗದ ಅಧ್ಯಕ್ಷ ಜಯಂಕಾಂತ್ ಚಾಲುಕ್ಯ ಹೇಳಿದರು.

18 ಬೇಡಿಕೆಗಳ ಹಕ್ಕೊತ್ತಾಯವನ್ನು ವೇದಿಕೆಯಲ್ಲಿ ಮಂಡಿಸಿ, ಅದನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿಯನ್ನು ಸಚಿವ ಪರಮೇಶ್ವರ್ ಅವರಿಗೆ ನೀಡಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಮನವಿ ಸಲ್ಲಿಸಲು ನಿರ್ಧರಿಸಲಾಯಿತು.

ಶಾಸಕರಾದ ಪಿ.ಎಂ. ನರೇಂದ್ರಸ್ವಾಮಿ, ಎ.ಆರ್.ಕೃಷ್ಣಮೂರ್ತಿ, ಕೆ.ಎಸ್. ಬಸವಂತಪ್ಪ, ಚಿತ್ರದುರ್ಗ ಹರಳಯ್ಯ ಗುರುಪೀಠದ ಬಸವ ಹರಳಯ್ಯ ಸ್ವಾಮೀಜಿ ಇದ್ದರು. ಸಂಗೀತ ನಿರ್ದೇಶಕ ಸಾಧುಕೋಕಿಲ ಮತ್ತು ಸರ್ವೋತ್ತಮ ತಂಡದಿಂದ ಸಂಗೀತ ಕಾರ್ಯಕ್ರಮವಿತ್ತು.

ನಾನು ರಾಜಕಾರಣಕ್ಕೆ ಸ್ವಾರ್ಥಕ್ಕಾಗಿ ಬಂದಿಲ್ಲ. ಅಧಿಕಾರ ಶಾಶ್ವತ ಅಲ್ಲ. ಸಮುದಾಯಕ್ಕೆ ಅನ್ಯಾಯವಾಗಲು ಬಿಡುವುದಿಲ್ಲ
ಜಿ. ಪರಮೇಶ್ವರ, ಗೃಹ ಸಚಿವ

'ನಮ್ಮ ಪರಿಸ್ಥಿತಿ ಏನು?'

'30 ವರ್ಷ ರಾಜ್ಯವನ್ನು ಆಳಿದವರು, ತಮ್ಮ ಸಮುದಾಯಕ್ಕೆ 2 ಸಾವಿರ ಎಕರೆ ಭೂಮಿ ನೀಡಿದ್ದಾರೆ, ಸಾವಿರಾರು ಕೋಟಿ ಹಣ ನೀಡಿದ್ದಾರೆ. 20 ವರ್ಷಗಳ ಕಾಲ ಇನ್ನೊಂದು ಸಮುದಾಯ ಈ ರಾಜ್ಯವನ್ನು ಆಳಿದ್ದು, ಅವರೂ ಸಾವಿರಾರು ಎಕರೆ ಭೂಮಿ, ಸಾವಿರಾರು ಕೋಟಿಯನ್ನು ಮಠಕ್ಕೆ ನೀಡಿದ್ದಾರೆ. ಈಗ 10 ವರ್ಷ ರಾಜ್ಯಭಾರ ಮಾಡುತ್ತಿರುವ ಇನ್ನೊಂದು ಸಮುದಾಯದವರು 800 ಎಕರೆ ಜಾಗ ಈಗಾಗಲೇ ನೀಡಿದ್ದಾರೆ, ಹಣವನ್ನೂ ಕೊಡುತ್ತಿದ್ದಾರೆ. ನಮ್ಮ ಪರಿಸ್ಥಿತಿ ಏನು' ಎಂದು ಉರಿಲಿಂಗಿಪೆದ್ದಿ ಮಹಾಸಂಸ್ಥಾನ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಪ್ರಶ್ನಿಸಿದರು.

'ದೇವರ ಚಿತ್ರದ ಬದಲು, ಸಮುದಾಯಕ್ಕೆ ಹಕ್ಕು ನೀಡಿದ ಅಂಬೇಡ್ಕರ್ ಚಿತ್ರವನ್ನು ಮನೆಯಲ್ಲಿಟ್ಟುಕೊಳ್ಳಬೇಕು' ಎಂದರು.

ಮಲ ಸುರಿದುಕೊಂಡ ಪೌರಕಾರ್ಮಿಕರು

ಒಂದನೇ ಪುಟದಿಂದ...

'ಬಾಕಿ ವೇತನ ಕುರಿತು ನನಗೂ ತಿಳಿಸದ ಪೌರ ಕಾರ್ಮಿಕರು, ಮಾನವ ಹಕ್ಕು ಮತ್ತು ಭ್ರಷ್ಟಾಚಾರ ವಿರೋಧಿ ಸಂಸ್ಥೆ ಕಾರ್ಯಕರ್ತರೊಂದಿಗೆ ಪಂಚಾಯಿತಿಗೆ ಬಂದು ಮಲ ಸುರಿದುಕೊಂಡು ಪ್ರತಿಭಟಿಸಿದ್ದಾರೆ. ಇಬ್ಬರಿಗೂ ತಲಾ ₹1,10,400 ಮೊತ್ತದ ಚೆಕ್ ಮತ್ತು ₹50 ಸಾವಿರ ಕೊಟ್ಟು ಬಾಕಿ ಸಂಬಳ ಪಾವತಿಸಿದ್ದೇವೆ' ಎಂದು ಕಲ್ಲಹಳ್ಳಿ ಪಿಡಿಒ ಶ್ರೀನಿವಾಸ್ 'ಪ್ರಜಾವಾಣಿ'ಗೆ ತಿಳಿಸಿದರು.

'ಹಿಂದಿನ ಪಿಡಿಒಗಳು 2021ರಿಂದ ಇಬ್ಬರೂ ಕಾರ್ಮಿಕರ 14 ತಿಂಗಳ ಸಂಬಳ ಬಾಕಿ ಉಳಿಸಿದ್ದರು. ನನ್ನ ಅವಧಿಯಲ್ಲಿ ಬಾಕಿ ಇರಲಿಲ್ಲ. ಕಾರ್ಮಿಕರಿಗೆ ತಲಾ ₹15 ಸಾವಿರ ಸಂಬಳ ನೀಡಲಾಗುತ್ತಿತ್ತು. ಎರಡು ತಿಂಗಳಿಂದ ಕೆಲಸಕ್ಕೆ ಹಾಜರಾಗದ ಕಾರ್ಮಿಕರು, ಕನಕಪುರದಲ್ಲಿ ಕೆಲಸ ಮಾಡುತ್ತಿರುವ ಮಾಹಿತಿ ಬಂದಿತ್ತು' ಎಂದು ಹೇಳಿದರು.

'ಬಾಕಿ ವೇತನಕ್ಕಾಗಿ ಕಾರ್ಮಿಕರು ಮೈಮೇಲೆ ಮಲ ಸುರಿದುಕೊಳ್ಳಬಾರದಿತ್ತು. ನನ್ನ ಗಮನಕ್ಕೆ ತಂದಿದ್ದರೆ, ಕೂಡಲೇ ಪಾವತಿಸಲು ಕ್ರಮ ಕೈಗೊಳ್ಳು ತ್ತಿದ್ದೆ' ಎಂದು ಕನಕಪುರ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಭೈರಪ್ಪ ತಿಳಿಸಿದರು. ಕಾರ್ಮಿಕರು ಮಲ ಸುರಿದುಕೊಳ್ಳುತ್ತಿರುವ ವಿಡಿಯೊ ಜಾಲತಾಣಗಳಲ್ಲಿ ಹರಿದಾಡುತ್ತಿದೆ.


ಬಾಕಿ ವೇತನಕ್ಕೆ ಆಗ್ರಹಿಸಿ ಕನಕಪುರ ತಾಲ್ಲೂಕಿನ ಕಲ್ಲಹಳ್ಳಿ ಗ್ರಾಮ ಪಂಚಾಯಿತಿ ಎದುರು ಪೌರ ಕಾರ್ಮಿಕರಾದ ಎನ್. ಸುರೇಶ್ ಮತ್ತು ವಿ. ರಂಗಯ್ಯ ಅವರು ಮೈ ಮೇಲೆ ಮಲ ಸುರಿದುಕೊಂಡು ಪ್ರತಿಭಟನೆ ನಡೆಸಿದರು

6 ತಿಂಗಳ ಕೆಲಸಕ್ಕೆ 2 ತಿಂಗಳ ಸಂಬಳ

'ಆರು ತಿಂಗಳು ಕೆಲಸ ಮಾಡಿದರೆ, ಅಧಿಕಾರಿಗಳು ಎರಡು ತಿಂಗಳ ಸಂಬಳವಷ್ಟೇ ಕೊಡುತ್ತಿದ್ದರು. ಬಾಕಿ ಕೇಳಿದರೆ, ಕೊಟ್ಟಷ್ಟು ತಗೋಳಿ. ಅದೇನ್ ಮಾಡಿಕೊಳ್ತಿರೊ ಮಾಡಿಕೊಳ್ಳಿ ಎಂದು ಕಚೇರಿಯಲ್ಲಿ ನಿಲ್ಲಲೂ ಬಿಡದೆ ದಬ್ಬಾಳಿಕೆ ಮಾಡುತ್ತಿದ್ದರು' ಎಂದು ಪೌರ ಕಾರ್ಮಿಕ ಎನ್. ಸುರೇಶ್ 'ಪ್ರಜಾವಾಣಿ'ಯೊಂದಿಗೆ ಕಣ್ಣೀರಿಟ್ಟರು.

'ಐದು ವರ್ಷದಿಂದಲೂ ಹೀಗೆಯೇ ನಡೆದುಕೊಂಡು ಬಂದಿದೆ. ಇದರಿಂದ ಬೇಸತ್ತು 2 ತಿಂಗಳಿಂದ ಕೆಲಸಕ್ಕೆ ಹೋಗುವುದನ್ನು ಬಿಟ್ಟೆವು. ಆದರೂ, ಜೀವನ ನಿರ್ವಹಣೆಗೆ ಹಣ ಬೇಕಲ್ಲ ಎಂದು ಮತ್ತೆ ಹೋಗಿ ಕೇಳಿದೆವು. ಆಗಲೂ, ಅದೇ ರೀತಿ ನಡೆದುಕೊಂಡರು. ವಿಧಿ ಇಲ್ಲದೆ ಮಲ ಸುರಿದುಕೊಂಡು ಪಂಚಾಯಿತಿ ಮುಂದೆ ಪ್ರತಿಭಟನೆಗೆ ಕುಳಿತುಕೊಂಡೆವು' ಎಂದರು.

ತಕ್ಷಣ ಪೌರ ಕಾರ್ಮಿಕರಿಗೆ ವೇತನ ಪಾವತಿಸಲಾಗಿದೆ. ಮುಂದೆ ಇಂತಹ ಘಟನೆ ಮರುಕಳಿಸದಂತೆ, ಸಕಾಲದಲ್ಲಿ ವೇತನ ಪಾವತಿಸಲು ಗ್ರಾಮ ಪಂಚಾಯಿತಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ
ದಿಗ್ವಿಜಯ್ ಬೋಡ್ಕೆ
ಸಿಇಒ, ಜಿ.ಪಂ. ರಾಮನಗರ

ಅಧಿಕಾರಿಗಳನ್ನು ಅಮಾನತು ಮಾಡಿ

ಪೌರ ಕಾರ್ಮಿಕರಿಗೆ ಸಂಬಳ ಕೊಡದೆ ದುಡಿಸಿಕೊಂಡಿರುವುದು ಅತ್ಯಂತ ಅಮಾನವೀಯವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳನ್ನು ಕೂಡಲೇ ಅಮಾನತುಗೊಳಿಸಬೇಕು. ಅವರ ವಿರುದ್ಧ 2013ರ ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್ ಆ್ಯಕ್ಟ್ ಪ್ರಕಾರ ಪ್ರಕರಣ ದಾಖಲಿಸಬೇಕು ಎಂದು ಸಫಾಯಿ ಕರ್ಮಚಾರಿ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರಾದ ಆರ್. ನಾಗರಾಜು ಮತ್ತು ಶಿವಕುಮಾರ ಸ್ವಾಮಿ ಒತ್ತಾಯಿಸಿದ್ದಾರೆ.

ಕಳಂಕಿತ ಪ್ರಾಚಾರ್ಯರ ನೇಮಕಕ್ಕೆ ವಿರೋಧ

ಆಹಾರ, ನೀರು ತ್ಯಜಿಸಿ ಹೋರಾಟ

ಪ್ರಜಾವಾಣಿ ವಾರ್ತೆ

ಶಿರಸಿ (ಉತ್ತರ ಕನ್ನಡ ಜಿಲ್ಲೆ): ವಿದ್ಯಾರ್ಥಿಗಳಿಗೆ ಕಿರುಕುಳ ಆರೋಪ ಹೊತ್ತ ಪ್ರಾಚಾರ್ಯರ ನೇಮಕ ಖಂಡಿಸಿ ಶಿರಸಿ ತಾಲ್ಲೂಕಿನ ಕಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ವಿದ್ಯಾರ್ಥಿಗಳು ಆಹಾರ, ನೀರು ತ್ಯಜಿಸಿ ಮಂಗಳವಾರ ಪ್ರತಿಭಟನೆ ನಡೆಸಿದರು. ಬೆಳಿಗ್ಗೆಯಿಂದ ಸಂಜೆಯವರೆಗೆ ತರಗತಿ ಹಾಜರಾಗದೇ, ಬಹಿಷ್ಕರಿಸಿದರು.

ಶಾಲೆಯ ಆವರಣದಲ್ಲಿ ಜಮಾಯಿಸಿದ ವಿದ್ಯಾರ್ಥಿಗಳು, 'ನೂತನ ಪ್ರಾಚಾರ್ಯರಾಗಿ ನೇಮಕಗೊಂಡ ಚಂದ್ರಶೇಖರ ಅವರ ಮೇಲೆ ಲೈಂಗಿಕ ಕಿರುಕುಳದ ಆರೋಪವಿದೆ. ಅವರ ಬದಲು ಈ ಮೊದಲು ಪ್ರಾಚಾರ್ಯರಿದ್ದ ರಾಘವೇಂದ್ರ ನಾಯ್ಕ ಅವರನ್ನೇ ಮುಂದುವರಿಸಬೇಕು' ಎಂದು ಆಗ್ರಹಿಸಿದರು.


ವಿದ್ಯಾರ್ಥಿಗಳ ಮನವೊಲಿಸಿಕೊಳ್ಳಲು ತಹಶೀಲ್ದಾರ್ ಶ್ರೀಧರ ಮುಂದಲಮನಿ ಎಷ್ಟೇ ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಆಹಾರ, ನೀರು ನೀರು ತ್ಯಜಿಸಿ ಕೆಲವರು ಅಸ್ವಸ್ಥಗೊಂಡರೂ ಪ್ರತಿಭಟನೆ ಕೈಬಿಡಲು ಯಾರೂ ಒಪ್ಪಲಿಲ್ಲ.

'ಬೇಡಿಕೆಗೆ ಒಪ್ಪದಿದ್ದರೆ, ನಮ್ಮ ಮಕ್ಕಳ ವರ್ಗಾವಣೆ ಪತ್ರ ಒಯ್ದು ಸರ್ಕಾರದ ವಿರುದ್ಧ ಹೋರಾಟ ನಡೆಸುತ್ತೇವೆ' ಎಂದು ಮಕ್ಕಳ ಪಾಲಕರು ಎಚ್ಚರಿಕೆ ನೀಡಿದರು.

ಅಧಿಕಾರ ಸ್ವೀಕರಿಸಲು ಶಾಲೆಗೆ ಚಂದ್ರಶೇಖರ ನಾಯ್ಕ ಬರುತ್ತಿದ್ದಂತೆಯೇ ವಿದ್ಯಾರ್ಥಿಗಳು, 'ಗೋ ಬ್ಯಾಕ್, ಗೋ ಬ್ಯಾಕ್' ಎಂದು ಕೂಗಿದರು. ಪೊಲೀಸ್ ರಕ್ಷಣೆಯಲ್ಲಿ ಬಂದ ಅವರು ಸಹಿ ಹಾಕಿ, ಮರಳಿದರು.


ಶಿರಸಿ ತಾಲ್ಲೂಕಿನ ಕಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳನ್ನು ಮನವೊಲಿಸಿಕೊಳ್ಳಲು ಅಧಿಕಾರಿಗಳು ಪ್ರಯತ್ನಿಸಿದರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನಿಮ್ಮನ್ನು ನೀವು ಅರಿತುಕೊಳ್ಳುವುದೇ ವಿವೇಚನೆಯ ಆರಂಭಿಕ ಹಂತ.

–ಅರಿಸ್ಟಾಟಲ್

ಇನ್ವಾಯ್ಸ್ ಪಡೆಯಲು ಉತ್ತೇಜನ ವಿನೂತನ ಕ್ರಮ, ಸ್ವಾಗತಾರ್ಹ ನಡೆ

'ಮೇರಾ ಬಿಲ್ ಮೇರಾ ಅಧಿಕಾರ್' ಹೆಸರಿನ ವಿನೂತನ ಯೋಜನೆಯೊಂದನ್ನು ಆರಂಭಿಸಲು ಪರೋಕ್ಷ ತೆರಿಗೆಗಳ ಕೇಂದ್ರೀಯ ಮಂಡಳಿಯು (ಸಿಬಿಐಸಿ) ಮುಂದಾಗಿದೆ. ಗ್ರಾಹಕರು ವರ್ತಕರಿಂದ ಯಾವುದೇ ಉತ್ಪನ್ನವನ್ನು ಖರೀದಿ ಮಾಡಿದಾಗ ಅಥವಾ ಸೇವಾದಾತರಿಂದ ಯಾವುದೇ ಬಗೆಯ ಸೇವೆಯನ್ನು ಪಡೆದಾಗ, ಅದಕ್ಕೆ ಸಂಬಂಧಿಸಿದಂತೆ ವರ್ತಕ ಅಥವಾ ಸೇವಾದಾತನಿಂದ ಜಿಎಸ್‌ಟಿ ಇನ್ವಾಯ್ಸ್ ಪಡೆಯುವುದಕ್ಕೆ ಉತ್ತೇಜನ ನೀಡುವ ಯೋಜನೆ ಇದು. ಇದು ಸ್ವಾಗತಾರ್ಹ ಕ್ರಮ. ಈ ಯೋಜನೆಯ ಅಡಿಯಲ್ಲಿ, ₹ 200ಕ್ಕಿಂತ ಹೆಚ್ಚಿನ ಮೊತ್ತದ ಉತ್ಪನ್ನ ಖರೀದಿಸಿದರೆ ಅಥವಾ ಸೇವೆಯೊಂದನ್ನು ಪಡೆದರೆ, ಗ್ರಾಹಕರು ಅದಕ್ಕೆ ಸಂಬಂಧಿಸಿದ ಜಿಎಸ್‌ಟಿ ಇನ್ವಾಯ್ಸ್ ಕೇಳಿ ಪಡೆಯಬೇಕು. ನಂತರ ಅವರು ಅದನ್ನು, ಸ್ಮಾರ್ಟ್‌ಫೋನ್ ಆ್ಯಪ್ ಮೂಲಕ ಅಪ್ಲೋಡ್ ಮಾಡಬೇಕು. ಜಿಎಸ್‌ಟಿ ಇನ್ವಾಯ್ಸ್‌ಗಳನ್ನು ಆಧರಿಸಿ, ಕಾಲಕಾಲಕ್ಕೆ ಲಾಟರಿ ಎತ್ತಲಾಗುತ್ತದೆ. ಅಲ್ಲಿ ಆಯ್ಕೆಯಾಗುವ ಇನ್ವಾಯ್ಸ್‌ಗಳಿಗೆ ಆಕರ್ಷಕ ಬಹುಮಾನ ನಿಗದಿ ಮಾಡಲಾಗಿದೆ. ಬಂಪರ್ ಬಹುಮಾನವಾಗಿ ₹ 1 ಕೋಟಿ ನೀಡಲಾಗುತ್ತದೆ! ಸರ್ಕಾರವು ತಾನು ಬಯಸುವ ಬದಲಾವಣೆಯನ್ನು ಉತ್ತೇಜಕ ಕ್ರಮಗಳ ಮೂಲಕ ತರಲು ಹೊರಟಿರುವುದು ಮೆಚ್ಚುವಂಥದ್ದು. 'ಜಿಎಸ್‌ಟಿ ಇನ್ವಾಯ್ಸ್ ಪಡೆಯುವುದು ಕಡ್ಡಾಯ' ಎಂಬ ಆದೇಶ ಹೊರಡಿಸುವುದಕ್ಕಿಂತ, 'ಜಿಎಸ್‌ಟಿ ಇನ್ವಾಯ್ಸ್ ಪಡೆದು, ಅದನ್ನು ಅಪ್ಲೋಡ್ ಮಾಡಿದಲ್ಲಿ ಆಕರ್ಷಕ ಬಹುಮಾನ ಗೆಲ್ಲುವ ಅವಕಾಶವಿದೆ' ಎಂದು ಹೇಳುವುದು ಹೆಚ್ಚು ಪರಿಣಾಮಕಾರಿ ಎಂಬುದರಲ್ಲಿ ಎರಡು ಮಾತಿಲ್ಲ.



ತೆರಿಗೆ ಸೋರಿಕೆಯನ್ನು ತಡೆಯುವಲ್ಲಿ ಇದು ಬಹಳ ದೊಡ್ಡ ಹೆಜ್ಜೆಯಾಗಿ ಪರಿಣಮಿಸಬಹುದು

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ಬರುವ ಉತ್ಪನ್ನಗಳು ಹಾಗೂ ಸೇವೆಗಳಿಗೆ ಜಿಎಸ್‌ಟಿ ಇನ್ವಾಯ್ಸ್ ನೀಡಬೇಕು ಎಂಬುದು ನಿಯಮ. ಆದರೆ ಈ ನಿಯಮದ ಉಲ್ಲಂಘನೆ ಕೂಡ ಅವ್ಯಾಹತವಾಗಿ ನಡೆದಿದೆ. ವರ್ತಕರಿಂದ ಗ್ರಾಹಕರಿಗೆ ಉತ್ಪನ್ನಗಳ ವರ್ಗಾವಣೆ ಆಗುವ ಹಂತದಲ್ಲಿ, ಬಿಲ್ ಬೇಡ ಎಂದಾದರೆ ಒಂದು ದರ, ಬಿಲ್ ಬೇಕು ಎಂದಾದರೆ ಇನ್ನೊಂದು ದರವನ್ನು ಪಡೆಯುವ ಪದ್ಧತಿ ಇದ್ದೇ ಇದೆ. ಬಿಲ್ ಬೇಡ ಎನ್ನುವವರಿಗೆ ಕಡಿಮೆ ದರ ನಿಗದಿ ಮಾಡಲಾಗುತ್ತದೆ. ಇದು ಜಿಎಸ್‌ಟಿ ವರಮಾನ ಸೋರಿಕೆಗೆ ಕಾರಣವಾಗುತ್ತದೆ. ಇಂತಹ ಅಕ್ರಮವನ್ನು ತಡೆಯಲು ಹೊಸ ಯೋಜನೆಯು ನೆರವಿಗೆ ಬರಬಲ್ಲದು. ಇನ್ವಾಯ್ಸ್ ಪಡೆದಲ್ಲಿ, ಬಹುಮಾನ ಗೆಲ್ಲುವ ಅವಕಾಶವೊಂದು ಇದೆ ಎಂಬುದು ಗ್ರಾಹಕರ ಪಾಲಿಗೆ ಒಂದು ಉತ್ತೇಜಕ ಕ್ರಮವಾಗಬಲ್ಲದು. ಇದರಿಂದಾಗಿ, ಗ್ರಾಹಕ ಬಿಲ್ ಕೇಳುತ್ತಾನೆ, ವರ್ತಕ ಬಿಲ್ ಕೊಡಲೇಬೇಕಾದ ಒತ್ತಡಕ್ಕೆ ಸಿಲುಕುತ್ತಾನೆ. ಸರ್ಕಾರದ ವರಮಾನ ಸಂಗ್ರಹ ಹೆಚ್ಚುತ್ತದೆ. ಜಿಎಸ್‌ಟಿ ವರಮಾನ ಸಂಗ್ರಹವು ಈಗ ತಿಂಗಳಿಗೆ ₹ 1.60 ಲಕ್ಷ ಕೋಟಿಗಿಂತ ಹೆಚ್ಚಿನ ಮಟ್ಟವನ್ನು ತಲುಪಿದೆ. ಈ ಯೋಜನೆಯು ಜಾರಿಗೆ ಬಂದ ನಂತರದಲ್ಲಿ ವರಮಾನ ಸಂಗ್ರಹ ಇನ್ನಷ್ಟು ಜಾಸ್ತಿ ಆಗುವ ನಿರೀಕ್ಷೆ ಇಟ್ಟು-ಕೊಳ್ಳಬಹುದು.

ಈ ಯೋಜನೆಗೆ ಅಗತ್ಯವಿರುವ ತಾಂತ್ರಿಕ ವೇದಿಕೆಯನ್ನು ಜಿಎಸ್‌ಟಿಎನ್ ತನ್ನ ಪಾಲುದಾರರ ಜೊತೆಗೂಡಿ ಅಭಿವೃದ್ಧಿಪಡಿಸುತ್ತಿದೆ. ಇನ್ವಾಯ್ಸ್ ಅಪ್ಲೋಡ್ ಮಾಡಲು ಅಗತ್ಯವಿರುವ ಆ್ಯಪ್, ಆ್ಯಂಡ್ರಾಯ್ಡ್ ಹಾಗೂ ಐಒಎಸ್ ಕಾರ್ಯಾಚರಣಾ ವ್ಯವಸ್ಥೆಗಳಿಗೆ ಸಿಗಲಿದೆ. ಅಲ್ಲದೆ, ಇನ್ವಾಯ್ಸ್ ಮೇಲೆ ನಮೂದಾಗುವ ಜಿಎಸ್‌ಟಿಐಎನ್, ಇನ್ವಾಯ್ಸ್ ಸಂಖ್ಯೆ, ಪಾವತಿಸಿದ ಮೊತ್ತ ಹಾಗೂ ತೆರಿಗೆ ಮೊತ್ತವನ್ನು ತಂತ್ರಜ್ಞಾನದ ಸಹಾಯದಿಂದ ನಿಖರವಾಗಿ ಗುರುತಿಸಲಾಗುತ್ತದೆ ಎಂದು ಹೇಳಲಾಗಿದೆ. ಇನ್ವಾಯ್ಸ್ ಆಧಾರಿತ ಲಾಟರಿಯಲ್ಲಿ ಬಹುಮಾನ ಗೆದ್ದವರಿಗೆ ಹಣ ವರ್ಗಾವಣೆ ಮಾಡುವ ಮೊದಲು, ಇನ್ವಾಯ್ಸ್ ನಕಲಿ ಅಲ್ಲ ಎಂಬುದನ್ನು ಕೂಡ ಖಾತರಿ ಮಾಡಿಕೊಳ್ಳಲಾಗುತ್ತದೆ. ತೆರಿಗೆ ಸೋರಿಕೆಯನ್ನು ತಡೆಯುವಲ್ಲಿ ಇದು ಬಹಳ ದೊಡ್ಡ ಹೆಜ್ಜೆಯಾಗಿ ಪರಿಣಮಿಸಬಹುದು. ಆದರೆ, ಈ ಯೋಜನೆಗೆ ಸಂಬಂಧಿಸಿದ ಆ್ಯಪ್ ಅಭಿವೃದ್ಧಿಪಡಿಸುವಾಗ ಅದರಲ್ಲಿ ಬಳಸುವ ಭಾಷೆ ಇಂಗ್ಲಿಷ್, ಹಿಂದಿ ಮಾತ್ರವೇ ಆಗಿರದೆ, ರಾಜ್ಯವಾರು ಆಡಳಿತ ಭಾಷೆಗಳಲ್ಲಿಯೂ ಆಯ್ಕೆಗಳು ಲಭ್ಯವಿರುವಂತೆ ಮಾಡಬೇಕು. ಆಗ ಹೆಚ್ಚು ಜನ ಈ ಯೋಜನೆಯಲ್ಲಿ ಪಾಲ್ಗೊಳ್ಳಬಹುದು. ಈ ಯೋಜನೆಯಲ್ಲಿ ಪಾಲ್ಗೊಳ್ಳುವುದಕ್ಕೆ ಭಾಷೆಯು ಒಂದು ಅಡ್ಡಿಯಾಗಬಾರದು.

ದಿನದ ಟ್ವೀಟ್

ಲಭ್ಯವಿದ್ದಾರೆಯೇ ಕುಶಲಕರ್ಮಿಗಳು?



ನಮ್ಮ ದೇಶದ ಜನ ನಿರುದ್ಯೋಗದ ಬಗ್ಗೆ ದೂರುತ್ತಾರೆ. ವೈಯಕ್ತಿಕವಾಗಿ, ನಮ್ಮ ಉದ್ದಿಮೆಗೆ ಬೇಕಾದಂತಹ ಕುಶಲ ಕರ್ಮಿಗಳನ್ನು ಹುಡುಕುವುದೇ ನನಗೆ ಸಮಸ್ಯೆಯಾಗಿದೆ. ನಮಗೆ ನಿರ್ಮಾಣ ಕೆಲಸಗಾರರು ಬೇಕು- ಬೇಕಾದಷ್ಟು ಮಂದಿ ಸಿಗುವುದಿಲ್ಲ! ನಮಗೆ ಲಾರಿ ಚಾಲಕರು ಬೇಕು- ಬಹುದೊಡ್ಡ ಮಟ್ಟದ ಕೊರತೆಯಿದೆ! ನಮಗೆ ತೋಟಗಾರಿಕಾ ಕಾರ್ಮಿಕರು ಬೇಕು- ಅವರು ಲಭ್ಯವಿಲ್ಲ! ಪರಿಹಾರ ಏನೆಂದು ಅರ್ಥವಾಗುತ್ತಿಲ್ಲ.

ಹರ್ಷ್ ಗೋಯಂಕಾ, ಉದ್ಯಮಿ

ಕಿಡಿನುಡಿ



ಜಾತಿ, ಉಪ ಜಾತಿ, ಉಪ ಉಪ ಜಾತಿ ಎಂದು ನಮ್ಮನ್ನು ಒಡೆದಾಳುವ ನೀತಿಯನ್ನು ನಾವು ಇನ್ನೆಷ್ಟು ವರ್ಷ ಸಹಿಸಿಕೊಳ್ಳಬೇಕು? ಈ ಜಾತಿ ವ್ಯವಸ್ಥೆ ಬಗ್ಗೆ ಧ್ವನಿ ಎತ್ತಬೇಕು. ಸಮಾಜದಲ್ಲಿ ಸಮಾನತೆ ಮತ್ತು ಶಿಕ್ಷಣ ಸಿಗಬೇಕಾದರೆ ಸಂಘಟಿತ ಹೋರಾಟ ಅಗತ್ಯ.

ಜಿ.ಪರಮೇಶ್ವರ, ಗೃಹ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 23-8-1998

- **ಬೆಲೆ ಏರಿಕೆಗೆ ಕಡಿವಾಣ: ಸರ್ಕಾರಕ್ಕೆ ಬಿಜೆಪಿ ಸಲಹೆ**

ಜೈಪುರ, ಆ. 22 (ಯುಎನ್‌ಐ)– ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿರುವುದರ ಬಗ್ಗೆ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ತೀವ್ರ ಕಳವಳ ವ್ಯಕ್ತಪಡಿಸಿದೆ. ಇದನ್ನು ತಡೆಗಟ್ಟಲು ತುರ್ತು ಕ್ರಮ ಕೈಗೊಳ್ಳಬೇಕೆಂದು ಅದು ಸರ್ಕಾರವನ್ನು ಕೇಳಿಕೊಂಡಿದೆ.

ಇಂದು ಇಲ್ಲಿ ಪಕ್ಷವು ಅಂಗೀಕರಿಸಿರುವ ಆರ್ಥಿಕ ಪರಿಸ್ಥಿತಿ ಮೇಲಿನ ಮೂರು ಪುಟಗಳ ನಿರ್ಣಯದಲ್ಲಿ ಇದನ್ನು ತಿಳಿಸಲಾಗಿದೆ. ಹಿಂದಿನ ಸರ್ಕಾರದ ತಪ್ಪು ನೀತಿಗಳು ಮತ್ತು ಪ್ರತಿಕೂಲ ಹವಾಮಾನದ ಕಾರಣ ಅಗತ್ಯ ವಸ್ತುಗಳ ಬೆಲೆ ವಿಪರೀತವಾಗಿ ಏರಿದೆ ಎಂದು ಕಾರ್ಯಕಾರಿಣಿ ಅಭಿಪ್ರಾಯಪಟ್ಟಿದೆ.

- **ಪ್ರತಿಮಾ ಬೇಡಿ ಶವ ಪತ್ತೆ: ಹುಸಿಯಾದ ಶಿಷ್ಯರ ನಿರೀಕ್ಷೆ**

ಬೆಂಗಳೂರು, ಆ. 22– 'ನೃತ್ಯಗ್ರಾಮ'ದ ಮೂಲಕ ಹೆಸರಘಟ್ಟವನ್ನು ಅಂತರ ರಾಷ್ಟ್ರೀಯ ಖ್ಯಾತಿಗೆ ತಂದ ಪ್ರತಿಮಾ ಬೇಡಿ ಅವರು ಮಾನಸ ಸರೋವರದಿಂದ ಮರಳಿ ಬಂದಾರು ಎಂಬ ಅವರ ಶಿಷ್ಯರ ನಿರೀಕ್ಷೆ ಇಂದು ಹುಸಿಯಾಗಿದೆ.

ಮಾನಸ ಸರೋವರ ಯಾತ್ರೆಗೆ ತೆರಳಿದ್ದ ಪ್ರತಿಮಾ ಅವರು ಉತ್ತರ ಪ್ರದೇಶದ ಪಿತೋರ್‌ಗಢ ಜಿಲ್ಲೆಯ ಮಲ್ಪ ಗ್ರಾಮದಲ್ಲಿ ತಂಗಿದ್ದಾಗ ಮಂಗಳವಾರ ಬೆಳಗಿನ ಜಾವ ಭೂಕುಸಿತ ಸಂಭವಿಸಿ ಕಣ್ಮರೆಯಾಗಿದ್ದರು.

ಪ್ರತಿಮಾ ಅವರ ಶವ ಇಂದು ಸಿಗುವುದರೊಂದಿಗೆ ಕನ್ನಡದ ನೆಲದಲ್ಲೇ ಅರಳಿದ ಒಡಿಸ್ಸಿ ನೃತ್ಯದ ಧ್ರುವತಾರೆಯೊಂದು ಅಸ್ತಂಗತವಾಯಿತು.

ಒಬ್ಬ ಮಹಿಳೆಯಾಗಿ, ಒಂದು ವಿಶ್ವವಿದ್ಯಾಲಯ ಸಾಧಿಸುವುದಕ್ಕಿಂತ ಹೆಚ್ಚಿನ ಸಾಧನೆ ಮಾಡಿ ಈಗ ಇತಿಹಾಸದ ಪುಟದಲ್ಲಿ ಸೇರಿರುವ ಪ್ರತಿಮಾ, ಯುವ ಜನಾಂಗಕ್ಕೆ ಸಾಧನೆಯ ಪ್ರತಿಮೆ. ಆದರೆ, ನೃತ್ಯಗ್ರಾಮದಲ್ಲಿ ಅವರ ಶಿಷ್ಯರು ಕಳೆದ ನಾಲ್ಕು ದಿನಗಳಿಂದ ನಟರಾಜನಿಗೆ ಪೂಜೆ ಸಲ್ಲಿಸುತ್ತಾ ಪ್ರತಿಮಾ ವಾಪಸಾಗುತ್ತಾರೆ ಎಂದು ನಿರೀಕ್ಷೆ ಮಾಡುತ್ತಿದ್ದುದು ಹುಸಿಯಾಯಿತು.

50 ವರ್ಷಗಳ ಹಿಂದೆ

ಗುರುವಾರ, 23-8-1973

- **ಕಡಿಮೆ ಬೆಲೆಗೆ ವಿವಿಧ ಧಾನ್ಯ ಮಾರಾಟಕ್ಕೆ ಹುಬ್ಬಳ್ಳಿ– ಧಾರವಾಡ ವರ್ತಕರ ಒಪ್ಪಿಗೆ**

ಹುಬ್ಬಳ್ಳಿ, ಆ. 22– ಹುಬ್ಬಳ್ಳಿ– ಧಾರವಾಡ ನಗರಗಳ ವರ್ತಕರ ಪ್ರತಿನಿಧಿಗಳು ವಿವಿಧ ವರ್ಗಗಳ ಅಕ್ಕಿ, ಶಕ್ತಿಮಾನ್ ಜೋಳ, ಕಡಲೇಕಾಯಿ ಎಣ್ಣೆ ಮುಂತಾದವುಗಳನ್ನು ಕಡಿಮೆ ಬೆಲೆಗೆ ಮಾರಲು ಒಪ್ಪಿರುವರೆಂದು ಜಿಲ್ಲಾಧಿಕಾರಿ ಪಿ.ಡಿ. ಶೆಣೈ ಅವರು ಇಂದು ಇತ್ತಿರುವ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ವಾಣಿಜ್ಯೋದ್ಯಮ ಸಂಘದ ಅಧ್ಯಕ್ಷ ಆರ್.ಜಿ. ವಾಲಿ ಮತ್ತು ಹುಬ್ಬಳ್ಳಿ-ಧಾರವಾಡ ನಗರಗಳ ಏಳು ಜನ ವರ್ತಕ ಪ್ರಮುಖರು ಇಂದು ಹುಬ್ಬಳ್ಳಿಯಲ್ಲಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ, ಧಾನ್ಯ ವಶಪಡಿಸಿಕೊಳ್ಳಲು ಸರ್ಕಾರ ಮಾಡಿರುವ ಆಜ್ಞೆಯಿಂದ ಉದ್ಭವಿಸಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿದರೆಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

- **ಸರ್ಕಾರಿ ದಾಖಲೆ ಪತ್ರ ನೋಡಲು ಸಾಮಾನ್ಯ ಪ್ರಜೆಗಿರುವಷ್ಟೇ ಸಂಸತ್ ಸದಸ್ಯರಿಗೂ ಹಕ್ಕು: ಧಿಲ್ಲೋನ್**

ನವದೆಹಲಿ, ಆ. 22– ಸರ್ಕಾರಿ ದಾಖಲೆ ಪತ್ರ ನೋಡಲು ಸಂಸತ್ ಸದಸ್ಯರಿಗೂ ಸಾಮಾನ್ಯ ಜನರಿಗಿರುವಷ್ಟೇ ಹಕ್ಕಿದೆ. ಅದಕ್ಕಿಂತ ಹೆಚ್ಚಿಲ್ಲ.

ಈ ವಿಷಯದಲ್ಲಿ ಸಂಸತ್ ಸದಸ್ಯರ ಹಕ್ಕಿಗೆ ಸಾಮಾನ್ಯ ಪ್ರಜೆಯಂತೆ ಚ್ಯುತಿಯಾ-ಗಿದ್ದರೆ ಸಾಮಾನ್ಯ ಪ್ರಜೆ ಹೇಗೆ ಪರಿಹಾರ ಪಡೆಯಬಹುದೋ ಹಾಗೆಯೇ ಸಂಸತ್ ಸದಸ್ಯರೂ ಪಡೆಯಬಹುದು. ಈ ಹಕ್ಕು ಸದನದ ಹಕ್ಕಿನ ಪ್ರಶ್ನೆಯಾಗದು ಎಂದು ಲೋಕಸಭೆಯಲ್ಲಿ ಇಂದು ಸ್ಪೀಕರ್ ಧಿಲ್ಲೋನ್ ರೂಲಿಂಗ್ ಇತ್ತರು.

ವಿದೇಶಿ ನೆಲದಲ್ಲಿ ಮೊದಲ ಬಾರಿಗೆ ಭಾರತದ ಹೆಜ್ಜೆ ಗುರುತು ನಿರೂಪಿಸುವ ಪ್ರಯತ್ನ

ಉನ್ನತ ಶಿಕ್ಷಣ: ಸೀಮೋಲ್ಲಂಘನೆಯ ಪರ್ವ



ವಿಶ್ಲೇಷಣೆ

ಎಚ್.ಆರ್. ಕೃಷ್ಣಮೂರ್ತಿ

ದೇಶದ ಎಂಟು ಉತ್ಕೃಷ್ಟ ಸಾರ್ವಜನಿಕ ಸಂಸ್ಥೆಗಳಲ್ಲಿ ಒಂದೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ, ಮದ್ರಾಸ್‌ನಲ್ಲಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಸಂಸ್ಥೆಗೆ ಈಗ ಸಂಭ್ರಮ, ಸಡಗರದ ಸಮಯ. 1959ರಲ್ಲಿ ಅಸ್ತಿತ್ವಕ್ಕೆ ಬಂದ ದೇಶದ ಮೂರನೆಯ ಐಐಟಿ ಇದು. ಈ ಆರು ದಶಕಗಳಲ್ಲಿ ಅಪೂರ್ವ ಪ್ರಗತಿ ಸಾಧಿಸಿ, ದೇಶದ ಅಗ್ರಮಾನ್ಯ ತಾಂತ್ರಿಕ ಉನ್ನತ ಶಿಕ್ಷಣ ಸಂಸ್ಥೆಗಳ ಪಟ್ಟಿಗೆ ಸೇರಿದೆ. ಇದೀಗ ಪೂರ್ವ ಆಫ್ರಿಕಾದ ತಾಂಜೇನಿಯಾ ದೇಶದ ಜಾಂಜಿಬಾರ್ ದ್ವೀಪ ಸಮೂಹದಲ್ಲಿ, ಭಾರತ ಸರ್ಕಾರದ ಮೊದಲ 'ವಿದೇಶಿ ಕ್ಯಾಂಪಸ್' ಸ್ಥಾಪಿಸಿ, ತಾಂತ್ರಿಕ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆ ಪ್ರಾರಂಭಿಸಲಿದೆ. ಮುಂದಿನ ಎರಡು ತಿಂಗಳೊಳಗಾಗಿ ಪ್ರಾರಂಭವಾಗಲಿರುವ ಐಐಟಿ ಮದ್ರಾಸ್‌ನ ಜಾಂಜಿಬಾರ್ ಶಾಖೆ, ದೇಶದ ಉನ್ನತ ಶಿಕ್ಷಣ ಕ್ಷೇತ್ರದ ಅಂತರರಾಷ್ಟ್ರೀಕರಣ ಪ್ರಕ್ರಿಯೆಯಲ್ಲಿ ಅತಿ ಮಹತ್ವದ ಹೆಜ್ಜೆಯಾಗುವ ನಿರೀಕ್ಷೆ ಇದೆ.

ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು 2020ರಲ್ಲಿ ಪ್ರಕಟಿಸಿದ ರಾಷ್ಟ್ರೀಯ ಶಿಕ್ಷಣ ನೀತಿಯ 'ಶಿಕ್ಷಣದ ಅಂತರರಾಷ್ಟ್ರೀಕರಣ' ವಿಭಾಗದಲ್ಲಿ, ನಮ್ಮ ದೇಶದ ಉತ್ಕೃಷ್ಟ ವಿಶ್ವವಿದ್ಯಾಲಯಗಳಿಗೆ ವಿದೇಶಗಳಲ್ಲಿ ಕ್ಯಾಂಪಸ್‌ಗಳನ್ನು ತೆರೆಯುವ ಪ್ರಯತ್ನಕ್ಕೆ ಪ್ರೋತ್ಸಾಹ ನೀಡುವ ಪ್ರಸ್ತಾವ ಇದೆ. ಇದಕ್ಕೆ ಖಚಿತ ರೂಪ ನೀಡಲು 2021ರಲ್ಲಿ, ಜೆಎನ್‌ಯು ಕುಲಪತಿ, ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಹಾಗೂ ದೇಶದ 23 ಐಐಟಿಗಳ ನಿರ್ದೇಶಕರನ್ನು ಒಳಗೊಂಡ ಸಮಿತಿಯೊಂದನ್ನು ರಚಿಸಲಾಯಿತು. ವಿದೇಶಗಳಲ್ಲಿ ನಮ್ಮ ದೇಶದ ಉತ್ಕೃಷ್ಟ ವಿದ್ಯಾಸಂಸ್ಥೆಗಳ ಶಾಖೆಗಳನ್ನು ತೆರೆಯುವ ಪ್ರಸ್ತಾವವನ್ನು ಬಲವಾಗಿ ಬೆಂಬಲಿಸಿದ ಪರಿಣತರ ತಂಡ, ಅಂತಹ ಪ್ರಯತ್ನಕ್ಕೆ ನಾಲ್ಕು ಮಾದರಿಗಳನ್ನು ಸೂಚಿಸಿತು. ಅವುಗಳಲ್ಲಿ ಯಾವುದೇ ಒಂದು ಐಐಟಿ ಸ್ವತಂತ್ರವಾಗಿ ವಿದೇಶಿ ನೆಲದಲ್ಲಿ ಕ್ಯಾಂಪಸ್ ಸ್ಥಾಪಿಸುವ ಮಾದರಿಗೆ ಒಮ್ಮತದ ಬೆಂಬಲ ದೊರೆಯಿತು. ಅದರಂತೆ ಇದೀಗ ಮದ್ರಾಸ್ ಐಐಟಿಯು ಜಾಂಜಿಬಾರ್‌ನಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲಿದೆ.

ತಾಂಜೇನಿಯಾದಲ್ಲಿರುವ ಭಾರತದ ರಾಯಭಾರಿ, ಮದ್ರಾಸ್ ಐಐಟಿಯ ಗ್ಲೋಬಲ್ ಎಂಗೇಜ್‌ಮೆಂಟ್ ವಿಭಾಗದ ಮುಖ್ಯಸ್ಥರು ಮತ್ತು ಜಾಂಜಿಬಾರ್‌ನ ಶಿಕ್ಷಣ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ಜುಲೈ 5ರಂದು ಈ ಶೈಕ್ಷಣಿಕ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಶೈಕ್ಷಣಿಕ ಕಾರ್ಯ-ಕ್ರಮಗಳು, ಪಠ್ಯ ವಿಷಯ, ಬೋಧನೆಯ ಮಾದರಿ, ಸಂಶೋಧನೆ, ವಿದ್ಯಾರ್ಥಿಗಳ ಆಯ್ಕೆಯಂತಹವನ್ನು ಐಐಟಿ ಮದ್ರಾಸ್ ಸ್ವತಂತ್ರವಾಗಿ ನಿರ್ವಹಿಸಲಿದೆ. ಪದವಿ, ಸ್ನಾತಕೋತ್ತರ ಮತ್ತು ಪಿಎಚ್.ಡಿ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ. ಮೂಲ ಸೌಕರ್ಯ ನಿರ್ಮಾಣ, ವಿಶ್ವವಿದ್ಯಾಲಯದ ವಿವಿಧ ಯೋಜನೆಗಳು, ಕಾರ್ಯಾಚರಣೆಯ ಖರ್ಚುವೆಚ್ಚವನ್ನು ತಾಂಜೇನಿಯಾ ಸರ್ಕಾರ ಭರಿಸಲಿದೆ.

ಜಾಂಜಿಬಾರ್ ದ್ವೀಪ ಸಮೂಹದ ಬ್ವೆಲಿಯೋ ಜಿಲ್ಲೆಯಲ್ಲಿ ಕಲ್ಪಿಸಲಾಗಿರುವ ತಾತ್ಕಾಲಿಕ ವ್ಯವಸ್ಥೆಯಲ್ಲಿ ಸಂಸ್ಥೆ ಕೆಲಸ ಪ್ರಾರಂಭಿಸಲಿದೆ. 2026ರ ಪ್ರಾರಂಭದ ವೇಳೆಗೆ 300 ಎಕರೆಗಳಷ್ಟು ವಿಶಾಲವಾದ ಪ್ರದೇಶದ ಎರಡು ಕ್ಯಾಂಪಸ್‌ಗಳಲ್ಲಿ ವಿವಿಧ ವಿಭಾಗಗಳು, ಅತ್ಯಾಧುನಿಕ ತಂತ್ರಜ್ಞಾನದ ಸುಸಜ್ಜಿತ ಕೊಠಡಿಗಳು, ಪ್ರಯೋಗಾಲಯ ಎಲ್ಲವೂ ಸಿದ್ಧವಾಗಲಿವೆ. ಸದ್ಯಕ್ಕೆ ಈ ವರ್ಷದ ಅ. 25ರ ಸುಮಾರಿಗೆ ಪದವಿಯ ಮಟ್ಟದಲ್ಲಿ ಬಿಎಸ್/ಬಿಟೆಕ್ (ಡೇಟಾ ಸೈನ್ಸ್) ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ಎಂಟೆಕ್ (ಎಐ) ತರಗತಿಗಳು ಪ್ರಾರಂಭವಾಗಲಿವೆ. ಮುಂದೆ ಕಂಪ್ಯೂಟರ್ ಸೈನ್ಸ್ ಮತ್ತು ಮಾಹಿತಿ ತಂತ್ರಜ್ಞಾನ, ಮಷೀನ್ ಲರ್ನಿಂಗ್, ರೊಬಾಟಿಕ್ಸ್, ಎಲೆಕ್ಟ್ರಾನಿಕ್ಸ್, ಗಣಿಗಾರಿಕೆ ಮತ್ತು ಶಕ್ತಿ ಉತ್ಪಾದನೆಗೆ ಸಂಬಂಧಿಸಿದ ಕೋರ್ಸ್‌ಗಳನ್ನು ಪ್ರಾರಂಭಿಸಲಾಗುವುದು. ಸದ್ಯಕ್ಕೆ, ಈ ವರ್ಷ ಪದವಿಗೆ 50 ಮತ್ತು ಸ್ನಾತಕೋತ್ತರ ತರಗತಿಗೆ 20 ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ಪ್ರಾರಂಭವಾಗಿದೆ. ಪದವಿಗೆ ವಾರ್ಷಿಕ 12,000 ಡಾಲರ್‌ಗಳು ಮತ್ತು ಸ್ನಾತಕೋತ್ತರಕ್ಕೆ 4,000 ಡಾಲರ್‌ಗಳ ಶುಲ್ಕವನ್ನು ನಿಗದಿಪಡಿಸಲಾಗಿದೆ.

ಪ್ರಾರಂಭದಲ್ಲಿ ಮದ್ರಾಸ್ ಐಐಟಿಯ ಪ್ರಾಧ್ಯಾಪಕರೇ ಜಾಂಜಿಬಾರ್ ಕ್ಯಾಂಪಸ್‌ನಲ್ಲಿ ತರಗತಿಗಳನ್ನು ನಡೆಸುವುದರ ಜೊತೆಗೆ ಸ್ಥಳೀಯ ಅಧ್ಯಾಪಕರಿಗೆ ತರಬೇತಿ ನೀಡಲಿದ್ದಾರೆ. ನಮ್ಮ ದೇಶದ ವಿವಿಧ ಐಐಟಿಗಳಲ್ಲಿ ಅಧ್ಯಯನ ಮಾಡುತ್ತಿರುವ ತಾಂಜೇನಿಯಾದ ವಿದ್ಯಾರ್ಥಿಗಳನ್ನು ಮುಂದೊಮ್ಮೆ ಜಾಂಜಿಬಾರ್ ಐಐಟಿಗೆ ಕರೆತರುವ ಉದ್ದೇಶದಿಂದ ಅವರಿಗೆ ವಿಶೇಷ ವಿದ್ಯಾರ್ಥಿ ವೇತನವನ್ನು ಭಾರತ ಸರ್ಕಾರ ನೀಡಲು ಪ್ರಾರಂಭಿಸಿದೆ. ಮದ್ರಾಸ್ ಐಐಟಿ ಜಾಗತಿಕವಾಗಿ ವಿವಿಧ ಸಂಸ್ಥೆಗಳೊಂದಿಗೆ ಇಂಟರ್ನ್‌ಶಿಪ್, ವಿದ್ಯಾರ್ಥಿ ವಿನಿಮಯಕ್ಕಾಗಿ ಮಾಡಿಕೊಂಡಿರುವ ಎಲ್ಲ ಒಪ್ಪಂದಗಳ ಪ್ರಯೋಜನಗಳೂ ಜಾಂಜಿಬಾರ್ ಐಐಟಿಯ ವಿದ್ಯಾರ್ಥಿಗಳಿಗೆ ದೊರೆಯಲಿವೆ. ಎಲ್ಲದಕ್ಕಿಂತ ಹೆಚ್ಚಾಗಿ ಮದ್ರಾಸ್ ಐಐಟಿಯೇ ಅಂತಿಮವಾಗಿ ಪದವಿಯನ್ನು ನೀಡುವುದರಿಂದ ಆ ಸಂಸ್ಥೆಯ ಬ್ರ್ಯಾಂಡ್ ಮೌಲ್ಯ ವಿದ್ಯಾರ್ಥಿಗಳು ಪಡೆದ ಪದವಿಗಳಿಗೆ ವಿಶೇಷ ಮೆರುಗು ನೀಡಲಿದೆ.

ಭಾರತೀಯ ವಿದ್ಯಾರ್ಥಿಗಳಿಗೂ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ವಿಶೇಷ ಆಕರ್ಷಣೆಯೆಂದರೆ, ಜಗತ್ತಿನಲ್ಲೇ ಅತ್ಯಂತ ಕಠಿಣ ಪ್ರವೇಶ ಪರೀಕ್ಷೆಯೆಂಬ ಕುಖ್ಯಾತಿಗೆ ಒಳಗಾಗಿರುವ ಎರಡು ಹಂತದ ಜೆಇಇ ಪರೀಕ್ಷೆ ಇಲ್ಲದೆಯೇ ಐಐಟಿಗೆ ಪ್ರವೇಶ ಪಡೆಯಲು ಕಲ್ಪಿಸಿರುವ ಅವಕಾಶ. ಜೆಇಇ ಬದಲಿಗೆ ಮೊದಲನೆಯ ಹಂತದಲ್ಲಿ ಮದ್ರಾಸ್ ಐಐಟಿ ರೂಪಿಸಿರುವ 'ಐಐಟಿ- ಜಾಂಜಿಬಾರ್ ಸ್ಕ್ರೀನಿಂಗ್ ಟೆಸ್ಟ್' ತೆಗೆದುಕೊಳ್ಳಬೇಕು. ಅದರಲ್ಲಿ ಯಶಸ್ವಿಯಾದವರಿಗೆ ಒಂದು ತಿಂಗಳ ತರಬೇತಿ ನೀಡಲಾಗುತ್ತದೆ. ಆನಂತರ ನಡೆಯುವ ಸಂದರ್ಶನದ ಮೂಲಕ ಯಶಸ್ವಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ದೇಶದಲ್ಲಿ ವಾರ್ಷಿಕ 11 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಜೆಇಇ ಪರೀಕ್ಷೆ ಬರೆಯುತ್ತಾರೆ. 8- 9ನೇ ತರಗತಿಯಲ್ಲಿ ಇರುವಾಗಲೇ ಜೆಇಇ ಪರೀಕ್ಷೆಗೆ ಸಿದ್ಧತೆ ಪ್ರಾರಂಭವಾಗುವುದುಂಟು. ಐದಾರು ವರ್ಷಗಳ ಸತತ ಸಿದ್ಧತೆಯ ನಂತರ ಜೆಇಇಯಲ್ಲಿ ಉತ್ತೀರ್ಣರಾಗಿ ಐಐಟಿ ಸೇರುವ ವಿದ್ಯಾರ್ಥಿಗಳ ಗುಣಮಟ್ಟ ಸಹಜವಾಗಿಯೇ ಅತ್ಯುತ್ತಮವಾಗಿರುತ್ತದೆ. ಇಂತಹ ಕಠಿಣ ಆಯ್ಕೆಯ ಪ್ರಕ್ರಿಯೆಯಿಲ್ಲದೇ ಜಾಂಜಿಬಾರ್ ಐಐಟಿ ಸೇರುವ ವಿದ್ಯಾರ್ಥಿಗಳದ್ದು 'ಹಿಂಬಾಗಿಲ ಪ್ರವೇಶ'ವಾಗುತ್ತದೆ ಎಂಬ ಟೀಕೆಯಿದೆ. ಆದರೆ ಜಾಂಜಿಬಾರ್ ಐಐಟಿಗೆ ಮೊದಲ ಪ್ರವೇಶ ನಡೆಯುವ ಮುಂಚೆಯೇ ಬಂದಿರುವ ಈ ಟೀಕೆಯನ್ನು, ಮದ್ರಾಸ್ ಐಐಟಿಯ ಪ್ರಾಧ್ಯಾಪಕರು ಅಕಾಲಿಕ ಮತ್ತು ಅಪಕ್ವವೆಂದು ತಿರಸ್ಕರಿಸಿದ್ದಾರೆ.

ಪ್ರವೇಶ ಪರೀಕ್ಷೆಯ ಸ್ವರೂಪ ಬೇರೆಯದಿರಬಹುದು, ಆದರೆ ಒಟ್ಟಾರೆಯಾಗಿ ಮದ್ರಾಸ್ ಐಐಟಿಯ ಬ್ರ್ಯಾಂಡ್ ಮೌಲ್ಯ ನಿರ್ಧರಿಸಿರುವ ಶಿಕ್ಷಣದ ಗುಣಮಟ್ಟ ಯಾವ ಹಂತದಲ್ಲೂ ಇಳಿಯುವುದಿಲ್ಲವೆಂಬ ಸ್ಪಷ್ಟನೆಯನ್ನು ಸಂಸ್ಥೆಯ ಆಡಳಿತ ಮಂಡಳಿ ನೀಡಿದೆ. ಜಾಂಜಿಬಾರ್ ಐಐಟಿಯಲ್ಲಿ ಭಾರತೀಯ ವಿದ್ಯಾರ್ಥಿಗಳೇ ತುಂಬಿಹೋಗುವುದನ್ನು ತಡೆಯಲು ಈ ವರ್ಷದ ಪದವಿ ತರಗತಿಗೆ 20 ಭಾರತೀಯ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿದೆ. ಮುಂದೆಯೂ ಈ ಸಂಖ್ಯೆಯ ಮೇಲೆ ನಿಯಂತ್ರಣ ಇರಲಿದೆ. ಮದ್ರಾಸ್ ಐಐಟಿಯ ಹೊಸ ಸಾಹಸದ ಬೆನ್ನಿನಲ್ಲೇ ದೆಹಲಿಯ ಐಐಟಿ ಅಬುಧಾಬಿಯಲ್ಲಿ ಸ್ಥಾಪಿಸಲಿರುವ ಕ್ಯಾಂಪಸ್‌ನಲ್ಲಿ 2024ರ ಜನವರಿಯಿಂದ ಪದವಿ ಮತ್ತು ಸೆಪ್ಟೆಂಬರ್‌ನಿಂದ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಲಿದೆ. ಖರಗ್‌ಪುರ ಐಐಟಿಯು ಕ್ವಾಲಾಲಂಪುರದಲ್ಲಿ ಕ್ಯಾಂಪಸ್ ಸ್ಥಾಪಿಸುವ ಯೋಚನೆಯಲ್ಲಿದೆ. ಖಾಸಗಿ ವಲಯದಲ್ಲಿ ನಮ್ಮ ದೇಶದ ಹಲವಾರು ವಿಶ್ವವಿದ್ಯಾಲಯಗಳು ದುಬೈ, ತಾಷ್ಕೆಂಟ್, ಮಾರಿಷಸ್, ನೈರೋಬಿಯಲ್ಲಿ ಶಾಖೆಗಳನ್ನು ಸ್ಥಾಪಿಸಿವೆ.

ಜಾಗತಿಕ ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ, ವಿದೇಶಿ ನೆಲದಲ್ಲಿ ಮೊದಲ ಬಾರಿಗೆ ಭಾರತದ ಹೆಜ್ಜೆ ಗುರುತನ್ನು ಸಮರ್ಥವಾಗಿ ನಿರೂಪಿಸುವ ಈ ಪ್ರಯತ್ನದಲ್ಲಿ ಅನೇಕ ಸವಾಲುಗಳಿವೆ. ಅವೆಲ್ಲವನ್ನೂ ಎದುರಿಸಿ, ಹೊಸ ಸಂಸ್ಥೆಯೊಂದನ್ನು ಕಟ್ಟುವ ಒಟ್ಟಾರೆ ಜವಾಬ್ದಾರಿಯನ್ನು, ಮದ್ರಾಸ್ ಐಐಟಿಯ ಕೆಮಿಕಲ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕಿ, ಅಮೆರಿಕದ ಮೆಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯ ಹಿರಿಯ ವಿದ್ಯಾರ್ಥಿ ಪ್ರೀತಿ ಅಹಲ್ಯ ಅವರಿಗೆ ನೀಡಲಾಗಿದೆ. ಅದು ಅಸಾಧಾರಣ ಪ್ರತಿಭೆ, ಸಾಮರ್ಥ್ಯದ ಮಹಿಳೆಗೆ ಸಂದಿರುವ ಅತಿ ವಿಶಿಷ್ಟ ಗೌರವ.

ಜಾಂಜಿಬಾರ್ ಕ್ಯಾಂಪಸ್‌ನ ಎಲ್ಲ ಮೂಲ ಸೌಕರ್ಯಗಳನ್ನು ನಿರ್ಮಿಸುವ ಜವಾಬ್ದಾರಿಯನ್ನು ಸಿವಿಲ್ ಎಂಜಿನಿಯರಿಂಗ್ ಪ್ರಾಧ್ಯಾಪಕಿ ಡಾ. ಲಿಜಿ ಫಿಲಿಪ್ ನಿರ್ವಹಿಸಲಿದ್ದಾರೆ. ಅಂದಹಾಗೆ, ಪ್ರೀತಿ ಅಹಲ್ಯ, ಸಾಂಸ್ಕೃತಿಕ ನಗರಿ ಮೈಸೂರಿನ ಶಿಕ್ಷಕರ ಕುಟುಂಬದಲ್ಲಿ ಜನ್ಮತಾಳಿ, ಮೈಸೂರಿನಲ್ಲೇ ಪ್ರಾರಂಭಿಕ ಶಿಕ್ಷಣವನ್ನು ಮುಗಿಸಿದ ವಿದ್ಯಾರ್ಥಿನಿ. ಇಂದು ಕರ್ನಾಟಕ, ಕನ್ನಡದ ಹೆಮ್ಮೆಯ ಹೆಣ್ಣುಮಗಳು.



ಚುರುಮುರಿ



ಗೃಹಲಕ್ಷ್ಮಿ ಬ್ರ್ಯಾಂಡ್

• ಮಣ್ಣೆರಾಜು

'ವರಮಹಾಲಕ್ಷ್ಮಿ ಹಬ್ಬದ ಸ್ಪೆಷಲ್ ಗೃಹಲಕ್ಷ್ಮಿ ಬ್ರ್ಯಾಂಡ್ ಸೀರೆ ತೋರಿಸಲಾ?' ಸೀರೆ ಅಂಗಡಿ ಸೇಲ್ಸ್‌ಗರ್ಲ್ ಕೇಳಿದಳು.

'ತೋರಿಸಿ, ಗೃಹಲಕ್ಷ್ಮಿ ಬ್ರ್ಯಾಂಡ್ ಸೀರೆ ಎಲ್ಲಾ ಕಡೆ ಟ್ರೆಂಡ್ ಆಗಿದೆ' ಅಂದಳು ಸುಮಿ.

'ಗೃಹಲಕ್ಷ್ಮಿ ಸೀರೆಯ ವಿಶೇಷವೇನು?' ಶಂಕ್ರಿ ಕೇಳಿದ.

'ಈ ಸೀರೆಯನ್ನು ವರಮಹಾಲಕ್ಷ್ಮಿಗೆ ಉಡಿಸಿದರೆ ಸಿರಿಸಂಪತ್ತು ವೃದ್ಧಿಯಾಗುತ್ತದೆ. ಮೇಡಂ ಉಟ್ಟುಕೊಂಡರೆ ಅವರ ಸೌಂದರ್ಯ, ಸೌಭಾಗ್ಯ ಹೆಚ್ಚುತ್ತದೆ... ಎಲ್ಲಾ ಕಲರ್, ಡಿಸೈನಿನ ಸೀರೆಗಳೂ ನಮ್ಮಲ್ಲಿವೆ' ಎಂದು ಸೀರೆ ತಂದು ಹರಡಿದಳು.

'ಸಿಎಂ, ಡಿಸಿಎಂ, ಮಹಿಳಾ ಅಭಿವೃದ್ಧಿ ಖಾತೆ ಮಂತ್ರಿ ಫೋಟೊ ಇರುವ ಗೃಹಲಕ್ಷ್ಮಿ ಸೀರೆಗಳೂ ನಮ್ಮಲ್ಲಿವೆ, ಕೆಲವರು ಇಷ್ಟಪಟ್ಟು ಕೊಂಡುಕೊಳ್ತಿದ್ದಾರೆ'.

'ಸೀರೆಗಳ ಬೆಲೆ ದುಬಾರಿ' ಅಂದ ಶಂಕ್ರಿ.

'ಸುಲಭ ಕಂತುಗಳ ಆಫರ್ ಇದೆ ಸಾರ್. ಎರಡು ಸಾವಿರ ರೂಪಾಯಿ ಪಾವತಿಸಿದರೆ ಸಾಕು, ಗೃಹಲಕ್ಷ್ಮಿ ಹಣ ನಿಮ್ಮ ಅಕೌಂಟಿಗೆ ಬಂದಮೇಲೆ ನಮ್ಮ ಅಕೌಂಟಿಗೆ ಕಂತನ್ನು ವರ್ಗಾಯಿಸಬಹುದು'.

'ಸೀರೆ ಬೇಗ ಕೊಳೆಯಾಗುತ್ತಾ?' ಸುಮಿ ಕೇಳಿದಳು.

'ಉಟ್ಟರೆ ಮಾತ್ರ ಕೊಳೆಯಾಗುತ್ತದೆ... ನಮ್ಮಲ್ಲಿ ಸೀರೆ ಕ್ಲೀನಿಂಗ್ ಆಫರ್ ಇದೆ ಮೇಡಂ. ಯಾವುದೇ ಹಟಮಾರಿ ಕೊಳೆಯಾದರೂ ತೆಗೆದು, ಒಗೆದು, ಇಸ್ತ್ರಿ ಮಾಡಿಕೊಡ್ತೀವಿ, ನೀವು ಕ್ಲೀನಿಂಗ್ ಚಾರ್ಜ್ ಕೊಟ್ಟರೆ ಸಾಕು'.

'ಎರಡು ಸೀರೆ ಪ್ಯಾಕ್ ಮಾಡಿ. ಹಬ್ಬದಲ್ಲಿ ವರಮಹಾಲಕ್ಷ್ಮಿ ಜೊತೆಗೆ ತಿಂಗಳ ಭಾಗ್ಯ ಕರುಣಿಸುವ ಗೃಹಲಕ್ಷ್ಮಿಯನ್ನೂ ಕೂರಿಸಿ ಪೂಜೆ ಮಾಡ್ತೀನಿ, ಇಬ್ಬರೂ ಲಕ್ಷ್ಮಿಯರಿಗೆ ಒಂದೊಂದು ಸೀರೆ ಉಡಿಸಬೇಕು'.

'ನೀವು ಮನೆಲಕ್ಷ್ಮಿ, ಹಬ್ಬಕ್ಕೆ ನಿಮಗೊಂದು ಹೊಸ ಸೀರೆ ಬೇಡ್ವಾ?' ಅಂದಳು ಸೇಲ್ಸ್‌ಗರ್ಲ್.

'ಹೌದಲ್ವಾ?!' ಎಂದುಕೊಂಡು ತನಗೊಂದು ಸೀರೆ ಆರಿಸಿಕೊಂಡ ಸುಮಿ, 'ಅದೆಷ್ಟೇ ಒಳ್ಳೆಯ ಸೀರೆ ಉಟ್ಟರೂ ಬ್ಲೌಸ್ ಸ್ಟಿಚ್ಚಿಂಗ್ ಸರಿಯಿಲ್ಲ ಅನ್ನೋ ಕೊರಗು ಇದ್ದೇಇರುತ್ತೆ ಕಣ್ರೀ...' ಎಂದು ಸಂಕಟಪಟ್ಟಳು.

ಸಂಗತ

ಮಹಿಳಾ ವಿರೋಧಿ ಮೌಲ್ಯದ ವಿಜೃಂಭಣೆ!

ಸರ್ಕಾರವು ಸಾಮಾಜಿಕ ಅನಿಷ್ಟಗಳ ನಿವಾರಣೆ ಬಗೆಗೆ ಚಿಂತನೆ ಮಾಡುವುದನ್ನು ಬಿಟ್ಟು, ಅಪಮೌಲ್ಯಗಳಿಗೆ ಆತುಕೊಳ್ಳುವುದು ಸರಿಯಲ್ಲ

• ಮೀನಾಕ್ಷಿ ಬಾಳಿ

ವರಮಹಾಲಕ್ಷ್ಮಿ ಹಬ್ಬದ ದಿನದಂದು (ಆ. 25) ಮುಜರಾಯಿ ದೇವಸ್ಥಾನಗಳಿಗೆ ಬರುವ ಮಹಿಳೆಯರಿಗೆ ಹಿಂದಿನ ವರ್ಷದಂತೆ ಈ ಬಾರಿಯೂ ಅರಿಸಿನ, ಕುಂಕುಮ, ಕಸ್ತೂರಿ ಹಾಗೂ ಹಸಿರು ಬಳೆಗಳನ್ನು ಅದೂ ಸರ್ಕಾರದ ಲಾಂಛನ ಮತ್ತು ದೇವಸ್ಥಾನದ ಹೆಸರು ಒಳಗೊಂಡ ಲಕೋಟೆಯಲ್ಲಿ ನೀಡಿ ಗೌರವಿಸುವುದಾಗಿ ಧಾರ್ಮಿಕ ದತ್ತಿ ಇಲಾಖೆಯು ಸುತ್ತೋಲೆ ಹೊರಡಿಸಿರುವುದು ಸುದ್ದಿಯಾಗಿದೆ (ಪ್ರ.ವಾ., ಆ. 22). ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಹೆಚ್ಚು ಮಹತ್ವವಿದ್ದು, ಇಂಥ ವಸ್ತುಗಳನ್ನು ಕೊಡುವ ಮೂಲಕವೇ ಅವರನ್ನು ಗೌರವಿಸಲು ಸಾಧ್ಯ ಹಾಗೂ ಈ ಹಿಂದೆ ಆಡಳಿತ ನಡೆಸಿದವರು ಈ ನಡೆಗಳನ್ನು ಅಧಿಕೃತಗೊಳಿಸಿರುವುದರಿಂದ ತಾವೂ ಅದನ್ನು ಮುಂ-ದುವರಿಸುವುದಾಗಿ ಇಲಾಖೆ ಹೇಳಿದೆ.

ಸರ್ಕಾರವೇ ಮುಂದಾಗಿ ಸ್ತ್ರೀ ವಿರೋಧಿ ನಿಲುವುಗಳನ್ನು ಪೋಷಿಸುವುದು ಇದೆಂಥ ವಿಪರ್ಯಾಸ? ಬಳೆ, ಕುಂಕುಮ, ಅರಿಸಿನ ಎಲ್ಲವೂ ಮುತ್ತೈದೆತನದ ಸಂಕೇತ, ಗಂಡನುಳ್ಳ ಬಾಲೆಗೆ ಇವೆಲ್ಲ ಶುಭ ಸಂಕೇತ ಎಂಬುದು ಸಮಾಜದ ರೂಢಿಗತ ನಂಬಿಕೆ. ಅಂದರೆ ಗಂಡ ಸತ್ತ ಮಹಿಳೆಯರಿಂದ ಇವನ್ನೆಲ್ಲ ಕಿತ್ತುಕೊಳ್ಳಲಾಗುತ್ತದೆ. ಅಷ್ಟೇ ಅಲ್ಲ, ಇಂಥ ಸಂಕೇತಗಳನ್ನು ಇಟ್ಟುಕೊಂಡೇ ಅವರನ್ನು ಅಪಮಾನಿಸಲಾಗುತ್ತದೆ. ಗಂಡ ಸತ್ತವರು ಕುಂಕುಮ, ಅರಿಸಿನ ಹಚ್ಚಿಕೊಳ್ಳಬಾರದು, ಹೂ ಧರಿಸಬಾರದು, ಗಾಜಿನ ಬಳೆ ತೊಡಬಾರದು, ಅದರಲ್ಲೂ ದೇವಸ್ಥಾನ ಮುಂತಾದೆಡೆ ಉಡಿ ತುಂಬಿಸಿಕೊಳ್ಳಬಾರದು. ಗಂಡನಿರುವ ಮಹಿಳೆಯರು ಮಾತ್ರ ಇವನ್ನೆಲ್ಲ ಪಡೆಯಲು ಅರ್ಹರು. ತಾಳಿ ಕಟ್ಟಿದ ಗಂಡ ಎಂಥವನೇ ಇರಲಿ, ಗಂಡನ ದೀರ್ಘಾಯುಷ್ಯಕ್ಕಾಗಿ ಮಹಿಳೆಯರು ವ್ರತ, ನಿಯಮ, ಉಪವಾಸ, ಪೂಜೆ ಏನೆಲ್ಲ ಮಾಡಬೇಕು. ತನ್ನ ಪ್ರಾಣ ಕೊಟ್ಟಾದರೂ ಆತನ ಪ್ರಾಣ ಉಳಿಸಬೇಕು. ಏಕೆಂದರೆ ಆತ ಸತ್ತರೆ, ಅವಳು ವಿಧವೆ. ವಿಧವೆಗೆ ಯಾವ ಶುಭ ವಸ್ತುವೂ ಗೌರವ ತಂದುಕೊಡದು. ಅದು ಧರ್ಮನಿಷಿದ್ಧ, ಶಾಸ್ತ್ರಕ್ಕೆ ದೂರ. ಹೀಗೆ, ಗಂಡನನ್ನು ಕಳೆದುಕೊಂಡ ಮಹಿಳೆಯೊಟ್ಟಿಗೆ ಎಷ್ಟೆಲ್ಲಾ ಕೆಟ್ಟದಾಗಿ ನಡೆದುಕೊಳ್ಳಬೇಕು ಎಂಬುದಕ್ಕೆ ಸನಾತನ ಶಾಸ್ತ್ರಗಳಲ್ಲಿ ದೊಡ್ಡದಾದ ಪಟ್ಟಿಯೇ ಇದೆ.

ಒಟ್ಟಾರೆ ಈ ಎಲ್ಲ ವಸ್ತುಗಳು ಗಂಡ ಸತ್ತವಳನ್ನು ಗುರುತಿಸಿ ಅಪಮಾನಿಸಲು ದಾರಿ ಮಾಡಿಕೊಡುತ್ತವೆ. ಎಷ್ಟೋ ಕಾಲದ ದೀರ್ಘ ಮಹಿಳಾ ಚಳವಳಿಯ ಕಾರಣವಾಗಿ ಈಗೀಗ ಮಹಿಳೆಯರು ಗಂಡ ಸತ್ತರೂ ಕುಂಕುಮ, ಅರಿಸಿನ, ಹೂ ಧರಿಸುವ ಧೈರ್ಯ ತೋರುತ್ತಿದ್ದಾರೆ. ಮನೆಯ ಹೊರಗಿನ ದುಡಿಮೆ ಅನಿವಾರ್ಯವಾದ ಕಾರಣಕ್ಕಾಗಿಯೂ ಸ್ವಾಭಿಮಾನಿ ಬದುಕಿಗಾಗಿಯೂ ಒಂದಷ್ಟು ಕಂದಾಚಾರಗಳನ್ನು ಧಿಕ್ಕರಿಸುತ್ತಿದ್ದಾರೆ. ಆದರೆ ಏನೇ ಧರಿಸಿದರೂ ಇವೆಲ್ಲ ಖಾಸಗಿಯಾಗಿಯೇ ವಿನಾ ಅಧಿಕೃತ ಸಮಾರಂಭದಲ್ಲಿ ಅಲ್ಲ.

ದೇವಸ್ಥಾನಗಳಲ್ಲೇನೋ 'ನೀನು ವಿಧವೆಯೇ?' ಎಂದು ಕೇಳಿ ಬಳೆ, ಕುಂಕುಮ ವಿತರಿಸಲಿಕ್ಕಿಲ್ಲ. ಆದರೆ ಗಂಡನನ್ನು ಕಳೆದುಕೊಂಡ ಎಷ್ಟು ಜನ ಮಹಿಳೆಯರು ಅದೂ ದೇವಸ್ಥಾನಗಳಲ್ಲಿ ಇವುಗಳನ್ನು ಪಡೆದುಕೊಳ್ಳಲು ಮುಂದೆ ಬಂದಾರು? ಅವ್ಯಕ್ತ ಭಯವೊಂದು ಅವರೊಳಗೆ ಅಡಗಿ ಕುಳಿತಿದ್ದನ್ನು ಅರ್ಥ ಮಾಡಿಕೊ-ಳ್ಳಲಾದೀತೇ? ಅಷ್ಟಕ್ಕೂ ಈ ಭಾರತೀಯ ಸಂಸ್ಕೃತಿ ಎಂಬುದನ್ನು ಹೆಂಗಸರಿಗೆ ಗುತ್ತಿಗೆ ಕೊಡಲಾಗಿದೆಯೇ? ಸಂಸ್ಕೃತಿ ಎಂಬುದು ಸ್ತ್ರೀಯರ ವೇಷಭೂಷಣ, ಊಟ ಉಪಚಾರಗಳ ಸುತ್ತಲೇ ಗಿರಕಿ ಹೊಡೆಯುವುದೇಕೆ? ಇನ್ನು ಈ ದೇಶದಲ್ಲಿ ಸನಾತನ ಮೌಲ್ಯಗಳನ್ನು ಆವಾ-ಹಿಸಿಕೊಂಡಿರುವವರು ಮಾತ್ರವೇ ಇದ್ದಾರೆಯೇ? ದರ್ಗಾಗಳಿಗೆ ಹೋಗುವ ಮುಸ್ಲಿಂ ಮಹಿಳೆಯರು, ಚರ್ಚ್‌ಗಳಿಗೆ ಹೋಗುವ ಕ್ರೈಸ್ತ ಮಹಿಳೆಯರು, ಕೆಳವರ್ಗದ ದೇವಸ್ಥಾನ ಗಳಿಗೆ ಹೋಗುವ ದಲಿತ, ಆದಿವಾಸಿ ಮಹಿಳೆಯರು ಇದ್ದಾರಲ್ಲ. ಅವರಿಗೂ ಅವರವರ ನಂಬಿಕೆಗಳ ಅನುಸಾರ ಏನು ಕೊಡುತ್ತೀರಿ? ಧರ್ಮಾಧಾರಿತವಾದ ಇಂತಹ ನಡೆಯಿಂದ ಒಟ್ಟು ಮಹಿಳೆಯರಲ್ಲಿ ತರತಮ ಎಸಗಿದಂತೆ ಆಗುವುದಿಲ್ಲವೇ? ಯಾವುದೇ ಜಾತಿ, ಧರ್ಮಗಳ ಕಂದಾಚಾರಗಳಿಂದ ಮಹಿಳೆಯರ ಸಬಲೀಕರಣವಾಗದು ಎಂಬ ಕನಿಷ್ಠ ತಿಳಿವಳಿಕೆಯಾದರೂ ಆಳುವವರಿಗೆ ಇರಬೇಕು.



ಇವತ್ತಿಗೂ ಲಕ್ಷಾಂತರ ಹಳ್ಳಿಗಳಲ್ಲಿ ಮಹಿಳೆಯರಿಗೆ ಶೌಚಾಲಯಗಳಿಲ್ಲ. ವರದಕ್ಷಿಣೆ ಪಿಡುಗು ನಿಂತಿಲ್ಲ. ಬಾಲ್ಯವಿವಾಹಗಳು ಹೆಚ್ಚುತ್ತಿವೆ. ಹೆಣ್ಣು ಭ್ರೂಣ ಹತ್ಯೆಯಂತೂ ಎಗ್ಗಿಲ್ಲದೇ ನಡೆಯುತ್ತಿದೆ. ರಾಜ್ಯದಲ್ಲಿ ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳು ಗಾಬರಿ ಹುಟ್ಟಿಸುವಷ್ಟು ಏರುಗತಿಯಲ್ಲಿವೆ. ಇಂಥ ಎಲ್ಲ ಅನಿಷ್ಟಗಳ ನಿವಾರಣೆ ಬಗೆಗೆ ಚಿಂತನೆ ಮಾಡುವುದನ್ನು ಬಿಟ್ಟು, ಸನಾತನಿಗಳು ಹುಟ್ಟುಹಾಕಿದ ಅಪಮೌಲ್ಯಗಳಿಗೆ ಆತುಕೊಳ್ಳುವುದು ಸರ್ಕಾರದ ಬೌದ್ಧಿಕ ದಿವಾಳಿತನವನ್ನು ತೋರಿಸುತ್ತದೆ. ಈ ಹಿಂದೆ ಆಡಳಿತ ನಡೆಸಿದವರ ಸನಾತನ ನಂಬಿಕೆಗಳನ್ನು ತುಷ್ಟೀಕರಿಸುವ ಹುಚ್ಚುತನಕ್ಕೆ ಈಗಿನ ಸರ್ಕಾರ ಇಳಿಯದಿರಲಿ. ನಮ್ಮ ಸಂವಿಧಾನದಲ್ಲಿ ಹೇಳಿದ ವೈಜ್ಞಾನಿಕ ನಡೆ ನಮ್ಮದಾಗಲಿ. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಮತ್ತು 'ಗೃಹಲಕ್ಷ್ಮಿ' ಭಾಗ್ಯ ನೀಡಿದ್ದು ಎಷ್ಟು ಸ್ವಾಗತಾರ್ಹವೋ ಬಳೆ ಕುಂಕುಮ ನೀಡುವುದು ಅಷ್ಟೇ ಖಂಡನಾರ್ಹ.

ವಾಚಕರ ವಾಣಿ

'ಕನ್ನಡ ರತ್ನಕೋಶ' ಕೈಗೆಟುಕುವಂತಿರಲಿ

'ಕನ್ನಡ ರತ್ನಕೋಶ'ದ ಬೆಲೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ಆಗಾಗ್ಗೆ ಹೆಚ್ಚಿಸುತ್ತಲೇ ಬಂದಿದೆ. ನಾನು ಗ್ರಾಮೀಣ ಪ್ರದೇಶದ ಶಾಲೆಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕ. ಮಕ್ಕಳಿಗೆ ಪದ ಸಂಪತ್ತನ್ನು ಹೆಚ್ಚಿಸಬೇಕು ಎಂಬ ಅಭಿಲಾಷೆ ಹೊಂದಿದವನು. ಬಡ ಮಕ್ಕಳಿಗೆ ಈ ಪುಸ್ತಕವನ್ನು ಕೊಂಡುಕೊಳ್ಳಲು ಆರ್ಥಿಕ ತೊಂದರೆಯಾಗುತ್ತಿದೆ.

ಕನ್ನಡ ರತ್ನಕೋಶದ ಬಳಕೆಯಿಂದ ಮಕ್ಕಳಲ್ಲಿ ಜ್ಞಾನ, ಕೌಶಲ, ಪದ ಭಂಡಾರ, ವಾಕ್ಚಾತುರ್ಯ, ಬರವಣಿಗೆ ಕೌಶಲ ಹೆಚ್ಚಾಗುವ ಅವಕಾಶ ಇರುತ್ತದೆ. ಹೀಗಾಗಿ, ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳಿಗೆ ಕನ್ನಡ ರತ್ನಕೋಶವನ್ನು ಸಾಧ್ಯವಾದಷ್ಟು ಮಟ್ಟಿಗೆ ರಿಯಾಯಿತಿ ದರದಲ್ಲಿ ಒದಗಿಸಲು ಪರಿಷತ್ತಿನ ಅಧ್ಯಕ್ಷರು ಮುಂದಾಗಬೇಕು.

ಡಾ. ರಾಜೇಂದ್ರ ಕುಮಾರ್ ಕೆ. ಮುದ್ನಾಳ್, ಠಾಣಗುಂದಿ, ಯಾದಗಿರಿ

ಪಾಪದ ಅರಿವು ಕಾಡದೇಕೆ?

ಸುಮಾರು ಐದು ವರ್ಷಗಳಿಂದ ಶಾಲೆಗೆ ಗೈರುಹಾಜರಾ-ಗಿದ್ದ ಶಿಕ್ಷಕರೊಬ್ಬರು ಸಂಬಳವನ್ನು ಮಾತ್ರ ನಿರಂತರವಾಗಿ ಪಡೆಯುತ್ತಿದ್ದ ಸುದ್ದಿಗೆ ಎಂ.ಪರಮೇಶ್ವರ ಬೇಸರ ವ್ಯಕ್ತಪಡಿಸಿದ್ದಾರೆ (ವಾ.ವಾ., ಆ. 22). ಇದು ಸತ್ಯವಾದರೂ ಅಚ್ಚರಿಯ ಸಂಗತಿ ಎನಿಸುವುದಿಲ್ಲ! ಏಕೆಂದರೆ ಇಂಥ ಭೂಪರು ರಾಜ್ಯದಾದ್ಯಂತ ಇದ್ದಾರೆ. ಶಿಕ್ಷಕರ ಹೆಸರಿನಲ್ಲಿ ಇರುವ ಸಂಘಟನೆಗಳಲ್ಲಿ ತೂರಿಕೊಂಡು, ಒಂದು ದಿನವೂ ಸೀಮೆಸುಣ್ಣ ಹಿಡಿಯದೆ ಬರೀ ರಾಜಕಾರಣ, ಚೀಟಿ- ಬಡ್ಡಿ ವ್ಯವಹಾರ, ರಿಯಲ್ ಎಸ್ಟೇಟ್ ಕೆಲಸ ನಡೆಸಿಕೊಂಡು ಬಿಟ್ಟಿ ಸಂಬಳ ತೆಗೆದುಕೊಳ್ಳುತ್ತಿರುವ ನೂರಾರು ಶಿಕ್ಷಕರಿದ್ದಾರೆ. ತಮ್ಮ ಬದಲಿಗೆ ಅಲ್ಪ ಮೊತ್ತಕ್ಕೆ ಬೇರೆಯವರಿಂದ ದುಡಿಸಿಕೊಂಡು ಪೂರ್ಣ ಪಗಾರವನ್ನು ಜೇಬಿಗೆ ಇಳಿಸಿಕೊಳ್ಳುತ್ತಿರುವವರೂ ಇದ್ದಾರೆ. ಇಂಥವರ ಬಗ್ಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ಇದ್ದರೂ ಅವರು ಯಾವುದೇ ಕ್ರಮ ಕೈಗೊಳ್ಳಲು ಮುಂದಾಗುವುದಿಲ್ಲ.

ಅವರ ಪರಾಕ್ರಮ ಏನಿದ್ದರೂ ಪ್ರಾಮಾಣಿಕವಾಗಿ ಕೆಲಸ ಮಾಡುವ ಶಿಕ್ಷಕರನ್ನು ದಾಖಲೆಗಳ ಹೆಸರಿನಲ್ಲಿ ಗೋಳು ಹೊಯ್ದುಕೊಳ್ಳುವುದಷ್ಟೇ! 'ಆತ್ಮಸಾಕ್ಷಿರಹಿತ ಭೋಗ'ವನ್ನು ಮಹಾತ್ಮ ಗಾಂಧಿ 'ಮಹಾಪಾಪ'ವೆಂದು ಕರೆಯುತ್ತಾರೆ. ಈ ಪಾಪದ ಅರಿವು ಇವರನ್ನು ಕಾಡದೇ ಇರುವುದು ದುರದೃಷ್ಟಕರ.

ಭೀಮಾನಂದ ಮೌರ್ಯ, ಮೈಸೂರು

ಮೂರ್ಖರಾಗುತಿಹರು!

ಸುದ್ದಿ ಹರಿದಾಡುತ್ತಿದೆ
ಹಿಂದಿನ ಬಾರಿ ಆಪರೇಷನ್
ಮಾಡಿಸಿಕೊಂಡವರು
ಮತ್ತೆ ತವರುಮನೆಗೆ?
ಮೂರ್ಖರಾಗುತಿಹರು
ಮತದಾರರು ಕೊನೆಗೆ!

ಮಹಾಂತೇಶ ಮಾಗನೂರ
ಬೆಂಗಳೂರು

ಕುಲಪತಿಗಳೇ ಮೌಢ್ಯ ಬಿತ್ತುವವರಾಗಿದ್ದರೆ...?

ಮೌಢ್ಯ ಬಿತ್ತುವ ಅತಿಥಿಗಳನ್ನು ರಾಜ್ಯದ ವಿಶ್ವವಿದ್ಯಾಲಯಗಳು ತಾವು ಆಯೋಜಿಸುವ ಕಾರ್ಯಕ್ರಮಗಳಿಗೆ ಕರೆಸಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕುಲಪತಿಗಳಿಗೆ ತಾಕೀತು ಮಾಡಿರುವುದು ಸರಿಯಷ್ಟೆ (ಪ್ರ.ವಾ., ಆ. 22). ಆದರೆ ಕುಲಪತಿಗಳೇ ಇಂತಹ ಬಳಗಕ್ಕೆ ಸೇರಿದ್ದರೆ ಏನು ಮಾಡುವುದು?

ರಾಜ್ಯದ ಕುಲಪತಿಗಳಿಗೆ ಕೆಲವು ವಾರಗಳ ಹಿಂದೆ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ತಮ್ಮ ಅಭಿಪ್ರಾಯ ತಿಳಿಸುವಂತೆ ಉನ್ನತ ಶಿಕ್ಷಣ ಸಚಿವರು ಕೇಳಿದ್ದರು. ಇದರ ಪರವಾಗಿ ಮಾತನಾಡಿದರೆ ಪ್ರಸ್ತುತ ಸರ್ಕಾರದ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ, ವಿರುದ್ಧವಾಗಿ ಮಾತನಾಡಿದರೆ ಒಕ್ಕೂಟ ಸರ್ಕಾರದ ಮತ್ತು ರಾಜ್ಯದಲ್ಲಿ ಈ ಹಿಂದೆ ಆಡಳಿತ ನಡೆಸಿದ ಬಿಜೆಪಿಯ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ ಎಂದು ಅನೇಕರು ತುಟಿ ಬಿಚ್ಚಿಲ್ಲ ಎನ್ನಲಾಗಿದೆ. ಇಂತಹ ಕುಲಪತಿಗಳು ಎಂತಹ ಜಾಗತಿಕ ಗುಣಮಟ್ಟದ ವಿಶ್ವವಿದ್ಯಾಲಯಗಳನ್ನು ಕಟ್ಟಬಹುದು? ಅಭಿಪ್ರಾಯ ಸ್ವಾತಂತ್ರ್ಯವು ಪ್ರಜಾಪ್ರಭುತ್ವದ ಬೇರು ಎನ್ನುವುದೇ ಇಲ್ಲಿ ಗೈರಾಗಿದೆ. ಈ ಬಗ್ಗೆ ನಾವು ಗಂಭೀರವಾಗಿ ಚಿಂತಿಸಬೇಕಾಗಿದೆ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಫ್ಯಾಕ್ಟ್ ಚೆಕ್ ಘಟಕ: ಅಪಪ್ರಚಾರಕ್ಕೆ ಕಡಿವಾಣ

ರಾಜ್ಯದಲ್ಲಿ 'ಫ್ಯಾಕ್ಟ್ ಚೆಕ್' (ಸುಳ್ಳು ಸುದ್ದಿ ಪತ್ತೆ) ಘಟಕ ಸ್ಥಾಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮ್ಮತಿ ನೀಡಿರುವುದು (ಪ್ರ.ವಾ., ಆ. 22) ಸ್ವಾಗತಾರ್ಹ. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳುಸುದ್ದಿಗಳನ್ನು ಪ್ರಸಾರ ಮಾಡಿ ಜನರನ್ನು ತಪ್ಪುದಾರಿಗೆ ಎಳೆಯುವ ಜಾಲಗಳು ಇತ್ತೀಚೆಗೆ ಬಹಳಷ್ಟು ಸಕ್ರಿಯವಾಗಿರುವುದನ್ನು ಕಾಣುತ್ತಿದ್ದೇವೆ. ಇದು ಅಕ್ಷಮ್ಯ ಅಪರಾಧ. ಇಂಥ ಕೃತ್ಯಗಳನ್ನು ನಡೆಸುತ್ತಿರುವವರ ಮೇಲೆ ಕಠಿಣವಾದ ಕಾನೂನು ಕ್ರಮ ಕೈಗೊಳ್ಳಬೇಕು. ಆಗಲೇ ಇದಕ್ಕೆ ಕಡಿವಾಣ ಹಾಕಲು ಸಾಧ್ಯ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಪ್ರತ್ಯೇಕ ಸೂಚಕ ಬಳಕೆಯಾಗಲಿ

ವ್ಯಕ್ತಿಯ ಹೆಸರಿನ ಹಿಂದೆ ಡಾ. ಎಂದಿದ್ದರೆ ಅವರು ವೈದ್ಯರು ಎಂದು ಸಾಮಾನ್ಯವಾಗಿ ನಮ್ಮ ಮನಸ್ಸಿಗೆ ಬರುತ್ತದೆ. ಸಂಶೋಧನೆ ನಡೆಸಿ, ಪ್ರಬಂಧ ಮಂಡಿಸಿ ಡಾಕ್ಟರೇಟ್ ಪಡೆದವರ ಹಾಗೂ ಬೇರೆ ಬೇರೆ ಕ್ಷೇತ್ರಗಳಲ್ಲಿನ ಸಾಧನೆಗಾಗಿ ಗೌರವ ಡಾಕ್ಟರೇಟ್ ಪಡೆದವರ ಹೆಸರುಗಳ ಹಿಂದೆಯೂ ಡಾ. ಎಂದು ಬರೆಯುವುದರಿಂದ ಜನಸಾಮಾನ್ಯರಿಗೆ ಸಹಜವಾಗಿಯೇ ಗೊಂದಲ ಉಂಟಾಗುತ್ತದೆ.

ತುರ್ತು ಆತಂಕದ ಸಂದರ್ಭಗಳಲ್ಲಿ, ಮನೆಯ ಹೊರಗಿನ ನಾಮಫಲಕದಲ್ಲಿ ಹೆಸರಿನ ಹಿಂದೆ ಡಾ. ಎಂದಿದ್ದುದನ್ನು ನೋಡಿ, ಅವರು ವೈದ್ಯರಿರಬಹುದೆಂದು ತಪ್ಪಾಗಿ ಭಾವಿಸಿ, ಜನರು ಅವರ ಬಳಿ ಚಿಕಿತ್ಸೆಗಾಗಿ ತೆರಳಿ ನಿರಾಸೆ ಅನುಭವಿಸಿದ ನಿದರ್ಶನಗಳೂ ಇವೆ. ವೈದ್ಯರು ಹಾಗೂ ಇತರ ಡಾಕ್ಟರೇಟ್ ಪದವಿ ಹೊಂದಿದವರನ್ನು ಸರಿಯಾಗಿ ಗುರುತಿಸಲು ಅನುವಾಗುವಂತೆ, ಅವರ ಹೆಸರುಗಳ ಹಿಂದೆ ಪ್ರತ್ಯೇಕವಾದ ಸೂಚಕಗಳನ್ನು ಬಳಸುವ ಬಗ್ಗೆ ಪರಿಶೀ-ಲಿಸಬೇಕಾಗಿದೆ.

ಬಿ.ಎನ್.ಭರತ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಕಾವೇರಿ ಜಲ ವಿವಾದ

ಸಂಕಷ್ಟ ಸೂತ್ರ ಇಲ್ಲದಿರುವುದೇ ಸಂಕಟ

ಕಾವೇರಿ ಜಲಾನಯನ ಪ್ರದೇಶದಲ್ಲಿ ವಾಡಿಕೆಯಷ್ಟು ಮಳೆಯಾದಾಗ ತಮಿಳುನಾಡಿನ ಪಾಲಿನ ನೀರನ್ನು ಕರ್ನಾಟಕವು ಬಿಡುತ್ತಲೇ ಬಂದಿದೆ. ಆದರೆ, ಮಳೆ ಕೊರತೆಯಾದಾಗ ಏನು ಮಾಡಬೇಕು ಎಂಬುದನ್ನು ವಿವರಿಸುವ ಸಂಕಷ್ಟ ಸೂತ್ರವೇ ಇಲ್ಲ. ಮಳೆಯಾಗದೆ, ನೀರಿನ ಕೊರತೆಯಾದಾಗ ಕರ್ನಾಟಕ ಎಷ್ಟು ನೀರು ಉಳಿಸಿಕೊಳ್ಳಬೇಕು ಮತ್ತು ತಮಿಳುನಾಡಿಗೆ ಎಷ್ಟು ನೀರು ಬಿಡಬೇಕು ಎಂಬುದನ್ನು ನಿರ್ಧರಿಸುವುದಕ್ಕೆ ಯಾವುದೇ ಲೆಕ್ಕಾಚಾರ ಇಲ್ಲ. ಇದೇ ಇಂದಿನ ಸಮಸ್ಯೆಗೆ ಕಾರಣ ಎಂಬ ವಾದವಿದೆ

ಪ್ರಜಾವಾಣಿ ವಾರ್ತೆ

ಕರ್ನಾಟಕ ಮತ್ತು ತಮಿಳುನಾಡು ನಡುವಣ ಕಾವೇರಿ ನದಿ ನೀರು ಹಂಚಿಕೆಯ ಸಮಸ್ಯೆ ಇಂದು–ನಿನ್ನೆಯದ್ದಲ್ಲ. ನೀರು ಹಂಚಿಕೆ ಸಂಬಂಧ ಮದ್ರಾಸ್ ಪ್ರೆಸಿಡೆನ್ಸಿ ಮತ್ತು ಮೈಸೂರು ಸಂಸ್ಥಾನದ ಮಧ್ಯೆ 1892 ಮತ್ತು 1924ರಲ್ಲಿ ಒಪ್ಪಂದಗಳು ಆಗಿದ್ದವು. ಆ ಪ್ರಕಾರ ಮೈಸೂರು ಸಂಸ್ಥಾನದ ಜಲಾಶಯಗಳಲ್ಲಿ ಸಂಗ್ರಹಿಸಿದ ನೀರನ್ನು ತಮಿಳುನಾಡಿಗೆ ಬಿಡಬೇಕಿತ್ತು. ವಾಡಿಕೆಗಿಂತ ಹೆಚ್ಚು ಮಳೆಯಾದರೆ, ನೀರು ಬಿಡಲು ಅಡ್ಡಿಯಿರಲಿಲ್ಲ. ಆದರೆ ವಾಡಿಕೆಗಿಂತ ಕಡಿಮೆ ಮಳೆಯಾಗಿ, ನೀರಿನ ಕೊರತೆ ಉಂಟಾದರೆ ಹಂಚಿಕೆ ಸಮಸ್ಯೆ ತಲೆದೋರುತ್ತಿತ್ತು. ಸ್ವಾತಂತ್ರ್ಯಾನಂತರದ ತಮಿಳುನಾಡು ಮತ್ತು ಕರ್ನಾಟಕದ ಮಧ್ಯೆಯೂ ಇದೇ ಸಮಸ್ಯೆ ಮುಂದುವರಿದಿದೆ. ಇದು ಜತೆಯಲ್ಲಿ ಯಾವ ರಾಜ್ಯಕ್ಕೆ ಎಷ್ಟು ನೀರು ಬೇಕು ಎಂಬುದರ ವಿವಾದದ ಮತ್ತೊಂದು ಕೇಂದ್ರವಾಗಿತ್ತು. ಹಲವು ದಶಕಗಳ ನ್ಯಾಯಮಂಡಳಿ ಹೋರಾಟ ಮತ್ತು ಸುಪ್ರೀಂ ಕೋರ್ಟ್‌ನಲ್ಲಿನ ಹೋರಾಟದ ನಂತರ ಯಾವ ರಾಜ್ಯಕ್ಕೆ ಎಷ್ಟು ನೀರು ಹಂಚಬೇಕು ಎಂಬುದು ನಿರ್ಧಾರವಾಗಿದೆ. ಕಡಿಮೆ ಮಳೆಯಾದರೆ, ನೀರನ್ನು ಹೇಗೆ ಹಂಚಿಕೊಳ್ಳಬೇಕು ಎಂಬುದನ್ನು ಸೂಚಿಸುವ ಸಂಕಷ್ಟ ಸೂತ್ರ ಇಲ್ಲ. ಇದು ಎರಡೂ ರಾಜ್ಯಗಳ ನಡುವಣ ನೀರು ಹಂಚಿಕೆ ವಿವಾದವನ್ನು ಜೀವಂತವಾಗಿ ಇರಿಸಿದೆ ಎಂದು ಹೇಳಲಾಗುತ್ತಿದೆ.

ಕಾವೇರಿ ಜಲವಿವಾದ ನ್ಯಾಯಮಂಡಳಿಯ ತೀರ್ಪನ್ನು ಮಾರ್ಪಡಿಸಿ, 2018ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಕಾವೇರಿ ಜಲಾನಯನ ಪ್ರದೇಶದಲ್ಲಿ ವಾಡಿಕೆಯಷ್ಟು ಮಳೆಯಾದರೆ ವಾರ್ಷಿಕ 740 ಟಿಎಂಸಿ ಅಡಿಯಷ್ಟು ನೀರು ಲಭ್ಯವಾಗುತ್ತದೆ ಎಂಬುದನ್ನು ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿ ಒಪ್ಪಿಕೊಂಡಿವೆ. ಲಭ್ಯವಿರುವ 740 ಟಿಎಂಸಿ ಅಡಿ ನೀರಿನಲ್ಲಿ ಕರ್ನಾಟಕಕ್ಕೆ 284.75, ತಮಿಳುನಾಡಿಗೆ 404.25, ಕೇರಳಕ್ಕೆ 30 ಮತ್ತು ಪುದುಚೇರಿಗೆ 7 ಟಿಎಂಸಿ ಅಡಿಯಷ್ಟು ನೀರನ್ನು ಸುಪ್ರೀಂ ಕೋರ್ಟ್ ಮರುಹಂಚಿಕೆ ಮಾಡಿದೆ. ಇದನ್ನು ಎಲ್ಲಾ ರಾಜ್ಯಗಳೂ ಒಪ್ಪಿಕೊಂಡಿವೆ.

ಕಾವೇರಿ ಜಲಾನಯನ ಪ್ರದೇಶದ ಎಲ್ಲಾ ರಾಜ್ಯಗಳೂ ಒಪ್ಪಿಕೊಂಡ ಪ್ರಕಾರ ತಮಿಳುನಾಡಿನಲ್ಲೇ 227 ಟಿಎಂಸಿ ಅಡಿಯಷ್ಟು ನೀರು ಲಭ್ಯವಿದೆ. ಉಳಿದ 177.25 ಟಿಎಂಸಿ ಅಡಿಯಷ್ಟು ನೀರನ್ನು ಪ್ರತಿ ವರ್ಷ ತಮಿಳುನಾಡಿಗೆ ಹರಿಸಬೇಕು ಎಂಬುದನ್ನು ಎರಡೂ ರಾಜ್ಯಗಳು ಒಪ್ಪಿಕೊಂಡಿವೆ. 2018ರಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನ ನಂತರ, ರಾಜ್ಯದಲ್ಲಿ ಪ್ರತಿ ವರ್ಷವೂ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಹಾಗಾಗಿ ಅಷ್ಟೂ ವರ್ಷ 177.25 ಟಿಎಂಸಿ ಅಡಿಗಿಂತ ಹೆಚ್ಚು ನೀರನ್ನು ತಮಿಳುನಾಡಿಗೆ ಹರಿಸುತ್ತಲೇ ಬಂದಿದೆ. ಆದರೆ, ಈ ವರ್ಷ ರಾಜ್ಯದಲ್ಲಿ ಮಳೆ ಕೊರತೆಯಾಗಿದೆ. ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳಲ್ಲಿ ನೀರಿನ ಸಂಗ್ರಹವೂ ಕುಸಿದಿದೆ. ಮಳೆಯೇ ಇಲ್ಲದಿರುವ ಕಾರಣದಿಂದ, ಒಳಹರಿವೂ ನಿಂತಿದೆ. ಈ ಸಂದರ್ಭದಲ್ಲೂ ತಮಿಳುನಾಡಿಗೆ ನೀರು ಬಿಡಬೇಕಿದೆ.

ನ್ಯಾಯಮಂಡಳಿಯು ತಮಿಳುನಾಡಿಗೆ ನೀರು ಹಂಚಿಕೆ ಮಾಡುವಾಗ, ಪ್ರತಿ ತಿಂಗಳೂ ಎಷ್ಟು ನೀರು ಹರಿಸಬೇಕು ಎಂಬುದನ್ನೂ ನಿಗದಿ ಮಾಡಿದೆ. ನೀರು ಹಂಚಿಕೆ ಮತ್ತು ನೀರು ಹರಿಸುವ ಕಾರ್ಯದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಕಾವೇರಿ ನೀರು ಮೇಲ್ವಿಚಾರಣಾ ಪ್ರಾಧಿಕಾರವನ್ನು ರಚಿಸಲಾಗಿದೆ. ಮಳೆ ಕೊರತೆಯಾಗಿ ನೀರಿನ ಲಭ್ಯತೆ ಕಡಿಮೆಯಾದರೆ, ಏನು ಮಾಡಬೇಕು ಎಂಬುದನ್ನು ಪ್ರಾಧಿಕಾರ ನಿರ್ಧರಿಸಬೇಕು ಎಂದು ನ್ಯಾಯಮಂಡಳಿ ಹೇಳಿದೆ. ಆದರೆ, ಕಡಿಮೆಯಾದಾಗ ನೀರನ್ನು ಎಷ್ಟು ಪ್ರಮಾಣದಲ್ಲಿ ಹಂಚಿಕೆ ಮಾಡಬೇಕು ಎಂಬುದನ್ನು ವಿವರಿಸುವ ಯಾವುದೇ ಸೂತ್ರವನ್ನು ನ್ಯಾಯಮಂಡಳಿ ರೂಪಿಸಿಲ್ಲ. ಹೀಗಾಗಿ ಮಳೆ ಕಡಿಮೆಯಾದರೆ ಏನು ಮಾಡಬೇಕು ಎಂಬುದರ ಸಂಪೂರ್ಣವಾಗಿ ಪ್ರಾಧಿಕಾರದ ವಿವೇಚನೆಗೆ ಬಿಟ್ಟ ವಿಚಾರವಾಗಿದೆ. ಮಳೆ ಕಡಿಮೆಯಾದಾಗಲೂ ತನ್ನ ಪಾಲಿನ ನೀರನ್ನು ಬಿಡಿ ಎಂದು ತಮಿಳುನಾಡು ಪಟ್ಟು ಹಿಡಿಯುತ್ತದೆ. ಪ್ರಾಧಿಕಾರವು ನೀರು ಬಿಡುತ್ತದೆ. ಆಗ ಕರ್ನಾಟಕಕ್ಕೆ ನೀರಿನ ಕೊರತೆಯಾಗಿ, ಬೇಳೆಗಳಿಗೆ ನೀರು ಇಲ್ಲದಂತಾಗುತ್ತದೆ. ಕಡೆಗೆ ಕುಡಿಯುವ ನೀರಿಗೆ ಕೊರತೆಯಾಗುವ ಅಪಾಯವೂ ಎದುರಾಗುತ್ತದೆ.

ಈಗ ಇಂಥದ್ದೇ ಸ್ಥಿತಿ ಎದುರಾಗಿದೆ. ರಾಜ್ಯದಲ್ಲಿ ಈ ಬಾರಿ ಮಳೆ ಕೊರತೆಯಾಗಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿನ ಜಲಾಶಯಗಳಲ್ಲಿ ವಾಡಿಕೆಯಷ್ಟು ನೀರು ಸಂಗ್ರಹವೇ ಆಗಿಲ್ಲ. ಕಬಿನಿ ಮತ್ತು ಕೃಷ್ಣರಾಜಸಾಗರದಲ್ಲಿ 2022ರ ಆಗಸ್ಟ್ 21ರ ವೇಳೆಗೆ 102.63 ಟಿಎಂಸಿ ಅಡಿಯಷ್ಟು ನೀರು ಇತ್ತು. ಆದರೆ ಈ ವರ್ಷ ಆಗಸ್ಟ್ 21ರ ವೇಳೆಗೆ ಈ ಎರಡೂ ಜಲಾಶಯಗಳಲ್ಲಿ ಇದ್ದ ನೀರಿನ ಸಂಗ್ರಹ 69.80 ಟಿಎಂಸಿ ಅಡಿ ಮಾತ್ರ. ತಮ್ಮ ಪಾಲಿನ ನೀರು ಬಿಡಿ ಎಂದು ತಮಿಳುನಾಡು ಪಟ್ಟು ಹಿಡಿದಿದೆ. ಪ್ರಾಧಿಕಾರವೂ ನೀರು ಬಿಡುತ್ತಿದೆ.

ನೀರಿನ ಲಭ್ಯತೆ ಅಂದಾಜು

ವಾಡಿಕೆಯಂತೆ ಮಳೆಯಾದರೆ, ಕಾವೇರಿ ಮತ್ತು ಅದರ ಉಪನದಿಗಳ ಜಲಾನಯನ ಪ್ರದೇಶದಲ್ಲಿ ಅಂದಾಜು 740 ಟಿಎಂಸಿ ಅಡಿಯಷ್ಟು ನೀರು ಲಭ್ಯವಿರುತ್ತದೆ ಎಂದು ತಜ್ಞರು ಅಂದಾಜಿಸಿದ್ದಾರೆ. ಇದನ್ನು ಕರ್ನಾಟಕ, ತಮಿಳುನಾಡು ಮತ್ತು ಕೇರಳ ಒಪ್ಪಿಕೊಂಡಿವೆ. ಈ ಅಂದಾಜಿನ ಆಧಾರದಲ್ಲೇ ಮೂರು ರಾಜ್ಯಗಳು ಮತ್ತು ಪುದುಚೇರಿ ಕೇಂದ್ರಾಡಳಿತ ಪ್ರದೇಶಕ್ಕೆ ನೀರು ಹಂಚಿಕೆ ಮಾಡಲಾಗಿದೆ.

ನೀರಿನ ಕೊರತೆಯಾದಾಗ, ತನ್ನ ಬಳಕೆಗೆಂದು ಸಂಗ್ರಹಿಸಿಟ್ಟುಕೊಂಡ ನೀರನ್ನು ಕರ್ನಾಟಕವು ತಮಿಳುನಾಡಿಗೆ ಬಿಡುವುದೇ ಇಲ್ಲ ಎಂದು ಹೇಳಲಾಗದು. ಒಂದೊಮ್ಮೆ ಹಾಗೆ ಹೇಳಿದರೆ, ಪ್ರಾಧಿಕಾರವು ಕೇಂದ್ರ ಸರ್ಕಾರದ ನೆರವಿನೊಂದಿಗೆ ನೀರನ್ನು ಬಿಡುವ ಕೆಲಸವನ್ನು ಮಾಡುತ್ತದೆ.

ತಮಿಳುನಾಡಿಗೆ ಪ್ರತಿ ತಿಂಗಳೂ ಹರಿಸಬೇಕಾದ ನೀರು

ತಿಂಗಳು	ಹರಿಸಬೇಕಾದ ನೀರು (ಟಿಎಂಸಿ ಅಡಿಗಳಲ್ಲಿ)	ತಿಂಗಳು	ಹರಿಸಬೇಕಾದ ನೀರು (ಟಿಎಂಸಿ ಅಡಿಗಳಲ್ಲಿ)
ಜೂನ್	9.19	ನವೆಂಬರ್	3.78
ಜುಲೈ	31.24	ಡಿಸೆಂಬರ್	7.35
ಆಗಸ್ಟ್	45.95	ಜನವರಿ	2.76
ಸೆಪ್ಟೆಂಬರ್	36.76	ಫೆಬ್ರುವರಿ	2.5
ಅಕ್ಟೋಬರ್	20.22	ಮಾರ್ಚ್	2.5
		ಏಪ್ರಿಲ್	2.5
		ಮೇ	2.5


+10 ಟಿಎಂಸಿ ಅಡಿಯಷ್ಟು ನೀರನ್ನು ತಮಿಳುನಾಡಿಗೆ ಒಂದು ವರ್ಷದಲ್ಲಿ ಬಿಡಬೇಕು

740 ಟಿಎಂಸಿ ಅಡಿ
ಕಾವೇರಿ ನದಿ ಜಲಾನಯನ ಪ್ರದೇಶದಲ್ಲಿ ಲಭ್ಯವಿರುವ ಒಟ್ಟು ನೀರು

284.75 ಟಿಎಂಸಿ ಅಡಿ
ಕರ್ನಾಟಕಕ್ಕೆ ಹಂಚಿಕೆಯಾದ ಒಟ್ಟು ನೀರು

30 ಟಿಎಂಸಿ ಅಡಿ
ಕೇರಳಕ್ಕೆ ಹಂಚಿಕೆಯಾದ ನೀರು

- ಕೇರಳವು ಅಷ್ಟೂ ನೀರನ್ನು ಬಳಸಿಕೊಳ್ಳಲು ಸಾಧ್ಯವಿಲ್ಲದ ಕಾರಣ, ಆ ನೀರನ್ನು ತಮಿಳುನಾಡಿಗೆ ಹರಿಸಬೇಕು ಎಂದು ನ್ಯಾಯಮಂಡಳಿ ತೀರ್ಪು ನೀಡಿತ್ತು. ಸುಪ್ರೀಂ ಕೋರ್ಟ್ ಸಹ ಇದರಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ



404.25 ಟಿಎಂಸಿ ಅಡಿ
ಸುಪ್ರೀಂ ಕೋರ್ಟ್ ತೀರ್ಪಿನ ನಂತರ ತಮಿಳುನಾಡಿಗೆ ಹಂಚಿಕೆ ಮಾಡಲಾದ ಒಟ್ಟು ನೀರಿನ ಪ್ರಮಾಣ

227 ಟಿಎಂಸಿ ಅಡಿಯಷ್ಟು
ನೀರು ತಮಿಳುನಾಡಿನಲ್ಲೇ ಲಭ್ಯವಿರುತ್ತದೆ

177.25 ಟಿಎಂಸಿ ಅಡಿಯಷ್ಟು
ನೀರನ್ನು ಕರ್ನಾಟಕವು ತಮಿಳುನಾಡಿಗೆ ಬಿಡಬೇಕು




ಪ್ರಾಧಿಕಾರದ ನಿರ್ದೇಶನ ಪಾಲನೆ ಅಗತ್ಯ

ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯ ಕೊರತೆಯಾದಾಗ ಏನು ಮಾಡಬೇಕು ಎಂಬುದನ್ನು ವಿವರಿಸುವ ಸಂಕಷ್ಟ ಸೂತ್ರವೇ ಇಲ್ಲ ಎಂಬ ಮಾತು ಸರಿಯಲ್ಲ. ಈ ದಿಸೆಯಲ್ಲಿ ಸುಪ್ರೀಂ ಕೋರ್ಟ್ ಯಾವುದೇ ಸಂಕಷ್ಟ ಹಂಚಿಕೆ ಸೂತ್ರವನ್ನು ರೂಪಿಸಿಲ್ಲವಾದರೂ ಅಧಿಸೂಚಿತ ಯೋಜನೆಯ ಅಡಿಯಲ್ಲಿ 10 (3), (i), (ii) ಮತ್ತು (iii)ರಲ್ಲಿ ನೀರಿನ ಹಂಚಿಕೆ ಕಾರ್ಯ ವಿಧಾನಕ್ಕೆ ಪರಿಹಾರ ಒದಗಿಸಲಾಗಿದೆ.

ಸಂಕಷ್ಟದ ಪರಿಸ್ಥಿತಿಯಲ್ಲಿ ಕುಡಿಯುವುದಕ್ಕೆ, ಕೃಷಿಗೆ, ಕೈಗಾರಿಕೆಗೆ ಮತ್ತು ಇತರೆ ಉಪಯೋಗಕ್ಕಾಗಿ ಉಭಯ ರಾಜ್ಯಗಳು ಎಷ್ಟು ಪ್ರಮಾಣದ ನೀರು ಹಂಚಿಕೊಳ್ಳಬೇಕು ಎಂಬುದನ್ನು ಸ್ಪಷ್ಟವಾಗಿ ವಿವರಿಸಲಾಗಿದೆ.

ಕೆ.ಶಶಿಕಿರಣ ಶೆಟ್ಟಿ, ಅಡ್ವೊಕೇಟ್ ಜನರಲ್, ಕರ್ನಾಟಕ ಸರ್ಕಾರ



ರಾಜಕೀಯ ಸಲ್ಲ

ನೀರಿನ ಕೊರತೆಯಾದಾಗ ರಾಜ್ಯವು ಎಷ್ಟು ನೀರನ್ನು ಉಳಿಸಿಕೊಳ್ಳಬೇಕು ಮತ್ತು ತಮಿಳುನಾಡಿಗೆ ಎಷ್ಟು ನೀರು ಬಿಡಬೇಕು ಎಂಬುದನ್ನು ನಿರ್ಧರಿಸಲು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವಿದೆ. ಅದರ ನಿರ್ದೇಶನಗಳ ಅನುಸಾರವೇ ಕಾವೇರಿ ನೀರು ನಿಯಂತ್ರಣ ಸಮಿತಿ ಕಾರ್ಯ ನಿರ್ವಹಿಸುತ್ತದೆ. ಹೀಗಿರುವಾಗ ಸಂಕಷ್ಟ ಸೂತ್ರದ ಬಗ್ಗೆ ಯಾವುದೇ ಪರಿಹಾರ ಇಲ್ಲ ಎಂಬುದನ್ನು ಒಪ್ಪಲಾಗದು.

ಹೆಚ್ಚುವರಿ ಇದ್ದಾಗ ಯಾವುದೇ ಸಮಸ್ಯೆ ಇರುವುದಿಲ್ಲ. ಆದರೆ, ಕೊರತೆ ಇದ್ದಾಗ ಅದನ್ನು ನಿರ್ವಹಿಸುವ ಬಗ್ಗೆ ಯಾವುದೇ ರಾಜಕೀಯ ಮತ್ತು ಗಲಾಟೆಗಳಿಗೆ ಅವಕಾಶ ನೀಡದೆ ರಾಜ್ಯದ ರೈತರ ಹಿತದೃಷ್ಟಿಯಿಂದ ಕ್ರಮ ವಹಿಸಬೇಕು.

ಉದಯ ಹೊಳ್ಳ, ಮಾಜಿ ಅಡ್ವೊಕೇಟ್ ಜನರಲ್

ಆಧಾರ: ಕಾವೇರಿ ಜಲವಿವಾದ ನ್ಯಾಯಮಂಡಳಿ ತೀರ್ಪು, ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠದ ತೀರ್ಪು



ಜಾಹ್ನವಿ

ರೂಪೇಶ್‌ಗೆ ಜಾಹ್ನವಿ ಜೋಡಿ

ಬಿಗ್‌ಬಾಸ್ ವಿಜೇತ, ರಾಕ್‌ಸ್ಟಾರ್ ಖ್ಯಾತಿಯ ರೂಪೇಶ್ ಶೆಟ್ಟಿ ನಟನೆಯ ಹೊಸ ಸಿನಿಮಾ ಬುಧವಾರ (ಆ.23) ಸೆಟ್ಟೇರುತ್ತಿದ್ದು, ಚಿತ್ರದ ನಾಯಕಿಯನ್ನು ಚಿತ್ರತಂಡ ಪರಿಚಯಿಸಿದೆ.

ನ್ಯೂಸ್ ಆ್ಯಂಕರ್ ಆಗಿ ಸುದ್ದಿ ಮನೆಯಲ್ಲಿ ಸದ್ದು ಮಾಡಿದ್ದ, ಬಳಿಕ ಗಿಚ್ಚಿ ಗಿಲಿಗಿಲಿ ಶೋ ಮೂಲಕ ಕಿರುತೆರೆಗೆ ಪ್ರವೇಶಿಸಿದ್ದ ಜಾಹ್ನವಿ ಈಗ ‘ಅಧಿಪತ್ರ’ ಸಿನಿಮಾದಲ್ಲಿ ನಾಯಕಿಯಾಗಿ ರೂಪೇಶ್ ಶೆಟ್ಟಿಗೆ ಜೋಡಿಯಾಗಲಿದ್ದಾರೆ. ಈ ಮೂಲಕ ಸ್ಯಾಂಡಲ್‌ವುಡ್‌ಗೆ ಪ್ರವೇಶಿಸಲಿದ್ದಾರೆ ಜಾಹ್ನವಿ. ಸದ್ಯ ‘ಮಜಾ ಕೆಫೆ’ ಎಂಬ ಶೋ ನಡೆಸಿಕೊಡುತ್ತಿರುವ ಜಾಹ್ನವಿ ಚಂದನವನದಲ್ಲೂ ಸಕ್ರಿಯರಾಗುವತ್ತ ಹೆಜ್ಜೆ ಇಡುತ್ತಿದ್ದಾರೆ.

ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವ ಇರುವ ಚಯನ್ ಶೆಟ್ಟಿ ‘ಅಧಿಪತ್ರ’ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದು, ಇದು ಇವರ ನಿರ್ದೇಶನದ ಚೊಚ್ಚಲ ಚಿತ್ರವಾಗಿದೆ. ಕೆ.ಆರ್. ಸಿನಿಕಂಬೈನ್ಸ್ ಬ್ಯಾನರ್‌ನಡಿಯಲ್ಲಿ ತಯಾರಾಗುತ್ತಿರುವ ‘ಅಧಿಪತ್ರ’ ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಹೊಂದಿದೆ.

‘ಮೆಕ್ಸಿಕೊ’ದಿಂದ ಬಂದ ಧನಂಜಯ

‘ಬಡವ ರಾಸ್ಕಲ್’ ಚಿತ್ರತಂಡ ಮತ್ತೆ ಒಂದಾಗಿದೆ. ಈ ಚಿತ್ರ ನಿರ್ದೇಶಿಸಿದ್ದ ಶಂಕರ್‌ಗುರು, ನಟ ಡಾಲಿ ಧನಂಜಯ ಜೊತೆ ‘ಅಣ್ಣ From Mexico’ ಸಿನಿಮಾ ಘೋಷಿಸಿದ್ದಾರೆ. ಧನಂಜಯ ಜನ್ಮದಿನದ ಪ್ರಯುಕ್ತ ಮಂಗಳವಾರ ತಡರಾತ್ರಿಯಿಂದಲೇ ಸಂಭ್ರಮ ಶುರುವಾಗಿದೆ. ಅವರ ನಟನೆಯ ಚಿತ್ರಗಳ ಟೀಸರ್, ಪೋಸ್ಟರ್‌ಗಳು ಬಿಡುಗಡೆಗೊಂಡಿವೆ.

2021ರಲ್ಲಿ ತೆರೆಗೆ ಬಂದ ಬಡವ ರಾಸ್ಕಲ್ ಸೂಪರ್ ಹಿಟ್ ಆಗಿತ್ತು. ಈ ಚಿತ್ರದ ಮೂಲಕ ಧನಂಜಯ ನಿರ್ಮಾಪಕರಾಗಿ ಬಡ್ತಿ ಪಡೆದಿದ್ದರು. ತಮ್ಮದೇ ಡಾಲಿ ಪಿಕ್ಚರ್ಸ್‌ನಡಿ ನಿರ್ಮಿಸಿ ನಟಿಸಿದ್ದರು.



ಚಿತ್ರದ ಪೋಸ್ಟರ್ ಬಿಡುಗಡೆಗೊಂಡಿದ್ದು, ಧನಂಜಯ ಕೊರಳಿಗೆ ಕರ್ನಾಟಕ ಮ್ಯಾಪ್ ಇರುವ ಪದಕ ಧರಿಸಿ, ವಿಚಿತ್ರ ಅವತಾರದಲ್ಲಿ ಕುತೂಹಲ ಮೂಡಿಸಿದ್ದಾರೆ. ‘ಆ್ಯಕ್ಷನ್‌ನೊಂದಿಗೆ ಮನರಂಜನೆ ಚಿತ್ರವಾಗಿದ್ದು, ಅಜ್ಜಿ ಮೊಮ್ಮಗನ ಬಾಂಧವ್ಯದ ಕಥೆಯೂ ಸಿನಿಮಾದಲ್ಲಿರಲಿದೆ’ ಎಂದು ನಿರ್ದೇಶಕರು ಹೇಳಿದ್ದಾರೆ.

ಸತ್ಯ ರಾಯಲ್ ನಿರ್ಮಾಣದಲ್ಲಿ ತಯಾರಾಗಲಿರುವ ಈ ಚಿತ್ರಕ್ಕೆ ವಾಸುಕಿ ವೈಭವ್ ಸಂಗೀತ ನಿರ್ದೇಶನ ಮಾಡಲಿದ್ದು, ನವೆಂಬರ್ ತಿಂಗಳಿನಿಂದ ಶೂಟಿಂಗ್ ಶುರುವಾಗಲಿದೆ. ಮೆಕ್ಸಿಕೊ ಸೇರಿದಂತೆ ಹಲವೆಡೆ ಚಿತ್ರೀಕರಣ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ರೋಹಿತ್ ಪದಕಿ ನಿರ್ದೇಶಿಸಿ, ಧನಂಜಯ ನಟಿಸಿರುವ ‘ಉತ್ತರಕಾಂಡ’ ಚಿತ್ರದ ಟೀಸರ್ ಕೂಡ ಬಿಡುಗಡೆಗೊಂಡಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮುಸ್ಲಿಂ ಹೆಣ್ಣುಮಗಳೊಬ್ಬಳ ಕೈ ಕಾಲುಗಳನ್ನು ಕಟ್ಟಿ ನೀರಿನಲ್ಲಿ ಮುಳುಗಿಸಿರುವ ಹಾಗೂ ಹಿಂದೂ ಹುಡುಗರ ತಂಡವೊಂದು ಆಕೆಯನ್ನು ರಕ್ಷಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. ‘ಇಸ್ಲಾಂನ ವೈಜ್ಞಾನಿಕ ಮನೋಭಾವವನ್ನು ನೋಡಿ. ನೀರಿನಲ್ಲಿ 12 ದಿನಗಳ ವರೆಗೆ ಹೆಣ್ಣುಮಗಳನ್ನು ಮುಳುಗಿಸಿ ಇಟ್ಟರೆ ಆಕೆ ಗರ್ಭಧರಿಸುತ್ತಾಳೆ ಎಂದು ಬಾಬಾ ಹೇಳಿದರಂತೆ. ಆದ್ದರಿಂದ ಆಕೆಯನ್ನು ನೀರಿನಲ್ಲಿ ಮುಳುಗಿಸಿ ಇಟ್ಟಿದ್ದಾರೆ’ ಎಂಬ ಬರಹವನ್ನು ವಿಡಿಯೊದೊಂದಿಗೆ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.



ಅಂಕುರ್ ಜತುಸ್‌ಕರಣ್ ಎನ್ನುವ ಕಂಟೆಂಟ್ ಕ್ರಿಯೇಟರ್ ಒಬ್ಬರು ಈ ವಿಡಿಯೊವನ್ನು ಮೊದಲಿಗೆ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿರುವ ವಿಡಿಯೊದ ಪೂರ್ಣ ರೂಪ ಅಂಕುರ್ ಖಾತೆಯಲ್ಲಿ ಲಭ್ಯವಿದೆ. ‘ಇದು ಮನರಂಜನೆಗಾಗಿ ಮಾಡಿದ ವಿಡಿಯೊ. ಯಾರದೇ ಭಾವನೆಗಳಿಗೆ ಧಕ್ಕೆ ಮಾಡುವ ಉದ್ದೇಶವಿಲ್ಲ’ ಎಂಬ ಸೂಚನೆಯೊಂದು ವಿಡಿಯೊ ಆರಂಭವಾದ 30ನೇ ಸೆಕೆಂಡ್‌ಗೆ ಬರುತ್ತದೆ. ಆದ್ದರಿಂದ ಈ ವಿಡಿಯೊವನ್ನು ಮನರಂಜನೆಯ ದೃಷ್ಟಿಯಿಂದ ಅಂಕುರ್ ಅವರೇ ನಿರ್ಮಿಸಿದ್ದಾರೆ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಆಗಸ್ಟ್ 23, 2023

ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷಋತು ತಿಥಿ: ಶ್ರಾವಣ ಶುಕ್ಲ ಸಪ್ತಮಿ ಗಂ. 27-32 ನಕ್ಷತ್ರ: ಸ್ವಾತಿ ಗಂ. 08-08 ಯೋಗ: ಬ್ರಹ್ಮ ಗಂ. 21-45 ಕರಣ: ಗರ ಗಂ. 15-25, ಸಿಂಹ ಮಾಸದ 06 ನೇ ದಿನ, ಮಳೆನಕ್ಷತ್ರ: ಮಘಾ 2. ರಾಹುಕಾಲ : ಮಧ್ಯಾಹ್ನ 12-00 – 01-30 ಸೂರ್ಯೋದಯ : 06-22 ಸೂರ್ಯಾಸ್ತ : 06-44
ಮುಸ್ಲಿಂ ದಿನಾಂಕ : 06 ಸಫರ್, ದಿನ ವಿಶೇಷ : ಗೋಸ್ವಾಮಿ ತುಳಸಿದಾಸ ಜಯಂತಿ
ಅದೃಷ್ಟ ಸಂಖ್ಯೆ : 8, 2

ಮೇಷ: ವೃತ್ತಿರಂಗದಲ್ಲಿ ಅಕಸ್ಮಿಕವಾಗಿ ನಡೆಯುವ ಕೆಲವು ಬದಲಾವಣೆಗಳಿಂದ ಹೆಚ್ಚಿನ ಅನುಕೂಲದ ವಾತಾವರಣ ಸೃಷ್ಟಿಯಾಗಲಿದೆ. ದಿನಸಿ ವ್ಯಾಪಾರ ವಹಿವಾಟುಗಳು ಲಾಭ ತರಲಿದೆ. ಹಸಿರು ಬಣ್ಣ ಅದೃಷ್ಟ ತರುತ್ತದೆ.

ವೃಷಭ: ಈ ದಿನ ದಿನಚರಿಯ ಹೊರತುಪಡಿಸಿದ ಕೆಲಸಕ್ಕೆ ನಿಮ್ಮ ಸುಪ್ತ ಮನಸ್ಸು ಯೋಜನೆಗಳನ್ನು ಸ್ಥಗಿತಗೊಳಿಸುವಂತೆ ಆದೇಶಿಸುತ್ತಿದೆ. ಆಶಾವಾದಕ್ಕೆ ಪುಷ್ಟಿ ದೊರಕುವ ಘಟನೆಗಳು ನಡೆಯಲಿವೆ.

ಮಿಥುನ: ಗೆಳೆಯನೊಬ್ಬನ ಭೇಟಿಯಿಂದಾಗಿ ಸಂತೋಷ. ಹಾಗೂ ಅವರ ಸಲಹೆಗಳಿಂದ ಜೀವನ ಮಹತ್ವದ ತಿರುವೊಂದನ್ನು ಪಡೆದುಕೊಳ್ಳಲಿದೆ. ವೃತ್ತಿ ರಂಗದಲ್ಲಿ ಕಾರ್ಯನಿರ್ವಹಣೆ ಮೆಚ್ಚುಗೆಗೆ ಪಾತ್ರವಾಗುವುದು.

ಕರ್ಕಾಟಕ: ಆರ್ಥಿಕ ರಂಗದವರಿಗೆ ಮತ್ತು ಜವಳಿ ವ್ಯಾಪಾರಿಗಳಿಗೆ ಈ ದಿನ ನೂತನ ಹೂಡಿಕೆ ಮಾಡುವ ಯೋಚನೆ ಉತ್ತಮವಲ್ಲ. ಹಣಕಾಸಿನ ವಿಷಯದಲ್ಲಿ ಯಾವುದೇ ರೀತಿಯ ತೊಂದರೆ ಕಾಣಿಸದು.

ಸಿಂಹ: ಪರೀಕ್ಷಾ ಅಧಿಕಾರಿಗಳು ಕಚೇರಿಗೆ ಭೇಟಿ ನೀಡಿ ನಿಮ್ಮ ಕೆಲಸವನ್ನು ಪರೀಕ್ಷಿಸಬಹುದು. ಉನ್ನತ ಶಿಕ್ಷಣದವರಿಗೆ ಕೀರ್ತಿ ಮತ್ತು ಸಾಮಾಜಿಕ ಗೌರವ ಪ್ರಾಪ್ತಿಯಾಗುವುದು. ವ್ಯವಹಾರಗಳಲ್ಲಿ ಹೆಚ್ಚಿನ ಜಯ ಇರಲಿದೆ.

ಕನ್ಯಾ: ಗಿಡ ಮೂಲಿಕೆಯಂಥ ಔಷಧದ ಬಳಕೆಯಿಂದ ಹೆಂಡತಿಯ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಾಣುವುದು. ಹಿರಿಯರೊಡನೆ ವಾಗ್ವಾದ ತೋರಿ ಬಾರದಂತೆ ಜಾಗ್ರತೆ ವಹಿಸಿರಿ. ಭಿನ್ನಾಭಿಪ್ರಾಯ ಬಗೆಹರಿಯುವುದು.

ತುಲಾ: ಹಠದ ಸ್ವಭಾವದಿಂದಾಗಿ ಕೆಲವು ಸವಾಲುಗಳನ್ನು ಎದುರಿಸುವ ಪರಿಸ್ಥಿತಿಯು ನಿಮಗೆ ಎದುರಾಗಬಹುದು. ವಿಳಂಬವಾಗಿದ್ದ ನಿಮ್ಮ ಕಾರ್ಯ ಕಲಾಪಗಳು ಚುರುಕುಗೊಂಡು ಹೆಚ್ಚಿನ ಅನುಕೂಲ ಒದಗಿ ಬರಲಿದೆ.

ವೃಶ್ಚಿಕ: ಉಳಿದವರಿಗಿಂತ ಎಲ್ಲ ಕೆಲಸವನ್ನು ಏಕಾಗ್ರತೆಯಿಂದ ಸಾಧಿಸಲು ಯತ್ನಿಸುವಿರಿ ಅದರ ಫಲವಾಗಿ ಯಶಸ್ಸು ಸಿಗುವುದು. ಸೇವಾ ಮನೋಭಾವನೆ ಬೆಳೆಸಿಕೊಳ್ಳಿರಿ, ಅದರ ಫಲ ದೇವರು ಕೊಡುತ್ತಾನೆ.

ಧನು: ಸಂಗೀತ, ಸಾಹಿತ್ಯ, ಚಿತ್ರರಂಗದ ಕಲಾವಿದರಿಗೆ ಕೆಲಸವಿದ್ದರೂ ಆರ್ಥಿಕವಾಗಿ ಶ್ರಮಕ್ಕೆ ತಕ್ಕಂತಹ ಫಲ ಸಿಗಲಾರದು. ನಿರುದ್ಯೋಗಿಗಳಿಗೆ ಉದ್ಯೋಗಕ್ಕಾಗಿ ಅಲೆದಾಟ ತಪ್ಪದು. ತಂದೆಯ ಸಹಾಯ ಸಿಗಲಿದೆ.

ಮಕರ: ನಾಲ್ಕಾರು ಜನರ ಬಳಕೆಯಿಂದಾಗಿ ಜ್ಞಾನಾರ್ಜನೆಯಾಗುವುದು. ನಿಮ್ಮ ಸುತ್ತಲ ಪರಿಸರವು ಸಂತಸದಾಯಕವಾಗಿರುತ್ತದೆ. ಭೂ ವ್ಯವಹಾರಗಳಿಂದ ಹೆಚ್ಚಿನ ಲಾಭ ದೊರೆಯಲಿದೆ. ಕೃಷಿ ಕಾರ್ಯವು ಭರದಿಂದ ಸಾಗುವುದು.

ಕುಂಭ: ಬದುಕಿನ ತಿರುವಿಗೆ ಸ್ನೇಹಿತರ ಕೊಡುಗೆ ಬಹಳವಾದುದು ಎಂದು ನೆನಪಿನಲ್ಲಿದ್ದು ಸ್ನೇಹಿತರಲ್ಲಿ ವ್ಯವಹರಿಸಿ. ಸ್ತ್ರೀಯರಿಗೆ ಎಲ್ಲಾ ಕ್ಷೇತ್ರದಲ್ಲೂ ಗೌರವ, ಮನ್ನಣೆ ದೊರೆಕುವುದು. ವಾಹನಗಳ ಚಾಲಕರಿಗೆ ಬಿಡುವಿಲ್ಲದ ಕೆಲಸ.

ಮೀನ: ವಿಲಾಸೀ ವಸ್ತುಗಳ ಖರೀದಿಯಂಥಹ ಅನವಶ್ಯಕವಾಗಿ ಮಾಡುವ ಖರ್ಚು ವೆಚ್ಚಗಳಿಗೆ ಕಡಿವಾಣ ಹಾಕಲೇ ಬೇಕಾದ ಪರಿಸ್ಥಿತಿ ತೋರಲಿದೆ. ರೈತಾಪಿ ವರ್ಗದವರಿಗೆ ಈ ದಿನದ ವಾತಾವರಣ ಉಪಕಾರಿಯಾಗುವುದು.

ನುಡಿ ಬೆಳಗು





ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಜಿಪುಣನ ಕಥೆ

ಆ ಹಳ್ಳಿಯಲ್ಲಿ ಒಬ್ಬ ಜಿಪುಣನಿದ್ದ. ಅವನಿಗೆ ತೋಟ, ಮನೆ, ಹಣ, ಬಂಗಾರ ಎಲ್ಲಾ ಇದ್ದವು. ಇಷ್ಟೆಲ್ಲಾ ಸಂಪತ್ತು ಅವನಲ್ಲಿದ್ದರೂ ಯಾವಾಗಲೂ ಹರಿದ ಬಟ್ಟೆ ಉಡುತ್ತಿದ್ದ. ದುಡ್ಡಿಗೆ ದುಡ್ಡು ಗಂಟು ಹಾಕಿ, ಬೆನ್ನಿಗೆ ಹೊಟ್ಟೆ ಅಂಟು ಹಾಕಿದ್ದ ಭೂಪ ಇವನು. ಹಳ್ಳಿ ಹೋಟೆಲ್ ಹತ್ತಿರ ಕೂತು ಯಾರಾದರೂ ಪುಕ್ಕಟೆ ಚಹಾ ಕೊಡಿಸಬಹುದೇ ಎಂದು ಕಾಯುತ್ತಿದ್ದ. ಆತನಿಗೆ ಬಡ್ಡಿ ದುಡ್ಡೆಂದರೆ ಬಹಳ ಇಷ್ಟ. ಹೀಗಾಗಿ ಹಣವನ್ನು ಊರ ಜನರಿಗೆ ಅತಿ ಬಡ್ಡಿಗೆ ಸಾಲ ಕೊಟ್ಟಿದ್ದ. ಸಾಲ ಪಡೆದವರು ಇವನಿಂದ ತಲೆತಪ್ಪಿಸಿಕೊಂಡು ಓಡಾಡುತ್ತಿದ್ದರು.

ಇದನ್ನು ಸಹಿಸದ ಜಿಪುಣ ಎಲ್ಲರ ಬಳಿ ಜಗಳವಾಡಿ ತನ್ನ ಹಣವನ್ನು ವಾಪಸ್ ಪಡೆದ. ಬಂಗಾರ, ಬೆಳ್ಳಿ ಸಮೇತ ರೊಕ್ಕವನ್ನು ಕಬ್ಬಿಣದ ಪೆಟ್ಟಿಗೆಯಲ್ಲಿಟ್ಟು ಮನೆಯ ಒಳಗೆ ಹೂತು ಹಾಕಿದ. ಹೂತಿಟ್ಟ ಜಾಗದ ಮೇಲೆಯೇ ಹಾಸಿಗೆ ಹಾಸಿಕೊಂಡು ಮಲಗುತ್ತಿದ್ದ. ಹೊರಗೆ ಹೋಗುವಾಗ ಯಾರಾದರೂ ನೆಲವನ್ನು ಅಗೆದು ಬಿಟ್ಟರೆ ಎಂದು ದೊಡ್ಡ ಮರದ ತುಂಡುಗಳನ್ನು ಅದರ ಮೇಲೆ ಜೋಡಿಸಿಟ್ಟು ಹೋಗುತ್ತಿದ್ದ.

ಇವನು ಹೀಗೆ ಸಂಪತ್ತನ್ನು ಬಚ್ಚಿಟ್ಟಿರುವುದನ್ನು ಕಳ್ಳರು ಒಂದು ದಿನ ಪತ್ತೆ ಹಚ್ಚಿದರು. ಇವನು ಮಲಗಿದ್ದ ಸಮಯದಲ್ಲಿ ಬಂದು ಪ್ರಜ್ಞೆ ತಪ್ಪಿಸಿದರು. ನೆಲವನ್ನು ಬಗೆದು ಆತನ ಸಕಲ ಸಂಪತ್ತನ್ನು ದೋಚಿಕೊಂಡು ಹೋದರು. ಈ ವಿಷಯ ಹಳ್ಳಿಯ ಜನರಿಗೆ ಗೊತ್ತಾದಾಗ ಯಾರೂ ಸಂಕಟಪಡಲಿಲ್ಲ. ಎಲ್ಲರೂ ಸಂತೋಷಪಟ್ಟರು. ಒಬ್ಬರು ಕೂಡ ಅವನಿಗೆ ಹೀಗಾಯಿತಲ್ಲ ಎಂದು ಮರುಕವನ್ನೂ ತೋರಿಸಲಿಲ್ಲ.

ಊರಿನ ಜನ ನನ್ನ ಋಣದಲ್ಲಿದ್ದಾರೆ. ಅವರ ಕಷ್ಟ ಕಾಲದಲ್ಲಿ ನಾನು ರೊಕ್ಕ ಕೊಟ್ಟು ಸಹಾಯ ಮಾಡಿದ್ದೇನೆ. ನನಗೆ ಕೇಡಾದಾಗ ಎಲ್ಲರೂ ಗೋಳಾಡಿ, ದುಃಖ ಸೂಚಿಸಿ ನನ್ನನ್ನು ಸಂತೈಸುತ್ತಾರೆ ಎಂದು ಜಿಪುಣ ಭಾವಿಸಿದ್ದ. ಆದರೆ ಜನ ಇವನ ಮನೆಯಲ್ಲಾದ ಕಳ್ಳತನವನ್ನು ಸಂಭ್ರಮಿಸಿದರು. ಕಳ್ಳರ ನೈಪುಣ್ಯವನ್ನು ಹೊಗಳಿ ಹಾಡಿದರು. ಇವನ ಮುಖ ನೋಡಿ ವ್ಯಂಗ್ಯ ಮಾಡಿ ನಕ್ಕರು.

ತನ್ನ ಕೈಯಲ್ಲಿ ಹಣವಿದ್ದಾಗ ಕಷ್ಟ ಎಂದು ಬಂದವರನ್ನು ಜಿಪುಣ ಅವಮಾನ ಮಾಡಿ ಕಳಿಸಿದ್ದ. ಇರುವ ಕಾಸನ್ನೂ ತನ್ನ ಸುಖ, ನೆಮ್ಮದಿಗೆ ಬಳಸಿಕೊಳ್ಳದೆ ಉಪವಾಸವಿದ್ದು ಭಿಕ್ಷುಕನಂತೆ ಬದುಕಿದ. ಇಷ್ಟೊಂದು ಸಂಪತ್ತನ್ನು ಏತಕ್ಕಾಗಿ ಸಂಗ್ರಹಿಸುತ್ತಿದ್ದೇನೆ ಎಂಬ ಅರಿವೇ ಅವನಿಗೆ ಇರಲಿಲ್ಲ. ಒಮ್ಮೆಗೆ ಎಲ್ಲವನ್ನೂ ಕಳೆದುಕೊಂಡ ಅವನೇ ಆ ಹಳ್ಳಿಯ ಅತಿ ದೊಡ್ಡ ದಾನಿ ಎಂದು ಜನ ಹಂಗಿಸಿದರು.

ಜೀವಮಾನವೆಲ್ಲ ನೆಟ್ಟಗೆ ತಿನ್ನದೆ, ಸರಿಯಾಗಿ ನಿದ್ರೆ ಕೂಡ ಮಾಡದೆ, ಒಳ್ಳೆ ಬಟ್ಟೆಯನ್ನೂ ಹಾಕದೆ, ಹಸಿದವರಿಗೆ ತುತ್ತು ಅನ್ನವನ್ನೂ ಕೊಡದೆ ಹಣ ಗುಡ್ಡೆ ಹಾಕಲು ಬಾಳೆಲ್ಲಾ ಸವೆಸಿದ ಆತ ಕೊನೆಗೆ ಹುಚ್ಚನಾದ. ಇವನಿಂದ ಸಾಕಾದ ಹೆಂಡತಿ ಯಾವಾಗಲೋ ಇವನನ್ನು ತೊರೆದಿದ್ದಳು. ಮಕ್ಕಳ ಭಾಗ್ಯವೂ ಇವನಿಗಿರಲಿಲ್ಲ.

ಇರುವುದೆಲ್ಲವೂ ನನಗೆ ಮಾತ್ರ ಇರಲಿ ಎಂಬ ದುರಾಸೆಯು ದುಃಖ, ದುರಂತವನ್ನಲ್ಲದೆ ಬೇರೇನನ್ನೂ ಕೊಡಲು ಸಾಧ್ಯವಿಲ್ಲ. ಯಾವ ಅತಿಯಾಸೆಯೂ ಇಲ್ಲದೆ ಸುಖವಾಗಿ ಬದುಕುವ ನಿಸರ್ಗದ ಮಣ್ಣು, ಗಿಡ, ಮರ, ಬಳ್ಳಿ, ಹೂವು, ಚಿಟ್ಟೆ, ಪ್ರಾಣಿ, ಪಕ್ಷಿಗಳನ್ನಾದರೂ ನೋಡಿ ಮನುಷ್ಯ ಕಲಿಯಬಹುದೇ?

ಪದಬಂಧ 5419


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸಮುದ್ರ ಅಥವಾ ನದಿಯ ಉಬ್ಬರ (3)
6.ಇದು ಹೊಣೆಗೇಡಿತನವೆ ಬಿಡಿ! (5)
7.ಕಲಾವಿದ ತೆರೆದ ಬಾಗಿಲು (2)
9.ಮಗಳೊಡನಿರುವ ಪುತ್ರ (2)
10.ವನದೊಳಗೆ ಬೋಳಿಸುವಿಕೆ! (3)
12.ರಭಸವಾಗಿ ಹರಿವ ದ್ರವ (2)
13.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ! (2)
17.ನೀರಿನೊಡನೆ ಅಲೆ ಕೂಡಿದಾಗ ವಾದ್ಯ ಕಂಡೀತೇ? (5)
18.ಪಕ್ಷಿ ಇಲ್ಲಿದೆ (3)

ಮೇಲಿಂದ ಕೆಳಕ್ಕೆ

1.ನಡುವೆ ಧ್ವನಿ ತೂರಿಸಿ ನೀಡಿದ ಅಶ್ವಾಸನೆ! (4)
2.ಎಳ್ಳು ನೀರು ಬಿಡುವಿಕೆ (4)
3.ಈತ ಪಕ್ಕಾ ಆಲಸಿ (3)
4.ಈತ ಹಾಲು ಮಾರುವವನು (4)
5.ಕತ್ತಲೆಯ ರಾತ್ರಿ (4)
8.ಆ ದಿವಸ ತಂದಿಟ್ಟ ಕಾಲುಕಡಿ (3)
9.ಮನಸ್ಸಿನಲ್ಲಿಯೇ ಚಿಂತಿಸುವಿಕೆ (3)
11.ಆನೆ ನಡುವಿದ್ದಾಗ ಕಾಣಿಸಿರುವ ಬಿಸಿಲುಕುದುರೆ (4)
12.ಓಟನ್ನು ನೀಡುವವನು ತಿರುಗಿದ್ದಾನಲ್ಲಾ (4)
14.ರೋಗವು ವಾಸಿಯಾಗುವ ಸ್ಥಿತಿ (4)
15.ಒಂಬತ್ತನೇ ಚಾಂದ್ರಮಾನ ಮಾಸ (4)
16.ಮಗನೊಡನಿರುವ ಪುತ್ರಿ (3)



5418ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಭವಬಂಧನ
5.ಕೋರಿಕೆ 7.ಮಟ್ಟಸ
9.ರಮಣ 10.ಮಾರುತ
11.ಚಂದನ 12.ಮಧುರ
14.ರದನ 15.ರಜತೋತ್ಸವ

ಮೇಲಿಂದ ಕೆಳಕ್ಕೆ:
1.ನವಸುಮ 2.ಅಂಧ
3.ಪರಿಮಾಣ 6.ತರತಮ
8.ಸಮಾನತೆ 11.ಚಂದ್ರೋದಯ
13.ರಥೋತ್ಸವ

ಸುಡೊಕು 5805

	5	7		6				2
			5		2	3		
6		2		4		7		8
	7				9			
5		9			6		3	7
	6		7					4
2		3	8		4	6		
		6		2			8	9
8	1		6		7	4		


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5804 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	19,393
ಇಂದಿನ ಅಂತ್ಯ	19,396
▲	2.85
ದಿನದ ಕನಿಷ್ಠ	19,443

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹475
12 ಮೊಟ್ಟೆಗೆ	₹65

ಮೈಸೂರು

100 ಮೊಟ್ಟೆಗೆ	₹477

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1840(1850)
ಸೋಯಾ (ರಿಫೈನ್ಡ್)	₹950(955)
ಸೂರ್ಯಕಾಂತಿ (ರಿಫೈನ್ಡ್)	₹950(965)
ಪಾಮೋಲಿನ್	₹855(862)

ಎನ್.ಆರ್.ಪುರ ರಬ್ಬರ್

ಆರ್ಎಸ್ಎಸ್-4	₹140.50
ಆರ್ಎಸ್ಎಸ್-5	₹133.50
ಗುಡ್ ಲಾಟ್	₹119.50

(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ

ಅರಸೀಕೆರೆ	₹8500-9250
ಕೆ.ಆರ್.ಪೇಟೆ (ಇತರ)	₹7900-7900
ಪುತ್ತೂರು (ಇತರ)	₹4500-7300

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹377-582
ದ್ವಿತಳಿ (ಬಿ.ವಿ)	₹375-703

ಮುಂಬೈ ಧಾರಣೆ

ಶೇಂಗಾ

22–8–2023

ಜಾವಾ 70/80(ಹೊಸ)	12600-12700
ಜಾವಾ 80/90(ಹೊಸ)	12500-12600
ದಪ್ಪ ಮಧ್ಯಪ್ರದೇಶ(ಹೊಸ)	13200-13300
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1850(1860)
ಒಂದು ವಾರದ ಡೆಲಿವರಿ	1845(1855)
ಸೋಯಾ ಕಚ್ಚಾ	905(910)
ಪಾಮ್ ವಾರದ ಡೆಲಿವರಿ	853(860)
ಸೂರ್ಯಕಾಂತಿ ಎಣ್ಣೆ ಕಚ್ಚಾ	885(895)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58300 (58300)
ಬೆಳ್ಳಿ ಕೆ.ಜಿ 72100(71500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	750-800
ನಡುಗೋಲು	900-950
ರಾಶಿ	1,000-1,100
ರಾಶಿ ಉತ್ತಮ	1,150-1,200
ಹೆರಕಿದ್ದು	1,600-1,700
ಹಸಿರು ಸಾಧಾರಣ	1,200-1,250
ಹಸಿರು ಉತ್ತಮ	1,600-1,700
ಹಸಿರು ಅತಿ ಉತ್ತಮ	1,900-2,000
ಕಾಳುಮೆಣಸು	- 650

ಅಡಿಕೆ

ಬಂಟ್ವಾಳ

ಕೋಕ	12,500-25,000
ಹೊಸತು	27,500-44,500
ಹಳತು	46,000-48,000

ಪುತ್ತೂರು

ಕೋಕ	11,000-25,000
ಹೊಸತು	34,000-44,500

ಸಾಗರ

ಬಿಳಿಗೋಟು	30,199-34,600
ಚಾಲಿ	38,389-38,389
ಕೋಕ	31,989-33,989
ರಾಶಿ	47,569-48,849
ಸಿಪ್ಪೆಗೋಟು	22,119-22,119

ಶಿವಮೊಗ್ಗ

ಬೆಟ್ಟೆ	40,019-53,699
ಗೊರಬಲು	26,009-43,338
ರಾಶಿ	34,009-51,569
ಸರಕು	44,199-79,900

ಸಿದ್ದಾಪುರ

ಬಿಳಿಗೋಟು	30,399-35,299
ಚಾಲಿ	37,469-41,539
ಕೋಕ	30,100-35,299
ಕೆಂಪುಗೋಟು	34,089-34,889
ರಾಶಿ	46,209-49,599
ತಟ್ಟಿಬೆಟ್ಟೆ	42,169-48,269

ಶಿರಸಿ

ಬೆಟ್ಟೆ	39,699-46,099
ಬಿಳಿಗೋಟು	22,099-36,609
ಚಾಲಿ	37,699-42,989
ಕೆಂಪುಗೋಟು	33,199-39,323
ರಾಶಿ	47,899-50,099

ಯಲ್ಲಾಪುರ

ಆಪಿ	55,059-55,059
ಬಿಳಿಗೋಟು	24,899-37,699
ಚಾಲಿ	40,010-42,560
ಕೋಕ	21,318-34,999
ಕೆಂಪುಗೋಟು	24,819-37,699
ರಾಶಿ	48,599-54,965
ತಟ್ಟಿಬೆಟ್ಟೆ	40,599-47,289

ಕಾಫಿ (50 ಕೆ.ಜಿಗೆ ₹ ಗಳಲ್ಲಿ)


	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13,100	13,500	13,375	147.55 ಸೆಂಟ್ಸ್
ಎಸಿ	6,860	6,700	6,700	
ಆರ್‌ಪಿ	9,900	10,000	10,000	ಲಂಡನ್
ಆರ್‌ಸಿ	5,830	234	5,875	2558ಡಾಲರ್ಸ್

ಸಚಿವ ನಿತಿನ್ ಗಡ್ಕರಿ ಹಸಿರು ನಿಶಾನೆ • ಸುರಕ್ಷತೆ ಪರೀಕ್ಷೆಗೆ ಭಾರತೀಯ ಮಾನದಂಡ

ಭಾರತ್ ಎನ್‌ಸಿಎಪಿಗೆ ಚಾಲನೆ

ನವದೆಹಲಿ (ಪಿಟಿಐ): ಭಾರತದಲ್ಲಿ ಕಾರುಗಳ ಸುರಕ್ಷತಾ ಸೌಲಭ್ಯಗಳನ್ನು ಅಳೆಯುವ 'ಭಾರತ್ ಎನ್‌ಸಿಎಪಿ'ಗೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಮಂಗಳವಾರ ಚಾಲನೆ ನೀಡಿದರು. 3.5 ಟನ್‌ವರೆಗಿನ ತೂಕದ ವಾಹನಗಳು ಸುರಕ್ಷತೆಯ ದೃಷ್ಟಿಯಿಂದ ಎಷ್ಟು ದಕ್ಷವಾಗಿವೆ ಎಂಬುದನ್ನು ತೀರ್ಮಾನಿಸುವುದಕ್ಕೆ ಇದು ನೆರವಾಗುತ್ತದೆ.

ಭಾರತ್ ಎನ್‌ಸಿಎಪಿ ಅಡಿಯಲ್ಲಿ ಕಾರುಗಳ ಸುರಕ್ಷತಾ ಸೌಲಭ್ಯಗಳನ್ನು ಪರೀಕ್ಷೆಗೆ ಒಳಪಡಿಸುವುದು ವಿದೇಶಗಳಲ್ಲಿ ಚಾಲ್ತಿಯಲ್ಲಿರುವ ಪರೀಕ್ಷೆಗಳಿಗಿಂತ ಕಡಿಮೆ ವೆಚ್ಚದ್ದು ಎಂದು ಗಡ್ಕರಿ ಹೇಳಿದ್ದಾರೆ. ಈ ಯೋಜನೆಯ ಅಡಿಯಲ್ಲಿ ನೀಡುವ ಶ್ರೇಯಾಂಕವು ಗ್ರಾಹಕರಿಗೆ ವಾಹನ ಎಷ್ಟು ಸುರಕ್ಷಿತವಾಗಿದೆ ಎಂಬುದನ್ನು ತೀರ್ಮಾನಿಸಲು ನೆರವಾಗುತ್ತದೆ ಎಂದು ಅವರು ಹೇಳಿದ್ದಾರೆ. ಭಾರತ್ ಎನ್‌ಸಿಎಪಿ ಅಕ್ಟೋಬರ್ 1ರಿಂದ ಜಾರಿಗೆ ಬರಲಿದೆ.



ಭಾರತ್ ಎನ್‌ಸಿಎಪಿ ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಮಾತನಾಡಿದರು — ಪಿಟಿಐ ಚಿತ್ರ

ಮುಖ್ಯಾಂಶಗಳು

- ಅಕ್ಟೋಬರ್ 1ರಿಂದ ಜಾರಿಗೆ ಬರಲಿರುವ ಯೋಜನೆ
- ವಾಹನಗಳ ಸುರಕ್ಷತಾ ಸಾಮರ್ಥ್ಯ ಪರೀಕ್ಷೆ ಐಚ್ಛಿಕ
- ಯೋಜನೆ ಸ್ವಾಗತಿಸಿದ ವಾಹನ ತಯಾರಿಕಾ ಉದ್ಯಮ

'ಸುರಕ್ಷತೆಗೆ ವಿದೇಶಗಳಲ್ಲಿ ಶ್ರೇಯಾಂಕ ಪಡೆದುಕೊಳ್ಳುವುದಕ್ಕೆ ₹2.5 ಕೋಟಿ ವೆಚ್ಚವಾದರೆ, ಭಾರತದಲ್ಲಿ ಅದಕ್ಕೆ ₹60 ಲಕ್ಷ ಮಾತ್ರ ವೆಚ್ಚವಾಗುತ್ತದೆ' ಎಂದು ಗಡ್ಕರಿ ಅವರು ಹೇಳಿದ್ದಾರೆ.

ಈ ಯೋಜನೆಯ ಅಡಿಯಲ್ಲಿ ಕಾರು ತಯಾರಿಕಾ ಕಂಪನಿಗಳು, ತಮ್ಮ ವಾಹನ ಮಾದರಿಗಳನ್ನು ಪರೀಕ್ಷೆಗೆ ನೀಡಬಹುದು. ಹೀಗೆ ವಾಹನ ನೀಡುವುದು ಕಡ್ಡಾಯವಲ್ಲ, ಇದು ಐಚ್ಛಿಕವಾಗಿರುತ್ತದೆ. ವಾಹನವು ವಯಸ್ಕರಿಗೆ ಹಾಗೂ ಮಕ್ಕಳಿಗೆ ಎಷ್ಟು ಸುರಕ್ಷಿತವಾಗಿದೆ ಎಂಬುದನ್ನು ಸೊನ್ನೆಯಿಂದ ಐದರವರೆಗಿನ ಶ್ರೇಯಾಂಕದ ಮೂಲಕ ತಿಳಿಸಲಾಗುತ್ತದೆ.

ಆಟೊಮೊಬೈಲ್ ತಯಾರಿಕೆಯಲ್ಲಿ ಭಾರತವು ಈಗ ಮೂರನೆಯ ಸ್ಥಾನದಲ್ಲಿದೆ (ಮೊದಲ ಸ್ಥಾನದಲ್ಲಿ ಚೀನಾ, ಎರಡನೆಯ ಸ್ಥಾನದಲ್ಲಿ ಅಮೆರಿಕಾ ಇದೆ) ಎಂದು ಗಡ್ಕರಿ ಹೇಳಿದ್ದಾರೆ.

ಭಾರತ್ ಎನ್‌ಸಿಎಪಿ ಹಾಗೂ ಜಾಗತಿಕ ಮಟ್ಟದ ಸುರಕ್ಷತಾ ಮಾನದಂಡಗಳ ನಡುವೆ ಹೆಚ್ಚಿನ ವ್ಯತ್ಯಾಸವಿಲ್ಲ ಎಂದು ತಿಳಿಸಿದ್ದಾರೆ.

ಭಾರತ್ ಎನ್‌ಸಿಎಪಿ ಯೋಜನೆಯನ್ನು ಆಟೊಮೊಬೈಲ್ ಉದ್ಯಮ ಸ್ವಾಗತಿಸಿದೆ. ಮೊದಲ ಹಂತದಲ್ಲಿ ಮೂರು ಮಾದರಿಗಳನ್ನು ಪರೀಕ್ಷೆಗೆ ಒದಗಿಸಲಾಗುತ್ತದೆ ಎಂದು ಮಾರುತಿ ಸುಜುಕಿ ಇಂಡಿಯಾ ಹೇಳಿದೆ.


ಈ ಯೋಜನೆಯು ಸುರಕ್ಷತಾ ಗುಣಮಟ್ಟವನ್ನು ಹೆಚ್ಚಿಸಲಿದೆ ಎಂದು ಹುಂಡೈ ಮೋಟರ್ ಇಂಡಿಯಾ ಲಿ. ಹೇಳಿದೆ. 'ಗ್ರಾಹಕರು ಅಗತ್ಯ ಮಾಹಿತಿಯನ್ನು ಹೊಂದಿ, ಖರೀದಿ ನಿರ್ಧಾರ ಕೈಗೊಳ್ಳುವಂತೆ ಮಾಡುವಲ್ಲಿ ಈ ಯೋಜನೆಯು ದೊಡ್ಡ ಕೊಡುಗೆ ನೀಡಲಿದೆ' ಎಂದು ಭಾರತೀಯ ಆಟೊಮೊಬೈಲ್ ತಯಾರಕರ ಸಂಘ (ಎಸ್ಐಎಎಂ) ಹೇಳಿದೆ.

ಮೇರಾ ಬಿಲ್ ಮೇರಾ ಅಧಿಕಾರ್: ಸೆ. 1ರಿಂದ ಜಾರಿ


ನವದೆಹಲಿ (ಪಿಟಿಐ): ಜಿಎಸ್‌ಟಿ ಇನ್‌ವಾಯ್ಸ್ ಅಪ್ಲೋಡ್ ಮಾಡಿದವರಿಗೆ ಬಹುಮಾನ ನೀಡುವ 'ಮೇರಾ ಬಿಲ್ ಮೇರಾ ಅಧಿಕಾರ್' ಯೋಜನೆಗೆ ಕೇಂದ್ರ ಸರ್ಕಾರವು ಸೆಪ್ಟೆಂಬರ್ 1ರಂದು ಚಾಲನೆ ನೀಡಲಿದೆ.

ಆರಂಭಿಕ ಹಂತದಲ್ಲಿ ಇದು ಮೂರು ರಾಜ್ಯಗಳಲ್ಲಿ, ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಜಾರಿಗೆ ಬರಲಿದೆ.









ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವಿದ್ಯಾಸಾಗರ್, ಬೆಂಗಳೂರು

ಪ್ರಶ್ನೆ: ನಾನು ಹಿರಿಯ ನಾಗರಿಕ. ವಯಸ್ಸು 78 ವರ್ಷ. ನಾನು ಈಗ ಆದಾಯ ತೆರಿಗೆ ವ್ಯಾಪ್ತಿಯಲ್ಲಿಲ್ಲ. ನಾನು 1989ರಲ್ಲಿ ದಾವಣಗೆರೆಯಲ್ಲಿ ₹15,000ಕ್ಕೆ ಕೊಂಡುಕೊಂಡ ಒಂದು ನಿವೇಶನವನ್ನು ₹68 ಲಕ್ಷಕ್ಕೆ ಮಾರುತ್ತಿದ್ದೇನೆ. ನನಗೆ ಬಂಡವಾಳ ವೃದ್ಧಿ ತೆರಿಗೆ ಎಷ್ಟು ಬರಬಹುದು? ತೆರಿಗೆ ವಿನಾಯಿತಿ ಪಡೆಯಲು ಯಾವ ರೀತಿ ಹಣ ಹೂಡಿಕೆ ಮಾಡಬೇಕು? ಏಳೆಂಟು ವರ್ಷ ಹಳೆಯದಾದ ಮನೆ ಕೊಳ್ಳಬೇಕೆಂದಿದ್ದೇನೆ. ಈ ಬಗ್ಗೆ ಮಾಹಿತಿ ನೀಡಿ.

ಉತ್ತರ: ನೀವು ಸುಮಾರು 35 ವರ್ಷಗಳ ಹಿಂದೆ ಖರೀದಿಸಿದ ನಿವೇಶನವೊಂದನ್ನು ಮಾರಾಟ ಮಾಡುತ್ತಿದ್ದೀರಿ. ಇಂದಿನ ಸನ್ನಿವೇಶದಲ್ಲಿ ನೀವು ಅಂದು ಪಾವತಿಸಿದ ₹15,000 ಹಾಗೂ ಈಗಿನ ಮಾರಾಟ ಮೌಲ್ಯದ ತುಲನೆ ಅಸಾಧ್ಯ. ಹೀಗಾಗಿ, ವರ್ಷಕ್ಕೆ ಶೇಕಡ 4ರಿಂದ 5ರಷ್ಟು ಹಣದುಬ್ಬರವನ್ನು ಪರಿಗಣಿಸಿ, ಆಸ್ತಿಗಳ ಮೇಲೆ ದೀರ್ಘ ಕಾಲದಲ್ಲಾಗುವ ನ್ಯಾಯೋಚಿತ ಮೌಲ್ಯ ವರ್ಧನೆಯನ್ನು ಆದಾಯ ತೆರಿಗೆ ಕಾನೂನಿನ ಅಡಿ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಇದಕ್ಕೆಂದು ಏಪ್ರಿಲ್ 1, 2001ಕ್ಕೆ ಮೊದಲು ಖರೀದಿಸಿದ್ದ ಆಸ್ತಿಗಳ ಮೌಲ್ಯ ನಿರ್ಧರಿಸುವಾಗ ಅದರ ನೈಜ ಮೌಲ್ಯವನ್ನು ಆ ಸಂದರ್ಭದಲ್ಲಿ ಸರ್ಕಾರ ತೀರ್ಮಾನಿಸಿದ ಬೆಲೆಯೊಡನೆ ತುಲನೆ ಮಾಡಲಾಗುತ್ತದೆ ಹಾಗೂ ಅದರಲ್ಲಿ ಯಾವುದು ಅಧಿಕವೋ ಅದನ್ನು ಪರಿಗಣಿಸಲಾಗುತ್ತದೆ. ಇದಕ್ಕಾಗಿ ನೀವು ನಿಮ್ಮ ಅಸ್ತಿ ಇರುವ ಸ್ಥಳದ ನಿಖರ ಸರ್ವೆ ಸಂಖ್ಯೆ ಆಧಾರದ ಮೇಲೆ ಅಂದಿನ ಮೌಲ್ಯ ಏನೆಂದು ನಿರ್ಧರಿಸಲು ಪರಿಣತರಿಂದ ಪ್ರಮಾಣಪತ್ರ ಪಡೆದುಕೊಳ್ಳಿ. ಈ ಮೌಲ್ಯವನ್ನು ನಿಮ್ಮ ನಿಜವಾದ ಖರೀದಿ ಮೌಲ್ಯವಾದ ₹15,000ಕ್ಕೆ ಬದಲಾಗಿ ಪರಿಗಣಿಸಲಾಗುತ್ತದೆ. ಅಂದಿನಿಂದ (2001ರ ಮೂಲ ಅಂಕ 100) ಮಾರಾಟದ ಆರ್ಥಿಕ ವರ್ಷ 2023-24ರ ಹಣದುಬ್ಬರ ಸೂಚ್ಯಂಕ 348 ಎಂದು ಪರಿಗಣಿಸಿ 2001ರಿಂದ 2023ರ ತನಕ ಮೌಲ್ಯದಲ್ಲಿ ಸಹಜ ವರ್ಧನೆ ಎಷ್ಟಾಗಿದೆ ಎಂದು ಲೆಕ್ಕ ಹಾಕಲಾಗುತ್ತದೆ. ಆ ಮೌಲ್ಯಕ್ಕಿಂತ ಹೆಚ್ಚುವರಿ ಬೆಲೆಗೆ ನಿಮ್ಮ ಭೂಮಿ ಮಾರಾಟವಾಗಿದ್ದರೆ ಮಾತ್ರ ದೀರ್ಘಾವಧಿ ತೆರಿಗೆ ಬರುತ್ತದೆ. ಇದು ಶೇ 20.8ರಷ್ಟು (ಸೆಸ್ ಸೇರಿ) ತೆರಿಗೆಗೊಳಪಡುತ್ತದೆ. ನಿಮ್ಮ ವಯೋಮಾನಕ್ಕೆ ಸಂಬಂಧಿಸಿ ಇರುವ ಮೂಲ ವಿನಾಯಿತಿಗಳು ಲಭ್ಯವಿರುತ್ತವೆ. ಉಳಿದ ಮೊತ್ತವಷ್ಟೇ ತೆರಿಗೆಗೊಳಪಡುತ್ತದೆ.

ನೀವು ಹೆಚ್ಚುವರಿ ಲಾಭವನ್ನು ಆದಾಯ ತೆರಿಗೆಯ ಸೆಕ್ಷನ್ 54ಎಫ್ ಅಡಿ 2-3 ವರ್ಷಗಳ ಕಾಲಮಿತಿಯೊಳಗೆ ಯಾವುದೇ ಮನೆ ಖರೀದಿ ಅಥವಾ ನಿರ್ಮಾಣಕ್ಕೆ ವಿನಿಯೋಗಿಸಿ ತೆರಿಗೆ ವಿನಾಯಿತಿ ಪಡೆಯಬಹುದು. ಇದಲ್ಲದೆ, ಸೆಕ್ಷನ್ 54 ಇಸಿ ಅಡಿ ನಿಗದಿತ ಬಾಂಡ್‌ಗಳಲ್ಲಿ ₹50 ಲಕ್ಷದ ತನಕ 5 ವರ್ಷಗಳ ಅವಧಿಗೆ ಹೂಡಿಕೆ ಮಾಡುವ ಮೂಲಕವೂ ತೆರಿಗೆ ವಿನಾಯಿತಿ ಪಡೆಯಬಹುದು. ಈ ಸೆಕ್ಷನ್ ಅಡಿಯಲ್ಲಿ ಅರ್ಹವಾದ ಬಾಂಡ್‌ಗಳೆಂದರೆ ರೂರಲ್ ಎಲೆಕ್ಟ್ರಿಫಿಕೇಶನ್ ಕಾರ್ಪೊರೇಷನ್ ಲಿಮಿಟೆಡ್, ಪವರ್ ಫೈನಾನ್ಸ್ ಕಾರ್ಪೊರೇಷನ್ ಲಿಮಿಟೆಡ್, ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ ಮತ್ತು ಇಂಡಿಯನ್ ರೈಲ್ವೇಸ್ ಫೈನಾನ್ಸ್ ಕಾರ್ಪೊರೇಷನ್ ಲಿಮಿಟೆಡ್ ಇತ್ಯಾದಿಗಳು ಬಿಡುಗಡೆ ಮಾಡುವ ಬಾಂಡ್‌ಗಳು.

ಮಂಜುಳಾ, ವಿದ್ಯಾರಣ್ಯಪುರ

ಪ್ರಶ್ನೆ: ನಾನು ವಿದ್ಯಾರಣ್ಯಪುರ ನಿವಾಸಿ, ಹಿರಿಯ ನಾಗರಿಕಳು. ನನ್ನ ಪತಿ 2003ರಲ್ಲಿ ರಸ್ತೆ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ. ನನಗೆ ದೊಡ್ಡದೊಮ್ಮಸಂದ್ರದಲ್ಲಿ 58X58 ಅಳತೆಯ ನಿವೇಶನದಲ್ಲಿ ಕಟ್ಟಿರುವ ಮನೆ ಮತ್ತು ಅಂಗಡಿಗಳ ಆಸ್ತಿ ಇದೆ. ನನ್ನ ಮೂವರು ಹೆಣ್ಣುಮಕ್ಕಳಲ್ಲಿ ಹಿರಿಯ ಮಗಳು ಹೃದಯಾಘಾತದಿಂದ ಮರಣವಾಗಿ ಒಂದು ವರ್ಷವಾಗಿದೆ. ನನಗೆ ಪಾರ್ಶ್ವವಾಯು ಆಗಿ ಬಹಳ ತೊಂದರೆ ಅನುಭವಿಸುತ್ತಿದ್ದೇನೆ. ಈ ಎಲ್ಲ ಕಾರಣದಿಂದ ನನ್ನ ಆಸ್ತಿಯನ್ನು ₹3.25 ಕೋಟಿಗೆ ಮಾರಾಟ ಮಾಡಿರುತ್ತೇನೆ. 1990ರಲ್ಲಿ ಈ ನಿವೇಶನ ಖರೀದಿಸಲಾಗಿದೆ. ಇದರ 3,364 ಚದರ ಅಡಿಯಲ್ಲಿ 2,000 ಚದರ ಅಡಿ ಮನೆಯನ್ನು 1991ರಲ್ಲಿ ನಿರ್ಮಿಸಲಾಯಿತು. 2002ರಲ್ಲಿ ಉಳಿದ 1,364 ಚದರ ಅಡಿ ನೆಲಮನೆ ಹಾಗೂ 3,364 ಚದರ ಅಡಿ 1ನೇ ಮಹಡಿ ಕಟ್ಟಡ ನಿರ್ಮಿಸಲಾಯಿತು. ಈ ಹಣವನ್ನು ನಾವು, ಅಂದರೆ ನನ್ನ ಮೂರುಜನ ಹೆಣ್ಣುಮಕ್ಕಳು ಹಾಗೂ ನಮಗೆ ತೆರಿಗೆ ಬರದಂತೆ ಯಾವ ರೀತಿ ಹಂಚಿಕೆ ಮಾಡಿಕೊಳ್ಳಬಹುದು ಎಂಬ ಬಗ್ಗೆ ಮಾಹಿತಿ ಕೇಳುತ್ತಿದ್ದೇನೆ. ನಾನು ಮತ್ತು ನನ್ನ ಮಕ್ಕಳು ಬೇರೆ ಬೇರೆ ಮನೆಗಳನ್ನು ತೆಗೆದುಕೊಳ್ಳಲು ನಿರ್ಧರಿಸಿದ್ದು, ಈ ಬಗ್ಗೆಯೂ ಸಲಹೆ ನೀಡಿ.

ಉತ್ತರ: ನೀವು 1990ರಲ್ಲಿ ಖರೀದಿಸಿದ ನಿವೇಶನದಲ್ಲಿ ಮೊದಲ ಹಂತದಲ್ಲಿ ಒಂದಷ್ಟು ಜಾಗದಲ್ಲಿ ಮನೆ ಕಟ್ಟಿದ್ದೀರಿ ಹಾಗೂ 2002ರಲ್ಲಿ ಉಳಿದ ಸ್ಥಳದಲ್ಲಿ ಮನೆಯನ್ನು ವಿಸ್ತರಿಸಿದ್ದೀರಿ. ಇದಲ್ಲದೆ ಮೊದಲ ಮಹಡಿಯನ್ನೂ ಕಟ್ಟಿಸಿರುತ್ತೀರಿ. ನೀವು ನೀಡಿದ ಮಾಹಿತಿಯಂತೆ, ಆಸ್ತಿ ನಿಮ್ಮ ಹೆಸರಲ್ಲಿದೆ ಎಂದು ಭಾವಿಸಿ ತೆರಿಗೆ ಮಾಹಿತಿ ನೀಡಲಾಗಿದೆ. ಯಾವುದೇ ಆಸ್ತಿಯ ಮಾರಾಟದ ಸಂದರ್ಭದಲ್ಲಿ ಯಾರು ಆಸ್ತಿಯ ಒಡೆತನ ಹೊಂದಿರುವರೋ ಅವರೇ ಮಾರಾಟದ ಸಂದರ್ಭದಲ್ಲಿ ಬರುವ ಆದಾಯಕ್ಕೆ ಬಂಡವಾಳ ವೃದ್ಧಿ (ಕ್ಯಾಪಿಟಲ್ ಗೇನ್ಸ್) ತೆರಿಗೆಯನ್ನು ಪಾವತಿಸಬೇಕಾಗುತ್ತದೆ.

ಮೊದಲ ಹಂತದಲ್ಲಿ, ನೀವು ಮಾರಾಟ ಮಾಡಿದ ಆಸ್ತಿಯ ಹಾಗೂ ಕಟ್ಟಿರುವ ಕಟ್ಟಡದ ಮೂಲ ಬೆಲೆ ಏನೆಂದು ಗೊತ್ತುಮಾಡಿ. 2001ಕ್ಕಿಂತ ಹಿಂದೆ ಖರೀದಿಸಿದ ನಿಮ್ಮ ನಿವೇಶನದ ಮೌಲ್ಯ ಏನೆಂಬುದನ್ನು ಸಮರ್ಪಕವಾದ ಮೌಲ್ಯ ಮಾಪನ ಮಾಡಿಸಿ ನಿರ್ಧರಿಸಿ. ತೆರಿಗೆ ಲೆಕ್ಕ ಹಾಕುವ ಬಗೆಯನ್ನು ಇದೇ ಅಂಕಣದ ಇನ್ನೊಂದು ಪ್ರಶ್ನೆಯಲ್ಲೂ ಈಗಾಗಲೇ ವಿಸ್ತೃತವಾಗಿ ವಿವರಿಸಲಾಗಿರುವುದನ್ನು ಗಮನಿಸಿ. ಪ್ರತಿ ಹಂತದ ಕಟ್ಟಡ ನಿರ್ಮಾಣಕ್ಕೆ ತಗಲಿದ ವೆಚ್ಚವನ್ನು ಪ್ರಸ್ತುತ ಹಣದುಬ್ಬರ ಮೌಲ್ಯಕ್ಕನುಗುಣವಾಗಿ ಪರಿವರ್ತಿಸಿ ನಿಮ್ಮ ಕಟ್ಟಡದ ಪ್ರಸ್ತುತ ಒಟ್ಟು ಮೌಲ್ಯ ತಿಳಿಯಲಾಗುತ್ತದೆ. ಈ ಮೌಲ್ಯ ನೀವು ಮಾರಿರುವ ₹3.25 ಕೋಟಿಗೂ ಮೀರಿರದಿದ್ದರೆ ಅದು ಲಾಭವೆಂದು ತಿಳಿಯಲಾಗುತ್ತದೆ ಹಾಗೂ ತೆರಿಗೆ ಇದೆ.

ನಿಮಗೆ ಬಂದಿರುವ ಮೊತ್ತವನ್ನು ನಿಮ್ಮ ಮಕ್ಕಳೊಂದಿಗೆ ಹಂಚಿಕೊಳ್ಳಬಹುದೇ ಎಂದು ವಿಚಾರಿಸಿದ್ದೀರಿ. ಸಮೀಪದ ಬಂಧು ವರ್ಗದವರಾದ ತಾಯಿ-ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಇತ್ಯಾದಿ ವ್ಯಕ್ತಿಗಳ ನಡುವಿನ ಆರ್ಥಿಕ ವ್ಯವಹಾರಕ್ಕೆ ಕೆಲವು ತೆರಿಗೆ ವಿನಾಯಿತಿಗಳಿವೆ. ಹೀಗಾಗಿ ಅಂತಹ ಆರ್ಥಿಕ ವ್ಯವಹಾರ 'ಉಡುಗೊರೆ'ಯ ರೂಪದಲ್ಲಿದ್ದರೆ, ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 56(2)ರಲ್ಲಿ ಹೇಳಿರುವ ವಿವರಣೆಯಂತೆ ಅವನ್ನು ತೆರಿಗೆ ವ್ಯಾಪ್ತಿಯಿಂದ ಹೊರಗಿಡಲಾಗುತ್ತದೆ. ಹೀಗಾಗಿ ಉಡುಗೊರೆಯಾಗಿ ವರ್ಗಾಯಿಸುವ ಇಂತಹ ಮೊತ್ತಕ್ಕೆ ತೆರಿಗೆ ಇರುವುದಿಲ್ಲ. ಈ ಬಗ್ಗೆ ಅಗತ್ಯವಿರುವ ಗಿಫ್ಟ್ ಡೀಡ್ ಇತ್ಯಾದಿ ಬರೆಸಿಕೊಂಡು ಹಣ ವರ್ಗಾಯಿಸಿಕೊಳ್ಳಬಹುದು. ಅನಂತರ ವೈಯಕ್ತಿಕವಾಗಿ ಆ ಮೊತ್ತವನ್ನು ಮನೆ ಖರೀದಿ, ಬ್ಯಾಂಕ್ ಠೇವಣಿ - ಹೀಗೆ ಎಲ್ಲಾದರೂ ಹೂಡಿಕೆ ಮಾಡಬಹುದು. ಆ ಹೂಡಿಕೆಯಿಂದ ಬರುವ ಯಾವುದೇ ಆದಾಯಕ್ಕೆ ಆಯಾ ವ್ಯಕ್ತಿಗಳೇ ತೆರಿಗೆ ಕಟ್ಟಬೇಕು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. **ವಿಳಾಸ:** ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. **ಇ–ಮೇಲ್:** businessdesk@prajavani.co.in



ಬ್ರಿಕ್ಸ್ ಶೃಂಗಸಭೆಯಲ್ಲಿ ಮೋದಿ ಭಾಗಿ

ಜೋಹಾನಸ್‌ಬರ್ಗ್ (ಪಿಟಿಐ): 'ಭಾರತವು ಮುಂಬರುವ ವರ್ಷಗಳಲ್ಲಿ ಜಾಗತಿಕ ಅಭಿವೃದ್ಧಿಗೆ ವೇಗ ನೀಡುವ ಶಕ್ತಿಯಾಗಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಇಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.

ಬ್ರಿಕ್ಸ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಆಗಮಿಸಿರುವ ಅವರು, ವಾಣಿಜ್ಯ ವೇದಿಕೆಯ ಮುಖಂಡರ ಸಭೆಯಲ್ಲಿ ಮಾತನಾಡಿದರು.

ಭಾರತವು ಶೀಘ್ರದಲ್ಲಿಯೇ 5 ಲಕ್ಷ ಕೋಟಿ ಡಾಲರ್ ಮೌಲ್ಯದ ಆರ್ಥಿಕತೆಯನ್ನು ಹೊಂದಲಿದೆ. ಆರ್ಥಿಕ ಪ್ರಗತಿಗೆ ವೇಗ ನೀಡುವ 'ಮಿಷನ್ ಮೋಡ್' ಕ್ರಮಗಳಿಂದಾಗಿ ವ್ಯವಹಾರದ ಶೈಲಿಯೂ ಸುಗಮವಾಗಿದೆ ಎಂದು ಹೇಳಿದರು.

'ಬ್ರಿಕ್ಸ್' ಸದಸ್ಯ ರಾಷ್ಟ್ರಗಳ 15ನೇ ಶೃಂಗಸಭೆಯು ಆರಂಭವಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಭಾಗಿಯಾಗಿದ್ದಾರೆ. 'ವಿಶ್ವದ ಪ್ರಮುಖ ನಾಯಕರ ಜೊತೆಗೆ ಚರ್ಚಿಸಲು ಉತ್ಸುಕನಾಗಿದ್ದೇನೆ' ಎಂದು ಹೇಳಿದರು.

ಇದಕ್ಕೂ ಮೊದಲು ಪ್ರಧಾನಿ ಅವರನ್ನು ದಕ್ಷಿಣ ಆಫ್ರಿಕಾದ ಉಪಾಧ್ಯಕ್ಷ ಪಾಲ್ ಮಷಟೈಲ್ ಅವರು ಇಲ್ಲಿನ ವಾಟರ್‌ಕ್ಲೂಫ್ ವಾಯುನೆಲೆಯಲ್ಲಿ ಬರಮಾಡಿಕೊಂಡರು. ಪ್ರಧಾನಿ ಅವರಿಗೆ ಸಾಂಪ್ರದಾಯಿಕ ಸ್ವಾಗತವನ್ನು ನೀಡಲಾಯಿತು.

ಶೃಂಗಸಭೆ ಕುರಿತು 'ಎಕ್ಸ್' ಜಾಲತಾಣದಲ್ಲಿ ಸಂದೇಶವನ್ನು ಪೋಸ್ಟ್ ಮಾಡಿರುವ ಪ್ರಧಾನಿ, 'ಬ್ರಿಕ್ಸ್ ಶೃಂಗಸಭೆಯಲ್ಲಿ ವಿಶ್ವದ ಪ್ರಮುಖ ನಾಯಕರ ಜೊತೆಗೆ ದ್ವಿಪಕ್ಷೀಯ ಚರ್ಚೆ ನಡೆಸುವುದನ್ನು ಎದುರು ನೋಡುತ್ತಿದ್ದೇನೆ' ಎಂದು ತಿಳಿಸಿದ್ದಾರೆ.



ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ದಕ್ಷಿಣ ಆಫ್ರಿಕಾದ ಜೋಹಾನಸ್‌ಬರ್ಗ್‌ನಲ್ಲಿ ಮಂಗಳವಾರ ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು —ಪಿಟಿಐ ಚಿತ್ರ

ದಕ್ಷಿಣ ಆಫ್ರಿಕಾ ಅಧ್ಯಕ್ಷ ಸಿರಿಲ್ ರಾಮಪೋಸಾ ಆಹ್ವಾನದ ಮೇರೆಗೆ ಮೋದಿ ಆಗಸ್ಟ್ 24ರವರೆಗೆ ಪ್ರವಾಸದಲ್ಲಿದ್ದಾರೆ. ಬ್ರೆಜಿಲ್, ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾ ಸದಸ್ಯತ್ವವಿರುವ ಈ ಶೃಂಗಸಭೆಯನ್ನು ದಕ್ಷಿಣ ಆಫ್ರಿಕಾ 2019ರಿಂದ ಆಯೋಜಿಸುತ್ತಿದೆ.

ಜೋಹಾನಸ್‌ಬರ್ಗ್‌ಗೆ ತೆರಳುವ ಮುನ್ನ ನವದೆಹಲಿಯಲ್ಲಿ ಹೇಳಿಕೆ ನೀಡಿದ್ದ ಪ್ರಧಾನಿ, 'ಅಭಿವೃದ್ಧಿ ಕಾರ್ಯ, ಸುಧಾರಣಾ ಕ್ರಮಗಳು ಒಳಗೊಂಡಂತೆ ಜಗತ್ತಿನ ದಕ್ಷಿಣ ಭಾಗಕ್ಕೆ ಅನ್ವಯಿಸುವ ವಿವಿಧ ವಿಷಯಗಳ ಚರ್ಚೆಗೆ ಬ್ರಿಕ್ಸ್ ವೇದಿಕೆಯಾಗಿದೆ' ಎಂದು ಹೇಳಿದ್ದರು.

'ಈ ಶೃಂಗವು ವಿಶ್ವದ ಶೇ 41ರಷ್ಟು ಜನಸಂಖ್ಯೆ ಹಾಗೂ ಶೇ 16ರಷ್ಟು ಜಿಡಿಪಿ ಅನ್ನು ಹೊಂದಿರುವ ಜಗತ್ತಿನ ಐದು ಅತಿದೊಡ್ಡ ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಒಂದೇ ವೇದಿಕೆಯಡಿ ತರಲಿದೆ' ಎಂದು ಉಲ್ಲೇಖಿಸಿದ್ದರು.

ಆಫ್ರಿಕಾ ಮತ್ತು ಮಧ್ಯ ಏಷ್ಯಾದ 20ಕ್ಕೂ ಹೆಚ್ಚು ರಾಷ್ಟ್ರಗಳ ಪ್ರಮುಖರಿಗೂ ಈ ಶೃಂಗಸಭೆಗೆ ಆಹ್ವಾನ ನೀಡಲಾಗಿದೆ. ಈ ಪೈಕಿ ಹೆಚ್ಚಿನ ರಾಷ್ಟ್ರಗಳು ಬ್ರಿಕ್ಸ್ ಸದಸ್ಯತ್ವವನ್ನು ಕೋರಿ ಅರ್ಜಿ ಸಲ್ಲಿಸಿವೆ. ಈ ವಿಷಯವೂ ಶೃಂಗಸಭೆಯಲ್ಲಿ ಚರ್ಚೆಗೆ ಬರಲಿದೆ. ಅಂತರರಾಷ್ಟ್ರೀಯ ಕ್ರಿಮಿನಲ್ ಕೋರ್ಟ್‌ನ (ಐಸಿಸಿ) ವಾರಂಟ್ ಹಿನ್ನೆಲೆಯಲ್ಲಿ ದಕ್ಷಿಣ ಆಫ್ರಿಕಾಗೆ ಬಂದಲ್ಲಿ ಬಂಧನದ ಸಾಧ್ಯತೆ ಇರುವ ಕಾರಣ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ವರ್ಚುವಲ್ ವೇದಿಕೆಯಡಿ ಶೃಂಗಸಭೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಶೃಂಗಸಭೆಯಲ್ಲದೆ, ವಿವಿಧ ರಾಷ್ಟ್ರಗಳ ಮುಖಂಡರ ಜೊತೆಗೂ ದ್ವಿಪಕ್ಷೀಯ ಮಾತುಕತೆ ನಡೆಸಲು ನಾನು ಉತ್ಸುಕನಾಗಿದ್ದೇನೆ ಎಂದು ಪ್ರಧಾನಿ ಮೋದಿ ಅವರು ತಿಳಿಸಿದ್ದಾರೆ.

ದಕ್ಷಿಣ ಆಫ್ರಿಕಾ ಪ್ರವಾಸದ ಬಳಿಕ ಆಗಸ್ಟ್ 25ರಂದು ಪ್ರಧಾನಿ ಅವರು ಗ್ರೀಸ್‌ಗೆ ತೆರಳಲಿದ್ದಾರೆ. ಈ ಮೂಲಕ 40 ವರ್ಷದ ತರುವಾಯ ಗ್ರೀಸ್‌ಗೆ ಭೇಟಿ ನೀಡಿದ ಭಾರತದ ಪ್ರಧಾನಿ ಎಂಬ ಹಿರಿಮೆಗೂ ಅವರು ಪಾತ್ರರಾಗಲಿದ್ದಾರೆ.

ಭಾರತೀಯ ಸಮುದಾಯದಿಂದ ಭವ್ಯ ಸ್ವಾಗತ

ಜೋಹಾನಸ್‌ಬರ್ಗ್(ಎ.ಪಿ): ಬ್ರಿಕ್ಸ್ ಶೃಂಗಸಭೆಗೆ ಆಗಮಿಸಿರುವ ಪ್ರಧಾನಿ ಮೋದಿ ಅವರಿಗೆ ಇಲ್ಲಿ ನೆಲೆಸಿರುವ ಭಾರತೀಯ ಸಮುದಾಯದ ಸದಸ್ಯರು ಹಾಗೂ ವಿವಿಧ ಸಂಘಟನೆಯವರು ಸ್ವಾಗತ ಕೋರಿದರು.

ಪ್ರಿಟೋರಿಯ ಹಿಂದೂ ಸೇವಾ ಸಮಾಜ ಮತ್ತು ಬ್ಯಾಪ್ಸ್ ಸ್ವಾಮಿನಾರಾಯಣ್ ಸಂಘಟನೆಯ ಸ್ಥಳೀಯ ಘಟಕದ ಕಾರ್ಯಕರ್ತರು ಸ್ವಾಗತಿಸಿದರು. ತ್ರಿವರ್ಣ-ಧ್ವಜ ಹಿಡಿದಿದ್ದ ಭಾರತೀಯ ಸಮುದಾಯದವರು 'ಭಾರತ್ ಮಾತಾ ಕೀ ಜೈ' ಘೋಷಣೆ ಕೂಗಿದರು.

ಇಬ್ಬರು ಮಹಿಳೆಯರು ಪ್ರಧಾನಿಗೆ ರಾಖಿ ಕಟ್ಟಿದರು. ಬಳಿಕ ಶೃಂಗಸಭೆ ಆಯೋಜಿಸಿರುವ ಸ್ಯಾಂಡ್‌ಟನ್ ಸನ್ ಹೋಟೆಲ್‌ಗೆ ತೆರಳಿದ ಪ್ರಧಾನಿ ಅಲ್ಲಿ, ಭಾರತೀಯ ಸಮುದಾಯದ ಹಾಗೂ ಮತ್ತು ಸ್ಥಳೀಯ ಪ್ರಮುಖರನ್ನು ಭೇಟಿಯಾಗಿ ಚರ್ಚಿಸಿದರು.

ಇಲ್ಲಿ ನಿರ್ಮಾಣಗೊಳ್ಳುತ್ತಿರುವ ಸ್ವಾಮಿನಾರಾಯಣ ಮಂದಿರದ ಮಾದರಿಯನ್ನು ಅವರು ವೀಕ್ಷಿಸಿದರು. 2017ರಿಂದಲೂ ಮಂದಿರ ನಿರ್ಮಾಣದ ಕಾರ್ಯ ಪ್ರಗತಿಯಲ್ಲಿದ್ದು, ಮುಂದಿನ ವರ್ಷ ಮುಕ್ತಾಯಗೊಳ್ಳುವ ನಿರೀಕ್ಷೆಯಿದೆ.

ಬ್ಯಾಂಕಾಕ್‌ನಿಂದ ವಿಮಾನದಲ್ಲಿ ಬಚ್ಚಿಟ್ಟುಕೊಂಡು ಬಂದಿದ್ದ

ಪ್ರಯಾಣಿಕನ ಬ್ಯಾಗ್‌ನಲ್ಲಿ 234 ಪ್ರಾಣಿಗಳು!

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): ಬ್ಯಾಂಕಾಕ್‌ನಿಂದ ಪ್ರಯಾಣಿಕರೊಬ್ಬರು ಬ್ಯಾಗ್‌ನಲ್ಲಿ ಬಚ್ಚಿಟ್ಟುಕೊಂಡು ತಂದಿದ್ದ ಕಾಂಗರೂ ಮರಿ ಸೇರಿದಂತೆ 234 ಕಾಡು ಪ್ರಾಣಿಗಳನ್ನು ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಸೋಮವಾರ ತಡರಾತ್ರಿ ಥಾಯ್ ಏರ್ ವೇಸ್ ವಿಮಾನದಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಪ್ರಯಾಣಿಕನ ಬ್ಯಾಗ್ ಪರೀಕ್ಷಿಸಿದಾಗ ನಾನಾ ಬಗೆಯ ಹೆಬ್ಬಾವು, ಊಸರವಳ್ಳಿ, ಆಮೆಗಳು ಸೇರಿದಂತೆ ವಿವಿಧ ಜಾತಿಯ ಕಾಡು ಪ್ರಾಣಿಗಳು ಇದ್ದವು. ಎಲ್ಲ ಪ್ರಾಣಿಗಳನ್ನೂ ರಕ್ಷಣೆ ಮಾಡಲಾಗಿದೆ.

ವಿಮಾನ ನಿಲ್ದಾಣದ ಗ್ರೀನ್ ಲೈನ್ ದಾಟಿ ಅದಾಗಲೇ ನಿರ್ಗಮನ ದ್ವಾರ ಬಳಿ ಬಂದಿದ್ದ ಪ್ರಯಾಣಿಕನ ಚಲನವಲನಗಳ ಬಗ್ಗೆ ಶಂಕಿತಗೊಂಡ ಕಸ್ಟಮ್ಸ್ ಅಧಿಕಾರಿಗಳು ಎರಡು ಟ್ರಾಲಿ ಬ್ಯಾಗ್ ಪರಿಶೀಲಿಸಿದಾಗ ಅದರಲ್ಲಿ ಅನೇಕ ಪ್ಲಾಸ್ಟಿಕ್ ಡಬ್ಬಿ ಮತ್ತು ಚೀಲಗಳಲ್ಲಿ ಪ್ರಾಣಿಗಳನ್ನು ತಂದಿದ್ದ. ಕೆಲವು ಪ್ರಾಣಿಗಳು ಅಳಿವಿನಂಚಿಗೆ ಸೇರಿವೆ ಎಂದು ತಿಳಿದು ಬಂದಿದೆ.

ಆರೋಪಿಯನ್ನು ಬಂಧಿಸಿ, ಆತನ ವಿರುದ್ಧ ಕಸ್ಟಮ್ಸ್ ಹಾಗೂ ವನ್ಯಜೀವಿಗಳ ಕಳ್ಳಸಾಗಣೆ ತಡೆ ಕಾಯ್ದೆಗಳ ಅಡಿ ಪ್ರಕರಣ ದಾಖಲಿಸಲಾಗಿದೆ.


ಊಸರವಳ್ಳಿ


ವಿವಿಧ ಜಾತಿಯ ಹೆಬ್ಬಾವುಗಳು


ಕಾಂಗರೂ ಮರಿ

ನಿದ್ದೆಗೆಡಿಸಿದ ಜೀರುಂಡೆ ಸದ್ದು

ಕೀಟ ಸಂಖ್ಯೆಯಲ್ಲಿ ಭಾರಿ ಏರಿಕೆ; ಸತತ ಸದ್ದಿನಿಂದ ಜನರು ಹೈರಾಣ

• ರವಿ ಕೆಳಂಗಡಿ

ಕಳಸ (ಚಿಕ್ಕಮಗಳೂರು): ಕಿವಿಗಡ-ಚಿಕ್ಕುವಂತೆ ವಿಶಿಷ್ಟ ಸದ್ದು ಮಾಡುವ ಜೀರುಂಡೆಗಳ ಹಾವಳಿ ವಾರದಿಂದೀಚೆಗೆ ತಾಲ್ಲೂಕು ವ್ಯಾಪ್ತಿಯಲ್ಲಿ ಗಣನೀಯವಾಗಿ ಹೆಚ್ಚಿದೆ. ಹಗಲು ರಾತ್ರಿ ಸತತವಾಗಿ ಕಿವಿಗಪ್ಪಳಿಸುವ ಜೀರುಂಡೆಗಳ ಸದ್ದಿನಿಂದ ಜನರು ಹೈರಾಣಾಗಿದ್ದಾರೆ.

ಮನೆಯ ಹೊರಗೆ ಅರಣ್ಯ ಪ್ರದೇಶದಲ್ಲಿ, ತೋಟಗಳಲ್ಲಿ ಕಂಡುಬರುತ್ತಿದ್ದ ಈ ಕೀಟಗಳು ಈಚೆಗೆ ಮನೆಯಂಗಳದ ಮರದಲ್ಲಿ, ಮನೆಯ ಗೋಡೆಯ ಮೇಲೂ ಕಾಣಿಸುತ್ತಿವೆ. ಮನೆಯ ಒಳಗೂ ಬಂದು ಒಂದೇ ಸಮನೆ ಸದ್ದು ಮೊಳಗಿಸುತ್ತಿವೆ. ಜನವಸತಿ ಪ್ರದೇಶದಲ್ಲಿ ಅಪರೂಪವಾಗಿದ್ದ ಜೀರುಂಡೆಗಳ ಸಂಖ್ಯೆ ಇಷ್ಟೊಂದು ಪ್ರಮಾಣದಲ್ಲಿ ಹೆಚ್ಚುವುದಕ್ಕೆ ಕಾರಣ ಏನು ಎಂಬ ಕುತೂಹಲ ಹೆಚ್ಚಾಗಿದೆ.

ಈ ಬಾರಿ ಮಳೆಯ ಪ್ರಮಾಣ ಕಡಿಮೆ ಆಗಿ, ಇವುಗಳ ಸಂತಾನೋತ್ಪತ್ತಿ ಭಾರಿ ಪ್ರಮಾಣದಲ್ಲಿ ಆಗಿರಬಹುದು ಎಂದೂ ಕೃಷಿಕರು ತರ್ಕಿಸುತ್ತಿದ್ದಾರೆ.


ಕಳಸದಲ್ಲಿ ಮನೆಯ ಒಳಗೆ ಕಂಡು ಬರುತ್ತಿರುವ ಜೀರುಂಡೆ

ಮಲೆನಾಡಿನಲ್ಲಿ ಸಾಮಾನ್ಯವಾಗಿ-ರುವ ಇವು ಒಂದು ವರ್ಷ ಆಯಸ್ಸು ಹೊಂದಿವೆ. ಹೆಣ್ಣು ಜೀರುಂಡೆ ಮರಗಳ ರೆಂಬೆಗಳ ಮೇಲೆ ಒಮ್ಮೆಗೆ 400ರಷ್ಟು ಮೊಟ್ಟೆಗಳನ್ನು ಇಡುತ್ತದೆ. 6 ರಿಂದ 10 ವಾರಗಳ ನಂತರ ಮರಿಗಳು ಮೊಟ್ಟೆಯಿಂದ ಹೊರಬಂದು ಮಣ್ಣಿನಡಿ ಸೇರಿಕೊಳ್ಳುತ್ತವೆ.

ಈ ಕೀಟಗಳು ಮರಗಳ ಬೇರುಗಳ ದ್ರವಾಹಾರ ಸೇವಿಸಿ ಜೀವನದ ಬಹುಪಾಲನ್ನು ಮಣ್ಣಿನಡಿಯಲ್ಲೇ ಕಳೆಯುತ್ತವೆ. ಅನುಕೂಲಕರ ವಾತಾವರಣ ಕಂಡು ಬಂದಾಗ ದೇಹದ ಕವಚ ಹರಿದು ಹೊರಬರುತ್ತವೆ. ಸಂಗಾತಿಯನ್ನು ಹುಡುಕಿ ಸಂತಾನೋತ್ಪತ್ತಿ ಮಾಡುತ್ತವೆ. ಮಣ್ಣಿನಿಂದ ಹೊರಗೆ ಬಂದ ನಂತರ 4 ರಿಂದ 6 ವಾರ ಮಾತ್ರ ಬದುಕುತ್ತವೆ. ಸಂಗಾತಿಯನ್ನು ಆಕರ್ಷಿಸಲು ಗಂಡು ಜೀರುಂಡೆಗಳು ಕಿಬ್ಬೊಟ್ಟೆ ಭಾಗದಿಂದ ಸದ್ದು ಹೊರಡಿಸುತ್ತವೆ ಎಂದು ತಜ್ಞರು ಹೇಳುತ್ತಾರೆ.

> ಹವಾಮಾನ ವೈಪರೀತ್ಯದಿಂದ ಜೀರುಂಡೆಗಳ ಸಂಖ್ಯೆ ಹೆಚ್ಚಿರಬಹುದು. ಮಳೆ ಕಡಿಮೆಯಾಗಿ ಬಿಸಿಲು ಹೆಚ್ಚಾಗಿದೆ. ಇದರಿಂದ ಈ ವರ್ಷ ಕಂಬಳಿ ಹುಳುಗಳೂ ನಾಪತ್ತೆ ಆಗಿವೆ. ಮಳೆಹುಳುಗಳು ಅಕಾಲದಲ್ಲಿ ಕಂಡು ಬರುತ್ತಿವೆ
>
> **ನಾಗರಾಜ ಕೂವೆ,** ಪರಿಸರ ಪ್ರೇಮಿ

ಹವಾಮಾನ ಏರುಪೇರಾದಾಗ ಒಂದು ಎಕರೆ ವ್ಯಾಪ್ತಿಯಲ್ಲಿ 15 ಲಕ್ಷದಷ್ಟು ಸಂಖ್ಯೆಯಲ್ಲಿ ಕೂಡ ಕಂಡು ಬರುವ ಸಾಧ್ಯತೆ ಇದೆ ಎಂದು ನ್ಯಾಶನಲ್ ಜಿಯಾಗ್ರಫಿ ಸಂಸ್ಥೆಯ ಅಧ್ಯಯನ ಹೇಳುತ್ತದೆ.

ಸಾವಿರಾರು ಜೀರುಂಡೆಗಳು ಏಕಕಾಲಕ್ಕೆ ಹೊರಡಿಸುವ ಕಿವಿ ಕೊರೈಸುವ ಸದ್ದು ಸದ್ಯಕ್ಕೆ ತಾಲ್ಲೂಕಿನ ಜನರ ನಿದ್ದೆಗೆಡಿಸಿದೆ.

ಹಾವೇರಿಯಲ್ಲಿ ಈಶ್ವರಪ್ಪ ಮಗನ ಓಡಾಟ: ಬಿ.ಸಿ. ಪಾಟೀಲ ಗರಂ

ಪ್ರಜಾವಾಣಿ ವಾರ್ತೆ



ಹಾವೇರಿ: 'ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ತಮ್ಮ ಮಗ ಕಾಂತೇಶನನ್ನು ಹಾವೇರಿ ಲೋಕಸಭಾ ಕ್ಷೇತ್ರಕ್ಕೆ ಬಿಟ್ಟು ವಾತಾವರಣ ಕೆಡಿಸುತ್ತಿದ್ದಾರೆ. ಚುನಾವಣೆಯಲ್ಲಿ ಬಿಜೆಪಿಯನ್ನು ವಿರೋಧಿಸಿದವರನ್ನು ಕರೆದುಕೊಂಡು ಕ್ಷೇತ್ರದಲ್ಲಿ ಓಡಾಡುತ್ತಿದ್ದಾರೆ' ಎಂದು ಮಾಜಿ ಸಚಿವ ಬಿ.ಸಿ.ಪಾಟೀಲ ಕಿಡಿ ಕಾರಿದರು.

ಬಿಜೆಪಿ ಜಿಲ್ಲಾ ಕಾರ್ಯಕಾರಿ ಸಭೆಗೂ ಮುನ್ನ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪಕ್ಷದ ವರಿಷ್ಠರು ಸಮೀಕ್ಷೆ ನಡೆಸಿದ್ದು, ಗೆಲ್ಲುವ ಅಭ್ಯರ್ಥಿ ಯಾರು ಆಗಲಿದ್ದಾರೆ ಎಂಬುದನ್ನು ಖಚಿತಪಡಿಸಿಕೊಂಡು ಟಿಕೆಟ್ ನೀಡುವರು. 'ಯಾರಿಗೂ ಟಿಕೆಟ್ ಭರವಸೆ ನೀಡಿಲ್ಲ' ಎಂದು ರಾಜ್ಯ ಘಟಕದ ಅಧ್ಯಕ್ಷ ಕಟೀಲ್ ಹೇಳಿದ್ದಾರೆ. ಟಿಕೆಟ್‌ನ ಖಚಿತತೆ ಇಲ್ಲದೆ ಹಾವೇರಿ ಕ್ಷೇತ್ರಕ್ಕೆ ಮಗನನ್ನು ಕರೆತಂದು ಓಡಾಡೋದು ಎಷ್ಟು ಸರಿ?' ಎಂದು ಆಕ್ಷೇಪಿಸಿದರು.

'ನಾವು ಪಕ್ಷ ಬಿಟ್ಟು ಬಾಂಬೆಗೆ ಹೋದಾಗ ಸಿದ್ದರಾಮಯ್ಯ ಅವರು ಸೂರ್ಯ ಚಂದ್ರ ಇರುವ ತನಕ 17 ಶಾಸಕರನ್ನು ಮತ್ತೆ ಕಾಂಗ್ರೆಸ್‌ಗೆ ಕರೆದುಕೊಳ್ಳುವುದಿಲ್ಲ ಎಂದಿದ್ದರು. ಈಗ ಯಾಕೆ ಕರೆದುಕೊಳ್ಳುತ್ತಿದ್ದಾರೆ' ಎಂದೂ ಬಿ.ಸಿ. ಪಾಟೀಲ ಅವರು ಪ್ರಶ್ನಿಸಿದರು.

'ವೈದ್ಯಕೀಯ ವಿದ್ಯಾರ್ಥಿಗಳ ಸಾಲ ₹ 5 ಲಕ್ಷಕ್ಕೆ ಏರಿಕೆ'

ಬೆಂಗಳೂರು: 'ವೈದ್ಯಕೀಯ ಕೋರ್ಸ್ ಕಲಿಯುವ ಅಲ್ಪಸಂಖ್ಯಾತ ಸಮುದಾಯದ ಅರ್ಹ ವಿದ್ಯಾರ್ಥಿಗಳಿಗೆ ನೀಡಲಾಗುವ ಸಾಲವನ್ನು ₹5 ಲಕ್ಷಕ್ಕೆ ಹೆಚ್ಚಿಸಲು ಚಿಂತನೆ ನಡೆದಿದೆ' ಎಂದು ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಝೆಡ್. ಜಮೀರ್ ಅಹಮದ್ ಖಾನ್ ತಿಳಿಸಿದರು.

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ (ಕೆಎಂಡಿಸಿ) 2023-24ನೇ ಸಾಲಿನ ಯೋಜನೆಗಳಿಗೆ ಮಂಗಳವಾರ ಚಾಲನೆ ನೀಡಿ ಮಾತನಾಡಿದ ಅವರು, 'ಸರ್ಕಾರಿ ಕೋಟಾದಡಿ ವೈದ್ಯಕೀಯ ಕೋರ್ಸ್‌ಗೆ ಸೀಟು ಪಡೆಯುವ ವಿದ್ಯಾರ್ಥಿಗಳಿಗೆ ನಿಗಮದ ವತಿಯಿಂದ ಸದ್ಯ ₹3 ಲಕ್ಷ ಸಾಲ ನೀಡಲಾಗುತ್ತಿದೆ' ಎಂದರು.

'ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳು ಮಾನ್ಯತೆ ಪಡೆದ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಓದಲು ಬಯಸಿದರೆ ಸದ್ಯ ₹20 ಲಕ್ಷ ಸಾಲ ನೀಡಲಾಗುತ್ತಿದೆ. ಅದನ್ನು ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮಂಡಳಿಯ (ಎನ್‌ಎಂಡಿಸಿ) ನೆರವಿನೊಂದಿಗೆ ₹10 ಲಕ್ಷ ಹೆಚ್ಚಿಸಿ, ₹30 ಲಕ್ಷ ನೀಡುವ ಬಗ್ಗೆಯೂ ಚಿಂತನೆ ನಡೆದಿದೆ. ಮೂರು ವರ್ಷಗಳಿಂದ ಎನ್‌ಎಂಡಿಸಿ ಯೋಜನೆಗಳು ರಾಜ್ಯಕ್ಕೆ ಸಿಗುತ್ತಿರಲಿಲ್ಲ. ಇತ್ತೀಚೆಗೆ ಪತ್ರ ವ್ಯವಹಾರ ನಡೆಸಿದ್ದರಿಂದ ವಾರ್ಷಿಕ ₹50 ಕೋಟಿ ಅನುದಾನ ರಾಜ್ಯಕ್ಕೆ ದೊರೆಯಲಿದೆ' ಎಂದು ತಿಳಿಸಿದರು.

'ಎಂಟು ಯೋಜನೆಗಳಿಗೆ ಚಾಲನೆ ನೀಡಲಾಗಿದೆ. ಈ ಪೈಕಿ 'ಅರಿವು' ಸೇರಿ ನಾಲ್ಕು ಹಳೆ ಯೋಜನೆ, ನಾಲ್ಕು ಹೊಸ ಯೋಜನೆಗಳು. ನಿರುದ್ಯೋಗಿಗಳಿಗೆ ಕಾರು ಸೇರಿ ನಾಲ್ಕು ಚಕ್ರಗಳ ವಾಹನ ಖರೀದಿಗೆ ₹3 ಲಕ್ಷ ಸಹಾಯಧನ ನೀಡುವ ಸ್ವಾವಲಂಬಿ, ತಾಂತ್ರಿಕ ಕೌಶಲ ತರಬೇತಿ ನೀಡುವ ಶ್ರಮಶಕ್ತಿ, ವಿಧವೆ, ವಿಚ್ಛೇದಿತ, ಅವಿವಾಹಿತ ಮಹಿಳೆಯರಿಗೆ ₹50 ಸಾವಿರ ಸಾಲ ನೀಡುವ ವೃತ್ತಿ ಪ್ರೋತ್ಸಾಹ ಯೋಜನೆಗೆ ಚಾಲನೆ ನೀಡಲಾಗಿದೆ' ಎಂದು ಸಚಿವರು ವಿವರಿಸಿದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಾರ್ಯದರ್ಶಿ ಮನೋಜ್ ಜೈನ್, ನಿರ್ದೇಶಕ ಜಿಲಾನಿ ಮೊಕಾಶಿ, ಕೆಎಂ ಡಿಸಿ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ನಜೀರ್ ಇದ್ದರು.

ಮರ್ಯಾದೆ ಇರುವವರು ಕಾಂಗ್ರೆಸ್‌ಗೆ ಹೋಗಲ್ಲ: ಸಿ.ಟಿ.ರವಿ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕಾಂಗ್ರೆಸ್‌ನವರು ಯಾರನ್ನೂ ಮರ್ಯಾದೆ ಕೊಟ್ಟು ಕರೆದುಕೊಳ್ಳುತ್ತಿಲ್ಲ, ಬಂದವರು ಕಡೆಯ ಬೆಂಚ್‌ನಲ್ಲಿ ಕೂರಬೇಕಾಗುತ್ತದೆ ಎಂದು ಮುಖಂಡರೇ ತಿಳಿಸಿದ್ದಾರೆ. ಹೀಗಿರುವಾಗ ಮರ್ಯಾದೆ ಇರುವವರು ಯಾರೂ ಅಲ್ಲಿಗೆ ಹೋಗುವುದಿಲ್ಲ' ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ಮಂಗಳವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ನಾವು ಬಿ.ಎಸ್. ಯಡಿಯೂರಪ್ಪ ಅವರನ್ನು ನೋಡಿ ಪಕ್ಷಕ್ಕೆ ಬಂದವರು. ಪಕ್ಷವನ್ನು ಉಳಿಸಿಕೊಂಡು ಹೋಗುತ್ತೇವೆ. ಕಾಂಗ್ರೆಸ್ ಸೇರ್ಪಡೆ ಎಂಬುದು ಸುಳ್ಳುಸುದ್ದಿ ಎಂದು ಮುನಿರತ್ನ, ಎಸ್.ಟಿ.ಸೋಮಶೇಖರ್, ಗೋಪಾಲಯ್ಯ ಸ್ಪಷ್ಟಪಡಿಸಿದ್ದಾರೆ' ಎಂದರು.

'ನೀವೇ ಪಾದಯಾತ್ರೆ ಮಾಡಿ, ತಮಿಳುನಾಡಿಗೆ ನೀರನ್ನೂ ಬಿಟ್ಟಿದ್ದೀರಿ. ನಿಮ್ಮದು ನವರಂಗಿ ಆಟ ತಾನೆ? 'ಇಂಡಿಯಾ'ದ ಸಮಾಧಾನಕ್ಕಾಗಿ ನೀರು ಬಿಡುತ್ತಿದ್ದು, ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಸ್ನೇಹಕ್ಕೆ ಕರ್ನಾಟಕ ಬಲಿಯಾಗುತ್ತಿದೆ. ಕಾಂಗ್ರೆಸ್ ಸರ್ಕಾರವು ಮಂಡ್ಯ ಜನರಿಗೆ ಶಾಪ, ತಮಿಳುನಾಡಿಗೆ ವರವಾಗಿದೆ' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	104.62	4986	11,797
ಹಾರಂಗಿ	2,859	2,858.50	1,310	2100
ಕಬಿನಿ	2,284	2,276.40	3659	4825
ಹೇಮಾವತಿ	2,922	2,912.15	2,747	6450
ಲಿಂಗನಮಕ್ಕಿ	1,819	1,790.25	4,745	7,852.70
ಸೂಪಾ (ಮೀ)	564	546.38	3,927	5,341
ಮಾಣಿ	595	580.82	384	2000
ತುಂಗಭದ್ರಾ	1,633	1,627.06	1,098	10,325
ಮಲಪ್ರಭಾ	2079.50	2,067.20	194	194
ಘಟಪ್ರಭಾ	2175	2,164.75	1,798	3,955
ಭದ್ರಾ	186	166	3,467	3,224
ಆಲಮಟ್ಟಿ (ಮೀ)	519.60	519.60	901	901
ನಾರಾಯಣಪುರ (ಮೀ)	492.25	490.29	00	9,973

* ನೆಲಮಟ್ಟದಿಂದ

ಡಿಎಚ್‌ಒ ಹುದ್ದೆ: ಮುಂದುವರಿದ ಕಿತ್ತಾಟ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಕರ್ನಾಟಕ ಆಡಳಿತ ನ್ಯಾಯ ಮಂಡಳಿ (ಕೆಎಟಿ) ಆದೇಶ ಪಾಲನೆಗೆ ಆರೋಗ್ಯ ಇಲಾಖೆ ಆಯುಕ್ತ ಸೂಚಿಸಿದರೂ ಡಾ.ರಾಜಕುಮಾರ ಯರಗಲ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ (ಡಿಎಚ್‌ಒ) ಹುದ್ದೆಯ ಕುರ್ಚಿ ಬಿಟ್ಟುಕೊಡಲಿಲ್ಲ. ಹೀಗಾಗಿ ಮಂಗಳವಾರವೂ ಬಿಕ್ಕಟ್ಟು ಮುಂದುವರೆಯಿತು.

ಆರೋಗ್ಯ ಇಲಾಖೆ ಆಯುಕ್ತರ ಸೂಚನೆಯಂತೆ ಬಾಗಲಕೋಟೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶಶಿಧರ ಕುರೇರ, 'ವರ್ಗಾವಣೆಗೆ ಕೆಎಟಿಯಿಂದ ತಡೆಯಾಜ್ಞೆ ತಂದಿರುವ ಡಾ.ಜಯಶ್ರೀ ಎಮ್ಮಿ ಅವರು ಡಿಎಚ್‌ಒ ಆಗಿ ಕರ್ತವ್ಯ ಮುಂದುವರಿಸಬೇಕು. ಡಾ.ಯರಗಲ್ ಅವರು ಸರ್ಕಾರಕ್ಕೆ ವರದಿ ಮಾಡಿಕೊಳ್ಳಬೇಕು' ಎಂದು ಸೂಚಿಸಿದ್ದಾರೆ.

ಆದರೆ, ಡಾ.ಯರಗಲ್, 'ವರ್ಗಾವಣೆ ಆಗಿರುವುದಕ್ಕೆ ಹಾಜರಾಗಿದ್ದೇನೆ. ವರ್ಗಾವಣೆ ರದ್ದು ಮಾಡಿದ ಆದೇಶ ಬಂದರೆ ಮಾತ್ರ ಬಿಟ್ಟುಕೊಡುವೆ' ಎಂದು ಪಟ್ಟು ಹಿಡಿದಿದ್ದಾರೆ.


ಬಾಗಲಕೋಟೆಯ ಡಿಎಚ್‌ಒ ಕಚೇರಿಯ ಒಂದೇ ಕೊಠಡಿಯಲ್ಲಿ ಕೆಲಸ ಮಾಡುತ್ತಿರುವ ಡಾ.ರಾಜಕುಮಾರ ಯರಗಲ್ಲ ಮತ್ತು ಡಾ.ಜಯಶ್ರೀ ಎಮ್ಮಿ

ಮಂಗಳವಾರವೂ ಡಿಎಚ್‌ಒ ಕಚೇರಿಯಲ್ಲಿ ಡಾ.ಜಯಶ್ರೀ ಎಮ್ಮಿ, ಡಾ.ರಾಜಕುಮಾರ ಯರಗಲ್ ಕರ್ತವ್ಯ ನಿರ್ವಹಿಸಿದರು. ಆಯುಕ್ತರ ಆದೇಶದ ಕುರಿತು ಪ್ರತಿಕ್ರಿಯಿಸಲು ಡಾ.ರಾಜಕುಮಾರ ನಿರಾಕರಿಸಿದರು.

'ಇಲಾಖೆ ಆಯುಕ್ತರು ಮುಂದುವರಿಸುವಂತೆ ಸೂಚಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯ-ನಿರ್ವಹಣಾಧಿಕಾರಿ ಅವರೂ ಪತ್ರ ನೀಡಿದ್ದಾರೆ. ಆದರೂ, ಡಾ.ಯರಗಲ್ ಕರ್ತವ್ಯ ನಿರ್ವಹಿಸಲು ಬಿಡುತ್ತಿಲ್ಲ. ಕಚೇರಿಗೆ ಹೊಸದಾಗಿ ಲಾಕ್ ಹಾಕಿದ್ದು, ಅದರ ಕೀ ಅವರೇ ಇಟ್ಟುಕೊಂ-ಡಿದ್ದಾರೆ' ಎಂದು ಡಾ.ಜಯಶ್ರೀ ದೂರಿದರು.

ಲೋಕಸಭೆ ಚುನಾವಣೆಗೆ ಸ್ಪರ್ಧಿಸಲ್ಲ: ಬಚ್ಚೇಗೌಡ

ಚಿಕ್ಕಬಳ್ಳಾಪುರ:'75 ವರ್ಷ ದಾಟಿದವರಿಗೆ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಜೆಪಿಯಲ್ಲಿ ಟಿಕೆಟ್ ನೀಡುವುದಿಲ್ಲ. ನನಗೂ ಟಿಕೆಟ್ ನೀಡುವುದಿಲ್ಲ ಎಂದು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದಾರೆ. ಹಾಗಾಗಿ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಆದರೆ, ರಾಜಕಾರಣದಲ್ಲಿ ಸಕ್ರಿಯವಾಗಿ-ರುವೆ' ಎಂದು ಚಿಕ್ಕಬಳ್ಳಾಪುರ ಸಂಸದ ಬಿ.ಎನ್.ಬಚ್ಚೇಗೌಡ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಅವರು, 'ಹಾಗಂತ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದಲೂ ಸ್ಪರ್ಧಿಸುವುದಿಲ್ಲ. ನನ್ನ ಮಗ ಶರತ್ ಕಾಂಗ್ರೆಸ್ ಶಾಸಕ. ಆದರೆ, ನಾನು ಬಿಜೆಪಿಯಲ್ಲಿಯೇ ಉಳಿದುಕೊಂಡಿದ್ದೇನೆ. 50 ವರ್ಷ ರಾಜಕಾರಣ ಮಾಡಿದ್ದೇನೆ. ನನಗೆ ಇಷ್ಟು ಸಾಕು' ಎಂದು ಹೇಳಿದರು.



ಚಂದ್ರಯಾನ-3

ತಿಂಗಳನ ಅಂಗಳಕೆ ವಿಕ್ರಮ್

ಭಾರತೀಯ ಬಾಹ್ಯಾಕಾಶ ವಿಜ್ಞಾನದ ಮುನ್ನಡೆಯ ಪ್ರತೀಕವೇ 'ಚಂದ್ರಯಾನ'. ಇದೀಗ ಚಂದ್ರಯಾನ ಸರಣಿಯ ಮೂರನೇ ಯಾನದ ಲ್ಯಾಂಡರ್ (ವಿಕ್ರಮ್) ಚಂದ್ರನ ಮೇಲ್ಮೈಗೆ ಅತಿ ಸನಿಹದಲ್ಲಿದೆ. ಚಂದ್ರ ಸ್ಪರ್ಶಕ್ಕೆ ಇಸ್ರೊ ವಿಜ್ಞಾನಿಗಳ ಸಂದೇಶಕ್ಕಾಗಿ ಕಾದು ನಿಂತಿದೆ. ವಿಕ್ರಮ್ ಯಶಸ್ವಿಯಾಗಿ ಪಾದ ಊರಿದರೆ ಸೌರಮಂಡಲದ ಇತರ ಗ್ರಹಗಳತ್ತ ದಾಪುಗಾಲಿಡಲು, ವೈಜ್ಞಾನಿಕ ಅಧ್ಯಯನ ನಡೆಸಲು ಮೊದಲ ಹೆಜ್ಜೆ ಆಗಲಿದೆ. ಈ ವಿದ್ಯಮಾನವನ್ನು ಭಾರತೀಯರು ಮಾತ್ರವಲ್ಲ ಈ ಸಾಹಸಕ್ಕೆ ಇಡೀ ವಿಶ್ವವೇ ಬೆರಗುಗಣ್ಣಿನಿಂದ ನೋಡುತ್ತಿದೆ. ಭಾರತ ಕಾಲಿಡಲು ಹೊರಟಿರುವುದು ಚಂದ್ರನ ದಕ್ಷಿಣ ಧ್ರುವದಲ್ಲಿ


ವೈಜ್ಞಾನಿಕ ಉಪಕರಣಗಳು

ಲ್ಯಾಂಡರ್ ಅಥವಾ ಇಳಿಯುವ ಕೋಶದಲ್ಲಿ ನಾಲ್ಕು ವೈಜ್ಞಾನಿಕ ಉಪಕರಣಗಳಿವೆ. ಇದರಲ್ಲಿ ಒಂದು ಚಂದ್ರನ ಮೇಲ್ಮೈಯ ಉಷ್ಣವಾಹಕತೆಯ ಅಧ್ಯಯನ (Thermophysical Experiment) ನಡೆಸಲಿದೆ, ಮತ್ತೊಂದು ಚಂದ್ರನ ಕಂಪನವನ್ನು ಅಭ್ಯಾಸ ಮಾಡುತ್ತದೆ. ಮೂರನೆಯದು ಚಂದ್ರನಲ್ಲಿನ ಪ್ಲಾಸ್ಮಾ ಪರಿಸರವನ್ನು ವಿಶ್ಲೇಷಿಸುತ್ತದೆ. ನಾಲ್ಕನೆಯದು ವಿಶೇಷ ಲೇಸರ್ ಪ್ರತಿಫಲಕವಾಗಿದ್ದು, ಇದು ಭೂಮಿ ಮತ್ತು ಚಂದ್ರನ ನಡುವಿನ ದೂರವನ್ನು ನಿಖರವಾಗಿ ಅಳೆಯಲಿದೆ.

ರೋವರ್‌ನಲ್ಲಿ ಎರಡು ವೈಜ್ಞಾನಿಕ ಉಪಕರಣಗಳಿವೆ. ಇದರಲ್ಲಿ ಒಂದು ಲೇಸರ್ ಉಪಕರಣವಾಗಿದ್ದು, ಮತ್ತೊಂದು ಕ್ಷ-ಕಿರಣ ಸಾಧನ. ಇವೆರಡೂ ಪ್ರತ್ಯೇಕ ವಿಧಾನಗಳ ಮೂಲಕ ಚಂದ್ರನ ಮೇಲಿನ ಧಾತುಗಳ ಸಂಯೋಜನೆ ಕುರಿತು ಅಧ್ಯಯನ ನಡೆಸಲಿವೆ. ರೋವರ್ ಚಕ್ರಗಳನ್ನು ಹೊಂದಿದ ಪುಟಾಣಿ ರೋಬಾಟ್ ವಾಹನ

(ಉಪಕರಣಗಳು– RAMBHA-LP, Chaste, ILSA, APXS, LIBS, SHAPE)

- ರಾಕೆಟ್ ಮಾದರಿ: ಎಲ್‌ವಿಎಂ ಮಾರ್ಕ್– 3
- ಉಡಾವಣೆಗೊಂಡಿದ್ದು: ಜುಲೈ 14, 2023
- ಯಾನದ ದಿನಗಳು: 40
- ಭೂಮಿಯಿಂದ ಚಂದ್ರನಿಗಿರುವ ದೂರ: 3,84,400 ಕಿ.ಮೀ
- ಸಂವಹನ: ಲ್ಯಾಂಡರ್ ಮತ್ತು ರೋವರ್ ಕಳುಹಿಸುವ ಮಾಹಿತಿಯನ್ನು ಕಕ್ಷೆಗಾಮಿ (ಚಂ.ಯಾ–2) ಬೆಂಗಳೂರಿನ ಬ್ಯಾಲಾಳುವಿಗೆ ಕಳಿಸುತ್ತದೆ





ಲ್ಯಾಂಡರ್

ಕಾರ್ಯ ಅವಧಿ: ಚಂದ್ರನ 1 ದಿನ (ಭೂಮಿಯ 14 ದಿನಗಳು)
ತೂಕ: 1749.86 ಕೆ.ಜಿ (ರೋವರ್ ಸೇರಿ)
ಪೇಲೋಡ್: 3
ಬೇಕಾಗುವ ವಿದ್ಯುತ್: 738 ವಾಟ್
ಸಂವಹನ: ಚಂದ್ರಯಾನ–2 ರ ಆರ್ಬಿಟರ್, ಐಎಸ್‌ಡಿಎನ್



ರೋವರ್

ಕಾರ್ಯ ಅವಧಿ: ಚಂದ್ರನ 1 ದಿನ (ಭೂಮಿಯ 14 ದಿನಗಳು)
ತೂಕ: 26 ಕೆ.ಜಿ
ಬೇಕಾಗುವ ವಿದ್ಯುತ್: 50 ವಾಟ್
ಪೇಲೋಡ್: 2
ಸಂವಹನ: ಲ್ಯಾಂಡರ್ ಜತೆ

ಹಿಂದಿನ ಯಾನಗಳು

ಚಂದ್ರಯಾನ-1

2008 ರ ಅಕ್ಟೋಬರ್‌ನಲ್ಲಿ ಪಿಎಸ್‌ಎಲ್‌ವಿ ರಾಕೆಟ್ ವಾಹನದಲ್ಲಿ ಚಂದ್ರಯಾನ-1 ಉಡಾವಣೆ. ಮೂರು ವಾರಗಳ ಬಳಿಕ ಚಂದ್ರನ ಕಕ್ಷೆಯನ್ನು ಯಶಸ್ವಿಯಾಗಿ ಪ್ರವೇಶಿಸಿತು. ಚಂದ್ರನ ದೀರ್ಘ ಕಾಲದ ವೀಕ್ಷಣೆಗೆ ಅನುಕೂಲವಾಗುವ 100 ಕಿ.ಮೀ ಎತ್ತರದ ಕಕ್ಷೆಯಲ್ಲಿ ನೆಲೆ ನಿಂತು ವೈಜ್ಞಾನಿಕ ಅಧ್ಯಯನ ನಡೆಸಿತು. ಛಾಯಾಚಿತ್ರಗಳನ್ನು ಕಳುಹಿಸಿತು. ಇದರಲ್ಲಿ 11 ವೈಜ್ಞಾನಿಕ ಉಪಕರಣಗಳಿದ್ದವು. ಚಂದ್ರನಲ್ಲಿ ಅಲ್ಪ ಪ್ರಮಾಣದಲ್ಲಿ ನೀರು ಇರುವ ಅಂಶವನ್ನು ಪತ್ತೆ ಮಾಡಿತು. ಚಂದ್ರನ ಮೇಲ್ಮೈ ಮತ್ತು ಧ್ರುವ ಪ್ರದೇಶಗಳಲ್ಲಿ ನೀರಿನ ಅಣುಗಳು ಶೇಖರವಾಗಿರುವ ಮಾಹಿತಿ ನೀಡಿತು.

ಚಂದ್ರಯಾನ-2

2019 ರಲ್ಲಿ ಚಂದ್ರನಲ್ಲಿ ಲ್ಯಾಂಡರ್ (ವಿಕ್ರಮ್) ಮತ್ತು ರೋವರ್ (ಪ್ರಗ್ಯಾನ್) ಇಳಿಸುವ ಉದ್ದೇಶದಿಂದ ಉಡಾವಣೆ ಮಾಡಲಾಗಿತ್ತು. ಕಕ್ಷೆಗಾಮಿಯಿಂದ (ಆರ್ಬಿಟರ್) ಲ್ಯಾಂಡರ್ ಪ್ರತ್ಯೇಕಗೊಂಡು ಚಂದ್ರನ ಮೇಲ್ಮೈಗೆ ತೀರಾ ಸಮೀಪಕ್ಕೆ ಬಂದು ಅಪ್ಪಳಿಸಿತು. ಆದರೆ ಕಕ್ಷೆಗಾಮಿ ಈಗಲೂ ಚಂದ್ರನ ಕಕ್ಷೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಚಂದ್ರಯಾನ-2 ರಲ್ಲಿ ಅಪೂರ್ಣಗೊಂಡ ಕಾರ್ಯವನ್ನು ಚಂದ್ರಯಾನ-3 ಮಾಡಲಿದೆ. ಈಗ ಲ್ಯಾಂಡರ್ ಜತೆ ಸಂಪರ್ಕದಲ್ಲಿದೆ.

ಪ್ರಜಾವಾಣಿ ಗ್ರಾಫಿಕ್ಸ್

ಇಂದು ಚಂದ್ರ ಚುಂಬನ

ಒಂದನೇ ಪುಟದಿಂದ

ಕಡೆಯ 10-15 ನಿಮಿಷಗಳ ಸಮನ್ವಯದ ಕೆಲಸ ಮಾಡುವುದು ವಿಕ್ರಮ್‌ನ 'ಎಲೆಕ್ಟ್ರಾನಿಕ್ ಮಿದುಳು'. ಕ್ಷಣ ಮಾತ್ರದಲ್ಲಿ ಎಲ್ಲ ಮಾಹಿತಿಗಳನ್ನು ಗ್ರಹಿಸಿ ಅದಕ್ಕೆ ತಕ್ಕಂತೆ ಲೆಕ್ಕಾಚಾರಗಳನ್ನು ಹಾಕಿ, ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತಾ ಹೋಗುತ್ತದೆ. ಭೂಮಿಯಿಂದ ಯಾರೂ ನಿಯಂತ್ರಣ ಮಾಡುವುದಿಲ್ಲ. ಎಲ್ಲದಕ್ಕೂ ಸಾಫ್ಟ್‌ವೇರ್ ಮತ್ತು ಸೆನ್ಸಾರ್‌ಗಳು ಇರುತ್ತವೆ. ಅವುಗಳೇ ಎಲ್ಲವನ್ನೂ ನಿಭಾಯಿಸುತ್ತವೆ.

ಕಕ್ಷೆ ಬಿಟ್ಟು ಹೊರಬರಲು ವೇಗ ನಿಯಂತ್ರಣ ಅತಿಮುಖ್ಯ. ವೇಗಕ್ಕೆ ಬ್ರೇಕ್ ಹಾಕುತ್ತಲೇ ಹಂತಹಂತವಾಗಿ ವೇಗ ತಗ್ಗಿಸುವ ಕೆಲಸ ಈ ಎಲೆಕ್ಟ್ರಾನಿಕ್ ಮಿದುಳೇ ಮಾಡುತ್ತದೆ. ಹೀಗಾಗಿ ಇದು 'ಶಾಂತ ಚಿತ್ತ'ದಿಂದಲೇ ಕೆಲಸ ಮಾಡಬೇಕು ಎನ್ನುತ್ತಾರೆ ವಿಜ್ಞಾನಿಗಳು.

ಪ್ರತಿಕೂಲ ಪರಿಸ್ಥಿತಿ ಇದ್ದರೆ ಆ.27 ಕ್ಕೆ: ಚಂದ್ರಸ್ಪರ್ಶಕ್ಕೆ ಕೊನೆಯ ಎರಡು ಗಂಟೆಗಳು ಅತಿ ಮುಖ್ಯ. ಒಂದು ವೇಳೆ ಚಂದ್ರನ ಆವರಣದಲ್ಲಿ ಪ್ರತಿಕೂಲ ಪರಿಸ್ಥಿತಿ ಎದುರಾದರೆ ಲ್ಯಾಂಡಿಂಗ್ ಅನ್ನು ಆಗಸ್ಟ್ 27 ಕ್ಕೆ ಮುಂದೂಡುವ ಸಾಧ್ಯತೆ ಇದೆ. ಸದ್ಯಕ್ಕಂತೂ ಅಂತಹ ವಾತಾವರಣವಿಲ್ಲ ಎಂದು ಮೂಲಗಳು ಹೇಳಿವೆ.

ಸೂರ್ಯನ ಸ್ಪರ್ಶ

ಚಂದ್ರನ ದಕ್ಷಿಣ ಧ್ರುವದಲ್ಲಿ ಪರ್ವತಗಳಿಂದಾಗಿ ಸಾಕಷ್ಟು ಕಡೆಗಳಲ್ಲಿ ನೆರಳಿರುತ್ತದೆ. ಆದರೆ, ಇಸ್ರೊ ಲ್ಯಾಂಡರ್ ಇಳಿಕೆಗೆ ಆಯ್ಕೆ ಮಾಡಿರುವ ಪ್ರದೇಶದಲ್ಲಿ ಉತ್ತಮ ಬೆಳಕು ಇರುತ್ತದೆ. ಅಲ್ಲಿ ಸೂರ್ಯೋದಯದ ಬಳಿಕವೇ ಲ್ಯಾಂಡಿಂಗ್ ಪ್ರಕ್ರಿಯೆ ಆರಂಭವಾಗುತ್ತದೆ. ಭೂಮಿಯ 14 ದಿನಗಳು ಅಂದರೆ ಚಂದ್ರನ 1 ದಿನ ಪೂರ್ತಿ ಅಲ್ಲಿ ಬೆಳಕು ಇರುತ್ತದೆ. ಇದೇ ವಾತಾವರಣದಲ್ಲಿ ವೈಜ್ಞಾನಿಕ ಅಧ್ಯಯನ ನಡೆಸಲಾಗುತ್ತದೆ. ಇದೇ ಕಾರಣಕ್ಕಾಗಿ ದಕ್ಷಿಣ ಪ್ರದೇಶದ 69 ಡಿಗ್ರಿ ಅಕ್ಷಾಂಶದಲ್ಲಿ ಲ್ಯಾಂಡರ್ ಇಳಿಸಲಾಗುತ್ತಿದೆ ಎನ್ನುತ್ತಾರೆ ವಿಜ್ಞಾನಿಗಳು.

ತಪ್ಪು ಮರುಕಳಿಸದಂತೆ ಎಚ್ಚರಿಕೆ

ಚಂದ್ರಯಾನ-2 ರಲ್ಲಿ ಕೊನೆ ಗಳಿಗೆಯಲ್ಲಿ ಲ್ಯಾಂಡರ್ ನೆಲಕ್ಕೆ ಅಪ್ಪಳಿಸಿತ್ತು. ಆಗ ಕೆಲವು ಸನ್ನಿವೇಶಗಳನ್ನು ನಿಭಾಯಿಸಲು ಆಗಲಿಲ್ಲ. ಈ ಬಾರಿ ಎದುರಾಗಬಹುದಾದ ಎಲ್ಲ ರೀತಿಯ ಸವಾಲುಗಳನ್ನು ಮುಂಚಿತವಾಗಿ ಗ್ರಹಿಸಿಯೇ ಅದಕ್ಕೆ ಪರಿಹಾರೋಪಾಯಗಳನ್ನು ಉಪಕರಣಗಳ ಮೂಲಕ ಅಡಕಗೊಳಿಸಲಾಗಿದೆ. ಅವು ಎದುರಾಗಬಹುದಾದ ಸವಾಲುಗಳನ್ನು ಗ್ರಹಿಸಿ ಅವುಗಳನ್ನು ನಿವಾರಿಸಿಕೊಳ್ಳುತ್ತವೆ.

- ಕಳೆದ ಬಾರಿ ಲ್ಯಾಂಡಿಂಗ್ ಪ್ರದೇಶ ಚಿಕ್ಕದಾಗಿತ್ತು. ವಿಕ್ರಮ್‌ಗೆ ಅದು ಸಮಸ್ಯೆಯಾಗಿತ್ತು. ಈ ಬಾರಿ ಲ್ಯಾಂಡಿಂಗ್ ಪ್ರದೇಶದ ವಿಸ್ತೀರ್ಣ 2.5x4 ಕಿ.ಮೀ ಹೆಚ್ಚಿಸಲಾಗಿದೆ. ಅಧಿಕ ಸಾಮರ್ಥ್ಯದ ಆಧುನಿಕ ಉಪಕರಣಗಳನ್ನೂ ಅಳವಡಿಸಲಾಗಿದೆ.
- ಲ್ಯಾಂಡರ್‌ನ ವೇಗ ನಿಯಂತ್ರಣವೇ ಇಳಿಸುವ ಪ್ರಕ್ರಿಯೆಯ ಅತಿ ಮುಖ್ಯ ಅಂಶ. ವೇಗ ನಿಯಂತ್ರಿಸುವಾಗ ಲ್ಯಾಂಡರ್ ಬೀಳುವ ಸಂದರ್ಭದಲ್ಲಿ ಎಷ್ಟು ಎತ್ತರದಲ್ಲಿದೆ, ವೇಗ ಎಷ್ಟಿದೆ, ತಿರುಗುತ್ತಾ ಬೀಳುತ್ತಿದೆಯೇ ಅಥವಾ ಗಿರಗಿಟ್ಲೆಯಂತೆ ತಿರುಗುತ್ತಿದೆಯೆ ಎಂಬುದನ್ನು ಕ್ಷಣ ಮಾತ್ರದಲ್ಲಿ ಗ್ರಹಿಸಿ ಅದನ್ನು ಸರಿಪಡಿಸಿಕೊಳ್ಳುತ್ತದೆ.
- ಇದರಲ್ಲಿ ತಂತ್ರಾಂಶವನ್ನು ಬದಲಿಸಲಾಗಿದೆ. ವೈಫಲ್ಯಗಳನ್ನೇ ಗಮನದಲ್ಲಿಟ್ಟುಕೊಂಡು ಅವುಗಳಿಗೆ ಪರಿಹಾರ ನಿಟ್ಟಿನಲ್ಲಿ ಈ ತಂತ್ರಾಂಶ ರೂಪಿಸಲಾಗಿದೆ.

'ಸಿಗಲಿದೆ ಚಂದಿರನ ಒಳನೋಟ'

ನವದೆಹಲಿ (ಪಿಟಿಐ): ಚಂದ್ರಯಾನ-3ರ ಬಹು ನಿರೀಕ್ಷಿತ ಸಾಫ್ಟ್ ಲ್ಯಾಂಡಿಂಗ್‌ಗೆ ಕಾತರವಾಗಿ ಕಾಯುತ್ತಿರುವುದಾಗಿ ಭಾರತೀಯ-ಅಮೆರಿಕನ್, ನಾಸಾದ ಗಗನಯಾತ್ರಿ ಸುನೀತಾ ವಿಲಿಯಮ್ಸ್ ಹೇಳಿದ್ದಾರೆ.



ಸುನಿತಾ

'ನ್ಯಾಷನಲ್ ಜಿಯಾಗ್ರಫಿಕ್ ಇಂಡಿಯಾ' ಸುನಿತಾ ಅವರ ಹೇಳಿಕೆಯನ್ನು ಹಂಚಿಕೊಂಡಿದೆ. 'ಚಂದ್ರಯಾನ-3 ಸಾಫ್ಟ್‌ಲ್ಯಾಂಡ್‌ನೊಂದಿಗೆ ನಮಗೆ ಚಂದ್ರನ ಕುರಿತ ಅಮೂಲ್ಯವಾದ ಒಳನೋಟಗಳು ಲಭ್ಯವಾಗಲಿವೆ. ಭಾರತವು ಬಾಹ್ಯಾಕಾಶ ಸಂಶೋಧನೆಯಲ್ಲಿ ಮುಂಚೂಣಿಯಲ್ಲಿರುವುದು, ಚಂದ್ರನ ಮೇಲೆ ಸುಸ್ಥಿರ ಜೀವನ ನಡೆಸಲು ಇರುವ ಅವಕಾಶಗಳ ಅನ್ವೇಷಣೆಯಲ್ಲಿ ತೊಡಗಿರುವುದು ನನಗೆ ನಿಜಕ್ಕೂ ರೋಮಾಂಚನ ಉಂಟು ಮಾಡಿದೆ' ಎಂದು ಸುನಿತಾ ವಿಲಿಯಮ್ಸ್ ಹೇಳಿದ್ದಾರೆ.

'ಚಂದ್ರನ ಸಂಯೋಜನೆ ಮತ್ತು ಇತಿಹಾಸ ತಿಳಿಯುವ ಪ್ರಯತ್ನದಲ್ಲಿ ಚಂದ್ರಯಾನ-3 ಮಹತ್ವದ ಮೈಲುಗಲ್ಲು. ಚಂದ್ರನ ದಕ್ಷಿಣ ಧ್ರುವದಲ್ಲಿ ಮಾನವ ಉಪಸ್ಥಿತಿಯನ್ನು ಸ್ಥಾಪಿಸಲು ಸೂಕ್ತವಾದ ಸ್ಥಳಗಳನ್ನು ಗುರುತಿಸಲು ಇದು ನೆರವಾಗಲಿದೆ' ಎಂದೂ ಅವರು ಬಣ್ಣಿಸಿದ್ದಾರೆ.

ಚಂದ್ರಯಾನ-3 ಲ್ಯಾಂಡರ್‌ನ ಸಾಫ್ಟ್‌ಲ್ಯಾಂಡಿಂಗ್ ಪ್ರಕ್ರಿಯೆಯ ನೇರಪ್ರಸಾರವನ್ನು ನ್ಯಾಷನಲ್ ಜಿಯಾಗ್ರಫಿಕ್ ಇಂಡಿಯಾ ಮಾಡುತ್ತಿದೆ. ಇದರಲ್ಲಿ ಸುನೀತಾ ವಿಲಿಯಮ್ಸ್, ರಾಕೇಶ್ ಶರ್ಮಾ ಅವರಂತಹ ಗಗನಯಾತ್ರಿಗಳ ವಿವರಣೆಯೂ ಇರಲಿದೆ.

ನೇರಪ್ರಸಾರ ವೀಕ್ಷಣೆಗೆ ಸೂಚನೆ

ಗುವಾಹಟಿ: ಚಂದ್ರಯಾನ-3 ಲ್ಯಾಂಡರ್‌ನ ಸಾಫ್ಟ್ ಲ್ಯಾಂಡಿಂಗ್ ಪ್ರಕ್ರಿಯೆಯ ನೇರಪ್ರಸಾರವನ್ನು ವೀಕ್ಷಿಸಲು ವಿದ್ಯಾರ್ಥಿಗಳಿಗೆ ವ್ಯವಸ್ಥೆ ಕಲ್ಪಿಸಬೇಕು ಎಂದು ಅಸ್ಸಾಂ ಶಿಕ್ಷಣ ಇಲಾಖೆಯು ಎಲ್ಲ ಶಾಲೆಗಳಿಗೆ ಸೂಚಿಸಿದೆ.

ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ರಾಜ್ಯ ಶಿಕ್ಷಣ ಪರಿಷತ್, ಸಂಶೋಧನೆ ಮತ್ತು ತರಬೇತಿ ಮಂಡಳಿ (ಎಸ್‌ಸಿಇಆರ್‌ಟಿ) ಮತ್ತು ಆದರ್ಶ ವಿದ್ಯಾಲಯದ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿರುವ ಶಾಲಾ ಶಿಕ್ಷಣ ಇಲಾಖೆ, ಸಂಜೆ 5.30–6–30ರ ವರೆಗೆ ನೇರ ಪ್ರಸಾರ ವೀಕ್ಷಣೆಗೆ ವ್ಯವಸ್ಥೆ ಮಾಡುವಂತೆ ಹೇಳಿದೆ. ಸರ್ವ ಶಿಕ್ಷಣ ಅಭಿಯಾನದ ಸಹಯೋಗದೊಂದಿಗೆ ಈ ಕಾರ್ಯಕ್ರಮ ನಡೆಯಬೇಕು ಎಂದು ಸೂಚಿಸಲಾಗಿದೆ.

> **ಚಂದ್ರಯಾನ-3 ಯಶಸ್ವಿಯಾಗಿ ಲ್ಯಾಂಡ್ ಆಗಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಲ್ಯಾಂಡಿಂಗ್‌ಗಾಗಿ ಇಡೀ ದೇಶವೇ ಕಾತರದಿಂದ ಕಾಯುತ್ತಿದೆ.**
>
> **ಅರವಿಂದ ಕೇಜ್ರಿವಾಲ್**
> ದೆಹಲಿ ಮುಖ್ಯಮಂತ್ರಿ

ಮೋದಿ, ಶಾ, ಭಾಗವತ್‌ಗೆ ರಾಖಿ ಕಳುಹಿಸಿದ ಸೀಮಾ

ನೋಯ್ಡಾ(ಪಿಟಿಐ): ರಕ್ಷಾ ಬಂಧನ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹಾಗೂ ಇತರರಿಗೆ ರಾಖಿಗಳನ್ನು ಕಳುಹಿಸಿರುವುದಾಗಿ ಭಾರತವನ್ನು ಅಕ್ರಮವಾಗಿ ಪ್ರವೇಶಿಸಿರುವ ಪಾಕಿಸ್ತಾನ ಪ್ರಜೆ ಸೀಮಾ ಹೈದರ್ ಮಂಗಳವಾರ ಹೇಳಿದ್ದಾರೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೂ ರಾಖಿಗಳನ್ನು ಕಳುಸಿರುವುದಾಗಿ ಸೀಮಾ ಹೇಳಿದ್ದಾರೆ.

'ದೇಶದ ಜವಾಬ್ದಾರಿ ಹೊತ್ತಿರುವ ನನ್ನ ಈ ಸಹೋದರರಿಗೆ ರಕ್ಷಾ ಬಂಧನ ದಿನ ಆಗಸ್ಟ್ 30ರಂದೇ ತಲುಪಲಿ ಎಂಬ ಉದ್ದೇಶದಿಂದ ಈ ರಾಖಿಗಳನ್ನು ಮುಂಚಿತವಾಗಿಯೇ ಕಳುಹಿಸಿದ್ದೇನೆ. ನನಗೆ ಖುಷಿಯಾಗಿದೆ. ಜೈ ಶ್ರೀರಾಮ್, ಜೈ ಹಿಂದ್, ಹಿಂದೂಸ್ತಾನ್ ಜಿಂದಾಬಾದ್' ಎಂದು ಸೀಮಾ ಅವರು ಹೇಳಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.



ಸೀಮಾ ಹೈದರ್

ಸೀಮಾ ತನ್ನ ಮಕ್ಕಳೊಂದಿಗೆ ಈ ರಾಖಿಗಳನ್ನು ಪೊಟ್ಟಣಗಳಲ್ಲಿ ಹಾಕುತ್ತಿರುವುದು, ಹಿನ್ನೆಲೆಯಲ್ಲಿ 'ಭೈಯಾ ಮೇರೆ ರಾಖಿ ಕೆ ಬಂಧನ್ ಕೊ ನಿಭಾನಾ' ಎಂಬ ಹಾಡು ಕೇಳುತ್ತದೆ.

ಆನ್‌ಲೈನ್ ಆಟ ಪಬ್‌ಜಿ ಮೂಲಕ ಪರಿಚಯವಾಗಿರುವ, ಗ್ರೇಟರ್ ನೋಯ್ಡಾದಲ್ಲಿರುವ ಪ್ರಿಯತಮ ಸಚಿನ್ ಮೀನಾ ಅವರೊಂದಿಗೆ ಜೀವನ ಸಾಗಿಸುವ ಉದ್ದೇಶದೊಂದಿಗೆ, ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಸೀಮಾ ಅವರು ನೇಪಾಳ ಮೂಲಕ ಭಾರತವನ್ನು ಪ್ರವೇಶಿಸಿದ್ದಾರೆ. ತಮ್ಮೊಂದಿಗೆ ನಾಲ್ವರು ಮಕ್ಕಳನ್ನು ಕೂಡ ಕರೆತಂದಿದ್ದಾರೆ.

ಜೆನೆರಿಕ್ ಔಷಧ ಕಡ್ಡಾಯ ಶಿಫಾರಸು ವಿರುದ್ಧ ಪತ್ರ

ನವದೆಹಲಿ (ಪಿಟಿಐ): ವೈದ್ಯರು ಕಡ್ಡಾಯವಾಗಿ ಜೆನೆರಿಕ್ ಔಷಧಿಗಳನ್ನು ಶಿಫಾರಸು ಮಾಡಬೇಕೆಂಬ ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ನಿಯಮಗಳನ್ನು ಹಿಂಪಡೆಯಲು ಕೋರಿ ಭಾರತೀಯ ವೈದ್ಯಕೀಯ ಸಂಘ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಅವರಿಗೆ ಪತ್ರ ಬರೆದಿದೆ.

ಔಷಧ ಕಂಪನಿಗಳು ಆಯೋಜಿಸುವ ಸಮಾರಂಭಗಳಿಗೂ ವೈದ್ಯರು ಹಾಜರಾಗಬಾರದು ಎಂಬ ನಿಯಮದ ಬಗ್ಗೆಯೂ ವೈದ್ಯಕೀಯ ಸಂಘ ಆತಂಕ ವ್ಯಕ್ತಪಡಿಸಿದ್ದು, ಇಂಥ ನಿಯಮಗಳು ಪುನರ್‌ಪರಿಶೀಲನೆಯಾಗಬೇಕು; ಈ ನಿಯಮಾವಳಿಗಳಿಂದ ಸಂಘಗಳು ಮತ್ತು ಸಂಸ್ಥೆಗಳಿಗೆ ವಿನಾಯಿತಿ ನೀಡಬೇಕು ಎಂದು ಆಗ್ರಹಿಸಿದೆ.

ವೈದ್ಯರು ರೋಗಿಗಳಿಗೆ ಜೆನೆರಿಕ್ ಔಷಧಗಳನ್ನೇ ಶಿಫಾರಸು ಮಾಡಬೇಕು. ಒಂದು ವೇಳೆ ಜೆನೆರಿಕ್ ಔಷಧ ಸೂಚಿಸಲು ವಿಫಲವಾಗಿದ್ದೇ ಆದಲ್ಲಿ ದಂಡ ವಿಧಿಸುವ ಹಾಗೂ ವೃತ್ತಿ ಪರವಾನಗಿಯನ್ನು ಅಮಾನತುಗೊಳಿಸಲಾಗುವುದು ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗದ ಹೊಸ ನಿಯಮಾವಳಿಗಳಲ್ಲಿ ಹೇಳಲಾಗಿದೆ.

ಈರುಳ್ಳಿ ಖರೀದಿ ಪುನರಾರಂಭ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಈರುಳ್ಳಿ ದಾಸ್ತಾನು ಹೆಚ್ಚಿಸಿಕೊಳ್ಳಲು ಕ್ವಿಂಟಲ್‌ಗೆ ₹2,410 ನೀಡಿ ರೈತರಿಂದ ಈರುಳ್ಳಿ ಖರೀದಿ ಪುನರಾರಂಭಿಸಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.



ಈರುಳ್ಳಿ ರಫ್ತಿಗೆ ಶೇ 40ರಷ್ಟು ಸುಂಕ ವಿಧಿಸುವ ತೀರ್ಮಾನವು ಗ್ರಾಹಕರ ಹಿತವನ್ನು ಕಾಯುವ ಉದ್ದೇಶ ಹೊಂದಿದೆ. ಇದೇ ಸಂದರ್ಭದಲ್ಲಿ ಕೇಂದ್ರವು, ಹೆಚ್ಚುವರಿಯಾಗಿ 2 ಲಕ್ಷ ಟನ್ ಈರುಳ್ಳಿಯನ್ನು ರೈತರಿಂದ ಖರೀದಿಸಲು ತೀರ್ಮಾನಿಸಿದೆ ಎಂದು ಅವರು ಹೇಳಿದ್ದಾರೆ.

ಅಗತ್ಯ ಎದುರಾದರೆ ಕೇಂದ್ರವು ರೈತರಿಂದ ಇನ್ನಷ್ಟು ಈರುಳ್ಳಿ ಖರೀದಿಸಿ, ತನ್ನಲ್ಲಿನ ಸಂಗ್ರಹವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲಿದೆ ಎಂದು ತಿಳಿಸಿದ್ದಾರೆ.

ರಫ್ತು ಮಾಡಿದಾಗ ರೈತರಿಗೆ ಸಾಮಾನ್ಯವಾಗಿ ಕ್ವಿಂಟಲ್‌ಗೆ ₹1,900ರವರೆಗೆ ಸಿಗುತ್ತದೆ. ಆದರೆ ಸರ್ಕಾರವು ₹2,410 ನೀಡಿ ಖರೀದಿಸುತ್ತಿದೆ. ರಫ್ತಿನ ಮೇಲೆ ಸುಂಕ ವಿಧಿಸಿರುವುದರಿಂದ ರೈತರು ಆತಂಕಕ್ಕೆ ಒಳಗಾಗಬೇಕಿಲ್ಲ. ಎನ್‌ಸಿಸಿಎಫ್ ಹಾಗೂ ನಾಫೆಡ್ ಸಂಸ್ಥೆಗಳಿಗೆ ರೈತರಿಂದ ಈರುಳ್ಳಿ ಖರೀದಿಸಲು ಸೂಚಿಸಲಾಗಿದೆ ಎಂದು ಗೋಯಲ್ ಹೇಳಿದ್ದಾರೆ. ಈ ಎರಡು ಸಂಸ್ಥೆಗಳು ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದಲ್ಲಿ ಈರುಳ್ಳಿ ಖರೀದಿ ಪುನರಾರಂಭಿಸಿವೆ.

ಅತ್ಯಾಚಾರ: ಪರಾರಿಯಾಗಲು ಯತ್ನಿಸಿದ್ದ ಆರೋಪಿ ದಂಪತಿ

ನವದೆಹಲಿ(ಪಿಟಿಐ): ಬಾಲಕಿ ಮೇಲೆ ಹಲವು ಬಾರಿ ಅತ್ಯಾಚಾರ ನಡೆಸಿ, ಆಕೆ ಗರ್ಭ ಧರಿಸಲು ಕಾರಣನಾದ ಪ್ರಕರಣದ ಆರೋಪಿ ದೆಹಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ (ಡಬ್ಲ್ಯುಸಿಡಿ) ಪ್ರೇಮೋದಯ್ ಖಾಖಾ ಬಂಧನವಾಗುವುದಕ್ಕೂ ಕೆಲವು ಕ್ಷಣಗಳ ಮುನ್ನ ಪತ್ನಿ ಸಹಿತ ಪರಾರಿಯಾಗಲು ಪ್ರಯತ್ನಿಸಿರುವುದು ಸಿ.ಸಿ ಟಿವಿ ಕ್ಯಾಮೆರಾದಲ್ಲಿ ದಾಖಲಾಗಿದೆ ಎಂದು ಮೂಲಗಳು ಮಂಗಳವಾರ ತಿಳಿಸಿವೆ.

ಖಾಖಾ ಮತ್ತು ಅವರ ಪತ್ನಿ ಸೀಮಾರಾಣಿ ಸೋಮವಾರ ವಕೀಲರೊಬ್ಬರನ್ನು ಭೇಟಿ ಮಾಡಲು ತೆರಳುತ್ತಿರುವುದು ಹಾಗೂ ಬಂಧನಕ್ಕೂ ಮುನ್ನವೇ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆಯಲು ಯೋಜಿಸಿದ್ದರು ಎಂದು ಮೂಲಗಳು ತಿಳಿಸಿವೆ.

'ಖಾಖಾ ದಂಪತಿ ಬುರಾರಿ ಪ್ರದೇಶದ ಶಕ್ತಿ ಎನ್‌ಕ್ಲೇವ್‌ನ ನಿವಾಸಿಗಳು. ಬಾಲಕಿಯ ತಂದೆಯು 2020ರ ಅ. 1ರಂದು ನಿಧನರಾಗಿದ್ದು, ಖಾಖಾ ಮನೆಯಲ್ಲಿ ವಾಸವಿದ್ದಳು' ಎಂದು ಪೊಲೀಸರು ತಿಳಿಸಿದ್ದಾರೆ.

ಖಾಖಾ ಅವರನ್ನು ಬಂಧಿಸುವ ಮುನ್ನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಸ್ಥಾನದಿಂದ ಅವರನ್ನು ವಜಾಗೊಳಿಸುವಂತೆ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ಆಗಸ್ಟ್ 13ರಂದು ಖಾಖಾ ಅವರ ವಿರುದ್ಧ ದೂರು ದಾಖಲಾಗಿತ್ತು.

'ನವೆಂಬರ್ 2020ರಿಂದ ಜನವರಿ 2021ರ ಅವಧಿಯಲ್ಲಿ ಬಾಲಕಿ ಮೇಲೆ ಹಲವು ಬಾರಿ ಅತ್ಯಾಚಾರ ನಡೆಸಿದ ಆರೋಪದ ಮೇಲೆ ಖಾಖಾ ವಿರುದ್ಧ ಪ್ರಕರಣ ದಾಖಲಾಗಿದೆ. ಬಾಲಕಿಗೆ ಗರ್ಭಪಾತದ ಔಷಧ ನೀಡಿದ ಆರೋಪದ ಮೇಲೆ ಆರೋಪಿಯ ಪತ್ನಿಯನ್ನೂ ವಶಕ್ಕೆ ಪಡೆಯಲಾಗಿದೆ' ಎಂದೂ ಪೊಲೀಸರು ತಿಳಿಸಿದ್ದಾರೆ.

ಸಿಬಿಐನ ಡಿಐಜಿ ಅಧಿಕಾರಾವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಕೇಂದ್ರೀಯ ತನಿಖಾ ದಳದ (ಸಿಬಿಐ) ಡಿಐಜಿ ಮತ್ತು ಇಬ್ಬರು ಎಸ್.ಪಿಗಳ ಅಧಿಕಾರಾವಧಿಯನ್ನು ವಿಸ್ತರಿಸಿ ಕೇಂದ್ರ ಸರ್ಕಾರ ಮಂಗಳವಾರ ಆದೇಶಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡಿಜಿಜಿ ಮೋಹಿತ್ ಗುಪ್ತಾ ಅವಧಿಯನ್ನು 2023ರ ಸೆಪ್ಟೆಂಬರ್ 4ರಿಂದ 2024ರ ಸೆಪ್ಟೆಂಬರ್ 3ರವರೆಗೆ (ಒಂದು ವರ್ಷ) ವಿಸ್ತರಿಸಲಾಗಿದೆ. ಗುಪ್ತಾ ಅವರು ಉತ್ತರ ಪ್ರದೇಶ ಕೇಡರ್‌ನ 2006ರ ಐಪಿಎಸ್ ಬ್ಯಾಚ್‌ನವರು.

2012ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿರುವ ಎಸ್.ಪಿ ರಘುರಾಮರಾಜನ್ (ನಾಗಾಲ್ಯಾಂಡ್ ಕೇಡರ್) ಅವರ ಅಧಿಕಾರಾವಧಿಯನ್ನು 2023ರ ಸೆಪ್ಟೆಂಬರ್ 16ರಿಂದ 2025ರ ಸೆಪ್ಟೆಂಬರ್ 15ರವರೆಗೆ (ಎರಡು ವರ್ಷಗಳು) ಸರ್ಕಾರ ವಿಸ್ತರಿಸಿದೆ.

ಅಧಿಕಾರಿ ವಿದ್ಯುತ್ ವಿಕಾಸ್ ಅವರ ಅವಧಿಯನ್ನು 2023ರ ಸೆಪ್ಟೆಂಬರ್ 1ರಿಂದ 2024ರ ಫೆಬ್ರುವರಿ 19ರವರೆಗೆ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ.

ಸುಪ್ರೀಂಕೋರ್ಟ್: ವಿಶೇಷ ಸ್ಥಾನಮಾನ ಹಿಂಪಡೆದ ನಿರ್ಧಾರ ಪ್ರಶ್ನಿಸಿದ ಅರ್ಜಿಗಳ ವಿಚಾರಣೆ

ಭಾರತದ ಸಂವಿಧಾನ ಕಾಶ್ಮೀರಕ್ಕೂ ಅನ್ವಯ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಭಾರತದ ಸಂವಿಧಾನಕ್ಕೆ ಸೇರಿಸಲಾದ 370ನೇ ವಿಧಿಯು ಜಮ್ಮು ಮತ್ತು ಕಾಶ್ಮೀರದ ಸಂವಿಧಾನ ರಚನಾ ಸಭೆಯ ಅವಧಿಯು 1957ರಲ್ಲಿ ಕೊನೆಗೊಂಡ ಬಳಿಕ ರದ್ದಾಗಿಬಿಡುತ್ತದೆ ಎಂಬ ವಾದವು 'ಸ್ವೀಕಾರಾರ್ಹವಲ್ಲ' ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಅರ್ಜಿದಾರ ಪ್ರೇಮಶಂಕರ್ ಝಾ ಪರವಾಗಿ ವಾದಿಸಿದ ಹಿರಿಯ ವಕೀಲ ದಿನೇಶ್ ದ್ವಿವೇದಿ ಅವರು ಮುಂದಿಟ್ಟ ವಾದವನ್ನು ಪೀಠವು ಒಪ್ಪಲಿಲ್ಲ.

ಸಂವಿಧಾನದ 370ನೇ ವಿಧಿಯಡಿ ಜಮ್ಮು-ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದ ಕೇಂದ್ರದ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಸೇರಿ ಐವರು ನ್ಯಾಯಮೂರ್ತಿಗಳಿರುವ ನ್ಯಾಯಪೀಠದಲ್ಲಿ ಮಂಗಳವಾರವೂ ನಡೆಯಿತು.

ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷಾಧಿಕಾರವನ್ನು 2019ರ ಆಗಸ್ಟ್ 5ರಂದು ರದ್ದುಪಡಿಸಿದ್ದನ್ನು ಝಾ ಅವರು ಪ್ರಶ್ನಿಸಿದ್ದಾರೆ. ಸಂವಿಧಾನ ರಚನಾ ಸಭೆಯೇ ಬರ್ಖಾಸ್ತುಗೊಂಡ ಬಳಿಕ 370ನೇ ವಿಧಿ ಅಸ್ತಿತ್ವದಲ್ಲಿ ಇರುತ್ತದೆ ಎಂಬುದರ ಬಗ್ಗೆಯೇ ಅವರು ಅನುಮಾನ ವ್ಯಕ್ತಪಡಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯೆ ನೀಡಿದ ಸಂವಿಧಾನ ಪೀಠವು, ಭಾರತದ ಸಂವಿಧಾನ ರಚನಾ ಸಭೆಯ ಚರ್ಚೆಗಳನ್ನು ಪರಿಶೀಲಿಸಬೇಕಾಗಿದೆ. ಜೊತೆಗೆ, 370ನೇ ವಿಧಿಯನ್ನು ಯಾವ ರೀತಿಯಲ್ಲಿ ರೂಪಿಸಬೇಕು ಎಂಬ ಇಚ್ಛೆ ಸಂವಿಧಾನ ರಚನಕಾರರಲ್ಲಿ ಇತ್ತು ಎಂಬುದನ್ನೂ ತಿಳಿಯಬೇಕಿದೆ ಎಂದಿತು.

'1957ರಲ್ಲಿ ಜಮ್ಮು-ಕಾಶ್ಮೀರಕ್ಕೆ ಭಾರತದ ಸಂವಿಧಾನ ಅನ್ವಯವಾಗುವುದು ಸ್ಥಗಿತಗೊಂಡಿದ್ದರೆ, ಒಟ್ಟಾರೆ ಪರಿಣಾಮ ಏನಾಗಬಹುದಿತ್ತು' ಎಂದು ಅರ್ಜಿದಾರರೊಬ್ಬರ ಪರ ವಕೀಲರನ್ನು ಚಂದ್ರಚೂಡ್ ನೇತೃತ್ವದ ಪೀಠ ಪ್ರಶ್ನಿಸಿತು. 'ಸಂವಿಧಾನದಡಿ ರಚನೆಯಾದ ಯಾವುದೇ ಕಾನೂನು ಜಮ್ಮು-ಕಾಶ್ಮೀರಕ್ಕೆ ಅನ್ವಯವೇ ಆಗುವುದಿಲ್ಲ ಎಂಬುದನ್ನು ಒಪ್ಪಲು ಹೇಗೆ ಸಾಧ್ಯ' ಎಂದೂ ಕೇಳಿತು.

'ಭಾರತ ಒಕ್ಕೂಟದಲ್ಲಿ ಜಮ್ಮು-ಕಾಶ್ಮೀರ ಸೇರ್ಪಡೆಯನ್ನು ಭಿನ್ನ ನೆಲೆಯಲ್ಲಿ ಅವಲೋಕಿಸಬೇಕು' ಎಂದು ದ್ವಿವೇದಿ ಅವರು ಪೀಠದ ಗಮನ ಸೆಳೆದರು.

'ಜಮ್ಮು-ಕಾಶ್ಮೀರವು ಒಂದು ಸ್ವತಂತ್ರ ರಾಜ್ಯವಾಗಿ ಅಥವಾ ದೇಶವಾಗಿ ಭಾರತಕ್ಕೆ ಸೇರ್ಪಡೆಯಾಯಿತು ಎಂದು ಹೇಳುವುದು ಒಂದೆಡೆಯಾದರೆ, ಇತರ ರಾಜ್ಯಗಳಂತೆ ಇದು ಭಾರತದೊಂದಿಗೆ ವಿಲೀನವಾಯಿತು ಎಂದು ಹೇಳುವುದು ಬೇರೆ' ಎಂದು ದ್ವಿವೇದಿ ನ್ಯಾಯಪೀಠಕ್ಕೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಭಾರತದ ಸಂವಿಧಾನದ 245ನೇ ವಿಧಿಗೆ ಸಮಾನವಾಗಿ ಜಮ್ಮು ಮತ್ತು ಕಾಶ್ಮೀರ ಸಂವಿಧಾನದಲ್ಲಿ ಇರುವ ಅಂಶ ಯಾವುದು' ಎಂದು ಪ್ರಶ್ನಿಸಿತು.

ಜಮ್ಮು-ಕಾಶ್ಮೀರ ಸಂವಿಧಾನದ 3, 4 ಹಾಗೂ 5 ವಿಧಿಗಳನ್ನು ದ್ವಿವೇದಿ ಅವರು ನ್ಯಾಯಪೀಠದ ಗಮನಕ್ಕೆ ತಂದರು. ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿ ಕಾನೂನು ರೂಪಿಸಲು ಸಂಸತ್ತು ಹೊಂದಿರುವ ಅಧಿಕಾರವನ್ನು ಹೊರತುಪಡಿಸಿ, ಇತರೆಲ್ಲ ವಿಚಾರಗಳ ಮೇಲೆ ರಾಜ್ಯವು ಕಾರ್ಯಾಂಗ ಮತ್ತು ಶಾಸಕಾಂಗೀಯ ಅಧಿಕಾರವನ್ನು ಹೊಂದಿದೆ ಎಂದು ಜಮ್ಮು ಮತ್ತು ಕಾಶ್ಮೀರದ ಸಂವಿಧಾನವು ಹೇಳುತ್ತದೆ ಎಂದು ಪೀಠವು ಹೇಳಿದೆ. ಭಾರತದ ಸಂವಿಧಾನವು ಜಮ್ಮು ಮತ್ತು ಕಾಶ್ಮೀರಕ್ಕೂ ಅನ್ವಯ ಎಂಬುದು ತಮ್ಮ ನಂಬಿಕೆ ಎಂದು ಪೀಠವು ಅಭಿಪ್ರಾಯಪಟ್ಟಿದೆ.

ಕೋರ್ಟ್ ಸುದ್ದಿಗಳು

'ಮಗು ಹೆರುವ ಆಯ್ಕೆ ಮಹಿಳೆಯದ್ದು'

ನವದೆಹಲಿ: ಮಗು ಹೆರುವ ಆಯ್ಕೆಯ ಹಕ್ಕು ಮಹಿಳೆಯದ್ದೇ ಆಗಿದ್ದು, ಈ ವಿಷಯದಲ್ಲಿ ಸರ್ಕಾರದ ಹಸ್ತಕ್ಷೇಪ ಅನಗತ್ಯ. ಇಲ್ಲಿ ಮಾನವನ ಘನತೆಯನ್ನು ಪರಿಗಣಿಸಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ.

ಅತ್ಯಾಚಾರ ಸಂತ್ರಸ್ತೆಯೊಬ್ಬರ 27 ವಾರಗಳ ಭ್ರೂಣದ ಗರ್ಭಪಾತಕ್ಕೆ ಅನುಮತಿ ನೀಡಿ ಸೋಮವಾರ ಹೊರಡಿಸಿರುವ ಆದೇಶದಲ್ಲಿ ಸುಪ್ರೀಂಕೋರ್ಟ್ ಇದನ್ನು ಹೇಳಿದೆ.ಗರ್ಭಪಾತಕ್ಕೆ ಅವಕಾಶ ನಿರಾಕರಿಸಿದ್ದ ಗುಜರಾತ್ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ 25 ವರ್ಷದ ಸಂತ್ರಸ್ತೆ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನಾ ಮತ್ತು ಉಜ್ಜಲ್ ಭುಯಾನ್ ಅವರಿದ್ದ ನ್ಯಾಯಪೀಠ ವಿಚಾರಣೆ ನಡೆಸಿತ್ತು.

'ಗರ್ಭಪಾತಕ್ಕೆ ಒಳಗಾಗುವ ಕುರಿತು ನಿರ್ಣಯಿಸುವುದು ಸೇರಿದಂತೆ ಸಂತಾನೋತ್ಪತ್ತಿಗೆ ಸಂಬಂಧಿಸಿ ನಿರ್ಧಾರ ಕೈಗೊಳ್ಳುವ ಅಧಿಕಾರ ಮತ್ತು ಸಾಮರ್ಥ್ಯವನ್ನು ಮಹಿಳೆ ಹೊಂದಿದ್ದಾಳೆ ಎಂದು ಪರಿಗಣಿಸುವುದು ಕೂಡ ಘನತೆ ಹಕ್ಕಿನ ಭಾಗವೇ ಆಗಿದೆ' ಎಂದು ನ್ಯಾಯಪೀಠ ಹೇಳಿದೆ.

'ಸಂತಾನೋತ್ಪತ್ತಿ ಅಥವಾ ಭಾವನಾತ್ಮಕ ಮತ್ತು ದೈಹಿಕ ಸ್ವಾಸ್ಥ್ಯಕ್ಕೆ ಸಂಬಂಧಿಸಿದ ಆರೋಗ್ಯಸೇವೆಯಿಂದ ವಂಚಿತಳನ್ನಾಗಿ ಮಾಡುವುದು ಕೂಡ ಮಹಿಳೆಯ ಘನತೆಗೆ ಧಕ್ಕೆ ತರಲಿದೆ' ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ಹೇಳಿದೆ. 'ವೈದ್ಯಕೀಯ ಗರ್ಭಪಾತವು ಸಂತ್ರಸ್ತ ಮಹಿಳೆಯ ಗರ್ಭಧಾರಣೆ ಸಾಮರ್ಥ್ಯ ಹಾಗೂ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದಿಲ್ಲ ಎಂಬುದಾಗಿ ವೈದ್ಯಕೀಯ ಮಂಡಳಿ ನೀಡಿದ್ದ ವರದಿಯನ್ನು ಗುಜರಾತ್ ಹೈಕೋರ್ಟ್ ಪರಿಗಣಿಸದಿದ್ದುದು ಸರಿಯಲ್ಲ' ಎಂದು ಪೀಠ ಹೇಳಿದೆ.

ಫೈಜಲ್‌ಗೆ ಮತ್ತೆ ಸಂಕಷ್ಟ

ನವದೆಹಲಿ: ಕ್ರಿಮಿನಲ್ ಪ್ರಕರಣದಲ್ಲಿ ಲಕ್ಷದ್ವೀಪ ಸಂಸದ ಹಾಗೂ ಎನ್‌ಸಿಪಿ ನಾಯಕ ಮೊಹಮ್ಮದ್ ಫೈಜಲ್ ಅವರಿಗೆ ವಿಚಾರಣಾ ನ್ಯಾಯಾಲಯವು ವಿಧಿಸಿದ್ದ ಜೈಲು ಶಿಕ್ಷೆಯನ್ನು ಅಮಾನತುಗೊಳಿಸಿ ಕೇರಳ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ಮಂಗಳವಾರ ರದ್ದುಪಡಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ತಳೆದಿರುವ ನಿಲುವು ತಪ್ಪಾಗಿದ್ದು, ಆರು ವಾರದೊಳಗೆ ಮರು ವಿಚಾರಣೆ ನಡೆಸಿ ಹೊಸದಾಗಿ ತೀರ್ಪು ಪ್ರಕಟಿಸಬೇಕು ಎಂದು ಆದೇಶಿಸಿದೆ. ಈ ಅವಧಿವರೆಗೆ ಸುಪ್ರೀಂ ಕೋರ್ಟ್‌ನ ಆದೇಶ ಊರ್ಜಿತವಾಗಿರುವುದರಿಂದ ಫೈಜಲ್ ಸಂಸತ್ ಸದಸ್ಯತ್ವಕ್ಕೆ ಯಾವುದೇ ಧಕ್ಕೆಯಾಗುವುದಿಲ್ಲ.

ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಉಜ್ಜಲ್ ಭುಯಾನ್ ಅವರಿದ್ದ ವಿಭಾಗೀಯ ನ್ಯಾಯಪೀಠವು, 'ಶಿಕ್ಷೆಯನ್ನು ಅಮಾನತುಗೊಳಿಸುವಾಗ ಹೈಕೋರ್ಟ್ ಸರಿಯಾದ ನ್ಯಾಯಿಕ ಮಾರ್ಗವನ್ನು ಅನುಸರಿಸಿಲ್ಲ' ಎಂದು ಅಭಿಪ್ರಾಯಪಟ್ಟಿತು.

ಬಳಿಕ ಪ್ರಕರಣವನ್ನು ಮತ್ತೆ ಹೈಕೋರ್ಟ್‌ಗೆ ವರ್ಗಾಯಿಸಿದ ನ್ಯಾಯ ಪೀಠವು, 'ನಿಗದಿತ ಅವಧಿಯೊಳಗೆ ಆದೇಶ ಪ್ರಕಟಿಸಲು' ಸೂಚಿಸಿತು.

ಫೈಜಲ್ ಅವರ ಸದಸ್ಯತ್ವ ರದ್ದಾದರೆ ಉಪ ಚುನಾವಣೆ ನಡೆಯಲಿದ್ದು, ಇದಕ್ಕೆ ಸರ್ಕಾರದ ಅಪಾರ ಹಣ ವ್ಯಯವಾಗುತ್ತದೆ ಎಂಬ ಅಂಶವನ್ನು ಶಿಕ್ಷೆಯನ್ನು ಅಮಾನತುಗೊಳಿಸಲು ಪರಿಗಣಿಸಿರುವುದು ಸರಿಯಲ್ಲ ಎಂದು ಹೇಳಿತು.

ಮಾಜಿ ಸಚಿವ ಪಿ.ಎಂ. ಸಯೀದ್ ಅವರ ಅಳಿಯ ಮೊಹಮ್ಮದ್ ಸಾಲಿಹ್ ಕೊಲೆಗೆ ಯತ್ನಿಸಿದ ಆರೋಪವು ಫೈಜಲ್ ಹಾಗೂ ಇತರರ ಮೇಲಿದೆ.

15 ವರ್ಷದ ಪತ್ನಿಯೊಂದಿಗಿನ ದೈಹಿಕ ಸಂಪರ್ಕ ಅತ್ಯಾಚಾರವಲ್ಲ: ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: 15 ವರ್ಷ ವಯಸ್ಸಿನ ಪತ್ನಿಯ ಮೇಲೆ ಅತ್ಯಾಚಾರವೆಸಗಿದ ಪ್ರಕರಣದಲ್ಲಿ ಆರೋಪಿ ಪತಿಯನ್ನು ಖುಲಾಸೆಗೊಳಿಸಿದ್ದ ವಿಚಾರಣಾ ನ್ಯಾಯಾಲಯದ ತೀರ್ಪನ್ನು ದೆಹಲಿ ಹೈಕೋರ್ಟ್ ಎತ್ತಿಹಿಡಿದಿದೆ. ಪತ್ನಿಯೊಂದಿಗಿನ ದೈಹಿಕ ಸಂಬಂಧವನ್ನು ಅತ್ಯಾಚಾರ ಎಂದು ಪರಿಗಣಿಸಲಾಗದು ಎಂದಿರುವ ನ್ಯಾಯಾಲಯ, ಈ ಕುರಿತ ದೆಹಲಿ ಪೊಲೀಸರ ಮೇಲ್ಮನವಿಯನ್ನು ತಳ್ಳಿಹಾಕಿದೆ.

ಅಪ್ರಾಪ್ತ ಮಗಳ ಮೇಲೆ ಅತ್ಯಾಚಾರ ನಡೆದಿದ್ದು, ಆಕೆ ಗರ್ಭಿಣಿಯಾಗಿದ್ದಾಳೆಂದು ಆರೋಪಿಸಿ ಬಾಲಕಿ ತಾಯಿ 2015ರಲ್ಲಿ ನೀಡಿದ್ದ ದೂರಿನ ಆಧಾರದ ಮೇಲೆ ಮುಸ್ಲಿಂ ವ್ಯಕ್ತಿಯ ವಿರುದ್ಧ ಅತ್ಯಾಚಾರ ಪ್ರಕರಣವನ್ನು ದಾಖಲಾಗಿತ್ತು.

2014ರ ಡಿಸೆಂಬರ್‌ನಲ್ಲಿ ಆರೋಪಿಯನ್ನು ವಿವಾಹವಾಗಿದ್ದಾಗಿಯೂ, ನಂತರವೇ ದೈಹಿಕ ಸಂಬಂಧವನ್ನು ಹೊಂದಿದ್ದಾಗಿಯೂ ಬಾಲಕಿ ಕೋರ್ಟ್‌ಗೆ ಸಾಕ್ಷ್ಯ ಸಲ್ಲಿಸಿದ್ದಳು. ಇದನ್ನು ಪರಿಗಣಿಸಿದ್ದ ವಿಚಾರಣಾ ನ್ಯಾಯಾಲಯ, ಎರಡನೇ ಪತ್ನಿಯ ಮೇಲೆ ಅತ್ಯಾಚಾರವೆಸಗಿದ ಆರೋಪದಲ್ಲಿ ಮುಸ್ಲಿಂ ವ್ಯಕ್ತಿ ತಪ್ಪಿತಸ್ಥನಲ್ಲ. ನ್ಯಾಯಬದ್ಧವಾಗಿಯೇ ಆರೋಪಿ ಖುಲಾಸೆಯಾಗಿರುವುದಾಗಿ ಘೋಷಿಸಿತ್ತು.

ವಿಚಾರಣಾ ನ್ಯಾಯಾಲಯದ ಈ ತೀರ್ಪನ್ನು ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ಸುರೇಶ್ ಕುಮಾರ್ ಕೈಟ್ ಮತ್ತು ನೀನಾ ಬನ್ಸಾಲ್ ಕೃಷ್ಣ ಅವರ ಪೀಠ ಎತ್ತಿಹಿಡಿದಿದೆ. ಪೊಲೀಸರು ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದೆ.

'ಆರೋಪಿಯ ಪತ್ನಿಯಾಗಿರುವ ಬಾಲಕಿಯು ಹದಿನೈದು ವರ್ಷ ವಯಸ್ಸಿನವಳಾಗಿದ್ದಾಳೆ. ಅವರಿಬ್ಬರ ನಡುವಿನ ದೈಹಿಕ ಸಂಬಂಧವನ್ನು ಅತ್ಯಾಚಾರ ಎಂದು ಕರೆಯಲಾಗುವುದಿಲ್ಲ' ಎಂದು ಪೀಠ ಹೇಳಿದೆ.

ಐಪಿಸಿಯ ಸೆಕ್ಷನ್ 375 (ಅತ್ಯಾಚಾರ)ನಲ್ಲಿ ನೀಡಲಾದ ವಿನಾಯಿತಿ ಪ್ರಕಾರ, ವ್ಯಕ್ತಿಯು 15 ವರ್ಷಕ್ಕಿಂತ ಕಡಿಮೆಯಿಲ್ಲದ ತನ್ನ ಪತ್ನಿಯೊಂದಿಗೆ ಸಂಭೋಗ ಅಥವಾ ಲೈಂಗಿಕ ಕ್ರಿಯೆ ನಡೆಸುವುದು ಅತ್ಯಾಚಾರವಲ್ಲ ಎಂದು ವಿವರಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

'ಮಧ್ಯಪ್ರದೇಶದಲ್ಲಿ ಗೆದ್ದರೆ ಜಾತಿಗಣತಿ'

ಸಾಗರ್ (ಪಿಟಿಐ): 'ಮಧ್ಯಪ್ರದೇಶ ರಾಜ್ಯದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದರೆ, ಅಲ್ಲಿ ಜಾತಿಗಣತಿ ನಡೆಸಲಾಗುವುದು' ಎಂದು ಹೇಳಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ಕೇಂದ್ರ ಸರ್ಕಾರವು ಸಂವಿಧಾನವನ್ನು ಬದಲಿಸಲು ಬಯಸುತ್ತಿದೆ' ಎಂದು ದೂರಿದರು.

ಮಧ್ಯಪ್ರದೇಶದ ಬುಂದೇಲಖಂಡ ಭಾಗದ ಸಾಗರದಲ್ಲಿ ಮಂಗಳವಾರ ಸಾರ್ವಜನಿಕ ರ್‍ಯಾಲಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಬಿಜೆಪಿ ಆಡಳಿತವಿರುವ ಮಧ್ಯಪ್ರದೇಶದಲ್ಲಿ ಈ ವರ್ಷಾಂತ್ಯದಲ್ಲಿ ವಿಧಾನಸಭಾ ಚುನವಾಣೆ ನಡೆಯುವ ನಿರೀಕ್ಷೆಯಿದೆ.

'ಕೆಲವರು ಸಂವಿಧಾನವನ್ನು ಬದಲಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಇದು ಅಸಾಧ್ಯ. ದೇಶದ 140 ಕೋಟಿ ಜನರು ಸಂವಿಧಾನದ ರಕ್ಷಣೆಗೆ ಬೆಂಬಲ ನೀಡುತ್ತಿರುವುದರಿಂದ ಅವರ ಪ್ರಯತ್ನ ಫಲಿಸದು' ಎಂದ ಅವರು, ಡಾ. ಬಿ.ಆರ್. ಅಂಬೇಡ್ಕರ್ ಅವರು ಜನಿಸಿದ್ದು ಮಧ್ಯ ಪ್ರದೇಶದ ಮೋವ್‌ನಲ್ಲಿ ಎಂದು ಅವರು ಸ್ಮರಿಸಿದರು.

ಅಗತ್ಯವಸ್ತುಗಳ ಬೆಲೆ ಗಗನಮುಖಿ: ಕಾಂಗ್ರೆಸ್ ಟೀಕೆ

ನವದೆಹಲಿ(ಪಿಟಿಐ): ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಜನವಿರೋಧಿ ನೀತಿಗಳಿಂದಾಗಿ ಹಣದುಬ್ಬರ ಹೆಚ್ಚುತ್ತಿದ್ದು, ಅಗತ್ಯ ವಸ್ತುಗಳ ಬೆಲೆಗಳು ಕೂಡ ಗಗನಮುಖಿಯಾಗಿವೆ ಎಂದು ಕಾಂಗ್ರೆಸ್ ಮಂಗಳವಾರ ಆರೋಪಿಸಿದೆ.

'ಕೇಂದ್ರ ಸರ್ಕಾರ ಒಂದೆಡೆ ಪ್ರಧಾನಿ ಮೋದಿ ಅವರ ವರ್ಚಸ್ಸು ಹೆಚ್ಚಿಸಲು ಗಮನ ಕೇಂದ್ರೀಕರಿಸಿದ್ದರೆ, ಮತ್ತೊಂದೆಡೆ ತನ್ನ ಆಪ್ತ ಬಂಡವಾಳಶಾಹಿಗಳಿಗೆ ಲಾಭವಾಗುವಂತೆ ಮಾಡುತ್ತಿದೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆರೋಪಿಸಿದ್ದಾರೆ.

'ತರಕಾರಿಗಳು, ಹಿಟ್ಟು, ಅಕ್ಕಿ, ಬೇಳೆಕಾಳುಗಳು ಸೇರಿದಂತೆ ಅಗತ್ಯವಸ್ತುಗಳ ಬೆಲೆಗಳಲ್ಲಿ ಸತತ ಏರಿಕೆ ಕಂಡುಬರುತ್ತಿದೆ. ಒಂದೂವರೆ ತಿಂಗಳಲ್ಲಿ 'ಥಾಲಿ'ಯು ಶೇ 28ರಷ್ಟು ತುಟ್ಟಿಯಾಗಿದೆ' ಎಂದು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

'ಕನಿಷ್ಠ ಬೆಂಬಲ ಬೆಲೆ ಭರವಸೆ ಈಡೇರದ ಕಾರಣ ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುವ ಅನಿವಾರ್ಯ ಎದುರಿಸುತ್ತಿದ್ದಾರೆ' ಎಂದು ಅವರು ಟೀಕಿಸಿದ್ದಾರೆ.

ಚೆಸ್ ವಿಶ್ವಕಪ್: ಮ್ಯಾಗ್ನಸ್ ಕಾರ್ಲ್‌ಸನ್ ವಿರುದ್ಧದ ಫೈನಲ್‌ನ ಮೊದಲ ಪಂದ್ಯ

‘ಡ್ರಾ’ ಮಾಡಿದ ಪ್ರಜ್ಞಾನಂದ

• ಮನಿಷಾ ಮೋಹಿತೆ


ಮ್ಯಾಗ್ನಸ್ ಕಾರ್ಲ್‌ಸನ್ ವಿರುದ್ಧದ ಪಂದ್ಯದಲ್ಲಿ ಆಡಿದ ಆರ್.ಪ್ರಜ್ಞಾನಂದ –ಪಿಟಿಐ ಚಿತ್ರ

ಮೊದಲ ಬಾರಿ ಫಿಡೆ ವಿಶ್ವಕಪ್ ಫೈನಲ್‌ನಲ್ಲಿ ಆಡುತ್ತಿರುವ ಜಿಎಂ ರಮೇಶಬಾಬು ಪ್ರಜ್ಞಾನಂದ ಅವರು ಎರಡು ಕ್ಲಾಸಿಕಲ್ ಪಂದ್ಯಗಳ ಪೈಕಿ ಮೊದಲನೆಯದರಲ್ಲಿ ಐದು ಬಾರಿಯ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ವಿರುದ್ಧ ವಿಶ್ವಾಸ ಮತ್ತು ತದೇಕಚಿತ್ತದಿಂದ ಆಡಿದರು. ಉತ್ತಮ ಹೋರಾಟದಿಂದ ಕೂಡಿದ ಈ ಪಂದ್ಯ ಮಂಗಳವಾರ 35 ನಡೆಗಳಲ್ಲಿ ‘ಡ್ರಾ’ ಆಯಿತು.

ವಿಶೇಷವೆಂದರೆ ಕಾರ್ಲ್‌ಸನ್ ಐದು ಯತ್ನಗಳಲ್ಲಿ ಇದೇ ಮೊದಲ ಸಲ ಫೈನಲ್‌ನಲ್ಲಿ ಆಡುತ್ತಿದ್ದಾರೆ. ಅಜರ್‌ಬೈಜಾನ್‌ನ ರಾಜಧಾನಿ ಬಾಕುವಿನಲ್ಲಿ ಈ ವಿಶ್ವಕಪ್ ನಡೆಯುತ್ತಿದೆ. ಬುಧವಾರ ಎರಡನೇ ಪಂದ್ಯ ನಡೆಯಲಿದ್ದು, ಬಿಳಿ ಕಾಯಿಗಳಲ್ಲಿ ಆಡುವ ಸರದಿ ಕಾರ್ಲ್‌ಸನ್ ಅವರದ್ದು. ನಾಳೆ ಯಾರು ಗೆಲ್ಲುತ್ತಾರೊ ಅವರು ವಿಶ್ವಕಪ್ ಚಾಂಪಿಯನ್ ಆಗಲಿದ್ದಾರೆ. ಒಂದು ವೇಳೆ ಎರಡನೇ ಪಂದ್ಯವೂ ‘ಡ್ರಾ’ ಆದರೆ ಗುರುವಾರ ಅಲ್ಪಾವಧಿಯ ಟೈಬ್ರೇಕ್ ಪಂದ್ಯಗಳ ಮೊರೆಹೋಗಬೇಕಾಗುತ್ತದೆ.

ಈ ಪಂದ್ಯಕ್ಕೆ ಮೊದಲು, 18 ವರ್ಷದ ‘ಪ್ರಗ್ಗು’ ಮತ್ತು 31 ವರ್ಷದ ನಾರ್ವೆಯ ಆಟಗಾರ ಒಮ್ಮೆ ಮಾತ್ರ ಕ್ಲಾಸಿಕಲ್ (ದೀರ್ಘ ಅವಧಿಯ) ಪಂದ್ಯ ಆಡಿದ್ದರು. ಆ ಪಂದ್ಯವೂ ಡ್ರಾ ಆಗಿತ್ತು. ಆದರೆ ಅಲ್ಪಾವಧಿಯ ಪಂದ್ಯಗಳಲ್ಲಿ ಚೆನ್ನೈನ ಆಟಗಾರ, ಐದು ಸಲ ಕಾರ್ಲ್‌ಸನ್‌ಗೆ ಸೋಲುಣಿಸಿದ್ದಾರೆ. ಹೀಗಾಗಿ ಅವರು ಈ ಹೋರಾಟವನ್ನು ‘ಟೈಬ್ರೇಕ್’ಗೆ ಎಳೆಯಲು ಎಲ್ಲ ಪ್ರಯತ್ನ ಮಾಡಲಿದ್ದಾರೆ.

ಪಂದ್ಯದ ಆರಂಭದ ಹಂತದಲ್ಲಿ ನಡೆಗಳನ್ನು ಇರಿಸಲು ಇಬ್ಬರೂ ಸಾಕಷ್ಟು ಸಮಯವನ್ನು ತೆಗೆದುಕೊಂಡರು. ಅವಕಾಶ ದೊರೆತಾಗ ಪ್ರಜ್ಞಾನಂದ ಕಾಯಿಗಳ ಎಕ್ಸ್‌ಚೇಂಜ್‌ಗೆ ಮುಂದಾದರು.

‘ಫೈನಲ್ ತಲುಪುವ ನಿರೀಕ್ಷೆ ಇಲ್ಲದ ಕಾರಣ, ನಾನು ಕಾರ್ಲ್‌ಸನ್ ವಿರುದ್ಧ ಆಡಲು ವಿಶೇಷ ಸಿದ್ಧತೆಯನ್ನೇನೂ ನಡೆಸಿಲ್ಲ’ ಎಂದು ಸೋಮವಾರದ ಸೆಮಿಫೈನಲ್ ಗೆಲುವಿನ ನಂತರ ಪ್ರಜ್ಞಾನಂದ ಹೇಳಿದ್ದರು.

ಇಬ್ಬರೂ ಸಾಕಷ್ಟು ಪಡೆಗಳನ್ನು ಕಳೆದುಕೊಂಡರು. ಎಂಡ್‌ಗೇಮ್‌ನಲ್ಲಿ ಎದುರಾಳಿಯನ್ನು ಒತ್ತಡಕ್ಕೆ ತಳ್ಳುವುದು ಕಾರ್ಲ್‌ಸನ್ ಅವರ ಪ್ರಬಲ ತಂತ್ರಗಳಲ್ಲಿ ಒಂದು. ಆದರೆ ಸಮಯ ತೆಗೆದುಕೊಂಡು ಎಚ್ಚರಿಕೆಯಿಂದ ನಡೆಗಳನ್ನಿರಿಸಿದ ಪ್ರಜ್ಞಾನಂದ ಅಪಾಯಕ್ಕೆ ಸಿಲುಕಿಕೊಳ್ಳಲಿಲ್ಲ. ‘ಡ್ರಾ’ ಒಪ್ಪಂದಕ್ಕೆ ಇಬ್ಬರೂ ಒಪ್ಪಿಕೊಂಡಾಗ ಉಭಯ ಆಟಗಾರರ ಬಳಿ ಒಂದು ‘ನೈಟ್’ (ಕುದುರೆ), ಒಂದು ರೂಕ್ (ಆನೆ) ಮತ್ತು ಮೂರು ಪಾನ್ಸ್ (ಕಾಲಾಳುಗಳು) ಉಳಿದಿದ್ದವು.

ಅಬಸೋವ್‌ಗೆ ಮುನ್ನಡೆ: ಮೂರನೇ ಸ್ಥಾನಕ್ಕಾಗಿ ನಡೆಯುತ್ತಿರುವ ಸೆಣಸಾಟದ ಮೊದಲ ಪಂದ್ಯದಲ್ಲಿ ಸ್ಥಳೀಯ ತಾರೆ ನಿಜತ್ ಅಬಸೋವ್ ಅಮೋಘವಾಗಿ ಆಡಿ ಅಮೆರಿಕದ ಫ್ಯಾಬಿಯಾನೊ ಕರುವಾನ ಅವರನ್ನು 26 ನಡೆಗಳಲ್ಲಿ ಸೋಲಿಸಿದರು. ‘ಕ್ವೀನ್ ಪಾನ್ ಓಪನಿಂಗ್’ ಕಂಡ ಈ ಪಂದ್ಯದಲ್ಲಿ ಕರುವಾನ ಎಸಗಿದ ತಪ್ಪಿನಿಂದಾಗಿ ನಿಜತ್ ಅವರಿಗೆ ಪ್ರಬಲ ದಾಳಿ ಸಂಘಟಿಸಲು ಅನುಕೂಲವಾಯಿತು. ಬುಧವಾರದ ಪಂದ್ಯ ‘ಡ್ರಾ’ ಆದಲ್ಲಿ ಅಬಸೋವ್ ಮೂರನೇ ಸ್ಥಾನ ಗಳಿಸುವ ಜೊತೆಗೆ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅರ್ಹತೆ ಗಿಟ್ಟಿಸಲಿದ್ದಾರೆ.

ಭಾರತಕ್ಕೆ ಕ್ಲೀನ್‌ಸ್ವೀಪ್ ಗುರಿ

ಕೊನೆಯ ಟಿ20 ಪಂದ್ಯದಲ್ಲಿ ಯುವ ಆಟಗಾರರಿಗೆ ಮಣೆ?


ಭಾರತ ಕ್ರಿಕೆಟ್ ತಂಡದ ನಾಯಕ ಜಸ್‌ಪ್ರೀತ್ ಬೂಮ್ರಾ –ಎಎಫ್‌ಪಿ ಚಿತ್ರ

ಡಬ್ಲಿನ್ (ಪಿಟಿಐ): ಜಸ್‌ಪ್ರೀತ್ ಬೂಮ್ರಾ ನಾಯಕತ್ವದ ಬಳಗವು ಐರ್ಲೆಂಡ್ ಎದುರಿನ ಸರಣಿಯಲ್ಲಿ ಕ್ಲೀನ್‌ಸ್ವೀಪ್ ಸಾಧಿಸುವ ವಿಶ್ವಾಸದಲ್ಲಿದೆ.

ಮೂರು ಪಂದ್ಯಗಳ ಸರಣಿಯಲ್ಲಿ 2–0ಯಿಂದ ಮುನ್ನಡೆಯಲ್ಲಿ ಇರುವ ಭಾರತ ಬುಧವಾರ ಕೊನೆಯ ಹಣಾಹಣಿಯಲ್ಲಿ ಐರ್ಲೆಂಡ್ ಪಡೆಯನ್ನು ಎದುರಿಸಲಿದೆ. ಗಾಯದಿಂದಾಗಿ ಸುಮಾರು ಹನ್ನೊಂದು ತಿಂಗಳು ಆಟದಿಂದ ದೂರವಿದ್ದ ಬೂಮ್ರಾ ಮರಳಿರುವ ಸರಣಿ ಇದು. ಕಳೆದ ಎರಡೂ ಪಂದ್ಯಗಳಲ್ಲಿ ಅವರು ಉತ್ತಮ ಬೌಲಿಂಗ್‌ನಿಂದ ಗಮನ ಸೆಳೆದಿದ್ದಾರೆ. ಆದರೆ ತಮ್ಮ ಎಂದಿನ ರನ್ ಅಪ್‌ಗೆ ಮರಳುವ ಅಗತ್ಯವಿದೆ. ವೇಗ ಹೆಚ್ಚಿಸಿಕೊಳ್ಳುವ ಸವಾಲೂ ಅವರ ಮುಂದಿದೆ. ಅಲ್ಲದೇ ಕೊನೆಯ ಪಂದ್ಯದಲ್ಲಿ ತಮ್ಮ ತಂಡದಲ್ಲಿರುವ ಯುವಪ್ರತಿಭೆಗಳಿಗೆ ಅವಕಾಶ ನೀಡಿ ಪರೀಕ್ಷಿಸಬೇಕಿದೆ.

ಬೂಮ್ರಾ ಮತ್ತು ಕನ್ನಡಿಗ ಪ್ರಸಿದ್ಧ ಕೃಷ್ಣ ಅವರು ದೀರ್ಘ ಸಮಯದಿಂದ ಪಂದ್ಯಗಳನ್ನು ಆಡಿರಲಿಲ್ಲ. ಆದ್ದರಿಂದ ಈಗ ಅವರು ವಿಶ್ರಾಂತಿ ಪಡೆಯುವುದಕ್ಕಿಂತ ಹೆಚ್ಚು ಪಂದ್ಯಗಳಲ್ಲಿ ಆಡಿ ದೈಹಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕಿದೆ. ಮುಂಬರುವ ಏಷ್ಯಾಕಪ್ ಮತ್ತು ವಿಶ್ವಕಪ್ ಟೂರ್ನಿಗಳಿಗೆ ಸಿದ್ಧರಾಗಬೇಕಿದೆ. ಆದ್ದರಿಂದ ಅವರು ಆಡುವುದು ಬಹುತೇಕ ಖಚಿತ.

ಇನ್ನುಳಿದಂತೆ ಬೌಲರ್‌ಗಳಾದ ಆವೇಶ್ ಖಾನ್, ಆಲ್‌ರೌಂಡರ್ ಶಹಬಾಜ್ ಅಹಮದ್ ಮತ್ತು ವಿಕೆಟ್‌ಕೀಪರ್ ಜಿತೇಶ್ ಶರ್ಮಾ ಅವರು ಅವಕಾಶಕ್ಕಾಗಿ ಕಾದಿದ್ದಾರೆ. ಸಂಜು ಸ್ಯಾಮ್ಸನ್‌ಗೆ ವಿಶ್ರಾಂತಿ ನೀಡಿ ಶರ್ಮಾ ಅವರನ್ನು ಕಣಕ್ಕಿಳಿಸಬಹುದು.

ಈಚೆಗೆ ನಡೆದಿದ್ದ ವೆಸ್ಟ್ ಇಂಡೀಸ್ ಎದುರಿನ ಸರಣಿಯಲ್ಲಿಯೂ ಆವೇಶ್ ಇದ್ದರು. ಆದರೆ ಆಡುವ ಬಳಗದಲ್ಲಿ ಸ್ಥಾನ ಸಿಕ್ಕಿರಲಿಲ್ಲ. ಕಳೆದ ಏಳು ಪಂದ್ಯಗಳಿಂದ ಅವರು ಬೆಂಚ್‌ನಲ್ಲಿದ್ದಾರೆ. ಆವೇಶ್ ಏಷ್ಯನ್ ಕ್ರೀಡಾಕೂಟದಲ್ಲಿ ಆಡಲಿರುವ ಭಾರತ ತಂಡದಲ್ಲಿದ್ದಾರೆ.

ಯುವಪ್ರತಿಭೆ ರಿಂಕು ಸಿಂಗ್, ಯಶಸ್ವಿ ಜೈಸ್ವಾಲ್ ಹಾಗೂ ಋತುರಾಜ್ ಗಾಯಕವಾಡ ಅವರು 11ರ ಬಳಗದಲ್ಲಿ ಸ್ಥಾನ ಗಳಿಸುವುದು ಬಹುತೇಕ ಖಚಿತ.

ಪಾಲ್ ಸ್ಟರ್ಲಿಂಗ್ ನಾಯಕತ್ವದ ಆತಿಥೇಯ ತಂಡಕ್ಕೆ ಕೊನೆಯ ಪಂದ್ಯದಲ್ಲಿ ಸಮಾಧಾನಕರ ಗೆಲುವು ಸಾಧಿಸುವ ಹಂಬಲವಿದೆ. ಆದರೆ, ಎಲ್ಲ ವಿಭಾಗಗಳಲ್ಲಿಯೂ ಸಂಘಟಿತ ಯೋಜನೆಯೊಂದಿಗೆ ಆಡಬೇಕಾದ ಸವಾಲು ಇದೆ. ಆರಂಭಿಕ ಬ್ಯಾಟರ್ ಆ್ಯಂಡ್ರ್ಯೂ ಬಲ್ಬಿರ್ನಿ ಮತ್ತು ಬ್ಯಾರಿ ಮೆಕಾರ್ಥಿ ಅವರಿಬ್ಬರನ್ನು ಬಿಟ್ಟರೆ ಉಳಿದವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿಲ್ಲ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಪೋರ್ಟ್ಸ್ 18 ಮತ್ತು ಜಿಯೊ ಸಿನೆಮಾ

ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್: ಸಿಂಧು ನಿರ್ಗಮನ

ಲಕ್ಷ್ಯ, ಪ್ರಣಯ್‌ಗೆ ಮುನ್ನಡೆ


ಮೂರನೇ ಸುತ್ತು ಪ್ರವೇಶಿಸಿದ ಲಕ್ಷ್ಯ ಸೇನ್

ಕೋಪನ್‌ಹೆಗನ್ (ಪಿಟಿಐ): ಮಾಜಿ ಚಾಂಪಿಯನ್ ಭಾರತದ ಪಿ.ವಿ. ಸಿಂಧು ಅವರು ಮಂಗಳವಾರ ನಡೆದ ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್‌ನಲ್ಲಿ ನೇರ ಗೇಮ್‌ಗಳಿಂದ ಪರಾಭವಗೊಂಡು ಟೂರ್ನಿಯಿಂದ ಹೊರಬಿದ್ದರು. ಲಕ್ಷ್ಯ ಸೇನ್ ಮತ್ತು ಎಚ್.ಎಸ್.ಪ್ರಣಯ್ ಪುರುಷರ ಸಿಂಗಲ್ಸ್‌ನಲ್ಲಿ ಮೂರನೇ ಸುತ್ತು ಪ್ರವೇಶಿಸಿದರು.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಚಿನ್ನ ಸೇರಿದಂತೆ 5 ಪದಕಗಳನ್ನು ತಂದುಕೊಟ್ಟಿದ್ದ ಸಿಂಧು ಅವರಿಗೆ ಮೊದಲ ಸುತ್ತಿನಲ್ಲಿ ‘ಬೈ’ ದೊರಕಿತ್ತು. ಎರಡನೇ ಸುತ್ತಿನಲ್ಲಿ 16ನೇ ಕ್ರಮಾಂಕದ ಅವರು ಜಪಾನ್‌ನ ನೊಜೊಮಿ ಒಕುಹರಾ ವಿರುದ್ಧ 14–21, 14–21ರಿಂದ ಪರಾಭವಗೊಂಡರು. ಇದೇ ಮೊದಲ ಬಾರಿಗೆ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ತಲುಪದೆ ಹೊರಬಿದ್ದಿದ್ದಾರೆ.

ಗಾಯದ ಕಾರಣದಿಂದ ಕಳೆದ ಆವೃತ್ತಿಯಿಂದ ದೂರ ಉಳಿದಿದ್ದ ಸಿಂಧು, ಈ ಆವೃತ್ತಿಯಲ್ಲಿ ಉತ್ಸಾಹದಿಂದ ಕಣಕ್ಕೆ ಇಳಿದಿದ್ದರು. 110 ನಿಮಿಷಗಳ ಕಾಲ ನಡೆದ ಹೋರಾಟದಲ್ಲಿ ಎದುರಾಳಿ ಆಟಗಾರ್ತಿಯ ಚುರುಕಿನ ಆಟದ ಎದುರು ಮುಗ್ಗರಿಸಿದರು. ಎರಡನೇ ಗೇಮ್‌ನಲ್ಲಿ ಆರಂಭದಲ್ಲಿ 9–0 ಮುನ್ನಡೆ ಪಡೆದು, ಪ್ರತಿರೋಧ ತೋರಿದರೂ ನಂತರ ಮೇಲುಗೈ ಸಾಧಿಸಲು ವಿಫಲವಾದರು.

2021ರ ಆವೃತ್ತಿಯಲ್ಲಿ ಕಂಚಿನ ಪದಕ ಗೆದ್ದಿರುವ ಸೇನ್ ಎರಡನೇ ಸುತ್ತಿನಲ್ಲಿ 21–11, 21–12ರಿಂದ ಕೊರಿಯಾದ ಜಿಯೋನ್ ಹ್ಯೊಕ್ ಜಿನ್ ಅವರನ್ನು ಪರಾಭವಗೊಳಿಸಿದರು. ವಿಶ್ವದ 11ನೇ ಕ್ರಮಾಂಕದ ಭಾರತದ ಆಟಗಾರನಿಗೆ ಮುಂದಿನ ಸುತ್ತಿನಲ್ಲಿ ಮೂರನೇ ಶ್ರೇಯಾಂಕದ ಕುನ್ಲವುಟ್ ವಿಟಿಡ್ಸರ್ನ್ (ಥಾಯ್ಲೆಂಡ್) ಎದುರಾಗುವ ಸಾಧ್ಯತೆ ಇದೆ.

ಪ್ರಣಯ್ ಮುನ್ನಡೆ: ಎರಡನೇ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಎಚ್.ಎಸ್. ಪ್ರಣಯ್ ಅವರು 21–9, 21–14ರಿಂದ ಇಂಡೋನೇಷ್ಯಾದ ಚಿಕೋ ಔರಾ ದ್ವಿ ವಾರ್ಡೋಯೊ ಅವರನ್ನು ನೇರ ಗೇಮ್‌ಗಳಿಂದ ಮಣಿಸಿ ಮೂರನೇ ಸುತ್ತು ಪ್ರವೇಶಿಸಿದರು.

‘ಪ್ರಜ್ಞಾನಂದ ಯಶಸ್ಸಿನ ಶ್ರೇಯಸ್ಸಿಗೆ ತಾಯಿ ಅರ್ಹ’

ಚೆನ್ನೈ (ಪಿಟಿಐ): ಮಗ ಪ್ರಜ್ಞಾನಂದ ಆಟವನ್ನು ಕೊಠಡಿಯೊಂದರ ಮೂಲೆಯಲ್ಲಿ ನಿಂತು ಮನತುಂಬಿಕೊಳ್ಳುತ್ತಿದ್ದ ತಾಯಿ ಆರ್.ನಾಗಲಕ್ಷ್ಮಿ ಅವರ ಕಣ್ಣುಗಳ ಹೊಳಪು ಮತ್ತು ಮುಗ್ಧ ನಗುವಿನ ಚಿತ್ರಗಳು ನೆಟ್ಟಿಗರ ಗಮನಸೆಳೆದಿವೆ. ಬಾಕುವಿನಲ್ಲಿ ನಡೆಯುತ್ತಿರುವ ವಿಶ್ವಕಪ್ ಚೆಸ್ ಟೂರ್ನಿಯಲ್ಲಿ ಪ್ರಜ್ಞಾನಂದ ಅವರ ಯಶಸ್ಸಿನ ಹಿಂದೆ ತಾಯಿ ಪಟ್ಟಿರುವ ಶ್ರಮವನ್ನೂ ಅದು ಹೇಳುವಂತಿತ್ತು.

ವಿಶ್ವನಾಥನ್ ಆನಂದ್ ಉಯ್ಯಾಲೆಯಲ್ಲಿ ಕುಳಿತು ತಾಯಿ ಸುಶೀಲಾ ಜೊತೆ ಆಡುತ್ತಿದ್ದ ಚಿತ್ರ ಸುಮಾರು ಮೂರೂವರೆ ದಶಕಗಳ ಹಿಂದೆ ಚೆಸ್‌ಪ್ರಿಯರ ಗಮನ ಸೆಳೆದಿತ್ತು. ಅದನ್ನೇ ನೆನಪಿಸುವಂತಿದೆ ಈಗಿನ ಚಿತ್ರ.

‘ನಾನು ಎಲ್ಲ ಶ್ರೇಯಸ್ಸನ್ನು ಪತ್ನಿಗೆ ನೀಡುವೆ. ಎಲ್ಲ ಟೂರ್ನಿಗಳಿಗೆ ಮಕ್ಕಳನ್ನು (ಪ್ರಜ್ಞಾನಂದ ಅಕ್ಕ ವೈಶಾಲಿ ಕೂಡ ಅಂತರರಾಷ್ಟ್ರೀಯ ಆಟಗಾರ್ತಿ) ಕರೆದುಕೊಂಡು ಹೋಗುತ್ತಿರುವವಳು ಆಕೆ. ತುಂಬಾ ಬೆಂಬಲ ನೀಡುತ್ತಾಳೆ. ಇಬ್ಬರ ಬಗ್ಗೆಯೂ ಕಾಳಜಿ ವಹಿಸುತ್ತಾಳೆ’ ಎಂದು ಪ್ರಜ್ಞಾನಂದ ತಂದೆ ರಮೇಶಬಾಬು ಹೇಳುತ್ತಾರೆ. ಅವರು ಬ್ಯಾಂಕ್ ಉದ್ಯೋಗಿ. ಚೆನ್ನೈನಿಂದ ಪಿಟಿಐ ಜೊತೆ ಅವರು ಮಾತನಾಡಿದರು.

ಚೆಸ್ ಬಗ್ಗೆ ಪರಿಣತಿ ರಮೇಶಬಾಬು ಅವರಿಗಿಲ್ಲ. ಆದರೆ ಆಗುಹೋಗುಗಳನ್ನು ಗಮನಿಸುತ್ತಿರುತ್ತಾರೆ. ಮಕ್ಕಳು ಟಿ.ವಿ. ಮುಂದೆ ಕಾಲಹರಣ ಮಾಡುವುದನ್ನು ತಡೆಯಲು ಅವರನ್ನು ಚೆಸ್‌ಗೆ ಹಾಕಿದ್ದರು.

‘ಟಿ.ವಿ. ನೋಡುವುದು ಅಭ್ಯಾಸವಾಗದಂತೆ ತಡೆಯಲು ನಾವು ವೈಶಾಲಿ ಅವರನ್ನು ಚೆಸ್ ಆಟಕ್ಕೆ ಪರಿಚಯಿಸಿದೆವು. ಆದರೆ ಇಬ್ಬರೂ ಮಕ್ಕಳು ಚೆಸ್ ಕಡೆ ಆಕರ್ಷಿತರಾದರು. ಅದರಲ್ಲೇ ಮುಂದುವರಿಯಲು ನಿರ್ಧರಿಸಿದರು’ ಎಂದು ರಮೇಶಬಾಬು ನೆನಪಿಸಿಕೊಂಡರು. ‘ಅವರು ಖುಷಿಯಿಂದ ಆಡುತ್ತಿರುವುದು ನೋಡಿ ಸಂತಸವಾಗಿದೆ. ಚೆಸ್ ಮೇಲಿನ ವ್ಯಾಮೋಹದಿಂದ ಚೆನ್ನಾಗಿ ಆಡುತ್ತಿದ್ದಾರೆ’ ಎಂದು ಹೇಳಿದ್ದಾರೆ. ವೈಶಾಲಿ ಮಹಿಳಾ ಗ್ರ್ಯಾಂಡ್‌ಮಾಸ್ಟರ್ ಆಗಿದ್ದಾರೆ.

ಏಷ್ಯಾಕಪ್‌ಗೆ ಭಾರತ ತಂಡ: ಮಾಜಿ ಕ್ರಿಕೆಟಿಗರ ಅಭಿಮತ

‘ಚಾಹಲ್, ಅಶ್ವಿನ್ ಆಯ್ಕೆ ಆಗಬೇಕಿತ್ತು’


ಚಾಹಲ್


ಆರ್. ಅಶ್ವಿನ್

ಮುಂಬೈ (ಪಿಟಿಐ): ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲು ಆಯ್ಕೆಯಾಗಿರುವ ಭಾರತ ತಂಡದಲ್ಲಿ ಅನುಭವಿ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಮತ್ತು ಲೆಗ್‌ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರು ಇರಬೇಕಿತ್ತು ಎಂದು ಮಾಜಿ ಕ್ರಿಕೆಟಿಗರಾದ ಮದನ್ ಲಾಲ್ ಮತ್ತು ಕರ್ಸನ್ ಗಾವ್ರಿ ಅಭಿಪ್ರಾಯಪಟ್ಟಿದ್ದಾರೆ.

ಚೈನಾಮನ್ ಬೌಲರ್ ಕುಲದೀಪ್ ಯಾದವ್ ಅವರನ್ನು ಪ್ರಮುಖ ಸ್ಪಿನ್ನರ್ ಆಗಿ ತಂಡಕ್ಕೆ ಆಯ್ಕೆ ಮಾಡಲಾಗಿದೆ. ಎಡಗೈ ಸ್ಪಿನ್, ಆಲ್‌ರೌಂಡರ್ ರವೀಂದ್ರ ಜಡೇಜ ಮತ್ತು ಅಕ್ಷರ್ ಪಟೇಲ್ ಕೂಡ ತಂಡದಲ್ಲಿದ್ದಾರೆ.

‘ಅಶ್ವಿನ್ 500–600 ವಿಕೆಟ್‌ಗಳನ್ನು ಗಳಿಸಿರುವ ಅನುಭವಿ. ವಿಕೆಟ್ ಗಳಿಸುವ ಕಲೆ ಅವರಿಗೆ ಚೆನ್ನಾಗಿ ಗೊತ್ತಿದೆ. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿಯೂ ಅವರನ್ನು ಆಡಿಸಲಿಲ್ಲ. ತಂಡದ ವ್ಯವಸ್ಥಾಪಕ ತಂಡಕ್ಕೇ ಇದು ಗೊತ್ತಿರಬೇಕು’ ಎಂದು 1983ರ ವಿಶ್ವಕಪ್ ವಿಜೇತ ಭಾರತ ತಂಡದಲ್ಲಿ ಆಡಿದ್ದ ಮದನ್ ಲಾಲ್ ಹೇಳಿದ್ದಾರೆ.

ಸೋಮವಾರ ರಾತ್ರಿ ನಡೆದ ಸಿಯೆಟ್ ಕ್ರಿಕೆಟ್ ರೇಟಿಂಗ್ ಪ್ರಶಸ್ತಿ ಕಾರ್ಯಕ್ರಮದ ಸಂದರ್ಭದಲ್ಲಿ ಅವರು ಮಾತನಾಡಿದರು.

‘ಒಟ್ಟು 712 ಅಂತರರಾಷ್ಟ್ರೀಯ ವಿಕೆಟ್‌ಗಳನ್ನು ಗಳಿಸಿದ ನಂತರವೂ ಅಶ್ವಿನ್ ಇನ್ನೂ ಏನು ಸಾಬೀತುಪಡಿಸಬೇಕಿದೆ? ಅನುಭವಿ ಆಟಗಾರನಿಗೆ ಸಿಗಬೇಕಾದ ಮನ್ನಣೆ ಅವರಿಗೆ ಸಿಗುತ್ತಿಲ್ಲ. ಉತ್ತಮ ಕೌಶಲ ಇರುವ ಆಟಗಾರ ಅಶ್ವಿನ್. ಏಷ್ಯಾ ಕಪ್ ಟೂರ್ನಿಗೆ ಅವರನ್ನು ಆಯ್ಕೆ ಮಾಡಬೇಕಿತ್ತು. ಭಾರತದಲ್ಲಿಯೇ ನಡೆಯಲಿರುವ ವಿಶ್ವಕಪ್ ಟೂರ್ನಿಯಲ್ಲಿಯೂ ಅವರು ಪರಿಣಾಮಕಾರಿಯಾಗಬಲ್ಲರು’ ಎಂದು ಕರ್ಸನ್ ಗಾವ್ರಿ ಹೇಳಿದರು.

‘ಅಶ್ವಿನ್ ಬಗ್ಗೆ ಮಾತು ಬೇಡ’

‘ಅಶ್ವಿನ್ ಬಗ್ಗೆ ಈಗ ಮಾತನಾಡಬೇಡಿ. ವಿವಾದ ಸೃಷ್ಟಿಸಬೇಡಿ. ಈಗ ತಂಡದ ಆಯ್ಕೆ ಮುಗಿದಿದೆ. ಇದು ಭಾರತದ ತಂಡ. ನಿಮಗೆ ಇಷ್ಟವಾಗದಿದ್ದರೆ ಪಂದ್ಯ ನೋಡಬೇಡಿ. ಆದರೆ ಅವರಿರಬೇಕಿತ್ತು, ಇವರಿರಬೇಕಿತ್ತು ಎಂದು ಮಾತನಾಡಬೇಡಿ’ ಎಂದು ವೀಕ್ಷಕ ವಿವರಣೆಗಾರ ಸುನಿಲ್ ಗಾವಸ್ಕರ್ ಹೇಳಿದ್ದಾರೆ.

‘ಈಗ ಆಯ್ಕೆ ಆಗಿರುವ ತಂಡವು ಉತ್ತಮವಾಗಿದೆ. ಯಾವುದೇ ಆಟಗಾರನೂ ತನಗೆ ಅನ್ಯಾಯವಾಗಿದೆಯೆಂದು ಹೇಳಿಕೊಳ್ಳುವುದಿಲ್ಲ. ಅನುಭವಿ ಮತ್ತು ಉತ್ತಮ ಲಯದಲ್ಲಿರುವ 17 ಆಟಗಾರರನ್ನು ಆಯ್ಕೆ ಮಾಡಲಾಗಿದೆ’ ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕಳರಿಪಯಟ್ಟು: ಕರ್ನಾಟಕ ತಂಡಕ್ಕೆ ರನ್ನರ್ ಅಪ್ ಪ್ರಶಸ್ತಿ


ಧಾತ್ರಿ

ಬೆಂಗಳೂರು: ಭಾರತ ಕಳರಿಪಯಟ್ಟು ಫೆಡರೇಷನ್ ಈಚೆಗೆ ಆಯೋಜಿಸಿದ್ದ 15ನೇ ರಾಷ್ಟ್ರೀಯ ಕಳರಿಪಯಟ್ಟು ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡವು ರನ್ನರ್ ಅಪ್ ಪ್ರಶಸ್ತಿ ಪಡೆದುಕೊಂಡಿದೆ.

ಸ್ಪರ್ಧೆಯಲ್ಲಿ ವಿವಿಧ ರಾಜ್ಯಗಳಿಂದ 700ಕ್ಕೂ ಅಧಿಕ ಸ್ಪರ್ಧಾಳುಗಳು ಭಾಗವಹಿಸಿದ್ದರು. ಸಬ್ ಜೂನಿಯರ್, ಜೂನಿಯರ್, ಮಹಿಳೆ ಮತ್ತು ಪುರುಷ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆದವು.

ಪುರುಷರ ವಿಭಾಗದ ಕತ್ತಿ ಮತ್ತು ಗುರಾಣಿ ಸ್ಪರ್ಧೆಯಲ್ಲಿ ಕರ್ನಾಟಕದ ಎ.ಎಂ. ಬಿನೀಷ್ ಮತ್ತು ಹರಿನಾಥ್ ಚಿನ್ನ ಗೆದ್ದರು.

ಸಬ್ ಜೂನಿಯರ್ ಬಾಲಕಿಯರ ಮೇಪಯೆಟ್ ವಿಭಾಗದಲ್ಲಿ ಧಾತ್ರಿ ಅವರು ಬೆಳ್ಳಿ ಗೆದ್ದರು. ಜೂನಿಯರ್ ಬಾಲಕಿಯರ ವಿಭಾಗದಲ್ಲಿ ರಂಜಿನಿ ಕಂಚಿನ ಪದಕ ಗೆದ್ದರು.

ಪುರುಷರ ನೆಡುವಡಿ ಪಿಯಾಟ್ ಸ್ಪರ್ಧೆಯಲ್ಲಿ ಎ.ಎಂ. ಬಿನೀಷ್ ಮತ್ತು ಹರಿನಾಥ್ ಬೆಳ್ಳಿ ಪಡೆದರೆ, ಪಿ. ಅಜಿತ್ ಮತ್ತು ರೋಶನ್ ರೊಮಾರಿಯೊ ಕಂಚು ಗೆದ್ದರು.

ಚುವಟ್ಟು ವಿಭಾಗದಲ್ಲಿ ತಂಕಾ ಸಲ್ವಂ ಮತ್ತು ಪಿ. ಅಜಿತ್ ಕಂಚಿನ ಪದಕ, ಎ.ಎಂ. ಬಿನೀಶ್ ಕಂಚು, ಪುರುಷರ ಉರುಮಿ ವೀಸಲ್‌ನಲ್ಲಿ ಸಿ. ಜಿತು ಕಂಚು ಗೆದ್ದರು.

ಚುಂಬನ ವಿವಾದ: ಸ್ಪೇನ್ ಪ್ರಧಾನಿ ಅಸಮಾಧಾನ

ಮ್ಯಾಡ್ರಿಡ್ (ಎಎಫ್‌ಪಿ): ಸ್ಪೇನ್ ದೇಶದ ಪ್ರಧಾನಿ ಪೆಡ್ರೊ ಸ್ಯಾಂಚೆಜ್ ಅವರು ತಮ್ಮ ದೇಶದ ಫುಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಲೂಯಿಸ್ ರುಬೆಲ್ಸ್ ವಿರುದ್ಧ ಕಿಡಿ ಕಾರಿದ್ದಾರೆ.

ಈಚೆಗೆ ಫಿಫಾ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭದ ಸಂದರ್ಭದಲ್ಲಿ ಸ್ಪೇನ್ ತಂಡದ ತಾರಾ ಆಟಗಾರ್ತಿ ಜೆನಿ ಹರ್ಮೊಸೊ ಅವರ ತುಟಿಗೆ ಲೂಯಿಸ್ ಚುಂಬಿಸಿದ್ದರು.

ನಂತರ ತಮ್ಮ ದೇಶದ ತಂಡವು ಚಾಂಪಿಯನ್ ಆದ ಸಂತಸದ ಭರದಲ್ಲಿ ಈ ರೀತಿಯಾಗಿದೆ. ತಮಗೆ ಯಾವುದೇ ಕೆಟ್ಟ ಉದ್ದೇಶ ಇರಲಿಲ್ಲ ಎಂದಿರುವ ಲೂಯಿಸ್, ಕ್ಷಮೆ ಯಾಚಿಸಿದ್ದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಧಾನಿ, ‘ಲೂಯಿಸ್ ನಡವಳಿಕೆಯು ಎಂದಿಗೂ ಒಪ್ಪತಕ್ಕದ್ದಲ್ಲ. ಅವರು ಕ್ಷಮೆ ಕೇಳಿದರಷ್ಟೇ ಸಾಕಾಗದು. ಇದೊಂದು ಪಾಠವಾಗಬೇಕು’ ಎಂದಿದ್ದಾರೆ.

ಈ ಬಾರಿಯ ಮಹಿಳಾ ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಸ್ಪೇನ್ ತಂಡವು ಚಾಂಪಿಯನ್ ಆಗಿತ್ತು.

ವಿದೇಶದಲ್ಲಿ ತರಬೇತಿಗೆ ಅನುಮತಿ

ನವದೆಹಲಿ (ಪಿಟಿಐ): ಏಷ್ಯನ್ ಗೇಮ್ಸ್ ಸಿದ್ಧತೆಗಾಗಿ ವಿದೇಶದಲ್ಲಿ ತರಬೇತಿ ನಡೆಸಲು ಕುಸ್ತಿಪಟುಗಳಾದ ಬಜರಂಗ್ ಪೂನಿಯಾ ಮತ್ತು ದೀಪಕ್ ಪೂನಿಯಾ ಅವರಿಗೆ ಕ್ರೀಡಾ ಸಚಿವಾಲಯದ ‘ಮಿಷನ್ ಒಲಿಂಪಿಕ್ ಸೆಲ್’ ಅನುಮತಿ ನೀಡಿದೆ.

ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ಗಾಗಿ ಭಾರತ ತಂಡದ ಆಯ್ಕೆಗೆ ಆ.25 ಮತ್ತು 26 ರಂದು ನಡೆಯಲಿರುವ ಟ್ರಯಲ್ಸ್‌ನಲ್ಲಿ ತಾವು ಪಾಲ್ಗೊಳ್ಳುತ್ತಿಲ್ಲ. ಅದರ ಬದಲು ವಿದೇಶದಲ್ಲಿ ತರಬೇತಿಗೆ ಅವಕಾಶ ನೀಡಬೇಕು ಎಂದು ಇವರಿಬ್ಬರು ಮನವಿ ಮಾಡಿದ್ದರು.

ಹಾಕಿ: ಭಾರತಕ್ಕೆ ಮಣಿದ ಸ್ಪೇನ್

ಡಸೆಲ್‌ಡಾರ್ಫ್, ಜರ್ಮನಿ (ಪಿಟಿಐ): ಭಾರತ ಜೂನಿಯರ್ ಮಹಿಳಾ ತಂಡದವರು ನಾಲ್ಕು ರಾಷ್ಟ್ರಗಳ ಹಾಕಿ ಟೂರ್ನಿಯ ಪಂದ್ಯದಲ್ಲಿ 2–1 ಗೋಲುಗಳಿಂದ ಸ್ಪೇನ್ ತಂಡವನ್ನು ಮಣಿಸಿದರು.

ಮಂಗಳವಾರ ನಡೆದ ಪಂದ್ಯದಲ್ಲಿ ಗೋಲು ಗಳಿಸಿದ ಅನ್ನು (21 ನೇ ನಿ.) ಮತ್ತು ಸಾಕ್ಷಿ ರಾಣಾ (47ನೇ ನಿ.) ಅವರು ಭಾರತದ ಗೆಲುವಿಗೆ ಕಾರಣರಾದರು. ಸ್ಪೇನ್ ತಂಡದ ಏಕೈಕ ಗೋಲನ್ನು ಲಿಮಾ ತೆರೆಸಾ (23ನೇ ನಿ.) ತಂದಿತ್ತರು.

ಪ್ರಬಲ ಪೈಪೋಟಿ ನಡೆದ ಪಂದ್ಯದ ಮೊದಲ ಕ್ವಾರ್ಟರ್ ಗೋಲುರಹಿತವಾಗಿತ್ತು. ಭಾರತ ಆಕ್ರಮಣಕಾರಿ ಆಟವಾಡಿದರೂ ಸ್ಪೇನ್ ತಂಡದ ರಕ್ಷಣಾ ವ್ಯೂಹ ಬೇಧಿಸಲು ಆಗಲಿಲ್ಲ.

ಎರಡನೇ ಕ್ವಾರ್ಟರ್‌ನಲ್ಲಿ ಉಭಯ ತಂಡಗಳು ಗೋಲಿನ ಖಾತೆ ತೆರೆದವು. ಕೊನೆಯ ಕ್ವಾರ್ಟರ್‌ನಲ್ಲಿ ಸಾಕ್ಷಿ ಸೊಗಸಾದ ರೀತಿಯಲ್ಲಿ ಚೆಂಡನ್ನು ಗುರಿ ಸೇರಿಸಿ ಭಾರತಕ್ಕೆ ಜಯ ತಂದಿತ್ತರು.

ಪುರುಷರಿಗೆ ನಿರಾಸೆ: ಭಾರತ ಜೂನಿಯರ್ ಪುರುಷರ ತಂಡ ಇದೇ ಟೂರ್ನಿಯ ಪಂದ್ಯದಲ್ಲಿ 1–6 ಗೋಲುಗಳಿಂದ ಜರ್ಮನಿ ಕೈಯಲ್ಲಿ ಪರಾಭವಗೊಂಡು ‘ರನ್ನರ್ ಅಪ್’ ಆಯಿತು.

ಮಹಾರಾಜ ಟ್ರೋಫಿ: ಮೊಹಮ್ಮದ್ ತಾಹ ಅರ್ಧಶತಕ

ಹುಬ್ಬಳ್ಳಿ ಟೈಗರ್ಸ್ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ


ಹುಬ್ಬಳ್ಳಿ ಟೈಗರ್ಸ್ ತಂಡದ ಮೊಹಮ್ಮದ್ ತಾಹ

ಬೆಂಗಳೂರು: ಮೊಹಮ್ಮದ್ ತಾಹ ಅರ್ಧಶತಕದ ಬಲದಿಂದ ಹುಬ್ಬಳ್ಳಿ ಟೈಗರ್ಸ್ ತಂಡವು ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಹುಬ್ಬಳ್ಳಿ ತಂಡವು 6 ವಿಕೆಟ್‌ಗಳಿಂದ ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ ಜಯಿಸಿತು. ಮಯಂಕ್ ಅಗರವಾಲ್ ನಾಯಕತ್ವದ ಬೆಂಗಳೂರು ತಂಡಕ್ಕೆ ಇದು ಸತತ ಏಳನೇ ಸೋಲು. ಇಲ್ಲಿಯವರೆಗೂ ಟೂರ್ನಿಯಲ್ಲಿ ಗೆಲುವಿನ ಖಾತೆಯನ್ನೇ ತಂಡವು ತೆರೆದಿಲ್ಲ.

ಮೊದಲು ಬ್ಯಾಟ್ ಮಾಡಿದ ಬೆಂಗಳೂರು, ನಾಯಕ ಮಯಂಕ್ (68; 38ಎ, 4X3, 6X6) ಹಾಗೂ ನಿಶ್ಚಲ್ (54; 42ಎ, 4X5) ಅವರಿಬ್ಬರ ಅರ್ಧಶತಕಗಳ ಬಲದಿಂದ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 188 ರನ್ ಗಳಿಸಿತು.

ಈ ಮೊತ್ತವನ್ನು ರಕ್ಷಿಸಿಕೊಳ್ಳುವಲ್ಲಿ ಬೆಂಗಳೂರು ತಂಡದ ಬೌಲರ್‌ಗಳು ವಿಫಲರಾದರು. ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಲವನೀತ್ ಸಿಸೊಡಿಯಾ (20; 9ಎ) ಅವರನ್ನು ಶುಭಾಂಗ್ ಹೆಗ್ಡೆ ಔಟ್ ಮಾಡಿದರು. ಆದರೆ ಮೊಹಮ್ಮದ್ ತಾಹ (66; 35ಎ) ಮತ್ತು ಶ್ರೀಜಿತ್ (45; 30ಎ) ಅವರ ಅಮೋಘ ಬ್ಯಾಟಿಂಗ್ ಬಲದಿಂದ ತಂಡವು 18.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 190 ರನ್ ಗಳಿಸಿ ಗೆದ್ದಿತು.

ಇನ್ನೊಂದು ಪಂದ್ಯದಲ್ಲಿ ಶಿವಮೊಗ್ಗ ಲಯನ್ಸ್ ತಂಡ 5 ವಿಕೆಟ್‌ಗಳಿಂದ ಮೈಸೂರು ವಾರಿಯರ್ಸ್ ಎದುರು ಗೆದ್ದಿತು.

ಸಂಕ್ಷಿಪ್ತ ಸ್ಕೋರು: ಬೆಂಗಳೂರು ಬ್ಲಾಸ್ಟರ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 188 (ಮಯಂಕ್ ಅಗರವಾಲ್ 68, ಡಿ. ನಿಶ್ಚಲ್ 54, ಶುಭಾಂಗ್ ಹೆಗಡೆ 29, ವಿದ್ವತ್ ಕಾವೇರಪ್ಪ 29ಕ್ಕೆ2, ಕೆ.ಸಿ. ಕಾರ್ಯಪ್ಪ 31ಕ್ಕೆ3) ಹುಬ್ಬಳ್ಳಿ ಟೈಗರ್ಸ್: 18.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 190 (ಲವನಿತ್ ಸಿಸೊಡಿಯಾ 20, ಮೊಹಮ್ಮದ್ ತಾಹ 66, ಕೃಷ್ಣನ್ ಶ್ರೀಜಿತ್ 45, ಮನೀಷ್ ಪಾಂಡೆ ಔಟಾಗದೆ 35, ಸರ್ಫರಾಜ್ ಅಶ್ರಫ್ 34ಕ್ಕೆ2) ಫಲಿತಾಂಶ: ಹುಬ್ಬಳ್ಳಿ ಟೈಗರ್ಸ್‌ಗೆ 6 ವಿಕೆಟ್‌ಗಳ ಜಯ.

ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 162 (ಕರುಣ್ ನಾಯರ್ 46, ಕೆ.ಎಸ್. ಲಂಕೇಶ್ 25, ಮನೋಜ್ ಬಾಂಢಗೆ 20, ಜೆ. ಸುಚಿತ್ ಔಟಾಗದೆ 18, ವಿ. ಕೌಶಿಕ್ 27ಕ್ಕೆ2, ಕ್ರಾಂತಿಕುಮಾರ್ 40ಕ್ಕೆ2) ಶಿವಮೊಗ್ಗ ಲಯನ್ಸ್: 19.4 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 163 (ನಿಹಾಲ್ ಉಲ್ಲಾಳ 45, ಅಭಿನವ್ ಮನೋಹರ್ 27, ಕ್ರಾಂತಿಕುಮಾರ್ ಔಟಾಗದೆ 20, ಮೊನಿಷ್ ರೆಡ್ಡಿ 28ಕ್ಕೆ2) ಫಲಿತಾಂಶ: ಶಿವಮೊಗ್ಗ ಲಯನ್ಸ್‌ಗೆ 5 ವಿಕೆಟ್‌ಗಳ ಜಯ.

ಇಂದಿನ ಪಂದ್ಯಗಳು
ಹುಬ್ಬಳ್ಳಿ ಟೈಗರ್ಸ್–ಗುಲ್ಬರ್ಗ ಮಿಸ್ಟಿಕ್ಸ್ (ಮಧ್ಯಾಹ್ನ 1ರಿಂದ); ಮಂಗಳೂರು ಡ್ರ್ಯಾಗನ್ಸ್–ಮೈಸೂರು ವಾರಿಯರ್ಸ್ (ಸಂಜೆ 5.30ರಿಂದ)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಕನ್ನಡ, ಫ್ಯಾನ್‌ಕೋಡ್.

ಫುಟ್‌ಬಾಲ್: ಇಂಡಿಪೆಂಡೆಂಟ್ಸ್ ತಂಡಕ್ಕೆ ಗೆಲುವು

ಬೆಂಗಳೂರು: ಸರವಣಕುಮಾರ್ ಅವರ ಆಟದ ಬಲದಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3–1ರಿಂದ ಚಿಕ್ಕಮಗಳೂರು ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಲಾಲ್ರೆಮ್ ರುವಾಟಾ ಅವರು 9ನೇ ನಿಮಿಷದಲ್ಲಿ ಗೋಲು ದಾಖಲಿಸಿ ಚಿಕ್ಕಮಗಳೂರು ತಂಡಕ್ಕೆ ಮುನ್ನಡೆ ಒದಗಿಸಿದರು. ಆದರೆ, ಇಂಡಿಪೆಂಡೆಂಟ್ಸ್ ತಂಡದ ಸತೀಶ್‌ಕುಮಾರ್ 58ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿ ಸಮಬಲ ತಂದಿತ್ತರು. ಸರವಣಕುಮಾರ್ (73 ಮತ್ತು 90 + 5ನೇ ನಿ) ಎರಡು ಗೋಲು ಗಳಿಸಿ ಇಂಡಿಪೆಂಡೆಂಟ್ಸ್ ತಂಡದ ಗೆಲುವಿಗೆ ಕಾರಣರಾದರು.

ಮತ್ತೊಂದು ಪಂದ್ಯದಲ್ಲಿ ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ತಂಡವು 2–1ರಿಂದ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವನ್ನು ಸೋಲಿಸಿತು. ಎಎಸ್‌ಸಿ ತಂಡದ ಶಂಶೀರ್ (59 ಮತ್ತು 71ನೇ) ಎರಡು ಗೋಲು ದಾಖಲಿಸಿ ಮಿಂಚಿದರು. ಸ್ಪೋರ್ಟಿಂಗ್ ಕ್ಲಬ್ ತಂಡದ ಗೋಲನ್ನು ಪಿ. ಅಪ್ಪು ಆರೋಗ್ಯಸ್ವಾಮಿ (15ನೇ) ತಂದಿತ್ತರು.

ವಿಶ್ವ ಅಥ್ಲೆಟಿಕ್ಸ್: ಆರನೇ ಚಿನ್ನ ಗೆಲ್ಲುವ ಶೆಲ್ಲಿ ಕನಸು ಭಗ್ನ; ಹರ್ಡಲ್ಸ್‌ನಲ್ಲಿ ಜ್ಯೋತಿಗೆ ನಿರಾಸೆ

ಅಮೆರಿಕದ ಶಕಾರಿ ರಿಚರ್ಡ್‌ಸನ್ ವೇಗದ ರಾಣಿ


100 ಮೀ. ಓಟ ಗೆದ್ದ ಸಂಭ್ರಮದಲ್ಲಿ ಶಕಾರಿ ರಿಚರ್ಡ್‌ಸನ್ –ಎಎಫ್‌ಪಿ ಚಿತ್ರ

ಬುಡಾಪೆಸ್ಟ್ (ಎಎಫ್‌ಪಿ): ಸತತ ಆರನೇ ಬಾರಿ ‘ವೇಗದ ಓಟಗಾರ್ತಿ’ಯಾಗುವ ಶೆಲ್ಲಿ–ಆ್ಯನ್–ಫ್ರೇಸರ್–ಪ್ರೈಸ್ ಅವರ ಕನಸನ್ನು ಅಮೆರಿಕದ ಶ’ಕಾರಿ ರಿಚರ್ಡ್‌ಸನ್ ನುಚ್ಚುನೂರುಗೊಳಿಸಿದರು. ಸೋಮವಾರ ನಡೆದ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಮಹಿಳೆಯರ 100 ಮೀ. ಓಟವನ್ನು ಗೆಲ್ಲುವ ಮೂಲಕ ಶಕಾರಿ ‘ವೇಗದ ರಾಣಿ’ ಎನಿಸಿದರು.

9ನೇ ಲೇನ್‌ನಲ್ಲಿ ಓಡಿದ, 23 ವರ್ಷದ ರಿಚರ್ಡ್‌ಸನ್ 10.65 ಸೆ.ಗಳಲ್ಲಿ ಓಟವನ್ನು ಮುಗಿಸಿದರು. ಆ ಮೂಲಕ ಎರಡೂ ಸ್ಪ್ರಿಂಟ್ ಚಿನ್ನಗಳು ಅಮೆರಿಕದ ಪಾಲಾದವು. ನೋಆ ಲೈಲ್ಸ್ ಭಾನುವಾರ ನಡೆದ ಪುರುಷರ 100 ಮೀ. ಓಟವನ್ನು ಗೆದ್ದುಕೊಂಡಿದ್ದರು. ಹಂಗೆರಿಯ ರಾಜಧಾನಿಯಲ್ಲಿ ನಡೆಯುತ್ತಿರುವ ಈ ಕೂಟದ ಮೂರನೇ ದಿನ ಈ ಓಟ ಕುತೂಹಲ ಕೆರಳಿಸಿತ್ತು.

ಜಮೈಕಾದ ಶೆರಿಕಾ ಜಾಕ್ಸನ್ ಮತ್ತು ಅದೇ ದೇಶದ ಹಿರಿಯ ಓಟಗಾರ್ತಿ ಫ್ರೇಸರ್–ಪ್ರೈಸ್ ಕ್ರಮವಾಗಿ 10.72 ಸೆ. ಮತ್ತು 10.77 ಸೆ.ಗಳಲ್ಲಿ ಓಟವನ್ನು ಪೂರೈಸಿ ರಜತ ಮತ್ತು ಕಂಚಿನ ಪದಕ ಗೆದ್ದುಕೊಂಡರು.

‘ಕಂಚಿನ ಪದಕಕ್ಕಾಗಿ ಕೃತಜ್ಞಳಾಗಿದ್ದೇನೆ’ ಎಂದು 36 ವರ್ಷದ ಫ್ರೇಸರ್–ಪ್ರೈಸ್ ಹೇಳಿದ್ದಾರೆ. ಈ ಋತುವಿನಲ್ಲಿ ಅವರು ಮೊಣಕಾಲು ನೋವಿನಿಂದ ಸಮಸ್ಯೆ ಎದುರಿಸಿದ್ದರು. ಆದರೆ ಈ ಓಟಗಾರ್ತಿ ಒಟ್ಟಾರೆ 15ನೇ ಪದಕ ಗೆಲ್ಲುವ ಮೂಲಕ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಅತಿ ಹೆಚ್ಚು ಪದಕ ಗೆದ್ದ ಸ್ವದೇಶದ ಓಟಗಾರ ಉಸೇನ್ ಬೋಲ್ಟ್ (11 ಚಿನ್ನ ಸೇರಿ 14 ಪದಕ) ಅವರ ದಾಖಲೆ ಮುರಿದರು.

ಗ್ರ್ಯಾಂಟ್‌ಗೆ 3ನೇ ಸಲ ಹರ್ಡಲ್ಸ್ ಸ್ವರ್ಣ: 110 ಮೀ. ಹರ್ಡಲ್ಸ್‌ನಲ್ಲಿ ಅಮೆರಿಕದ ಗ್ರ್ಯಾಂಟ್ ಹೊಲೊವೆ ಅವರು ಚಿನ್ನ ಗೆದ್ದರು. ಇದು 25 ವರ್ಷದ ಓಟಗಾರನಿಗೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸತತ ಮೂರನೇ ಚಿನ್ನ. ಈ ಹಿಂದೆ ಅದೇ ದೇಶದ ಗ್ರೆಗ್ ಫಾಸ್ಟರ್ ಈ ಓಟದಲ್ಲಿ ಮೂರು ಸಲ ಚಿನ್ನದ ಪದಕ ಗಳಿಸಿದ್ದರು. ಅವರು 12.96 ಸೆ.ಗಳಲ್ಲಿ ಗುರಿಮುಟ್ಟಿ, ಒಲಿಂಪಿಕ್ ಚಾಂಪಿಯನ್, ಜಮೈಕಾದ ಹಾಂಸ್ಲೆ ಪರ್ಚಮೆಂಟ್ ಅವರನ್ನು (13.07) ಹಿಂದೆ ಹಾಕಿದರು.

ಝೂಂಗೊ ಸಾಧನೆ: ಬುರ್ಕಿನಾ ಫಾಸೊ ದೇಶದ ಹ್ಯೂಗಸ್ ಪ್ಯಾಬ್ರಿಸ್ ಝೂಂಗೊ ಅವರು ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಪುರುಷರ ಟ್ರಿಪಲ್ ಜಂಪ್‌ನಲ್ಲಿ ಸೋಮವಾರ ಸ್ವರ್ಣ ಗೆದ್ದರು. ಇದು ಪಶ್ಚಿಮ ಆಫ್ರಿಕಾದ ಈ ದೇಶಕ್ಕೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಪದಕ.

ಜ್ಯೋತಿಗೆ ನಿರಾಸೆ: ಭಾರತದ ಜ್ಯೋತಿ ಯರ್ರಾಜಿ ಅವರು ಮಹಿಳೆಯರ 100 ಮೀ. ಹರ್ಡಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಲು ವಿಫಲರಾದರು. ಮಂಗಳವಾರ ನಡೆದ ಸ್ಪರ್ಧೆಯಲ್ಲಿ ನಾಲ್ಕನೇ ಹೀಟ್ಸ್‌ನಲ್ಲಿ ಓಡಿದ ಅವರು 13.05 ಸೆ.ಗಳೊಂದಿಗೆ ಏಳನೇ ಸ್ಥಾನ ಪಡೆದರು. ಒಟ್ಟಾರೆಯಾಗಿ ಅವರಿಗೆ 29ನೇ ಸ್ಥಾನ ದೊರೆಯಿತು.

ಅಂಧರ ಕ್ರಿಕೆಟ್: ಭಾರತಕ್ಕೆ ಜಯ

ಬರ್ಮಿಂಗ್‌ಹ್ಯಾಮ್ (ಪಿಟಿಐ): ವೆಂಕಟೇಶ್ವರ್ ರಾವ್ ದುನಾ (54 ರನ್) ಅವರ ಅಮೋಘ ಅರ್ಧಶತಕದ ಬಲದಿಂದ ಭಾರತ ಪುರುಷರ ಅಂಧ ಕ್ರಿಕೆಟ್ ತಂಡವು ಇಲ್ಲಿ ಅಂತರರಾಷ್ಟ್ರೀಯ ಅಂಧರ ಕ್ರೀಡಾ ಫೆಡರೇಷನ್ ಕ್ರೀಡಾಕೂಟದ ಕ್ರಿಕೆಟ್ ಟೂರ್ನಿಯಲ್ಲಿ ಜಯಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಭಾರತ ತಂಡವು ಏಳು ವಿಕೆಟ್‌ಗಳಿಂದ ಆತಿಥೇಯ ಇಂಗ್ಲೆಂಡ್ ವಿರುದ್ಧ ಜಯಿಸಿತು. ಇದರೊಂದಿಗೆ ಭಾರತವು ಟೂರ್ನಿಯಲ್ಲಿ ಆಡಿದ ಮೂರು ಪಂದ್ಯಗಳಲ್ಲಿ ಎರಡನೇ ಜಯ ಸಾಧಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 147 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಭಾರತ ತಂಡವು ಇನಿಂಗ್ಸ್‌ನಲ್ಲಿ ಇನ್ನೂ 30 ಎಸೆತಗಳು ಬಾಕಿ ಇರುವಾಗಲೇ ಗೆಲುವು ದಾಖಲಿಸಿತು.